ಅನ್ಯಭಾಷಾ ಸಾಹಿತ್ಯ ಸೊಗಡಿನ ಸ್ಪಂದನ

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಅನ್ಯಭಾಷಾ ಸಾಹಿತ್ಯ ಸೊಗಡಿನ ಸ್ಪಂದನ

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಸಂಪಾದಕರು

ಪ್ರೊ|| ದೊಡ್ಡರಂಗೇಗೌಡ

ಪ್ರೊ|| ನಲ್ಲೂರು ಪ್ರಸಾದ್

ಕರ್ನಾಟಕ ಸಾಹಿತ್ಯ ಅಕಾಡೆಮಿ

ಬೆಂಗಳೂರು

ANIKETHANA : A Literary Journal (Quarterly)
Edited By : Prof. Doddarangegowda &
Prof. Nallur Prasad (R. K. Prasad)
Published By : Registrar, Karnataka Sahithya Academy
Nrupathunga Road, Bangalore - 2

Pages : VIII+156, July-September 1998
Registration No. 45646/88

ಸಂಪುಟ : 10
ಸಂಚಿಕೆ : 1

ಪ್ರಧಾನ ಸಂಪಾದಕರು
ಡಾ। ಗಿರಡ್ಡಿ ಗೋವಿಂದರಾಜ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು- ೫೬೦ ೦೦೨

ನಿರ್ವಾಹಕರು
ಟಿ. ಎಸ್. ದಕ್ಷಿಣಾಮೂರ್ತಿ
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ
ನಂ. ೧೪/೩ಅ, ನೃಪತುಂಗ ರಸ್ತೆ
ಬೆಂಗಳೂರು- ೫೬೦ ೦೦೨

ಬಿಡಿ ಪ್ರತಿ : ರೂ. ೧೫/-
ವಾರ್ಷಿಕ ಚಂದಾ : ರೂ. ೫೦/-
ಆಜೀವ ಚಂದಾ : ರೂ. ೨೦೦/-

ಮುದ್ರಕರು
ಲಕ್ಷ್ಮಿ ಮುದ್ರಣಾಲಯ
ಬೆಂಗಳೂರು - 18
ದೂರವಾಣಿ : 6613123, 6618752

ಸಂಪಾದಕೀಯ

ಡಾ. ಗಿರಡ್ಡಿ ಗೋವಿಂದರಾಜ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನೇಮಕಗೊಂಡ ಮೇಲೆ ನಮ್ಮ ಸಂಪಾದಕೀಯದಲ್ಲಿ ಹೊರಬರುತ್ತಿರುವ ಮೊದಲ ಸಂಚಿಕೆಯಿದು. ಇದರ ಉದ್ದೇಶವನ್ನು ಬಿಂಬಿಸುವ ಸೂಕ್ತ ಉದ್ಘೋಷವಾಗಿ ಇದನ್ನು ನಾವು 'ಅನ್ಯಭಾಷಾ ಸಾಹಿತ್ಯ ಸೊಗಡಿನ ಸ್ಪಂದನ' ವೆಂದು ಕರೆದಿದ್ದೇವೆ. ಕನ್ನಡವನ್ನು ಹೊರತುಪಡಿಸಿ ಭಾರತದ ಮತ್ತು ವಿಶ್ವದ ಬೇರೆಬೇರೆ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯವನ್ನು ಸ್ವಲ್ಪಮಟ್ಟಿಗಾದರೂ ಕನ್ನಡದ ಓದುಗರಿಗೆ ಪರಿಚಯಿಸಬೇಕೆನ್ನುವ ಹಿನ್ನೆಲೆಯಲ್ಲಿ ಈ ಸಂಚಿಕೆಯನ್ನು ರೂಪಿಸಲಾಗಿದೆ. ಉತ್ತಮ ಸಾಹಿತ್ಯವನ್ನು ಹುಡುಕುವಲ್ಲಿ ಅನಿವಾರ್ಯವಾಗಿಯೇ ಆದ ವಿಳಂಬ ಮತ್ತು ಕೆಲ ಅನಿವಾರ್ಯ ಕಾರಣಗಳಿಂದ ನಮ್ಮ ನಿರೀಕ್ಷೆಯ ಮಟ್ಟಕ್ಕೆ ಈ ಸಂಚಿಕೆಯನ್ನು ರೂಪಿಸಲಾಗಲಿಲ್ಲವೆಂಬ ಕೊರಗು ನಮಗಿದ್ದೇ ಇದೆ. ಇದನ್ನು ಮುಂದಿನ ಸಂಚಿಕೆಗಳಲ್ಲಿ ತುಂಬಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

ಈ ಸಂಚಿಕೆಯಲ್ಲಿ ಭಾರತದ ವಿವಿಧ ಭಾಷೆಗಳಲ್ಲಿ ರಚನೆಗೊಂಡ ಶ್ರೇಷ್ಠ ಸಾಹಿತ್ಯದ ಸವಿಯನ್ನು ನಮ್ಮ ಓದುಗರಿಗೆ ತೋರಿಸಬೇಕೆನ್ನುವ ಉದ್ದೇಶ ನಮ್ಮದಾಗಿತ್ತಾದರೂ ಅದು ಇಲ್ಲಿ ಬಹುಮಟ್ಟಿಗೆ ಕಾವ್ಯಕ್ಕೆ ಸೀಮಿತವಾಗಿದೆ. ಪ್ರಸಿದ್ಧ ನಾಟಕವೊಂದರ ಒಂದು ದೃಶ್ಯ, ಎರಡು ಸಣ್ಣ ಕಥೆಗಳು ಇಲ್ಲಿ ಸ್ಥಾನ ಪಡೆದುಕೊಂಡಿವೆ. ಅತ್ಯುತ್ತಮ ಕಾದಂಬರಿಯೊಂದರ ಒಂದು ಭಾಗವನ್ನೂ, ಒಂದು ಪ್ರಬಂಧವನ್ನೂ, ಒಂದು ವಿಮರ್ಶೆಯನ್ನೂ ಮಾದರಿಯಾಗಿ ಕೊಡಬೇಕೆನ್ನುವ ಅಪೇಕ್ಷೆಯನ್ನು ತುಂಬಿಕೊಂಡಲಾಗಿಲ್ಲ.

ಭಾರತೀಯ ಸಾಹಿತ್ಯ ಇಂದು ವೈಚಾರಿಕ ಜಾಗೃತಿಯಿಂದ ದೀಪ್ತವಾಗಿದೆ. ವೈಜ್ಞಾನಿಕ ಸಾಧನೆಗಳ ಪ್ರಭಾವವೂ ಭಾರತೀಯ ಪ್ರಾದೇಶಿಕ ಸಾಹಿತ್ಯದ ಸತ್ವವನ್ನು ಕಸಿಗೊಳಿಸಲು ಕಾರಣವಾಗಿದೆ. ಹಿಂದೆಂದಿಗಿಂತ ಈಗ ಆಧುನಿಕ ಭಾರತೀಯ ಮಹಿಳೆಯ ಗ್ರಹಿಕೆ ಮತ್ತು ಅಭಿವ್ಯಕ್ತಿಗಳು ಮೊನಚಾಗಿರುವುದು ಗಮನಾರ್ಹ ಬೆಳವಣಿಗೆಯಾಗಿದೆ. ಇವೆಲ್ಲವುಗಳ ಪುಟ್ಟ ಮಾದರಿಯೊಂದನ್ನು ಗ್ರಹಿಸಿಕೊಳ್ಳಲು ಈ ಸಂಚಿಕೆಯ ಆಯ್ಕೆಗಳು ನೆರವಾಗುತ್ತವೆಂಬ ನಂಬಿಕೆ

ನಮ್ಮದಾಗಿದೆ. ತಮ್ಮ ಅನುಭವಗಳನ್ನು, ವಿಚಾರಗಳನ್ನು ನಿಸ್ಸಂಕೋಚವಾಗಿಯೂ ಅನನ್ಯವಾಗಿಯೂ ಅನಾವರಣಗೊಳಿಸಲು ಪ್ರಯತ್ನಿಸಿರುವ ಸಾಹಿತಿಗಳ ಅಪೂರ್ವ ಕಾಳಜಿಗಳು ಇಲ್ಲಿ ಮೌಲಿಕ ಫಲಶ್ರುತಿಗಳನ್ನು ನೀಡಿವೆಯೆಂಬುದೇ ನಮ್ಮ ಗ್ರಹಿಕೆ.

ಬೇರೆ ಬೇರೆ ಭಾಷೆಗಳಿಂದ ನೇರವಾಗಿಯೋ ಇಂಗ್ಲೀಷಿನ ಮೂಲಕವೋ ಕನ್ನಡಕ್ಕಿಳಿದಿರುವ ಇಲ್ಲಿನ ರಚನೆಗಳ ಆಶಯ ಮತ್ತು ಅಭಿವ್ಯಕ್ತಿಯಲ್ಲಿ ನೂತನ ಅಂಶಗಳು ಪಲ್ಲವಿಸಿರುವುದನ್ನು ಸಹೃದಯರು ಗುರುತಿಸಬಹುದಾಗಿದೆ. ನಮ್ಮ ಕೋರಿಕೆಯ ಮೇರೆಗೆ, ನಮ್ಮ ಅವಸರವನ್ನು ಅರ್ಥಮಾಡಿಕೊಂಡು, ಶ್ರಮವಹಿಸಿ ಅನುವಾದ ಮಾಡಿಕೊಟ್ಟವರಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಆಭಾರಿಯಾಗಿದೆ. ಲಕ್ಷ್ಮಿ ಮುದ್ರಣಾಲಯದವರು ಈ ಸಂಚಿಕೆಗೊಂದು ಸುಂದರ ವಿನ್ಯಾಸವನ್ನು ಕಲ್ಪಿಸಿಕೊಟ್ಟಿರುವುದಲ್ಲದೆ ತ್ವರಿತ ಗತಿಯಲ್ಲಿ ಮುದ್ರಣ ಮಾಡಿಕೊಟ್ಟಿದ್ದಾರೆ. ಅವರಿಗೂ ನಮ್ಮ ನೆನಕೆಗಳು ಸಲ್ಲುತ್ತವೆ.

7.9.98 ದೊಡ್ಡರಂಗೇಗೌಡ
ಬೆಂಗಳೂರು ನಲ್ಲೂರು ಪ್ರಸಾದ್

ಪರಿವಿಡಿ

ಹೇಮಂತ ಗೋವಿಂದ ಜೋಗಲೇಕರ

ಹೇಮಂತ ಗೋವಿಂದ ಜೋಗಲೇಕರ (ಜ. ೧೯೪೮) ಮರಾಠಿ ಕವಿ. ವೃತ್ತಿಯಲ್ಲಿ ಅವರು ಪುಣೆಯ ಪ್ರಯೋಗಶಾಲೆಯಲ್ಲಿ ವಿಜ್ಞಾನಿ. ನಗುಮುಖದ ಜೋಗಲೇಕರ ಕವಿಯ ಸೋಗನ್ನಾಗಲಿ ವಿಜ್ಞಾನಿಯ ಸೋಗನ್ನಾಗಲೀ ಹಾಕುವುದೇ ಇಲ್ಲ. ಅವರು ಈಚೆಗೆ ಬೆಂಗಳೂರಿಗೆ ಬಂದು ಕೇಂದ್ರ ಸಾಹಿತ್ಯ ಅಕಾಡೆಮಿಯ (ಪ್ರಾದೇಶಿಕ ವಲಯ) ಆಶ್ರಯದಲ್ಲಿ ತಮ್ಮ ಕವಿತೆಗಳನ್ನು ವಾಚಿಸಿದರು. ನಮ್ಮ ಕಣವಿಯವರಂತೆ ಪ್ರಶಾಂತ ಅನುದ್ವಿಗ್ನವಾದ ಅವರ ಮನೋಧರ್ಮ ಅವರ ಕಾವ್ಯವನ್ನು ಭಾವಪೂರ್ಣವಾಗಿ ಅರ್ಥಪೂರ್ಣವಾಗಿ ಮಾಡಿದೆ. ಅವರ ಕಾವ್ಯದ ಆಕಾರ ಮತ್ತು ನೂತನ ಮರ್ಮ ನೇರವಾಗಿ ಹೃದಯವನ್ನು ಸ್ಪರ್ಶಿಸುತ್ತವೆ. ಹಾಗೆಂದೇ ಅವರ 'ದೋಣಿ' ಕವನ ಸಂಕಲನಕ್ಕೆ ಮಹಾರಾಷ್ಟ್ರದ 'ಕೇಶವಸುತ ಪ್ರಶಸ್ತಿ' ಹದಿನೈದು ವರ್ಷದ ಹಿಂದೆಯೇ ಲಭಿಸಿತು. ಜೋಗಲೇಕರರ ಕಾವ್ಯವಸ್ತು ಮತ್ತು ಶೈಲಿಯ ಹರಹು ವಿಸ್ತಾರವಾದುದು. ಅವರ ಎಲ್ಲ ಕವನಗಳೂ ಒಂದಿಲ್ಲೊಂದು ರೀತಿಯಲ್ಲಿ ವಿಶಿಷ್ಟವಾಗಿವೆ. ಅವುಗಳಲ್ಲಿ ಎರಡು ಕವನಗಳನ್ನು ಕನ್ನಡಕ್ಕೆ ಅನುವಾದಿಸಿ ಇಲ್ಲಿ ಕೊಡಲಾಗುತ್ತಿದೆ.

~ ~ ~

ಹೂ ಕುಂಡ

ಮರಾಠಿ : **ಹೇಮಂತ ಗೋವಿಂದ ಜೋಗಲೇಕರ**
ಅನು : **ದೇಶಕುಲಕರ್ಣಿ**

ಯಾರೋ ಬರೆದ ಶಾಸ್ತ್ರದ ಹಾಗೆ
ಪ್ರತೀ ಮುಂಜಾನೆ ಹೂ ಕುಂಡ ಸವರಿಸುತ್ತೀ
ಶಯ್ಯೆ ಬಳಿ ಗೋಡೆ ಮೇಲೆ
ಸರದಿ ತಪ್ಪದ ಹಾಗೆ
ನಿನ್ನೆ ಬಾಡಿದ ಹೂ ತೆಗೆದು
ಹೊಸದಾಗಿ ಎರಡು ಹೂ ಬಗೆದು
ಇರಿಸುತ್ತೀ ಅದರೊಳಗೆ ಎದುರುಬದುರಾಗಿ
ತುಂಬ ದಿನದಿಂದ
ಏಕ ಮೊದಲಿಂದ.

ಆದರಿಂದೇನೋ ಅಪರೂಪ
ಹಾಗಾಯಿತೆ? ಅಥವಾ ಅಂದುಕೊಂಡೆನೆ ಹಾಗೆ?
ಗುಟ್ಟುಗುಟ್ಟಾಗಿ ಹೂ ಕುಂಡದಲ್ಲಿ
ಆ ಹೂವ ಮುಖ ಅತ್ತ
ಈ ಹೂವ ಮುಖ ಇತ್ತ
ಒಂದೆ ಕುಂಡದಲ್ಲಿದ್ದೂ ದೂರ ಸರಿಯುತ್ತಿದೆ ಕಾಂಡ, ಕಾಂಡ...
ಸದ್ಯ, ಇವೆಲ್ಲ ನಾ ಹೇಳಲಿಲ್ಲ ನಿನ್ನ ಕೂಡ.

ಇದ್ದಕ್ಕಿದ್ದಂತೆ ಎದ್ದೆ ಮಧ್ಯರಾತ್ರಿ
ಒಂದೆ ಕ್ಷಣದಲ್ಲಿ ಮನಸೆಲ್ಲ ಆ ಕುಂಡ ತುಂಬಿ
ಥರ ಥರ ನಡುಕ
ಆ ಕಡೆಗೆ ನೋಡುವದೇ ಬೇಡ

ಎಂದು ಕಣ್ಮುಚ್ಚಿ
ಮೆಲ್ಲಗೆ ಕೈಚಾಚಿದರೆ
ನಿನ್ನೆಡೆಗೆ -
ನಿನಗೋ ಗಾಢನಿದ್ದೆ.
ಮಲಗಿದ್ದೆ,
ನನ್ನ ಕಡೆ ಬೆನ್ನು ಮಾಡಿ.

~ ~ ~

ದೋಣಿ

ಮರಾಠಿ : ಹೇಮಂತ ಗೋವಿಂದ ಜೋಗಲೇಕರ
ಅನು : ದೇಶಕುಲಕರ್ಣಿ

ಹಾಳೆ ಹರಿದು ಹಾಗೆ ಮಡಿಸಿ ಹೀಗೆ ಮಡಿಸಿ
ತೇಲಿ ಬಿಡಬಹುದು ಎಷ್ಟೊಂದು ದೋಣಿ?

ಆವಿ ದೋಣಿ, ಹಾಯಿ ದೋಣಿ, ನಾವೆ ದೋಣಿ, ಕೂವೆ ದೋಣಿ......

ಹೇಳುತ್ತಲೇ ಇದ್ದ ಅದೂ ಇದೂ ಏನೇನೋ ಚಿಂತು
ಅಯ್ಯೋ ಬಿಡಿ, ಸದಾ ಹಾಗೇ ಅವನಂತು
ಗೊತ್ತಾಯಿತು ಕಾಫಿ ಹೀರಿದಂತೆ
ಬರುವಾಗ, ಕಾರು ನಡೆಸಿದ್ದು ಅವಳೇನಂತೆ.

ಆವಿ ದೋಣಿ, ಹಾಯಿ ದೋಣಿ, ನಾವೆ ದೋಣಿ, ಕೂವೆ ದೋಣಿ........

ನಡೆಯಲೇಬೇಕಿಲ್ಲ ಮಾತು-ಕತೆ
ಬಂಧು-ಬಳಗ ಬಂದ ಮೇಲೆ
ಅವಳೂ ಅಷ್ಟೆ, ಮಾತಾಡಿದ್ದೂ ಆಡಿದ್ದೆ
ನನ್ನ ಜೊತೆಗಲ್ಲ ಅನ್ನಿ.
ಸುತ್ತು ಮುತ್ತೂ ಜನ
ನಾನು? ನಾನೋ ಬಾಯೇ ಬಿಡಲಿಲ್ಲ..

ಆವಿ ದೋಣಿ, ಹಾಯಿ ದೋಣಿ, ನಾವೆ ದೋಣಿ, ಕೂವೆ ದೋಣಿ........

ಜಾನಿಮರಿಗೆ ಮೈತುಂಬ ಸಂಭ್ರಮ
ಹಿಗ್ಗಿ ನೆಗೆಯುತ್ತೆ, ಬಗ್ಗಿ ಮೂಸುತ್ತೆ
ಹಿಂಬಾಲಿಸುತ್ತೆ ಅವಳನ್ನೆ ಎಡಬಿಡದೆ
ಅವಳೂ ಅಷ್ಟೆ - ಜಾನಿ ಅಂದರೆ ಪ್ರೀತಿ.

ಆವಿ ದೋಣಿ, ಹಾಯಿ ದೋಣಿ, ನಾವೆ ದೋಣಿ, ಕೂವೆ ದೋಣಿ........

ದಾಸು ಮಾವನಿಗೆ ಒಂದೇ ಮರೆವು :
ಏನೋ ಕೇಳಿದ : ಹೇಳಿದೆ
ಮತ್ತೆ ಕೇಳಿದ : ಮತ್ತೆ ಹೇಳಿದೆ.
ಆಗಲೇ ಅವಳು ಗೊಣಗಿದ್ದು –
'ಬಿಡಿ ಅಪ್ಪ, ಇದು ತೀರ ಜಾಸ್ತಿ !'

ಆವಿ ದೋಣಿ, ಹಾಯಿ ದೋಣಿ, ನಾವೆ ದೋಣಿ, ಕೂವೆ ದೋಣಿ........

ಗುಂಡೂಮಾವ ಚೌಕಾಭಾರ ಬರೆದ
ಆ ಕಡೆ ಅವನು – ಈ ಕಡೆ ನಾನು
ಲಗುಬಗೆಯಿಂದೋಡಿ ಚಾ ತಂದಳು
ಜೊತೆಗೆ ಚೂಡಾ ಕೂಡ
ನಾನೂ ತಿಂದೆ ಒಂದೆರಡು ಹಿಡಿ. ಮತ್ತೆ ಬೇಡವೆಂದೆ.

ಆವಿ ದೋಣಿ, ಹಾಯಿ ದೋಣಿ, ನಾವೆ ದೋಣಿ, ಕೂವೆ ದೋಣಿ.....

ಮುಗಿದಿದ್ದೆ ತಡ, ಮಾತುಕತೆ
ಗೇಟು ದಾಟಿದರೂ ಟಾಟ ಮತ್ತೆ ಮತ್ತೆ
'ಟಾಟಾ ಪಿಂಕಿ, ಟಾಟಾ ಜಾನಿ,
ಬರಲೆ ಮಾವ? ಬರಲೆ ಅತ್ತೆ?'
ಅವಳು ಅಂದಿದ್ದಷ್ಟೆ; ಆಮೇಲೆ ಮಾತಿಲ್ಲ.

ಆವಿ ದೋಣಿ, ಹಾಯಿ ದೋಣಿ, ನಾವೆ ದೋಣಿ, ಕೂವೆ ದೋಣಿ........

ಇಷ್ಟಕ್ಕೂ, ಮಳೆ ಬರಲೇ ಇಲ್ಲ
ನೀರು ಹರಿಯಲೇ ಇಲ್ಲ
ದೋಣಿ ಬಿಡಲೇ ಇಲ್ಲ
ಖರೇನಂದ್ರೆ, ದೋಣಿ ಮಾಡಲೇ ಇಲ್ಲ..

ಆದರೂ ಮಾಡಬಹುದು ಎಷ್ಟೊಂದು ದೋಣಿ?

ಆವಿ ದೋಣಿ, ಹಾಯಿ ದೋಣಿ, ನಾವೆ ದೋಣಿ, ಕೂವೆ ದೋಣಿ........

~ ~ ~

ಸುಭಾಷ್ ಮುಖ್ಯೋಪಾಧ್ಯಾಯ
ಅವರೊಂದಿಗೆ ಡಾ॥ ಸುಮತೀಂದ್ರ ನಾಡಿಗರ ಮಾತುಕತೆ

ನಾಡಿಗ್ : ತುಂಬಾ ಚೆನ್ನಾಗಿದೆ. ಈಗ ಇನ್ನೊಂದು ಕವಿತೆಯನ್ನು ಓದಿ. ಅದನ್ನು ಓದುವ ಮುಂಚೆ ಅದು ಹೇಗೆ ಹುಟ್ಟಿತು ಅಂತ ಅದರ ಹಿನ್ನೆಲೆಯನ್ನು ಮೊದಲು ಹೇಳಿ. ಯಾವ ಕವಿತೆಯ ಬಗ್ಗೆ ಮಾತಾಡುತ್ತೀರಿ?

ಸುಭಾಷ್ : 'ಛಾಪ್' - ಅಂದರೆ 'ಇಂಪ್ರೆಶನ್'. ಇದು ನಮ್ಮ ಮದುವೆಯ ಬಗ್ಗೆ. ನಮ್ಮ ಮದುವೆ ಬಹಳ ಸರಳವಾಗಿತ್ತು. ರಿಜಿಸ್ಟರ್ಡ್ ಮದುವೆ. ಆಗ ನಮ್ಮ ತಂದೆ ರಿಟೈರ್ಡ್ ಆಗಿದ್ದರು. ನನ್ನ ಹತ್ತಿರ ಹಣ ಇರಲಿಲ್ಲ. ಒಬ್ಬ ಸ್ನೇಹಿತನ ಹತ್ತಿರ ಹೋದೆ. ನಂಗೊಂದು ಕೆಲಸಬೇಕು ಅಂದೆ. ನನಗೆ ಎಡಿಟರ್ ಕೆಲಸ ಸಿಕ್ಕಿತು. ಆಮೇಲೆ ನಾವು ಮದುವೆ ಆದೆವು. ೧೯೫೫ ನಮ್ಮ ಮದುವೆ ಆದಮೇಲೆ ಆ ಸ್ನೇಹಿತ ಪ್ರಕಾಶನಕ್ಕೆ ಹಣಸಿಗಲಿಲ್ಲ ಅಂದ. ನನ್ನ ಹತ್ರ ಮದುವೆ ದಿವಸ ಹಾಕ್ಕೊಳ್ಳಕ್ಕೆ ಒಳ್ಳೆ ಷರಟು ಇರಲಿಲ್ಲ. ಷರಟನ್ನು ಸಾಲ ಇಸ್ಕೊಂಡೆ. ...... ನಾನು ಇನ್ನಷ್ಟು ವಿವರಗಳನ್ನು ಹೇಳಲಾ?

ನಾ : ಖಂಡಿತ.

ಸು : ಏನಾಯ್ತೂಂದ್ರೆ, ಎಡಿಟರ್ ಸಚ್‌ದೇವ್ ಗೊತ್ತಲ್ಲ? ನನ್ನ ಸ್ನೇಹಿತ. ಅಲ್ಲದೆ ನನ್ನ ಬ್ರದರ್ ಆಗಿದ್ದ. ಮದುವೆ ಆಗಿ ನಾವು ಫ್ಲ್ಯಾಟ್‌ಗೆ ಹೊರಟೆವು. ಅವನು ಹೂವು ಹಿಡ್ಕೊಂಡು ಬರ್‍ತಿದ್ದ. ನಾವು ಮೆಟ್ಲು ಹತ್ತಿದ್ದಾಗ, ಅಷ್ಟು ಹೊತ್ತಿಗೆ ಇನ್ನೊಬ್ಬ ಮೆಟ್ಟಲು ಇಳಿದು ಬರ್‍ತಿದ್ದ. ಗೀತಾ ನಂಗೆ ಹೇಳಿದ್ಲು ಅವನು ಲೇಬರ್ ಪಾರ್ಟಿಲಿದ್ದ, ಗೀತಾ ಯೂರೋಪಿನಿಂದ ಬಂದಿದಾಳೆ ಅಂತ ಗೊತ್ತಾಗಿ ಅವಳನ್ನು ನೋಡ್ಲಿಕ್ಕೆ ಬಂದಿದ್ದ. ನಮ್ಮನ್ನು ನೋಡಿದ್ಕೂಡ್ಲೆ ಅವನ ಮುಖ ಎಷ್ಟು ಪೆಚ್ಚಾಯ್ತು ಅಂದ್ರೆ.... ನಂಗೇನೊ ಸಂತೋಷವೇ ಆಯ್ತು. ಆಮೇಲೆ ಆ ರಾತ್ರಿ ಗೀತಾಳ ಮೊದಲನೇ ಗಂಡ ಒಂದು ಬಾಟ್ಲಿ ಬ್ರಾಂಡಿ ಹಿಡ್ಕೊಂಡು ಬಂದ. ನಾನು ಆಗ ಕುಡೀತಿರ್‍ಲಿಲ್ಲ. ನಾನು ಕುಡೀಬೇಕು ಅಂತಾ ಒತ್ತಾಯಮಾಡಿದ. ಆಮೇಲೆ ಆ ರಾತ್ರಿ ನನಗೆ ನಿದ್ದೆ ಬರಲಿಲ್ಲ. ಆಗತಾನೇ ಜೈಲಿನಿಂದ ಬೇರೆ ಬಂದಿದ್ದೆ. ನಾವು ಎರಡನೇ ಮಹಡೀಲಿ ಇರ್‍ತಾ ಇದ್ವಿ. ನನಗೆ ಆಗತಾನೇ

ಮದುವೆಯಾಗಿತ್ತು. ಮೆಟ್ಟಿಲ ಮೇಲೆ ಶಬ್ದ ಕೇಳಿಸ್ತು. ಪೋಲೀಸರು ಬಂದ್ರು ಅಂತ ನನಗೆ ಹೆದರಿಕೆಯಾಗಿ, ಬಿಕ್ಕೊಂಡು ಕೂತಿದ್ದೆ. ಕಾಯ್ತಾ ಇದ್ದೆ. ಬಂದವರು ಮಾತಾಡ್ತಾ ಇರಲಿಲ್ಲ. ಬಾಗಿಲು ತೆಗೆದೆ. ಒಬ್ಬ ಪೋಸ್ಟ್‌ಮ್ಯಾನ್ ಟೆಲಿಗ್ರಾಂ ಹಿಡಿದು ನಿಂತಿದ್ದ. ಆ ರಾತ್ರಿ ಈಗಲೂ ನೆನಪಿದೆ. 'ಭಾಪ್' ಅವಾಗ ಬರೆದಿದ್ದು.

ನಾ : ಸುಭಾಷ್‌ದಾ, ಮದುವೆ ಆಗ್ತೀನಿ ಅಂತಾ ನೀವು ಮೊದಲು ಹೇಳಿದಿರೊ, ಅಥವಾ ಗೀತಾದೀ ಹೇಳಿದರೊ?

ಸು : ನಾವು ಒಂದು ಕಾಲೇಜಿನಲ್ಲಿ ಓದ್ತಾ ಇದ್ದಿವಿ. ನಾನು ನಾಚಿಕೆ ಸ್ವಭಾವದವನು. ಆಕೆ ನನಗಿಂತ ಎರಡು ವರ್ಷ ಜೂನಿಯರ್, ಆಕೆ ಸ್ನೇಹಪರಳಾಗಿದ್ದಳು. ಅವಳ ಅಣ್ಣ ನನ್ನ ಕ್ಲಾಸ್‌ಮೇಟ್ ಆಗಿದ್ದ. ಆಮೇಲೆ ಅವಳು ಗೊತ್ತಾದದ್ದು. ಆಕೆ ಒಬ್ಬ ಶ್ರೀಮಂತನನ್ನು ಮದುವೆಯಾದಳು. ತುಂಬಾ ಶ್ರೀಮಂತ. ಅವರು ಪರಸ್ಪರ ಪ್ರೀತಿಸ್ತಾರೆ ಅಂತ ನಂಗೆ ಗೊತ್ತಿತ್ತು. ಅವರ ಮದುವೆ ಆಯ್ತು. ನಾವು ಒಳ್ಳೆ ಸ್ನೇಹಿತರಾಗಿದ್ದೆವು. ಮದುವೆ ಆದಮೇಲೆ ಅವರ ಮನೆಗೆ ಹೋಗ್ತಿದ್ದೆ. ಅವರ ಡೈವೋರ್ಸ್ ಆದಮೇಲೆ ಒಂದು ಸಾರಿ ನಾನು ಮತ್ತೆ ಇನ್ನೊಬ್ಬ ಸ್ನೇಹಿತ ಅವಳ ಮನೆಗೆ ಹೋದೆವು. ಅವಳು ಇದ್ದಕಿದ್ದ ಹಾಗೆ ''ನೀನೂ ಒಂದು ಚಾನ್ಸ್ ತೆಗೊಳ್ಳೋಣ ಅಂತ ಬಂದಿದೀಯ?'' ಅಂತ ಕೇಳಿದ್ಲು. ನನಗೆ ಏನೋ ಒಂಥರ ಕಸಿವಿಸಿ, ಮುಜಗರ, ವಿಚಿತ್ರ ಸಂಕಟದ ಪರಿಸ್ಥಿತಿ. ಏಕೆಂದರೆ ನನಗೆ ಯಾವ ವಿಚಾರವೂ ಇರಲಿಲ್ಲ. ಆಮೇಲೆ ಅವಳು ಯೂರೋಪಿಗೆ ಹೋದಳು. ಅಲ್ಲಿ ನಂದೊಂದು ಪುಸ್ತಕ 'ಅಮಾರ್ ಬಾಂಗ್ಲಾ' ಓದಿದಳಂತೆ. ಅವಳು ನಮ್ಮ ದೇಶಕ್ಕಾಗಿ ಹೊಡೆದಾಡ್ತ ಇದ್ದದ್ದರಿಂದ ನಮ್ಮ ಪುಸ್ತಕ ಅವಳಿಗೆ ಇಷ್ಟವಾಯಿತು. ಆಮೇಲೆ ಗೊತ್ತಾಯ್ತು. ಆ ಪುಸ್ತಕದ ಕಾರಣದಿಂದ ನನ್ನ ಪ್ರೀತಿಸಲಿಕ್ಕೆ ಶುರುಮಾಡಿದಳು ಅಂತ. ನಂಗೆ ಹಂಗೇರಿಯಿಂದ ಒಂದು ಸಿಗರೇಟ್ ಹೋಲ್ಡರ್ ಕಳಿಸಿದಳು. ವಾಪಸ್ ಬಂದಮೇಲೆ ಅವಳನ್ನು ಭೇಟಿಯಾದಾಗ ನಾನು ಮೊದಲು ಆಡಿದ ಮಾತೂಂದ್ರೆ ''ಸಿಕ್ಕಾಪಟ್ಟೆ ದಪ್ಪ ಆಗಿದೀಯ'' ಅಂತ. ಹಾಗೆ ಹೇಳಿದ್ದು ಸೇಡು ತೀರಿಸ್ಕೊಳ್ಳಿಕ್ಕೆ ಆಗಿರಲಿಲ್ಲ. ಆಮೇಲೆ ಅವಳು 'ಪರಿಚಯ್' ಆಫೀಸಿಗೆ ಬರ್‍ತಿದ್ಲು. ಅವಳ ಜೊತೆ ಬೀದಿ ತಿರುಗ್ಲಿಕ್ಕೆ ಹೋಗ್ತಿದ್ದೆ. ಒಂದು ಸಾರಿ ಇದ್ದಕ್ಕಿದ್ದಂತೆ ಅವಳ ಬಗ್ಗೆ ಏನೇನೊ ಅನ್ನಿಸಲಿಕ್ಕೆ ಶುರುವಾಯ್ತು. ಅವಳು ಒಪ್ಪಿಕೊಳ್ಳೋಲ್ಲ ಅಂತ ಅನುಮಾನವಿತ್ತು. ನಾನೊಂದು ಪದ್ಯ ಬರೆದೆ. ಅವಳು ನನ್ನನ್ನು ಮದುವೆಯ ಸೂಚನೆ ನಿರಾಕರಿಸಿದಾಳೆ ಅಂದುಕೊಂಡು ಆ ಪದ್ಯ ಬರೆದಿದ್ದೆ. ಒಂದು ದಿನ ಕೆಲವು ಸ್ನೇಹಿತರನ್ನು ಕರೆದಿದ್ದಳು. ನನಗೆ ಹೊಟ್ಟೆ ಕಿಚ್ಚಾಗಿತ್ತು. ಅವಳ ಕೋಣೇಲಿ ಈ ಪದ್ಯ ಕೊಟ್ಟೆ. ಆಮೇಲೆ ಗೊತ್ತಾಯ್ತು, ನನ್ನ ಕೋರಿಕೆಯನ್ನು ತಿರಸ್ಕರಿಸೋ ಬದಲು ಅವಳು ಒಪ್ಪಿಕೊಂಡಿದಾಳೆ ಅಂತ.

ನಾ : ಆ ಪದ್ಯಾನೂ ಇಲ್ಲಿದೆಯ?

ಸು : ಗೊತ್ತಿಲ್ಲ, ನೋಡಬೇಕು. ಹ್ಞಾ ಇಲ್ಲಿದೆ. 'ಜಯ್‌ಮನಿ ಸ್ಥಿರ್ ಹೋ'- ಕೋಪಗೊಂಡ ಪ್ರಕೃತಿಯನ್ನು ಸಮಾಧಾನ ಮಾಡಲಿಕ್ಕೆ 'ಜಯ್‌ಮನಿ ಸ್ಥಿರ್ ಹೋ' ಅಂತ ಹೇಳ್ತೀವಿ.

ಸು : ಗೀತಾ ಇಲ್ಲಿನ ಜಯ್‌ಮನಿ (ನಗು) ಈಗ 'ಛಾಪ್' ಅದು ಮದುವೆಯಾದ ಕೂಡಲೆ ಬರೆದದ್ದು. ರಿಜಿಸ್ಟರ್ಡ್ ಮದುವೆಯ ಸನ್ನಿವೇಶ ಅದರಲ್ಲಿದೆ.

ನಾ : ಇನ್ನೊಂದು ಕವಿತೆ ಇದಕ್ಕೆ ಸಂಬಂಧಿಸಿದ ಹಾಗೆ; ಮೆರವಣಿಗೆಯ ಮುಖ ಮತ್ತೆ ಮತ್ತೆ ಬರುತ್ತೆ. ಗೀತಾದೀ ಜೊತೆಗೆ ಜಗಳ ಆಡಿದ ಮೇಲೆ, ಹೀಗೆ ಬೇರೆ ಸಂದರ್ಭದಲ್ಲಿ ಬರೆದದ್ದು. ಇದ್ದರೆ ಓದಿ.

ಸು : ಫೂಲ್.

೧೯೪೮ರಲ್ಲಿ, 'ಮಿಥಿಲೇಕ್ ಮುಖ' ಬರೆದ ಮೇಲೆ ಓಗೇ ಓಡಾಡ್ತಾ ಇದ್ದೆ. ಆ ಪದ್ಯದ ಜೊತೆಗೆ ಇದ್ದಕ್ಕಿದ್ದ ಹಾಗೆ ಇನ್ನೊಂದು ಪ್ರತಿಮೆ ನನಗೆ ಅಂಟಿಕೊಂಡಿತು. ಕಪ್ಪು - ಹುಡುಗಿಯೊಬ್ಬಳು. ಚಿಟ್ಟೆ. ನಿಮ್ಮಲ್ಲಿ ಬಣ್ಣದ ಚಿಟ್ಟೆ ಹುಡುಗಿ ಮೈಮೇಲೆ ಕೂತುಕೊಂಡರೆ ಅವಳಿಗೆ ಮದುವೆಯಾಗುತ್ತೆ ಅನ್ನೋ ನಂಬಿಕೆ ಏನಾದ್ರೂ ಇದೆಯೇನು?

ನಾ : ನನಗೆ ಗೊತ್ತಿಲ್ಲ.

ಸು : ನನ್ನ ಮದುವೆಯಾಗಿ ಬಹಳ ದಿನಗಳಾದ ಮೇಲೆ, ೧೯೫೬ರಲ್ಲಿ ಅಂತ ಕಾಣುತ್ತೆ, ಸಾಗರ್‌ಮೋಯಿ ದತ್ತ ಒಂದು ಪದ್ಯಕೊಡಿ ಅಂತ ಬೆನ್ನುಹತ್ತಿದ್ದರು. ಆದರೆ ನಾನು ಬರೆದಿರಲಿಲ್ಲ. ಆಮೇಲೆ ಪದ್ಯ ಇಸುಕೊಂಡು ಬರಲಿಕ್ಕೆ ಒಬ್ಬ ವ್ಯಕ್ತೀನ ಕಳಿಸಿದರು. ಪದ್ಯ ಕೊಡಲೇ ಬೇಕು ಅಂತ ಹೇಳಿ ಕಳಿಸಿದ್ದರು. ನಂಗೆ ಬರೀಲಿಕ್ಕಾಗೋಲ್ಲ ಅಂತ ಹೇಳಿದೆ. ಅವನು ಹೋದಕೂಡಲೆ ಒಳಗಡೆ ಹೋಗಿ ಕೂಡಲೇ ಪದ್ಯ ಬರೆದೆ. ಪ್ರಕಟವಾದಾಗ ಈ ಪದ್ಯ ತುಂಬ ಜನಪ್ರಿಯವೂ ಆಯ್ತು. ಎಷ್ಟು ಜನಪ್ರಿಯ ಅಂದ್ರೆ ''ಫೂಲ್ ಫುಟುಕು ನಾ ಫುಟುಕ್, ಆಜ್ ಬಸಂತ'' ಅನ್ನೊಂದು ಒಂದು ಸ್ಲೋಗನ್ ಥರ ಆಯ್ತು.

ಫೂಲ್ ಫುಟುಕ್ ನಾ ಫುಟುಕ್

(ಪಟಪಟ ಹೂ ಅರಳಿ ಬಿಡಲಿ)

~ ~ ~

ಜಯ್‌ಮನಿ ಸ್ಥಿರವಾಗು

ಬಂಗಾಳಿ : **ಸುಭಾಷ್ ಮುಖ್ಯೋಪಾಧ್ಯಾಯ**
ಅನು : **ಡಾ. ಸುಮತೀಂದ್ರ ನಾಡಿಗ**

ಈ ದಿವಸ ನೀ ನನ್ನ ನೋಡಿದರೆ
ನಿನಗೆ ನೆನಪಾದೀತು
ಪೃಥ್ವಿಯ ಪುರಾತನವಾದ ಜನ್ಮವೃತ್ತಾಂತ.
ಸೀಮಾತೀತ ಶೂನ್ಯತೆಯಲ್ಲಿ ಸುತ್ತುತ್ತಿದ್ದ
ಜ್ವಲಂತ ಅಗ್ನಿಪಿಂಡ.
ಕಲ್ಕತ್ತೆಯ ಕಿಕ್ಕಿರಿದ ದಾರಿ.
ನೆನಪಾಗುತ್ತೆ – ನನ್ನ ನೋಡಿದರೆ
ಕೋಟಿಕೋಟಿ ಜ್ಯೋತಿರ್ವರ್ಷಗಳ
ಮೃತವಾದ ಯಾವುದೋ ಉಜ್ವಲವಾಗಿದ್ದ ತಾರೆ...

ನಿನಗೆ ಅನ್ನಿಸಬಹುದು ಆತ್ಮಘಾತುಕ ಅಗ್ನಿ
ಬಹುಶಃ ಸುಟ್ಟುಸುಟ್ಟು ಹೋಗುತ್ತೆ;
ಬಹುಶಃ ಧಗಧಗಿಸುವ ದಾವಾಗ್ನಿಜ್ವಾಲೆ
ಜನಾರಣ್ಯವನು ಸುಟ್ಟು ಭಸ್ಮಮಾಡುತ್ತೆ.

೨

ಆದರೆ ಪೃಥ್ವಿಯ ಇತಿಹಾಸವೇ ಬೇರೆ –
ಆರಿದ ಅಗ್ನಿಚಿತೆಯಿಂದ
ಜನ್ಮತಾಳಿತ್ತಲ್ಲ ವೈಭವದ ಬದುಕು.

ನಿನ್ನೆ ಇಡೀ ದಿವಸ ಕನಸೊಂದು ನನ್ನನ್ನು ಕಡೆದಿತ್ತು.
ಏರುತೆರೆ ಬಂದಾಗ ಉತ್ತುಂಗ ತರಂಗ ಶಿಖೆ ಮೇಲೆ ನಾನೆದ್ದು
ಎರಡೂ ಕೈಯಿಂದ ಆಕಾಶ ಮುಟ್ಟಿದ್ದೆ.

ಯಾರು ಕರೆಯುತ್ತಾರೆ ನನ್ನ? ಯಾರು ಅದು?
ಮೆರವಣಿಗೆಯಲ್ಲಿದ್ದ ಮುಖವೆ ಹೌದೇ?
ದಿಗಂತವನ್ನು ದಿಗಂತಕ್ಕೆ ಸೇರಿಸುವಂತೆ ಕೈಚಾಚಿದೆ.
ಅದು ಕನಸೆ? ಮಾಯೆಯೆ? ಮತಿಭ್ರಮೆಯೆ?

೩

ಆಮೇಲೆ
ವಿದ್ಯುತ್ತು ಭಯಹುಟ್ಟಿಸಿದ ಚಾಟಿ ಏಟಲ್ಲಿ
ಅನಿವಾರ್ಯ.
ವೇಗಾಂಧ ಪತನವಾಯ್ತು.
ಎದುರಲ್ಲಿ ನೂರೆನೂರೆಯಾದ ತರಂಗಗಳ ದೇಹ
ತಾನಾಗಿ ಸಹಸ್ರಚೂರುಗಳಾಯ್ತು
ನನ್ನನ್ನು ಪರಿಹಾಸ್ಯಮಾಡಿ ಸೋಲಿಸಿತು
ಮೆರವಣಿಗೆಯಲ್ಲಿದ್ದ ಮೋಸಗಾರ್ತಿಯ ಆ ಮುಖ.

ನಾನು ದನಿಯೆತ್ತಿ ಕೂಗಿದೆ ;
ಜಯ್‌ಮನಿ ಸ್ಥಿರವಾಗು!
ವೈಶಾಖದ ಬಿರುಗಾಳಿಯೆ ಶಾಂತವಾಗು!
ಈ ಪೃಥ್ವಿಯ ಮೇಲೆ ಭಾರಹಾಕಿ ನಿಂತಿದ್ದೇನೆ
ನೋಡೀಗ
ಜಟೆಯಲ್ಲಿ ಕಟ್ಟಿಹಾಕಿದ್ದೇನೆ
ವೇದನೆಯ ಆಕಾಶಗಂಗೆ.

~ ~ ~

ಪಟಪಟ ಹೂ ಅರಳಲಿ ಬಿಡಲಿ

ಬಂಗಾಳಿ : ಸುಭಾಷ್ ಮುಖ್ಯೋಪಾಧ್ಯಾಯ
ಅನು : ಡಾ. ಸುಮತೀಂದ್ರ ನಾಡಿಗ

ಪಟಪಟ ಹೂ ಅರಳಲಿ, ಬಿಡಲಿ
ಇಂದು ವಸಂತ.
ಕಲ್ಲು ಹಾಸಿರುವ ಫುಟ್‌ಪಾತಲ್ಲಿ
ಕಲ್ಲಿನ ಒಳಗೆ ಕಾಲನ್ನೂರಿದ
ಒಂದು ಮೋಟು ವೃಕ್ಷ.
ಚಿಚ್ಚಿಗುರಿನ ಎಲೆ ಎಲೆಯಿಂದ
ಸೀಳಿ ಪಂಜರವ ನಗುತಿಹುದು.

ಪಟಪಟ ಹೂ ಅರಳಲಿ ಬಿಡಲಿ
ಇಂದು ವಸಂತ.
ಬೆಳಕಿನ ಕಣ್ಣಿಗೆ ಕಪ್ಪು ಕನ್ನಡಕ
ತೊಡಿಸಿ ತೆಗೆಯುತ್ತಿದ್ದ
ಮೃತ್ಯುಮಡಿಲಲ್ಲಿ ಮನುಜರ ಮಲಗಿಸಿ
ಎದ್ದೇಳಿಸುತ್ತಿದ್ದ,
ಆ ದಿನ ಹೋಗಿವೆ ರಸ್ತೆ ಹಿಡಿದು
ಮತ್ತೆಂದೂ ಅವು ಬರದಿರಲಿ.

ಅರಿಶಿನ ಹಚ್ಚಿದ ಸಂಜೆ ಹೊತ್ತಲ್ಲಿ
ಒಂದೋ ಎರಡೋ ಪೈಸಕ್ಕಾಗಿ
ಯಾರದೇ ದನಿ ಬೇಕಾದರೂ
ಅನುಕರಿಸುವ ಹುಡುಗ,

ಕೋಗಿಲೆಯಂತೆ ಕೂಗುತ್ತಿದ್ದವನು
ಅವನನ್ನೂ ಕರೆದೊಯ್ದುವೆ ಆ ದಿನಗಳು.

ಕೆಂಪು ಮಸಿಯಲ್ಲಿ ಅಚ್ಚುಹಾಕಿರುವ
ಹಳದಿ ಪತ್ರದಂತೆ
ಆಕಾಶದ ಕಡೆ ಮುಖ ಮಾಡಿರುವವಳು,
ಚಿಕ್ಕಂದಿನಲೆ ಮುಪ್ಪಾದವಳು,
ಕಪ್ಪು ಕುರೂಪಿ ಓಣಿಯ ಹುಡುಗಿ
ಕಿಟಕಿಯ ಸರಳಿಗೆ ಎದೆಯನ್ನೊತ್ತಿ
ಯೋಚಿಸುವಳು ಈ ಎಲ್ಲ.

ಅದೇ ಹೊತ್ತಿಗೆ ಬಂದಿದೆ ಹಾರಿ
ಅವಳ ಮೈ ಮೇಲೆ ಕೂಡುವುದಕ್ಕೆ
ತಲೆತಿನ್ನುವ
ಪಾತರಗಿತ್ತಿ.
ಸತ್ತೇ ಹೋಗಲಿ ಅಸಹ್ಯಮೋರೆಯ
ದರಿದ್ರ ಬಣ್ಣದ ಚಿಟ್ಟೆ –

ನಂತರ ಧಡೀರು
ಬಾಗಿಲು ಮುಚ್ಚಿದ ಶಬ್ದ.

ಕತ್ತಲಿನಲ್ಲಿ ಮುಖ ಮರೆಮಾಡಿ
ನಕ್ಕಿತು ಆಗ
ಗಡ್ಡ ಹಣ್ಣಾದ ಆ ವೃಕ್ಷ.

~ ~ ~

ನಿನಗೆ ಹೇಳಲಿಲ್ಲ

ಬಂಗಾಳಿ : ಸುಭಾಷ್ ಮುಖ್ಯೋಪಾಧ್ಯಾಯ
ಅನು : ರಾ. ಲಕ್ಷ್ಮೀನಾರಾಯಣ

ಆಕಾಶದಲ್ಲಿ ಗದ್ದಲದ ಮೋಡಗಳು
ಪಟಾಕಿ ಸಿಡಿಸಿದ ಹಾಗೆ ಸದ್ದು.
ನಿನ್ನೆ
ನಿನ್ನ ಹುಟ್ಟಿದ ಹಬ್ಬ.
ಕೋಣೆಯಲ್ಲಿ ಇರಿಚಲಿತ್ತು
ಕಿಟಿಕಿ ಹಾಗೆ ತೆರದೇ ಇತ್ತು.
ದೀಪ ತೆಗೆದ ಕತ್ತಲಲ್ಲಿ
ಝುಗಝುಗಿಸುವ ಮಿಂಚಿನಲ್ಲಿ
ನಿನ್ನ ಮುಖವು ಕಾಣುತಿತ್ತು.

ಆಗ ಈಗ ಗಾಳಿ ಬೀಸಿ
ನಿನಗೆ ಪ್ರೀತಿಯಿಂದ ಕೊಟ್ಟ
ಮೇಜ ಮೇಲೆ ನೀನಿರಿಸಿದ
ಹೂಗೊಂಚಲ ನಡುಗಿಸಿತ್ತು.

ನಿನ್ನೆ ರಾತ್ರಿ ನನಗೆ ಏಕೆ
ನಿದ್ದೆ ಬರಲೇ ಇಲ್ಲವೆಂದು
ನಿನಗೆ ಹೇಳಲಿಲ್ಲ.

ನಾನು ಬರೆದ ಕಾಗದಗಳ
ಒಂದು ದೈತ್ಯ ಬೆಕ್ಕು ಎತ್ತಿ
ರಾತ್ರಿ ಇಡೀ ಆಡುತಿತ್ತು
ನಿನಗೆ ಹೇಳಲಿಲ್ಲ

ಒಂದು ದುಷ್ಟ ಗಡಿಯಾರವು
ಟಿಕ್ ಟಿಕ್ ಟಿಕ್ ಸದ್ದಿನಲ್ಲಿ
ಒಂದು ದಿವಸ ನನ್ನ ಹಿಡಿದು
ಸುಟ್ಟು ಹಾಕಿಬಿಡುವುದಾಗಿ
ಬೆದರಿಸಿದ ವಿಷಯವನ್ನು
ನಿನಗೆ ಹೇಳಲಿಲ್ಲ.

ಮಣ್ಣುಗೂಡಿ ಹೋದ ಮೇಲೆ
ನಾವು ಒಬ್ಬರೊಬ್ಬರನ್ನು
ಗುರುತು ಹಿಡಿಯಲಾರೆವೆಂದು
ನಿನಗೆ ಹೇಳಲಿಲ್ಲ

ಈ ಬಾರಿಯ ಜಾತ್ರೆಯಲ್ಲಿ
ಏನೇನನು ಕೊಳ್ಳಲಿರುವೆ-
ಹೇಳಲಾಗಲಿಲ್ಲ.

ಮಗಳಿಗಾಗಿ ತಾಳೆಪೀಪಿ
ನಿನಗೆ ಹೂವು ಹಣ್ಣುಗಿಡ.
ಮತ್ತೆ ಮನೆಗೆ ಚಂದವಾದ
ಹಿತ್ತಾಳೆಯ ಪಂಜರದಲಿ
ಬದರಿಕಾ ಪಕ್ಷಿ ಜೋಡಿ –
ಏನೇನನು ಕೊಳ್ಳಲಿರುವೆ
ನಿನಗೆ ಹೇಳಲಿಲ್ಲ
ಹೇಳಲಾಗಲಿಲ್ಲ.

~ ~ ~

ಹೊಸಪೀಳಿಗೆಯ ಹಿಂದಿ ಕವಿ

ಗಜಾನನ ಮಾಧವ ಮುಕ್ತಿಬೋಧ

ಡಾ. ಟಿ. ಜಿ. ಪ್ರಭಾಶಂಕರ್ 'ಪ್ರೇಮಿ'

ಹಿಂದಿಯ ಹೊಸ ಪೀಳಿಗೆಯ ಕವಿಗಳಲ್ಲಿ ಪ್ರಿಯ ಕವಿ ಮತ್ತು ವಿಶಿಷ್ಟ ಕವಿಯೆಂದರೆ ಮುಕ್ತಿಬೋಧರು. ಅವರು ವಿಚಾರ ವಾದಿಗಳೂ ಕೂಡ. ನಯಿ ಕವಿತೆಯ ನಿರ್ಮಾತೃಗಳಲ್ಲಿ ಮಹತ್ವಪೂರ್ಣಸ್ಥಾನ ಹೊಂದಿದವರಾದರೂ ಡಾ. ನಾಮಾವರ ಸಿಂಹ್‌ರವರು ಹೇಳುವಂತೆ 'ನಯಿಕವಿತಾ'ದಲ್ಲಿ ಮುಕ್ತಿಬೋಧ ಸ್ಥಿತಿ ಛಾಯಾವಾದದಲ್ಲಿ 'ನಿರಾಲಾ'ರ ಸ್ಥಿತಿ ಇದ್ದಂತೆ. 'ನಿರಾಲಾ'ರಂತೆಯೇ ಮುಕ್ತಿಬೋಧರೂ ಕೂಡ ತನ್ನ ಯುಗದ ಸಾಮಾನ್ಯ ಕಾವ್ಯರೂಪಗಳನ್ನು ಪ್ರತಿಫಲಿಸುವುದರ ಜೊತೆಗೆ ಅವುಗಳ ಎಲ್ಲೆಗಳನ್ನು ಮೀರಿ ಸೃಜನಾತ್ಮಕ ವಿಶಿಷ್ಟತೆಯನ್ನು ಚರಿತಾರ್ಥಗೊಳಿಸಿದರು. ಅವರಿಂದ ಸಮಕಾಲೀನ ಕಾವ್ಯದ ಸರಿಯಾದ ಮೂಲ್ಯಾಂಕನ ಸಾಧ್ಯವಾಯಿತು.

ಮುಕ್ತಿಬೋಧರು ಜನಿಸಿದುದು ೧೯೧೭ರಲ್ಲಿ ಗ್ವಾಲಿಯರ್‌ನ ಒಂದು ಕಸಬಾದಲ್ಲಿ. ಅವರು ಬಿ.ಎ.ವರೆಗೆ ಶಿಕ್ಷಣ ಪಡೆದು ಅಧ್ಯಾಪಕರಾಗಿ, ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತ ಕವಿಗಳಾಗಿ, ಚಿಂತಕರಾಗಿ, ಸಮೀಕ್ಷಕರಾಗಿ ಖ್ಯಾತರಾದರು. ಮುಕ್ತಿಬೋಧ ಎಂಬುದು ಅವರ ಕಾವ್ಯನಾಮವೇನಲ್ಲ. ಅದು ಅವರ ವಂಶಸೂಚಕ ಹೆಸರು. ಅವರ ಪೂರ್ವಜರಾರೋ 'ಮುಕ್ತ ಬೋಧ' ಅಥವಾ 'ಮುಗ್ಧ ಬೋಧ' ಎಂಬ ಗ್ರಂಥ ರಚಿಸಿದ್ದರು. ಆದ್ದರಿಂದ ಆ ಹೆಸರು ಅವರ ವಂಶಕ್ಕೆ ಅಂಟಿಕೊಂಡಿತು. ಮುಕ್ತಿಬೋಧರು ಮೂಲತಃ ಋಗ್ವೇದಿ ಕುಲಕರ್ಣಿ ಬ್ರಾಹ್ಮಣಪರಿವಾರದಿಂದ ಬಂದವರು ಮತ್ತು ಅವರ ಮನೆಮಾತು ಮರಾಠಿ.

ಮುಕ್ತಿಬೋಧರು ಸಾಹಿತ್ಯ ಜಗತ್ತಿಗೆ ಪರಿಚಿತರಾದುದು ಮೊದಲು 'ಅಜ್ಞೇಯ'ರಿಂದ ಸಂಪಾದಿತವಾದ 'ತಾರಸಪ್ತಕ'ದಿಂದ. ಇದು ಮೊದಲು ೧೯೪೩ರಲ್ಲಿ ಪ್ರಕಟಗೊಂಡಿತು. ನಂತರ ಎರಡನೇ ತಾರಸಪ್ತಕ ೧೯೫೧ರಲ್ಲೂ, ಮೂರನೆಯ ಸಪ್ತಕ ೧೯೫೯ ರಲ್ಲೂ ಮತ್ತು ನಾಲ್ಕನೆಯ ತಾರಸಪ್ತಕ ೧೯೭೯ರಲ್ಲೂ ಪ್ರಕಟಗೊಂಡು ಇವು ಒಂದು ಯುಗವನ್ನೇ ನಿರ್ಮಿಸಿದವು. ಪ್ರತಿ ಸಪ್ತಕದಲ್ಲಿ ಏಳು ಕವಿಗಳನ್ನು ಅಜ್ಞೇಯರು ಪರಿಚಯಿಸುತ್ತಾ ಬಂದರು. ಆದರೆ ಪ್ರಯೋಗವಾದಿ ಕವಿತೆಯ ಇತಿಹಾಸದಲ್ಲಿ 'ಅಜ್ಞೇಯ'

ಮತ್ತು ಮುಕ್ತಿಬೋಧರಿಗೆ ಸರ್ವೋಪರಿಸ್ಥಾನ. ಅಜ್ಞೇಯರವರು ಘೋರ ವ್ಯಕ್ತಿವಾದಿಯಾದರೆ ಮುಕ್ತಿಬೋಧರು ಘೋರ ಸಮಾಜವಾದಿ. ಇವರಿಬ್ಬರನ್ನು ಒಂದುಗೂಡಿಸುವ ಅಂಶವೆಂದರೆ ಪ್ರಯೋಗವಾದಿ ಶೈಲಿ-ಶಿಲ್ಪ.

ಮುಕ್ತಿಬೋಧರ ದಿಢೀರ್ ಪ್ರಸಿದ್ಧಿಗೆ ಮುಖ್ಯ ಕಾರಣವೆಂದರೆ ಅವರು ೧೯೬೪ರಲ್ಲಿ ತೀವ್ರ ಅಸ್ವಸ್ಥರಾದಾಗ ಅವರ ಚಿಕಿತ್ಸೆಗೆ ಸಹಾಯ ಪಡೆಯಲು ಮೈಥಿಲಿ ಶರಣಗುಪ್ತರು ಮತ್ತು ಹರಬಂಶರಾಯ್ ಬಚ್ಚನ್‌ರು ಶ್ರೀ ಲಾಲ್‌ಬಹಾದುರ ಶಾಸ್ತ್ರಿಯವರನ್ನು ಪ್ರಾರ್ಥಿಸಿದುದು. ಕವಿ ಶಂಶೇರ್ ಬಹಾದೂರಸಿಂಹರವರು ತಮ್ಮ 'ಏಕ್ ವಿಲಕ್ಷಣ ಪ್ರತಿಭಾ' ಲೇಖನದಲ್ಲಿ ಹೇಳುತ್ತಾರೆ. ಧರ್ಮಯುಗ, ಜ್ಞಾನೋದಯ, ಲಹರ್, ನವ ಭಾರತ್ ಟಾಯಿಮ್ಸ್ ಪತ್ರಿಕೆಗಳು ಓದುಗರಿಗೆ ಮುಕ್ತಿಬೋಧರನ್ನು ಪರಿಚಯಿಸ ತೊಡಗಿದವು. ಇದರಿಂದ ದಿಲ್ಲಿಯ ಸಾಹಿತ್ಯಿಕ ವಲಯದಲ್ಲಿ ಅಲ್ಲೋಲ ಕಲ್ಲೋಲ ಉಂಟಾಯಿತು. ಆದರೆ ಹಿಂದಿ ಸಾಹಿತ್ಯ ಜಗತ್ತು ಮುಕ್ತಿಬೋಧರನ್ನು ಉಳಿಸಿಕೊಳ್ಳ ಲಾಗಲಿಲ್ಲ. ೧೯೬೪ರಲ್ಲೇ ತಮ್ಮ ೪೭ನೇ ವಯಸ್ಸಿನಲ್ಲಿ ಮೃತ್ಯುವನ್ನಪ್ಪಿದರು.

ಮುಕ್ತಿಬೋಧರ ಕಾವ್ಯಕೃತಿಗಳು 'ಚಾಂದ್ ಕಾ ಮುಹ್ ಟೆಡಾ ಹೈ' ೧೯೬೪ರಲ್ಲಿ ಮತ್ತು 'ಭೂರಿ ಭೂರಿ ಬಾಕ್ ಧೂಲ್' ೧೯೮೦ರಲ್ಲಿ ಪ್ರಕಟವಾದವು. ಮುಕ್ತಿಬೋಧರ ಕೃತಿಯ ವಿಶ್ಲೇಷಣೆಗೆ ಮುನ್ನ 'ಪ್ರಯೋಗವಾದ' ಮತ್ತು 'ನಯಿ ಕವಿತಾ'ಗಳ ಬಗ್ಗೆ ತಿಳಿದುಕೊಳ್ಳುವುದು ಸೂಕ್ತ.

ಪ್ರಯೋಗವಾದಿ ಕವಿತೆ ಪ್ರಾರಂಭವಾದದ್ದು 'ಅಜ್ಞೇಯ'ರವರ ಸಂಪಾದಕತ್ವದಲ್ಲಿ ಪ್ರಕಟವಾದ 'ತಾರಸಪ್ತಕ'(೧೯೪೩)ದಿಂದಲೇ. ಆದರೆ ಪ್ರಗತಿವಾದಿ (೧೯೩೭-೪೩) ಕಾವ್ಯಧಾರೆಯಂತೆ ಪ್ರಯೋಗವಾದಿ ಕಾವ್ಯದ ಮೂಲವೂ ಛಾಯಾವಾದವೇ (೧೯೧೮-೩೭).'ನಿರಾಲಾ' ಪ್ರಗತಿವಾದಿ - ಪ್ರಯೋಗವಾದಿಗಳಿಬ್ಬರಿಗೂ ನಾಯಕರೇ. ಅವರ ಸಮಸ್ತ ಕಾವ್ಯವನ್ನು 'ಪ್ರಯೋಗದ ಆಲ್ಬಮ್' ಎನ್ನುತ್ತಾರೆ. ಅಂದರೆ ೧೯೪೩ಕ್ಕೆ ಮೊದಲೇ ಕಾವ್ಯದಲ್ಲಿ 'ಪ್ರಯೋಗ' ನಡೆದಿತ್ತು. ಅಲ್ಲದೆ ಪ್ರಗತಿವಾದದ ಅನೇಕ ಕವಿಗಳು ಪ್ರಯೋಗವಾದದಲ್ಲೂ ಸೇರಿಹೋದರು. ಆದ್ದರಿಂದ ಪ್ರಾರಂಭದಲ್ಲಿ ಪ್ರಗತಿವಾದ ಮತ್ತು ಪ್ರಯೋಗವಾದ ಜೊತೆಯಲ್ಲಿದ್ದು ಒಂದರೊಳಗೊಂದು ಸೇರಿಹೋಗಿದ್ದವು. ಆದರೆ ಪ್ರಗತಿವಾದ ಸಮಾಜವಾದಿ ಸಿದ್ಧಾಂತದೊಂದಿಗೆ ಬಂಧಿಸಲ್ಪಟ್ಟಾಗ ಪ್ರಯೋಗವಾದ ಅದರಿಂದ ಬೇರೆಯಾಗತೊಡಗಿತು. ಪ್ರಗತಿವಾದಿ ಕಾವ್ಯ ಆಂದೋಲನ ಬಹಳ ದಿನ ಮುಂದು ವರಿಯಲಿಲ್ಲ. ಆದರೆ ಪ್ರಯೋಗವಾದಿ ಕಾವ್ಯ 'ನಯಿಕವಿತಾ' ರೂಪದಲ್ಲಿ ಎರಡು ದಶಕಗಳ ಕಾಲ ಜೀವಂತವಾಗಿತ್ತು.

'ಪ್ರಯೋಗವಾದ' ಶಬ್ದವನ್ನು ಮೊಟ್ಟಮೊದಲು ಪ್ರಸಿದ್ಧ ವಿಮರ್ಶಕ ಶ್ರೀ ನಂದ ದುಲಾರೆ ವಾಜಪೇಯಿಯವರು ತಮ್ಮ 'ಪ್ರಯೋಗವಾದಿ ರಚನಾಯೇಂ' ಪ್ರಬಂಧದಲ್ಲಿ

ಬಳಸಿದರು. ಈ ಪ್ರಬಂಧದಲ್ಲಿ 'ತಾರಸಪ್ತಕ'ದ ಸಮೀಕ್ಷೆ ಮಾಡುತ್ತಾ ಬರೆಯುತ್ತಾರೆ - ''ಈಗ್ಗೆ ಕೆಲವು ಸಮಯಗಳಿಂದ ಹಿಂದಿ ಕಾವ್ಯಕ್ಷೇತ್ರದಲ್ಲಿ ಕೆಲವು ಕಾವ್ಯರಚನೆಗಳಾಗುತ್ತಿವೆ. ಅವುಗಳನ್ನು ಬೇರೆ ಸುಲಭ ಶಬ್ದಗಳ ಅಭಾವದಿಂದಾಗಿ 'ಪ್ರಯೋಗವಾದಿ' ರಚನೆಗಳೆನ್ನ ಬಹುದು'. 'ದೂಸರಸಪ್ತಕ'ದ ಭೂಮಿಕೆಯಲ್ಲಿ 'ಅಜ್ಞೇಯ'ರವರು 'ತಾರಸಪ್ತಕದ' ರಚನೆಗಳನ್ನು ವಾಜಪೇಯಿಯವರು 'ಪ್ರಯೋಗವಾದಿ' ಎಂದು ಗುರುತಿಸಿರುವುದನ್ನು ಒಪ್ಪಿಕೊಂಡಿದ್ದಾರೆ.

೧೯೫೦ರಲ್ಲಿ ಪ್ರಯೋಗವಾದಿ ಕಾವ್ಯ ಹೊಸತಿರುವನ್ನು ಪಡೆದು 'ನಯೀ ಕವಿತಾ' ಎಂದು ನಾಮಕರಣಹೊಂದಿತು.

ಛಾಯಾವಾದ ಜಯಶಂಕರ ಪ್ರಸಾದ, ಸುಮಿತ್ರಾನಂದನ ಪಂತ್, ಮಹಾದೇವಿ ವರ್ಮಾ ಮತ್ತು ಸೂರ್ಯಕಾಂತ ತ್ರಿಪಾಟಿ 'ನಿರಾಲಾ'ರನ್ನು ಮೆರೆಸಿದಂತಹ ಕಾವ್ಯಧಾರೆ. ಅದು ಮಾನವೀಯತೆ, ಆದರ್ಶವಾದಿ ದೃಷ್ಟಿ, ಕಲ್ಪನಾ ಬಾಹುಲ್ಯ, ಅಲಂಕರಣ ಮುಂತಾದ ವಿಶಿಷ್ಟ ಪ್ರವೃತ್ತಿಗಳನ್ನು ಉಳ್ಳಂತಹುದು. ಪ್ರಗತಿವಾದ - ಪ್ರಯೋಗವಾದಗಳೆರಡೂ ಛಾಯಾವಾದದ ಈ ಪ್ರವೃತ್ತಿಗಳಿಂದ, ಈ ಲಕ್ಷಣಗಳಿಂದ ಬೇರೆಯಾದವು. ಇವೆರಡೂ ಯಥಾರ್ಥತೆಗೆ ಒತ್ತುಕೊಟ್ಟವು. ಪ್ರಗತಿವಾದ ಸಮಾಜವಾದಿ ಯಥಾರ್ಥವನ್ನು ಮತ್ತು ಪ್ರಯೋಗವಾದ ವ್ಯಾಪಕ ಅರ್ಥದಲ್ಲಿ ಅಸ್ತಿತ್ವದ ಮೂಲಕ ಯಥಾರ್ಥವನ್ನು ಅನುಸರಿಸಿದವು. ಈ ಸಂಬಂಧದಲ್ಲಿ ಮುಕ್ತಿಬೋಧರು ಬರೆಯುತ್ತಾರೆ - 'ಒಂದು ಕಾಲದಲ್ಲಿ ಪ್ರಯೋಗವಾದ ಕವಿತೆ ಪ್ರಗತಿವಾದಕ್ಕೆ ಹತ್ತಿರವಾಗಿತ್ತು. ಆದರೆ ಪ್ರಗತಿವಾದಿಗಳು ಅದನ್ನು ಉಪೇಕ್ಷಿಸುತ್ತಾ ಬಂದರು. ಯಾವುದು ತನ್ನಿಂದ ಭಿನ್ನವೋ ಅದು ತನಗೆ ವಿರೋಧಿ ಕೂಡ. ಯಾವ ಕಾವ್ಯ ತನ್ನ ಮೂಸೆಯಲ್ಲಿ ಹಾಕಲಾಗಿಲ್ಲ ಅದು ದೋಷಪೂರ್ಣ, ಪ್ರತಿಕ್ರಿಯಾವಾದಿ ಕೂಡ. ಈ ರೀತಿಯ ಚಿಂತನೆ, ವಿಚಾರ ಸಮೀಕ್ಷಕರ ಮಾನವ ಯಥಾರ್ಥದಿಂದ ದೂರವನ್ನು ಹೆಚ್ಚು ಅಂತರವನ್ನು ಸೂಚಿಸುತ್ತದೆ'.

ಪಶ್ಚಿಮದಲ್ಲಿ ನಡೆದ ಹೊಸ ಕಾವ್ಯಾಂದೋಲನವನ್ನು ಗಮನಿಸಿದರೆ ಹಿಂದಿಯ ಪ್ರಯೋಗವಾದಿ ಆಂದೋಲನದ ಸ್ವರೂಪ ಸ್ಪಷ್ಟವಾಗುತ್ತದೆ. ಪ್ರಥಮ ಮಹಾಯುದ್ಧದಲ್ಲಿ ಬೇರೂರಿದ್ದ ಆದರ್ಶಗಳನ್ನು ಮುರಿಯಲಾಯಿತು. ಧರ್ಮ ಮತ್ತು ಅಧ್ಯಾತ್ಮದ ಮೌಲ್ಯಗಳು ವಿಘಟಿತವಾದವು.. ಆರ್ಥಿಕ ಸಮತೆ ಅಂದರೆ ಸಾಮ್ಯವಾದದ ಕಡೆಗೆ ಜನರ ಗಮನ ಹರಿಯಿತು. ೧೯೩೦ರ ಹೊತ್ತಿಗೆ ಸಾಮ್ಯವಾದ 'ಆಧುನಿಕತೆ'ಯ ಮಾನದಂಡವಾಯಿತು. ಆದರೆ ಯೂರೋಪಿನ ಮನಸ್ಸು ಅದನ್ನು ಬರಮಾಡಿಕೊಳ್ಳಲಿಲ್ಲ. ಸಾಮ್ಯವಾದವನ್ನು ಸ್ಟೆಫೆನ್, ಸ್ಪೆಂಡರ್ ಮೊದಲಾದವರು 'ಗಾಡ್ ದಟ್ ಫೇಲ್ಡ' ಎಂದರು. ಬ್ರಿಟನ್ನಿನ ಕೆಲವು ಕವಿಗಳು ೧೯೩೨ರಲ್ಲಿ 'ನ್ಯೂ ಸಿಗ್ನೇಚರ್' ಎಂಬ ಹೆಸರಿನಲ್ಲಿ ಒಂದು ಕಾವ್ಯ ಸಂಗ್ರಹ ಪ್ರಕಟಿಸಿದರು. ಅದರಲ್ಲಿ ಆಡೆನ್, ಎಮರ್ಸನ್, ಜಾನ್ ಲೆಹಸನ್, ಸ್ಪೆಂಡರ್

ಮೊದಲಾದವರ ರಚನೆಗಳಿವೆ. ಈ ಕವಿಗಳು ಪರಂಪರೆಯಿಂದ ಬಂದ ಕಾವ್ಯ ಪದ್ಧತಿಗಳು ಅಪೂರ್ಣ ಎಂದು ಭಾವಿಸಿ ಹೊಸ ದಿಕ್ಕುಗಳನ್ನು ಅನ್ವೇಷಿಸಿದರು. ಹಿಂದಿನದರ ಬಗ್ಗೆ ಅಸಂತೋಷ ವ್ಯಕ್ತಪಡಿಸುತ್ತ ಹೊಸ ಅನ್ವೇಷಣೆಯಲ್ಲಿ ಎಲ್ಲರೂ ಜೊತೆಯಾದರು. 'ಅಜ್ಞೇಯ'ರವರ 'ತಾರಸಪ್ತಕ'ದ ಭೂಮಿಕೆಯಲ್ಲಿ 'ನ್ಯೂಸಿಗ್ನೇಚರ್'ನ ಪ್ರತಿಧ್ವನಿಯಿದೆ. ೧೯೪೭ರಲ್ಲಿ 'ಅಜ್ಞೇಯ'ರವರು ಸಂಪಾದಿಸಿದ 'ಪ್ರತೀಕ' ಪತ್ರಿಕೆ ಈ ಕಾವ್ಯಾಂದೋಲನವನ್ನು ಪುಷ್ಟೀಕರಿಸುತ್ತದೆ.

'ದೂಸರ ಸಪ್ತಕ' ೧೯೫೧ರಲ್ಲಿ ಪ್ರಕಟಗೊಂಡಿತು. ಈ ವೇಳೆಗಾಗಲೇ 'ನಯಿಾ ಕವಿತಾ' ರೂಢವಾಗಿತ್ತು. ಪ್ರಯೋಗವಾದಿ ಕವಿತೆ ಮತ್ತು 'ನಯಿಾ ಕವಿತೆ'ಯ ಪರಸ್ಪರ ಸಂಬಂಧ ಕುರಿತು ವಿವಾದ ಹುಟ್ಟಿತು. ಕೆಲವರು 'ನಯಿಾ ಕವಿತೆ' ಪ್ರಯೋಗವಾದಿ ಕವಿತೆಯ ಪರಿಷ್ಕೃತ ರೂಪ ಎಂದರು. ಇನ್ನು ಕೆಲವರ ದೃಷ್ಟಿಯಲ್ಲಿ 'ನಯಿಾ ಕವಿತೆ' 'ಅಜ್ಞೇಯ'ರ ಪ್ರಯೋಗವಾದದಿಂದ ಮುಕ್ತಿಯ ಪ್ರಯತ್ನ. ವಾಸ್ತವವಾಗಿ ಮೂರುಸಪ್ತಕಗಳು ಒಂದೇ ಆಂದೋಲನದ ಮೂರು ಸೋಪಾನಗಳು. 'ತೀಸರ ಸಪ್ತಕ' ೧೯೫೯ರಲ್ಲಿ ಪ್ರಕಟಗೊಂಡು, ಅನಂತರ ಕವಿತೆ ಬೇರೆ ದಿಕ್ಕಿಗೆ ತಿರುಗಿತು.

'ನಯಿಾ ಕವಿತಾ' ಎಂದು ಹೆಸರಿಸಲು ಕಾರಣ ಕವಿ ಯಾವುದೇ ವಾದಗ್ರಸ್ತ ಶಿಬಿರದಲ್ಲಿ ಬಂಧಿತನಾಗಿರಲು ಬಯಸದಿರುವುದು. ಈ ಹೆಸರಿನ ಹಿಂದೆ 'ನ್ಯೂಪೊಯಟ್ರಿ' ಕಾವ್ಯಾಂದೋಲನ ಪ್ರಭಾವವೂ ಇದೆ. 'ನ್ಯೂಪೊಯಟ್ರಿ'ಯ ಸಮಾನಾರ್ಥದಲ್ಲಿ 'ನಯಿಾ ಕವಿತಾ'ಯೆಂದಾಯಿತು.

'ತೀಸರ ಸಪ್ತಕ' ಪ್ರಕಟವಾಗಿ ೩೦ ವರ್ಷಗಳ ನಂತರ ೧೯೭೯ರಲ್ಲಿ 'ಚೌತಾಸಪ್ತಕ' ಪ್ರಕಟವಾಯಿತು. ಹಿಂದಿನ ಸಪ್ತಕಗಳಂತೆ ಇಲ್ಲಿ ಕವಿಗಳಲ್ಲಿ ಸ್ವತಂತ್ರ ವ್ಯಕ್ತಿತ್ವವನ್ನು ಕಾಣದೆ 'ಅಜ್ಞೇಯ'ರ ಪ್ರತಿಧ್ವನಿ ಕಾಣುತ್ತೇವೆ.

'ನಯಿಕವಿತಾ'ದ ಮುಖ್ಯ ಉದ್ದೇಶ ಛಾಯಾವಾದಿ ಪ್ರವೃತ್ತಿಯಿಂದ ಮುಕ್ತಿಯ ಪ್ರಯತ್ನ ಮತ್ತು ಪ್ರಯೋಗಗಳ ಮೂಲಕ ರಾಗ ಸತ್ಯಗಳ ಅಭಿವ್ಯಕ್ತಿ. ಈ ಪ್ರವೃತ್ತಿ ಮೂರೂ ಸಪ್ತಕಗಳಲ್ಲಿ ಕಂಡುಬರುತ್ತದೆ. ಆದರೆ ಛಾಯಾವಾದದಿಂದ ಮುಕ್ತಿ ಯಾವ ಸಪ್ತಕಕ್ಕೂ ಸಿಗಲಿಲ್ಲ. ಹಾಗೆಯೇ ಇವುಗಳಲ್ಲಿ ಮಾರ್ಕ್ಸವಾದಿ ದರ್ಶನದ ಪ್ರಭಾವವೂ ಉಳಿದಿದೆ.

'ನಯಿಾ ಕವಿತೆ'ಗಳ ಮುಖ್ಯ ಪ್ರವೃತ್ತಿಗಳೆಂದರೆ :

೧. ಭಾಷೆಯಲ್ಲಿ ಹೊಸಪ್ರಯೋಗ - ಪ್ರತೀಕ, ಬಿಂಬ, ಫೆಂಟಸಿ, ಹೊಸ ಅಪ್ರಸ್ತುತ, ವಿಸಂಗತಿ, ವಿಡಂಬನೆ ಮತ್ತು ಸಂಪ್ರೇಷಣೆಯ ಸಮಸ್ಯೆ.
೨. ವೈಯಕ್ತಿಕತೆ - ಆತ್ಮಕೇಂದ್ರಿತ ಮತ್ತು ಖಂಡಿತ (ವಿಭಾಜಿತ ವ್ಯಕ್ತಿತ್ವ).
೩. ಪರಂಪರೆಯ ಹೊಸ ವ್ಯಾಖ್ಯೆ.

೪. ಬೌದ್ಧಿಕತೆಗೆ ಒತ್ತಾಯ.

೫. ಆಧುನಿಕ ಸಂವೇದನೆಗಳು - ಕ್ಷಣವಾದ ಮತ್ತು ಅಪರಿಚಿತತೆಯ ನಿಯತಿ (ಅಜನಬೀಯತ್ ಕೀ ನಿಯತಿ)

೬. ಯಥಾರ್ಥವಾದಿ ನವೀನ ಮಾನವೀಯ ಮೌಲ್ಯ - ಇಹಲೌಕಿಕತೆ, ಜಿಜೀವಿಷಾ ಮತ್ತು ಪ್ರಗತಿಶೀಲ ದೃಷ್ಟಿ.

ಪ್ರಾರಂಭದಲ್ಲಿ ಪ್ರಯೋಗವಾದಿ ಕಾವ್ಯ ಭಾಷೆ, ಅಲಂಕರಣ ಮತ್ತು ತತ್ಸಮ ಪದಮೋಹದಿಂದ ಮುಕ್ತವಾಗಿರಲಿಲ್ಲ. ನಿಧಾನವಾಗಿ ಮುಕ್ತವಾಯಿತು. ಛಾಯಾವಾದಿ ಕಾವ್ಯಗಳಲ್ಲಿ ಶುದ್ಧ ಪ್ರತೀಕಗಳ ಪ್ರಯೋಗವಿಲ್ಲ. ಅವು ಪ್ರತೀಕವತ್ ಅಥವಾ ಅಲಿಗ್ಹೋರಿಕಲ್. ಉಧಾಹರಣೆಗೆ - ಝುಂಝೂ, ಬಿಜಲೀ, ನೀರದ ಮಾಲಾ, ಮನು, ಇಡ್ಹಾ. 'ನಿರಾಲಾ'ರವರು ಬಳಸಿದಂಥ 'ಕುಕುರ ಮುತ್ತಾ' (ನಾಯಿಕೊಡೆ) ಬಹುಶಃ ಮೊದಲ ಹೊಸ ಮತ್ತು ಮೌಲಿಕ ಪ್ರತೀಕ ಪ್ರಯೋಗ. 'ಅಜ್ಞೇಯ'ರವರ ರಚನೆಗಳಲ್ಲಿ ಪ್ರತೀಕಗಳು ಹೇರಳ. ಸಾಗರ, ಮಛಲಿ, ಬೂಂದ್, ಸಾಂಪ್, ನದಿಕೇ ದ್ವೀಪ್ ಮುಂತಾದವು. ಮುಕ್ತಿಬೋಧರ ಪ್ರತೀಕಗಳು - ಫ್ಯಾಂಟಸಿಗಳು - ಬ್ರಹ್ಮರಾಕ್ಷಸ, ಓರಾಂಗ್‌ಉಟಾಂಗ್, ಕಟ್ಟಿಗೆಯಲ್ಲಿ ಮಾಡಿದ ರಾವಣ, ಚಂಬಲ್ ಕಣಿವೆ ಇತ್ಯಾದಿ. ಛಾಯಾವಾದಿ ಕಾವ್ಯಬಿಂಬ ಮತ್ತು ಪ್ರಯೋಗವಾದಿ ಕಾವ್ಯಬಿಂಬಗಳಲ್ಲಿ ಮುಖ್ಯ ವ್ಯತ್ಯಾಸವೆಂದರೆ ಮೊದಲನೆಯವು ಭಾವಪರ, ತರಳ, ಅಸ್ಪಷ್ಟ ಮತ್ತು ವಿರಾಟ. ಆದರೆ ಎರಡನೆಯವು ವೈಯಕ್ತಿಕ ಮತ್ತು ವಸ್ತುಪರ, ಅನುಭವದ ಆಧಾರದ ಮೇಲೆ ರೂಪುಗೊಂಡವು ಮತ್ತು ಬೌದ್ಧಿಕವಾದವುಗಳು.

ಮುಕ್ತಿಬೋಧರು 'ನಯೀ ಕವಿತಾ' ಧಾರೆಯ ಬಹು ಮಹತ್ವಪೂರ್ಣ ಕವಿ. ನಿಜವಾದ ಕ್ರಿಯಾಶೀಲ ಸಮಾಜವಾದಿ ದೃಷ್ಟಿ ಮತ್ತು ಫೆಂಟಸಿ ಶಿಲ್ಪಸೃಷ್ಟಿಯಿಂದಾಗಿ ಅವರು ತಮ್ಮನ್ನು ಸ್ವತಂತ್ರವಾಗಿ ಗುರುತಿಸಿಕೊಂಡರು. ಆದರೆ ಈ ದೃಷ್ಟಿ ಮತ್ತು ಶಿಲ್ಪವನ್ನು ಪಡೆಯಲು ಮುಕ್ತಿಬೋಧರು ಆತ್ಮ-ಯಾತನೆಯ ಸುದೀರ್ಘ ಪ್ರಕ್ರಿಯೆಯನ್ನು ಅನುಭವಿಸಬೇಕಾಯಿತು. ಹಿಂದಿ ಕಾವ್ಯ ಲೋಕದಲ್ಲಿ ಇಂತಹ ಯಾತನೆಯನ್ನು ಭೋಗಿಸಿದ ಕವಿಗಳೆಂದರೆ 'ನಿರಾಲಾ' ಮತ್ತು ಮುಕ್ತಿ ಬೋಧರು. ಮುಕ್ತಿಬೋಧರಿದ್ದ ಸ್ಥಳ ಚಂಬಲ್ ಕಣಿವೆಗೆ ದೂರವೇನಲ್ಲ. ಬ್ರಹ್ಮರಾಕ್ಷಸ, ಆಲದ ಮರ, ಅವರು ಅಧ್ಯಾಪಕರಾಗಿದ್ದ ರಾಜನಾದಹಳ್ಳಿಯ ಹತ್ತಿರವೇ. ಅವರ ಅಶಾಂತ ಮನಸ್ಸಿನ ಭಾವಾಭಿವ್ಯಕ್ತಿಗೆ ಈ ವಸ್ತುಗಳು 'ಆಬ್ಜಕ್ಟೀವ್ ಕೋರಿಲೆಟಿವ್'ನ ಕೆಲಸ ಮಾಡುತ್ತವೆ.

ಮುಕ್ತಿಬೋಧರು ತಮ್ಮ ಹಿಂದಿನ ಮತ್ತು ಸಮಕಾಲೀನ ಕಾವ್ಯಾಂದೋಲನಗಳಿಂದ ಅಸಂತುಷ್ಟರಾಗಿದ್ದರು. ಅವರು ಯಾವಾಗಲೂ ಅಂತರ್‌ದ್ವಂದ್ವದಿಂದ ಕೂಡಿದ್ದು ಅದರೊಡನೆ ನಿರಂತರ ಸೆಣಸಾಡುತ್ತಿದ್ದರು. ೧೯೪೨ರಿಂದಲೇ ಮಾರ್ಕ್ಸ್‌ವಾದದ ಕಡೆಗೆ ಆಕರ್ಷಿತರಾಗಿದ್ದರು.

ಮುಕ್ತಿಬೋಧರು 'ತಾರಸಪ್ತಕ'ದಲ್ಲಿ ಬರೆದಿರುವಂತೆ ಮೊದಲು ಅವರು ಬರ್ಗಸಾಂರ ಭಾವವಾದಿದರ್ಶನದಿಂದ ಪ್ರಭಾವಿತರಾಗಿದ್ದರು. ಸಾರ್ತ್ರರವರು ತಮ್ಮ ಕೃತಿಗಳಲ್ಲಿ ಅಸ್ತಿತ್ವವಾದ ಮತ್ತು ಮಾರ್ಕ್ಸ್‌ವಾದವನ್ನು ಕೂಡಿಸುವ ಪ್ರಯತ್ನ ಮಾಡುವಂತೆ ಮುಕ್ತಿಬೋಧರು ತಮ್ಮ ಕೃತಿಗಳಲ್ಲಿ ಬರ್ಗಸಾರ ವಿವರ್ತನ ಸಿದ್ಧಾಂತ ಮತ್ತು ಮಾರ್ಕ್ಸ್‌ವಾದವನ್ನು ಹೊಂದಿಸುವ ಪ್ರಯತ್ನ ನಡೆಸಿದರು. ಆದರೆ ಮಾರ್ಕ್ಸ್‌ವಾದದ ಪ್ರಭಾವದಿಂದಾಗಿ ವಿವರ್ತನ ಸಿದ್ಧಾಂತದ ಭಾವವಾದಿ ಪಕ್ಷ ಮಾಯವಾಯಿತು.

ಮುಕ್ತಿಬೋಧರು ಬಹಳ ನಿಷ್ಠಾವಂತ 'ಇಂಟಿಗ್ರೇಟೆಡ್' ವ್ಯಕ್ತಿತ್ವದ ಕವಿ. ಅವರ ಕವಿತೆ ನಿರ್ಮಾಣಗೊಳ್ಳುವುದು ಆತ್ಮಗ್ರಸ್ತತೆ ಮತ್ತು ಸಮಾಜದ ವ್ಯಾಪಕ ಮೂಲೆಗಳನ್ನು ಮುಟ್ಟುವ ಪ್ರಯತ್ನದ ಅಂತರ್‌ದ್ವಂದ್ವದಿಂದಲೇ. ಇದನ್ನು ಆತ್ಮಸಂಶೋಧನೆಯ ನಿರಂತರ ಪ್ರಕ್ರಿಯೆ ಎನ್ನಬಹುದು. ಇದರ ಆಳವನ್ನು, ಅಶಾಂತ ಮನಸ್ಸಿನ ಅಭಿವ್ಯಕ್ತಿಯನ್ನು 'ತಾರ ಸಪ್ತಕ'ದ 'ಅಂತರ್‌ದರ್ಶನ', 'ಆತ್ಮಸಂವಾದ' ಮತ್ತು 'ಏಕ್ ಆತ್ಮವ್ಯಕ್ತವ್ಯ' ಕವಿತೆಗಳಲ್ಲಿ ಕಾಣಬಹುದು.

ಮುಕ್ತಿಬೋಧರ ಪ್ರಕಟಿತ ಕಾವ್ಯಗ್ರಂಥಗಳು - 'ಚಾಂದ್ ಕಾ ಮುಹ್ ಟೇಢಾ ಹೈ' (೧೯೬೪) ಮತ್ತು 'ಭೂರೀ ಭೂರೀ ಖಾಕ್ ದೂಲ್' (೧೯೮೦) (ತುಂಬೆಲ್ಲ ಬರೀ ಮಣ್ಣಿನ ಧೂಳು). ಈ ಎರಡನೇ ಸಂಗ್ರಹದ ಕವಿತೆಗಳು ಮೊದಲನೇ ಸಂಗ್ರಹದ ಕವಿತೆಗಳಿಗಿಂತ ಮೊದಲೇ ಬರೆದವು. ಈ ಕವಿತೆಗಳು 'ಚಾಂದ್ ಕಾ ಮುಹ್ ಟೇಢಾ ಹೈ' ಕವಿತೆಗಳಿಗೆ ಹಿನ್ನೆಲೆ ಒದಗಿಸುತ್ತವೆ. 'ಉದರಂಭರಿ' ಕವಿತೆಯಲ್ಲಿ ಕವಿ ಹೇಳುತ್ತಾನೆ ಈ ವ್ಯವಸ್ಥೆಯಲ್ಲಿ ಪ್ರತಿ ವ್ಯಕ್ತಿ ಚಕ್ಕರ್‌ದಾರ್, ಮೆಟ್ಟಿಲುಗಳನ್ನು ಹತ್ತಿ ಮೇಲೆ ಹೋಗ ಬಯಸುತ್ತಾನೆ -

'ಇಸ್ ಸಲ್ತನತ್ ಮೇಂ ಹರ್ ಆದಮೀ ಉಚಕ್‌ಕರ್ ಚಢಜಾನಾ ಚಾಹತಾ ಹೈ ಪರ್ ಏಕ್‌ಕೋ ಅಪನಿ ಅಪನಿ ಪಡೀಹುಯಿ ಹೈ (ಈ ವ್ಯವಸ್ಥೆಯಲ್ಲಿ ಪ್ರತಿಯೊಬ್ಬನೂ ತಟ್ಟನೆ ಏರಿ ಹೋಗ ಬಯಸುತ್ತಾನೆ ಪ್ರತಿಯೊಬ್ಬರಿಗೂ ತಮ್ಮದೇ ಆದ ಆತುರತೆ ಕಾತುರತೆಗಳಿವೆ) ಲೇಕಿನ್ ಇಸ್ ರೆಲ್ - ಪೆಲ್ ಮೇಂ ಸಬ್ ಲೋಗ ಸಬ್ ಕಹೀ ಜಾ ರಹಾ ಹೈ ಹೈಂ । ಲೇಕಿನ್ ಕೋಈ ಕಹೀಂ ನಹೀಂ ಜಾ ರಹಾ ಹೈ!

(ಆದರೆ ಈ ನೂಕಾಟದಲ್ಲಿ ಎಲ್ಲರೂ ಎಲ್ಲ ಕಡೆ ಹೋಗುತ್ತಿದ್ದಾರೆ, ಆದರೆ ಯಾರೂ ಎಲ್ಲೂ ಹೋಗುತ್ತಿಲ್ಲ.)

ಮುಕ್ತಿಬೋಧರು ಸಾರ್ಥಕತೆಯನ್ನು ಮುಟ್ಟಬಯುಸುತ್ತಾರೆ. ತಣ್ಣನೆಯ ನಾಡಿಗಳಲ್ಲಿ ತಾಪವನ್ನು ಹುಡುಕುತ್ತಾರೆ. ಈ ಸಂಕಲನದ ಕವಿತೆಗಳಲ್ಲಿ ಆಶಾಭಾವನೆಯಿದೆ, ಭವ್ಯತೆ ಕಂಡುಬರುತ್ತದೆ ಮತ್ತು ಅವು ಲಯಬದ್ಧವಾಗಿ ಸಂಗೀತಾತ್ಮಕವಾಗಿವೆ. ಆಶಾವಾದಕ್ಕೆ ಒಂದು ಉದಾಹರಣೆ -

‘ಪೃಥ್ವಿ ಹುಯೀ ಯುದ್ಧ ಕೇ ಬಾದ್ ರೂಪಾಂತರಿತ ಧನ್ಯ ಗಹರೀ ಗಲೀ ಹೋ ಗಯೀ ರಾಜಪಥ ಲೋಗ ಸುಪ್ರಸನ್ನ’

(ಪೃಥ್ವಿಯಾಯಿತು ಯುದ್ಧದ ನಂತರ ರೂಪಾಂತರಿತ ಧನ್ಯ. ಇಕ್ಕಟ್ಟಾದ ಗಲ್ಲಿಯಾಯಿತು ರಾಜಮಾರ್ಗ, ಜನ ಸುಪ್ರಸನ್ನ)

‘ಚಾಂದ್ ಕಾ ಮುಹ್ ಟೇಢಾ ಹೈ’ನ ಕವಿತೆಗಳು ಖಂಡಿತ್ (ವಿಭಜಿತ) ವ್ಯಕ್ತಿತ್ವವನ್ನು ಬಿಂಬಿಸುವುದರ ಜೊತೆಗೆ ಕ್ರಾಂತಿಯ ಸಾಧ್ಯತೆಗಳಿಗೆ ತೀವ್ರತೆ ಬಂದಿರುವುದನ್ನು ಸ್ಪಷ್ಟಪಡಿಸುತ್ತವೆ. ವಿಮರ್ಶಕ ನಾಮವರ ಸಿಂಹರವರು ‘ಅಂಧೇರೆ’ (ಕತ್ತಲು) ಕವಿತೆಯನ್ನು ವ್ಯಾಖ್ಯೆ ಮಾಡುತ್ತಾ ‘ಅಸ್ಮಿತಾ ಕೀ ಖೋಜ್’ (ಆತ್ಮಶೋಧದ)ದ ಬಗ್ಗೆ ಪ್ರಸ್ತಾಪಿಸುತ್ತಾರೆ. ‘ಅಸ್ಮಿತಾ’ ಶಬ್ದ ಅಸ್ತಿತ್ವವಾದಿ ದರ್ಶನ ಮತ್ತು ಮನೋವಿಶ್ಲೇಷಣ ಶಾಸ್ತ್ರದಿಂದ ಗ್ರಹಿಸಿದ್ದಾದ್ದರಿಂದ ಮುಕ್ತಿಬೋಧರಲ್ಲಿ ಅಸ್ತಿತ್ವವಾದದ ಪ್ರಭಾವವನ್ನು ಒಪ್ಪಿದಂತಾಗುತ್ತದೆ.

ಮುಖ್ಯವಾಗಿ ಮುಕ್ತಿಬೋಧರ ಕವಿತೆಗಳು ಆತ್ಮಸಂಘರ್ಷದಿಂದ ಹೊಮ್ಮಿದವು. ಅವುಗಳೊಳಗೇ ಒಂದು ವರ್ಗಸಂಘರ್ಷ ನಡೆಯುತ್ತದೆ.

ಮುಕ್ತಿಬೋಧರನ್ನು ಅರ್ಥಮಾಡಿಕೊಳ್ಳಲು ಬ್ರೆಕ್ಟ್, ದೊಸ್ತೊವಿಸ್ಕಿ ಮತ್ತು ‘ಇಮ್ಮಾರ್ಟಲಿಟಿ ಓಡ್’ಗಳನ್ನು ಅರ್ಥಮಾಡಿಕೊಳ್ಳಬೇಕೆಂದು ಸಲಹೆ ನೀಡಲಾಗುತ್ತದೆ. ಆದರೆ ಅವರ ಕವಿತೆಗಳನ್ನು ನೇರವಾಗಿ ಸಾಕ್ಷಾತ್ಕಾರ ಮಾಡಿಕೊಳ್ಳುವುದು ಒಳ್ಳೆಯದು. ‘ಟೆಕ್ಸ್ಟ್’ ಮತ್ತು ಕಾಂಟೆಕ್ಸ್ಟ್’ಗಳ ದ್ವಂದ್ವಾತ್ಮಕ ಸಂಬಂಧಗಳನ್ನು ಹುಡುಕುವುದು ಸೂಕ್ತ.

ಮುಕ್ತಿಬೋಧರ ಕವಿತೆಗಳ ಮೂಲ ಉದ್ದೇಶ ವರ್ಗಹೀನ, ಶೋಷಣಾಮುಕ್ತ ಸಮಾಜವನ್ನು ಸ್ಥಾಪಿಸುವುದು. ಇದರ ಸಾಧನೆಗೆ ಅವರಲ್ಲಿ ವೈಜ್ಞಾನಿಕ ದೃಷ್ಟಿಯಿದೆ. ಆದರೆ ಮಧ್ಯಮವರ್ಗದವರಲ್ಲಿ ತಮ್ಮದೇ ಆದ ದೌರ್ಬಲ್ಯಗಳಿವೆ. ಬುದ್ಧಿಜೀವಿ ವರ್ಗ ಇನ್ನೂ ಹೆಚ್ಚು ಪ್ರಾಪಂಚಿಕ. ತಮ್ಮ ಅತಿರೇಕದಿಂದಾಗಿ ಅಥವಾ ಸ್ವಾರ್ಥದಿಂದಾಗಿ ಸಮಾಜದಿಂದ ಬೇರ್ಪಡುತ್ತಾರೆ. ಇದರಲ್ಲೇ ಅವರ ಅಸಫಲತೆ ಮತ್ತು ಇದರಲ್ಲೇ ಅವರ ಅಸಹಾಯ ಟ್ರಾಜಿಡಿ ಕೂಡ. ‘ಚಾಂದ್ ಕಾ ಮುಹ್ ಟೇಢಾ ಹೈ’ನ ಬಹಳಷ್ಟು ಕವಿತೆಗಳಲ್ಲಿ ಈ ಅಂಶಗಳೇ ಅಭಿವ್ಯಕ್ತಗೊಂಡಿವೆ. ಈ ಟ್ರಾಜಿಡಿಯಿಂದ ಮುಕ್ತರಾಗುವುದು ಕಷ್ಟಸಾಧ್ಯ. ಕವಿಯ ಉದ್ದೇಶ ಸ್ಪಷ್ಟ - ‘ಸಮಸ್ಯಾ ಏಕ್’ ಮೇರೆ ಸಭ್ಯ ನಗರೋಂ ಮೇಂ ಔರ್ ಗ್ರಾಮೋಂ ಮೇಂ ಸಭಿಮಾನವ ಸುಖಿ, ಸುಂದರ ವ ಶೋಷಣ - ಮುಕ್ತ ಕಬ್ ಹೋಂಗೆ .... (ಸಮಸ್ಯೆಯೆಂದರೆ ನನ್ನ ಸಭ್ಯನಗರಗಳಲ್ಲಿ ಮತ್ತು ಗ್ರಾಮಗಳಲ್ಲಿ ಎಲ್ಲ ಮಾನವರೂ ಸುಖಿಗಳಾಗುವುದು, ಸುಂದರ ಮತ್ತು ಶೋಷಣಮುಕ್ತರಾಗುವುದು ಯಾವಾಗ ಎಂಬುದು).

ಈ ಉದ್ದೇಶದ ಪೂರ್ತಿಗಾಗಿ ಬುದ್ಧಿಜೀವಿ ಮಧ್ಯಮವರ್ಗದ ಪಾತ್ರ ಹಿರಿದು. ಮುಕ್ತಿ ಬೋಧರು ಸ್ವತಃ ಈ ವರ್ಗದವರಾದ್ದರಿಂದ ಈ ವರ್ಗದವರ ಬಗ್ಗೆ ಹೆಚ್ಚು ಪರಿಚಿತರು. ಆದ್ದರಿಂದ ಇವರನ್ನು ತೆಗಳುವುದರಲ್ಲಿ ಹಿಂದೆಮುಂದೆ ನೋಡಲಿಲ್ಲ. ಇದರ

ಸ್ವರೂಪವನ್ನು ಅವರ 'ಭೂಲ್- ಗಲತಿ'ಯಲ್ಲಿ ಕಾಣಬಹುದು. 'ಬೂಲ್-ಗಲತಿ'ಯಲ್ಲಿ ಕೊಲೆಗಾರ ಅಲೀ ಜಾಹ ನ ಮುಂದೆ ಕವಿಗಳು, ಸೂಫಿಗಳು, ಮನಸಬ್‌ದಾರ್, ವಿದ್ಯಾವಂತರು-ಪಂಡಿತರು ಸಾಲು ಸಲಾಮು ಮಾಡಲು ತಲೆತಗ್ಗಿಸಿದೆ. ಆದರೆ ಒಬ್ಬ ವ್ಯಕ್ತಿ ಮಾತ್ರ -

'ಸಾಮನೆ ಬೆಚೈನ್ ಘಾವೋಂ ಕೀ ಅಜಬ್ ತಿರಛೀ ಲಕೀರೋಂ ಸೇ ಕಟಾ । ಚೆಹರಾ । ಕಿ ಜಿಸ್‌ಪರ್ ಕಾಂಪ್ । ದಿಲ್ ಕೀ ಬಾಘ್ ಉಠತೀ ಹೈ । ಪಹನೆ ಹಥಕಡೀ ವಹ ಊಂಚಾ ಕದ್ । ಸಮೂಚೆ ಜಿಸ್ಮ ಪರ ಲತ್ತರ್। ಝಲಕತೇ ಲಾಲ್‌ಲಾಲ್ ಲಂಬೇ ದಾಗ । ಬಹತೇ ಖೂನ್ ಕೇ । ವಹ್ ಕೈದ್ ಕರ್ ಲಾಯಾ ಗಯಾ ಈಮಾನ್ ।

(ಎದುರು ಅಶಾಂತ, ಗಾಯಗಳ ವಿಚಿತ್ರ ವಕ್ರ ಗೆರೆಗಳಿಂದ ಕೊಯ್ದ ಮುಖ । ಅದರ ಮೇಲಿನ ಕಂಪನ । ಹೃದಯ ಹಜೆ। ತೊಟ್ಟ ಕೈಕೋಳ ಅವ ಎತ್ತರದ ಆಕೃತಿ। ಇಡೀ ದೇಹದ ಮೇಲೆ ಪ್ರಹಾರ। ಮಿಂಚುತ್ತವೆ ಕೆಂಪು ಕೆಂಪಾದ ಸುದೀರ್ಘ ಕಲೆಗಳು । ಹರಿವ ರಕ್ತವನ್ನು ಆತ ಬಂಧಿಸಿ ತರಲ್ಪಟ್ಟ, ಪ್ರಾಮಾಣಿಕತೆ)

ಅವನಿಗೆ ಬದುಕಿನ ನಾಚಿಕೆಗೇಡು ಶರತ್ತುಗಳು ನಾಮಂಜೂರ್. ಇಲ್ಲಿ 'ಈಮಾನ್' ಮಹತ್ವಪೂರ್ಣ ಶಬ್ದ-ಪ್ರಯೋಗ. 'ಈಮಾನ್'ನ ಮಾನವೀಕರಣ ಕವಿತೆಗೆ ಒಂದು ವಿಚಿತ್ರ ಶಕ್ತಿಯನ್ನು ತುಂಬಿದೆ.

'ಬ್ರಹ್ಮರಾಕ್ಷಸ' ಮೆದುಳಿನ ಗುಹಾಂಧಕಾರದಲ್ಲಿ ಬಂದ್, ಸತ್ತು ಪ್ರೇತವಾದ ಒಬ್ಬ ಬುದ್ಧಿಜೀವಿಯ ಪ್ರತೀಕ. ಇದು ಬುದ್ಧಿಜೀವಿ ಪ್ರೇತದ ಮಿಥಕ್. ಬದುಕಿದ್ದೂ ಜನರಿಗೆ ನೋವನ್ನುಂಟುಮಾಡುತ್ತದೆ. ಸತ್ತು ಇನ್ನೂ ಕ್ರೂರವಾಗುತ್ತದೆ. ಇದು ತನಗೇ ಒಂದು ದೊಡ್ಡ ಟ್ರಾಜಿಡಿ. ಆತ್ಮ ಚೇತಸ್ ಎಷ್ಟೆಂದರೆ ಅದು ಚಂದ್ರ-ಸೂರ್ಯರು ನಮಿಸುತ್ತಾರೆ ಎಂದು ತಿಳಿಯುತ್ತದೆ. ಸಮಾಜದಿಂದ ಬೇರ್ಪಟ್ಟು, ಕೊಠಡಿಯಲ್ಲಿ ಬಂದಿಯಾಗಿ ಗಣಿತದ ಲೆಕ್ಕ ಬಿಡಿಸುತ್ತ ಸತ್ತುಹೋಯಿತು. ಆದರೆ ಸಚೇತ ಬುದ್ಧಿಜೀವಿ ಅದರ ಜ್ಞಾನವನ್ನು ಉಪಯೋಗಿಸಿಕೊಂಡು ಪ್ರಪಂಚವನ್ನು ಉತ್ತಮಪಡಿಸಲು ಬಯಸುತ್ತಾನೆ. ಬ್ರಹ್ಮರಾಕ್ಷಸ 'ಆತ್ಮ ಚೇತಸ್' ಆಗಿದ್ದರೂ 'ವಿಶ್ವಚೇತಸ್' ಆಗಲಿಲ್ಲ. ಅಂದರೆ ನಿಜವಾದ ಅರ್ಥದಲ್ಲಿ ಅದರಲ್ಲಿ ವಿಶ್ವ ದೃಷ್ಟಿ (ವರ್ಲ್ಡ್ ವ್ಯೂ) ಇರಲಿಲ್ಲ.

ಒಬ್ಬ ವ್ಯಕ್ತಿ ಪರಿವರ್ತನೆ ತಾರಲಾರ. ಆದ್ದರಿಂದ ಸಾಮೂಹಿಕ ಪ್ರಯತ್ನ ಅಗತ್ಯ. ತನ್ನ ಸಾರ್ಥಕತೆ ಏನೂ ಅರ್ಥ ಕೊಡುವುದಿಲ್ಲ. ಮೈತುಮ್ ಲೋಗೋಂ ಸೇ ದೂರ ಹೂಂ' ಕವಿತೆಯಲ್ಲಿ - ಕವಿ ಹೇಳುತ್ತಾನೆ.

'ಫಿರ್‌ಭಿ ಮೈಂ ಅಪನೀ ಸಾರ್ಥಕತಾ ಮೇಂ ಖಿನ್ನ ಹೂಂ ।
ವಿಷ ಸೇ ಅಪ್ರಸನ್ನ ಹೂಂ। ಇಸಲಿಯೇ ಕಿ ಜೋ ಹೈ ಉಸಸೆ
ಬೆಹತ್‌ರ್ ಚಾಹಿಯೆ । ಪೂರಿ ದುನಿಯಾ ಸಾಫ ಕರನೆ ಕೆ ಲಿಯೆ
ಮಹತರ್ ಚಾಹಿಯೆ । ವಹ ಮೆಹತರ್ ಮೈ ಹೊ ನಹೀಂ ಪಾತಾ ।

(ಆದರೂ ನಾನು ನನ್ನ ಸಾರ್ಥಕತೆಯ ಬಗ್ಗೆ ಖಿನ್ನ । ವಿಷದಿಂದಾಗಿ ಅಪ್ರಸನ್ನ । ಏಕೆಂದರೆ ಇರುವುದಕ್ಕಿಂತ ಉತ್ತಮವಾದದ್ದು ಬೇಕು । ಇಡೀ ವಿಶ್ವವನ್ನು ಸ್ವಚ್ಛಗೊಳಿಸಲು ಝಾಡಮಾಲಿಬೇಕು । ಆ ಝಾಡಮಾಲಿ ನಾನಾಗಲಿಕ್ಕಾಗುವುದಿಲ್ಲ).

ಇಲ್ಲಿ 'ಮೆಹತರ್' (ಝಾಡಮಾಲಿ) ನಿಮ್ನ ವರ್ಗದ ಪ್ರತೀಕ.

'ಚೆಂಬಲ್ ಕೀ ಘಾಟಿ ಮೇ' ಕವಿತೆ ಆತ್ಮಸಂಘರ್ಷ, ಅರಾಜಕತೆಯ ವಿರೋಧ ಭಾವದಿಂದಾಗಿ ಹೆಚ್ಚು ಶಕ್ತಿಯುತವಾಗಿದೆ. ಕವಿತೆಯ ಕೊನೆಯಲ್ಲಿ ಸಾಮೂಹಿಕ ಪ್ರಯತ್ನದ ಕಡೆ ಸಂಕೇತ ಮಾಡಲಾಗಿದೆ.

'ಬ್ರಹ್ಮರಾಕ್ಷಸ'ದಂತೆ 'ಅಂಧೇರೆ ಮೇ' ಕೂಡ ಒಂದು ಪ್ರದೀರ್ಘ ಕವಿತೆ. ಇದು ಮುಕ್ತಿಬೋಧರ ಭಾವ, ಇಂದ್ರಿಯ ಬೋಧ ಮತ್ತು ವಿಚಾರಧಾರೆಗಳ ಸಂಹಿತಿ. ಇದರಲ್ಲಿ ಆತ್ಮಶೋಧ ಅಥವಾ ಆತ್ಮವಿಲಯಕ್ಕೆ ಬದಲಾಗಿ ಆತ್ಮ ಅಥವಾ ಅಹಂನ ವಿಕಾಸವನ್ನು ಕಾಣಬಹುದು. ಇದನ್ನು 'ಆತ್ಮ ಸಂಭವಾಪರಮ ಅಭಿವ್ಯಕ್ತಿ' ಎಂದಿದ್ದಾರೆ. ಆತ್ಮಸಂಭವಾ ಅಂದರೆ ಆತ್ಮದಿಂದ ಉತ್ಪನ್ನ. 'ಆತ್ಮಸಂಭವಾ' ಮುಕ್ತಿಬೋಧರ ಪ್ರಾಮಾಣಿಕತೆಯನ್ನು ಎತ್ತಿ ಹಿಡಿಯುತ್ತದೆ. ಈ ಕವಿತೆಯಲ್ಲಿ ಸೌಂದರ್ಯಶಾಸ್ತ್ರ ಮತ್ತು ರಾಜನೀತಿಯ ಅದ್ಭುತ ಸಾಮಂಜಸ್ಯವಿದೆ.

'ಅಂಧೇರೆ ಮೇ' ಪ್ರದೀರ್ಘ ಕವಿತೆಯ ಎಂಟನೇ ಖಂಡದಲ್ಲಿ ಜನಕ್ರಾಂತಿಯ ಸಂದರ್ಭ – 'ಕಹೀಂ ಆಗ್ ಲಗ್ ಗಯಿ, ಕಹೀಂ ಗೋಲಿ ಚಲ್‌ಗಯಿ' । (ಎಲ್ಲೋ ಬಿತ್ತು ಬೆಂಕಿ ಎಲ್ಲೋ ಗುಂಡು ಹಾರಿತು) ಇದಕ್ಕೆ ವಿರೋಧವಾಗಿ ನಿಂತಿದೆ ಖಾಕಿ ಡ್ರೆಸ್ಸು. ಆದರೆ ಬುದ್ಧಿಜೀವಿ? – 'ಸಬ್ ಚುಪ್, ಸಾಹಿತ್ಯಿಕ ಚುಪ್ ಔರ್ ಕವಿಜನ ನಿರ್ವಾಕ್ । ಚಿಂತಕ್, ಶಿಲ್ಪಕಾರ್, ನರ್ತಕ್ ಚುಪ್ ಹೈಂ । ಉನಕೆ ಖಯಾಲ್ ಮೇಂ ಸಬ ಗಪ್ ಹೈ । ಮಾತ್ರ ಕಿಂವದಂತೀ । ರಕ್ತದಾಯೀ ವರ್ಗ ಸೇ ನಾಭಿಜಾಲ-ಬದ್ಧ ಯೆ ಲೋಗ್ । ನಪುಂಸಕ ಭೋಗ-ಶಿರಾ-ಜಾಲೋಂ ಮೇಂ ಉಲ್‌ಝೆ ।'

(ಎಲ್ಲರೂ ಮೌನ, ಸಾಹಿತ್ಯಿಕ ಮೌನ ಮತ್ತೆ ಕವಿಜನ ನಿರ್ವಾಕ್ । ಚಿಂತಕರು ಶಿಲ್ಪಕಾರರು, ನರ್ತಕರು ಮೌನವೆ । ಅವರ ವಿಚಾರದಲ್ಲಿ ಎಲ್ಲವೂ ಗಪ್ಪು ಬುರುಡೆ । ಕೇವಲ ಕಿಂವದಂತಿ । ರಕ್ತದಾಯಿ ವರ್ಗದಿಂದ ನಾಭಿ ಜಾಲ ಬದ್ಧ ಈ ಜನ । ನಪುಸಂಕರು, ಭೋಗ-ರಕ್ತನಾಳ-ಜಾಲದಲ್ಲಿ ಸಿಕ್ಕಿಕೊಂಡವರು). ಹೀಗೆ ಬುದ್ಧಿಜೀವಿ ವರ್ಗದ ಮೇಲೆ ನಿರ್ಮಮ ಪ್ರಹಾರವನ್ನು ಮುಕ್ತಿಬೋಧರು ಮಾಡುತ್ತಾರೆ. ಆದರೂ ಜನಕ್ರಾಂತಿ ನಿಲ್ಲುವುದಿಲ್ಲ. ಈ ಕವಿತೆಯಲ್ಲಿ ಫೆಂಟಸಿಯ ಪ್ರಯೋಗ ಅನೇಕ ವೈರುಧ್ಯಗಳನ್ನು ಜೊತೆಗೆ ಇಟ್ಟುಕೊಂಡು ಮಾಡಲಾಗಿದೆ. ಬಿಂಬ ಮತ್ತು ಪ್ರತೀಕಗಳಿಂದಾಗಿ 'ತಮ ಮತ್ತು ಪ್ರಕಾಶ'ದ ದ್ವಂದ್ವ ತೀವ್ರವಾಗಿದೆ. 'ಅಂಧೇರಾ' (ತಮ) ಅವಚೇತನ ಮತ್ತು ಬಂಡವಾಳಶಾಹಿ ವ್ಯವಸ್ಥೆಯದೂ ಆಗಿದೆ. ತಮವನ್ನು ದೂಡುವ ಪ್ರಕಾಶ ಈ ಕವಿತೆಯ ವಸ್ತುವೂ ಆಗಿದೆ.

ಸ್ವರೂಪವೂ ಆಗಿದೆ. ಈ ಕವಿತೆಯಲ್ಲಿ ಅನೇಕ ಬಿಂಬ ಮತ್ತು ಪ್ರತೀಕಗಳ ಮೂಲಕ 'ತಮ ಮತ್ತು ಪ್ರಕಾಶ'ವನ್ನು ಹಾಸುಹೊಕ್ಕಾಗಿ ಹೆಣೆಯಲಾಗಿದೆ.

ಮುಕ್ತಿಬೋಧರ ಕವಿತೆ ಮುಖ್ಯತಃ 'ಜನವಾದಿ! ಆದರ ಭಾಷೆ ಜನವಾದಿ ಅಲ್ಲದಿರಬಹುದು, ಕವಿ ತನ್ನ ಭಾಷೆಗಾಗಿ ತಾನೆ ಹುಡುಕಾಡುತ್ತಾನೆ. ಸಂಗೀತಾತ್ಮತೆಗೆ ಬದಲಾಗಿ ಮುಕ್ತಿಬೋಧರ ಕೃತಿಗಳಲ್ಲಿ ನಾಟಕೀಯತೆಯಿದೆ.

ಮುಕ್ತಿಬೋಧರ ದೊಡ್ಡ ಶಕ್ತಿಯೆಂದರೆ ಅವರು ಲೋಕ ಪರಿವೇಶದೊಂದಿಗೆ ಆಳವಾಗಿ ಹೊಂದಿಕೊಂಡಿರುವುದು ಮತ್ತು ಜನಜೀವನದಲ್ಲಿ ವಿಶ್ವಾಸ. - 'ಚಾಂದ್ ಕಾ ಮುಹ್ ಟೇಢಾ ಹೈ'ನಲ್ಲಿನ ಈ ಸಾಲುಗಳಲ್ಲಿ ಅವರ ಈ ವಿಶ್ವಾಸ ಸ್ಪಷ್ಟ ಅಭಿವ್ಯಕ್ತಿ ಪಡೆದಿದೆ.

'ಮುಝು ಭ್ರಮ್ ಹೋತಾ ಹೈ ಪ್ರತ್ಯೇಕ ಪತ್ಥರ್ ಮೇಂ
ಚಮಕತಾ ಹೀರಾಹೈ
ಹರ್ ಏಕ್ ಚಾತೀ ಮೇಂ ಆತ್ಮಾ ಅಧೀರಾ ಹೈ
ಪ್ರತ್ಯೇಕ ಸುಸ್ಮಿತ ಮೇಂ ವಿಮಲ್ ಸದಾ-ನೀರಾ ಹೈ
ಮುಝು ಭ್ರಮ ಹೋತಾ ಹೈ ಕಿ ಪ್ರತ್ಯೇಕ ವಾಣೀ ಮೇಂ
ಮಹಾಕಾವ್ಯ ಪೀಡಾ ಹೈ
ಪಲ್ ಭರ್ ಮೇಂ ಸಬಸೇ ಗುಜರನಾ ಚಾಹತಾ ಹೂಂ
ಇಸ್ ತರಹ್ ಖುದ್‌ಓೀ ಕೋ ದಿಯೆ ಫಿರತಾ ಹೂಂ
ಅಜೀಬ್ ಹೈ ಜಿಂದಗಿ :

(ಪ್ರತಿಯೊಂದು ಕಲ್ಲಿನಲ್ಲಿಯೂ ಮಿಂಚಿ ಹೊಳೆಯುವ
ವಜ್ರವಿದೆ ಎಂಬ ಭ್ರಮೆ
ಪ್ರತಿಯೊಬ್ಬರ ಎದೆಯಲ್ಲೂ ಆತ್ಮವಿಹ್ವಲ
ಪ್ರತಿಯೊಂದು ಮಂದಹಾಸದಲ್ಲಿಯೂ ವಿಮಲ ಸದಾ-ನೀರಾ
ಪ್ರತಿ ವಾಣಿಯಲ್ಲಿ ಮಹಾಕಾವ್ಯದ ನೋವಿದೆ ಎಂಬ
ಭ್ರಮೆ ನನಗೆ
ಕ್ಷಣಾರ್ಧದಲ್ಲಿ ಎಲ್ಲರೊಂದಿಗೆ ಸಾಗಬೇಕೆಂಬ ಬಯಕೆ
ಈ ರೀತಿ ತನಗೆ ತಾನೇ ಕೊಟ್ಟುಕೊಂಡು ತಿರುಗುತ್ತೇನೆ
ವಿಚಿತ್ರ ಈ ಬದುಕು.

~ ~ ~

ಬ್ರಹ್ಮರಾಕ್ಷಸ

ಹಿಂದಿ : ಗಜಾನನ ಮಾಧವ ಮುಕ್ತಿಬೋಧ
ಅನು : ಡಾ॥ ಟಿ. ಜಿ. ಪ್ರಭಾಶಂಕರ 'ಪ್ರೇಮಿ'

ನಗರದ ಆ ಕಡೆ ಪಾಳು ಮನೆಯ ಕಡೆಗೆ
ಪರಿತ್ಯಕ್ತ ಹಾಳುಬಾವಿಯ
ಒಳಗೆ
ಶೀತಲ ಕತ್ತಲಲ್ಲಿ
ನೆಲೆಸಿರುವ ನೀರಿನ ಆಳಗಳು....
ಮೆಟ್ಟಲುಗಳು ಮುಳುಗಿದವು ಅನೇಕ
ಆ ಹಳೆಯ ಆವೃತ್ತ ನೀರಿನಲ್ಲಿ.....
ಗೊತ್ತಾಗದಿರಬಹುದು
ಮಾತುಗಳ ಆಧಾರ -
ಗೊತ್ತಾಗದಿರುವಂತೆ
ಆದರೆ ಮಾತು ಆಳ ಪಾತಾಳ ।

ಬಾವಿಯನ್ನು ಆವರಿಸಿರುವ
ಕೊಂಬೆಗಳು ಬಹು ತೊಡಕಾಗಿವೆ
ನಿಂತಿವೆ ಮೌನವಾಗಿ ಔದುಂಬರ ಪುಷ್ಪಿತ ಗಿಡಗಳು
ಮತ್ತೆ ಟೊಂಗೆಗಳಲ್ಲಿ
ನೇತಾಡುವ ಗೂಗೆಗಳ ಗೂಡು
ಪರಿತ್ಯಕ್ತ, ಕಂದು, ಗೋಳಾಕಾರ ।
ವಿಗತ ನೂರು ಪುಣ್ಯಗಳ ನೆನಪು
ಕಾಡ ಹಸಿರು ಹಸಿಗಂಧದಲ್ಲಿ ನೆಲಸಿ
ಗಾಳಿಯಲ್ಲಿ ತೇಲಿ
ಸಂದೇಹ ಗಹನವಾಗುತ್ತದೆ

ತಿಳಿಯದ ಯಾವುದೋ ಆಗಿಹೋದ ಶ್ರೇಷ್ಠತೆಯ
ಹಗಲ ಆತಂಕದಂತೆ
ಬಾವಿಯ ಈ ಗೋಡೆಗಳ ತುದಿಯಲ್ಲಿ
ಮನಮೋಹಕವಾದ ಹಸಿರು ಮೊಣಕಾಲೂರಿ
ಕುಳಿತಿದೆ ಮರ
ಹೊತ್ತು ಪುಷ್ಪ - ತಾರೆ - ಶ್ವೇತ

ಅದರ ಬಳಿ
ಕೆಂಪು ಹೂಗಳ ಬಳುಕುವ ಪ್ರತಿಧ್ವನಿ
ನನ್ನ ಆ ಕಣಗಿಲೆ.....
ಯಾವ ಕಡೆ ಬಾವಿಯ ಕತ್ತಲ ತೆರೆದ ಬಾಯಿ
ಶೂನ್ಯ ಅಂಬರದೆಡೆಗೆ ನೋಡುತ್ತದೊ
ಆ ಕಡೆಗೆ ಕರೆಯುತ್ತದೆ ಒಂದು ಆತಂಕದಂತೆ ।
ಬಾವಿಯ ಆಳ ಪಾತಾಳ ಶೂನ್ಯದಲಿ
ಬ್ರಹ್ಮರಾಕ್ಷಸ ಪ್ರವೇಶಿಸಿದ್ದಾನೆ,
ಅವ ಒಳಗಿನಿಂದ ಹೊಮ್ಮುವ ಧ್ವನಿಯ ಧ್ವನಿ ಕೂಡ
ಬಡಬಡಿಸುವ ಶಬ್ದ ಹುಚ್ಚನಂತೆ ।
ಗಹನ ಸಂದೇಹ
ದೇಹದ ಮಲಿನತೆ
ತೊಡೆದು ಹಾಕಲು ಪ್ರತಿಕ್ಷಣ
ಪಾಪ-ಛಾಯೆಯ ದೂಡಲು, ಹಗಲು-ರಾತ್ರಿ
ಸ್ವಚ್ಛ ಮಾಡಲು -
ಬ್ರಹ್ಮರಾಕ್ಷಸ
ಸವೆಸುತ್ತಿದ್ದಾನೆ ದೇಹ
ಕೈ ಬೆರಳುಗಳ ಒಂದೇ ಸಮನೆ
ಬಾಹು-ಎದೆ-ಮುಖ ಡಬ ಡಬ ಶಬ್ದಮಾಡುತ್ತ
ತೊಳೆದುಕೊಳ್ಳುತ್ತಾ
ಆದರೂ ಕೊಳೆ
ಆದರೂ ಕೊಳೆ !!
ಮತ್ತೆ.... ತುಟಿಗಳಿಂದ

ಅದ್ಭುತ ಸ್ತೋತ್ರ, ಯಾವುದೋ ಮಂತ್ರೋಚ್ಚಾರಣೆ
ಅಥವಾ ಶುದ್ಧ ಸಂಸ್ಕೃತ ಬೈಗುಳಗಳ ಉಬ್ಬರವಿಳಿತ
ಹಣೆಯ ಗೆರೆಗಳು
ಹೆಣೆಯುತ್ತಿದ್ದಾನೆ
ಆಲೋಚನೆಗಳ ಮಿನುಗು ನಕ್ಷತ್ರಗಳೆಂಬಂತೆ!!
ಆ ಅಖಂಡ ಸ್ನಾನದ ಹುಚ್ಚು ಪ್ರವಾಹ....
ಪ್ರಾಣದಲ್ಲಿ ಸಂವೇದನೆ ಕಪ್ಪು!!

ಆದರೆ, ಆಳ ಬಾವಿಯ
ಒಳ ಗೋಡೆಯ ಮೇಲೆ
ವಕ್ರವಾಗಿ ಬಿದ್ದಿರುವ ಸೂರ್ಯ ಕಿರಣಗಳ
ಹಾರುತ್ತಿರುವ ಪರಮಾಣುಗಳು,
ತಳ ಮುಟ್ಟಿದಾಗ
ಬ್ರಹ್ಮರಾಕ್ಷಸ
ಸೂರ್ಯನೇ ಮುಟ್ಟಿ 'ನಮಸ್ಕಾರ' ಎಂದ
ಎಂದು ತಿಳಿಯುತ್ತಾನೆ

ದಾರಿತಪ್ಪಿ ಬೆಳುದಿಂಗಳ
ಕಿರಣಗಳು ಗೋಡೆಗೆ ಡಿಕ್ಕಿ ಹೊಡೆದಾಗ,
ವಂದನೆಯ ಚಂದ್ರಿಕೆ
ತನ್ನನ್ನು ಜ್ಞಾನ-ಗುರುವೆಂದು ಒಪ್ಪಿತು
ಎಂದು ತಿಳಿಯುತ್ತಾನೆ
ಅತಿ ಪ್ರಫುಲ್ಲಿತ ಕಂಟಕಿತ ಮನ-ಮನವು
ಪಡೆಯುತ್ತದೆ ಅನುಭವ
ನಭ ವಿನತವಾಗಿ ತನ್ನ ಶ್ರೇಷ್ಠತೆಯನ್ನು
ಒಪ್ಪಿತು ಎಂದು !!

ಆಗ ಮತ್ತೂ ಭಯಾನಕ ಓಜಸ್ಸಿನಿಂದ
ಪರಿಚಿತ ಮನ
ಸುಮೇರಿ-ಬೆಬಿಲೋನಿ ಲೋಕ - ಕಥೆಗಳಿಂದ
ಮಧುರ ವೈದಿಕ ಋಚಾಗಳವರೆಗೆ
ಮತ್ತು ಅಂದಿನಿಂದ ಇಂದಿನ ವರೆಗಿನ ಸೂತ್ರಗಳು

ಛಂದಸ್ಸು, ಮಂತ್ರ, ಥಿಯೊರಮ್,
ಎಲ್ಲ ಪ್ರಮೇಯಗಳವರೆಗೆ
ಮಾರ್ಕ್ಸ್, ಏಂಜೆಲ್ಸ್, ರಸೆಲ್, ಟಾಯನಮಿ
ಹೀಡೆಗ್ಗರ್, ಸ್ಪೆಂಗ್ಲರ್, ಸಾರ್ತ್ರ್, ಗಾಂಧಿ ಕೂಡ
ಎಲ್ಲರ ಸಿದ್ಧ-ಅಂತಗಳ
ಹೊಸ ವ್ಯಾಖ್ಯಾನ ಮಾಡುತ್ತಾನೆ
ಸ್ನಾನಮಾಡುವ ಬ್ರಹ್ಮರಾಕ್ಷಸ, ಶ್ಯಾಮ
ಪ್ರಾಕ್ತನ ಬಾವಿಯ
ಆಳದೊಳಗೆ ಶೂನ್ಯ ।

..... ಈ ಗರ್ಜಿಸುತ, ಧ್ವನಿಸುತ, ಆಂದೋಲಿತ
ಆಳದಿಂದ ಏಳುವ ಧ್ವನಿಗಳು
ಉದ್‌ಭ್ರಾಂತ ಶಬ್ದಗಳ ಹೊಸ ಆವರ್ತದಲ್ಲಿ
ಪ್ರತಿಶಬ್ದ ತನ್ನ ಪ್ರತಿಶಬ್ದವನ್ನು ಭೇದಿಸುತ್ತ
ಆ ರೂಪ ತನ್ನ ಬಿಂಬದೊಡನೆಯೂ ಸೆಣಸುತ್ತ
ವಿಕೃತಾಕಾರ - ಕೃತಿಯ
ಸೃಜಸುತ್ತಿದೆ
ಧ್ವನಿ ತನ್ನ ಪ್ರತಿಧ್ವನಿಯೊಡನೆ ಕಾದಾಡುತ್ತದೆ ಇಲ್ಲಿ.

ಬಾವಿಯ ಈ ಗೋಡೆಗಳ ತುದಿಯಲ್ಲಿ
ಮನಮೋಹಕವಾದ ಹಸಿರು ಮೊಣಕಾಲೂರಿ ಆಲಿಸುತ್ತವೆ
ಮರದ ಪುಷ್ಪ-ತಾರೆ-ಶ್ವೇತ
ಆ ಧ್ವನಿಗಳನ್ನ ।
ಆಲಿಸುತ್ತವೆ ಜಾಲಿಮ ಸುಕೋಮಲ ಪುಷ್ಪ
ಆಲಿಸುತ್ತದೆ ಆ ಧ್ವನಿಯ ಪ್ರಾಚೀನ ಔದುಂಬರ ಪುಷ್ಪ
ನಾನೂ ಆಲಿಸುತ್ತಿದ್ದೇನೆ
ಹುಚ್ಚು ಪ್ರತೀಕಗಳಲ್ಲಿ ಹೇಳಲ್ಪಡುವ
ಬಾವಿಯಲ್ಲಿ ಹಠಹಿಡಿದು ನಿಂತ
ಆ ಟ್ರಾಜಿಡಿ ।

ಬಹಳ ಎತ್ತರ ಒಂದು ನಿಚ್ಚಣಿಗೆ ಶ್ಯಾಮಲ
ಆದರ ಕತ್ತಲು ಮೆಟ್ಟಲುಗಳು
ಅವು ಒಳಗೇ ಅದ್ಭುತ ಲೋಕದವು ।
ಏರುವ ಮತ್ತುರುಳುವ,
ಮತ್ತೆ ಏರುವ, ಮತ್ತಿಳಿಯುವ
ಉಳುಕು ಕಾಲಗಳಲ್ಲಿ
ಮತ್ತು ಎದೆಯ ಮೇಲೆ ಅನೇಕಗಾಯಗಳು
ಒಳ್ಳೆ-ಕೆಟ್ಟದರ ಮಧ್ಯದ ಸಂಘರ್ಷಕ್ಕಿಂತಲೂ ಉಗ್ರತರ
ಒಳ್ಳೆ ಮತ್ತು ಇನ್ನೂ ಹೆಚ್ಚು ಒಳ್ಳೆಯದರ ನಡುವಿನ ಕಾದಾಟ
ಗಹನ ಕಿಂಚಿತ್ ಸಫಲತೆ,
ಅತಿ ಭವ್ಯ ವಿಫಲತೆ !!
... ಅತಿರೇಕವಾದಿ ಪೂರ್ಣತೆಯ
ಈ ವ್ಯಥೆಗಳು ಬಹು ಪ್ರಿಯವಾಗಿವೆ....
ಜ್ಯಾಮಿಟ್ರಿಯ ಸಂಗತಿ-ಗಣಿತದ
ದೃಷ್ಟಿಯಿಂದ ಕೃತ
ಭವ್ಯ ನೈತಿಕ ಮಾನ
ಆತ್ಮ ಚೇತನ ಸೂಕ್ಷ್ಮ ನೈತಿಕ ಮಾನ....
.... ಅತಿರೇಕವಾದಿ ಪೂರ್ಣತೆಯನ್ನು ತೃಪ್ತಿಗೊಳಿಸುವುದು
ಯಾವತ್ತು ಸುಲಭವಾಗಿತ್ತು
ಮಾನವೀ ಅಂತಃಕತೆಗಳು ಬಹು ಪ್ರಿಯವಾಗಿವೆ !!

ಸೂರ್ಯ ಹೊರಡುವ
ಕೆಂಪು ಚಿಂತೆ ರಕ್ತ-ಸರಿತೆ
ಪ್ರವಹಿಸಿ ಗೋಡೆಗಳ ಮೇಲೆ
ಉದಿಸುವ ಚಂದ್ರ
ವ್ರಣದ ಮೇಲೆ ಕಟ್ಟುವನು
ಶ್ವೇತ-ಧವಳ ಪಟ್ಟಿಯನ್ನು
ಉದ್ವಿಗ್ನ ಹಣೆಗಳ ಮೇಲೆ
ನಕ್ಷತ್ರಗಳ ಆಕಾಶದ ತುದಿಯವರೆಗೂ ಹರಡಿವೆ
ಅಗಣಿತ- ದಶಮಾಂಶಗಳಂತೆ
ದಶಮಾಂಶ - ಬಿಂದುಗಳ ಎಲ್ಲೆಡೆ

ಹರಡಿರುವ ಗೋಜಲುಗಣಿತದ ಮೈದಾನದಲ್ಲಿ
ಸೋತ, ಸಮರ್ಪಿತ ಮತ್ತ ಹರಡಿಕುಳಿತಹ....
ವಕ್ಷ, ಬಾಹುಗಳು ತೆರೆದು ವಿಸ್ತೃತ
ಒಬ್ಬ ಸಂಶೋಧಕನವು ।

ವ್ಯಕ್ತಿತ್ವ ಕೋಮಲ ಸ್ಫಟಿಕ-ಪ್ರಾಸಾದದಂತೆ
ಪ್ರಾಸಾದದಲ್ಲಿ ಬದುಕು
ಬದುಕಲು ಒಂಟಿ ಮೆಟ್ಟಿಲುಗಳು
ಏರುವುದು ಕಷ್ಟವಾಗಿತ್ತು
ಆ ಭಾವ-ಸಂಗತ ತರ್ಕ-ಸಂಗತ
ಕಾರ್ಯ-ಸಾಮಂಜಸ್ಯ -ಯೋಜಿತ
ಸಮೀಕರಣಗಳ ಗಣಿತದ ಮೆಟ್ಟಿಲುಗಳು
ನಾವು ಬಿಟ್ಟು ಬಿಡೋಣ ಅವನಿಗೇ.
ಆ ಭಾವ-ತರ್ಕ ಮತ್ತು ಕಾರ್ಯ-ಸಾಮಂಜಸ್ಯ-ಯೋಜನೆ
ಶೋಧಕಾರ್ಯದಲ್ಲಿ
ಎಲ್ಲ ಪಂಡಿತರು, ಎಲ್ಲ ಚಿಂತಕರ ಹತ್ತಿರ
ಅವ ಗುರುವ ಪಡೆದುಕೊಳ್ಳಲು
ಅಲೆದ !!
ಆದರೆ - ಯುಗ ಬದಲಾಯಿತು ಮತ್ತೆ ಬಂದಿತು
ಕೀರ್ತಿ - ವೃತ್ತಿ.... ಲಾಭಕಾರಿ ಕಾರ್ಯಗಳಿಂದ ಹಣ,
ಧನದಿಂದ ಹೃದಯ-ಮನ
ಮತ್ತು ಧನ-ಅಭಿಭೂತ ಅಂತಃಕರಣದಿಂದ
ಸತ್ಯದ ಛಾಯ
ನಿರಂತರ ದಹಿಸುತ್ತಿತ್ತು ।

ಆತ್ಮತೇಜಸ್ಸು ಆದರೆ ಈ
ವ್ಯಕ್ತಿತ್ವದಲ್ಲಿತ್ತು ಪ್ರಾಣಮಯ ವಿರೋಧ.....
ವಿಶ್ವ ಚೇತಸ್ ತೋರಿಕೆರಹಿತ !!
ಮಹತ್ತಿನ ಚರಣಗಳಲ್ಲಿ
ವಿಷಾದಾಕುಲ ಮನ !
ಅದರೊಡನೆ ಅಂದಿನ ದಿನಗಳಲ್ಲಿ ಮಿಲನವಾಗಿದ್ದರೆ

ಅದರ ವ್ಯಥೆ ಸ್ವತಃ ಬದುಕಿ
ಹೇಳುತ್ತಿದ್ದೆ ನಾನು ಅದಕ್ಕೆ ಅದರ ಸ್ವಂತ ಮೌಲ್ಯ ಅದರ ಮಹತ್ತು !

ಮತ್ತು ಆ ಮಹತ್ತಿನ
ನನ್ನಂತಹವರಿಗೆ ಉಪಯೋಗವನ್ನು
ಆ ಆಂತರಿಕತೆಯ ಮಹತ್ವವನ್ನು ನಾನು ಹೇಳುತ್ತಿದ್ದೆ !!

ಪುಡಿಪುಡಿಯಾಯಿತು ಒಳಗೂ
ಹೊರಗೂ ಬೀಸುಕಲ್ಲುಗಳೆರಡರ ನಡುವೆ
ಅಂತಹ ನೀಚ ಟ್ರಾಜಿಡಿ !!

ಬಾವಿಯಲ್ಲಿ ಅದು ತಾನೇ
ಹುಚ್ಚು ಪ್ರತೀಕಗಳಲ್ಲಿ ನಿರಂತರ ಹೇಳುತ್ತಿದೆ
ಅದು ಕೊಠಡಿಯಲ್ಲಿ ಹೇಗೆ
ಗಣಿತ ಮಾಡುತ್ತಾ ಸತ್ತುಹೋಯಿತು....
ಆ ದಟ್ಟ ಪೊದೆಯ ಮುಳ್ಳು
ತಮ-ವಿವರಗಳಲ್ಲಿ
ಮೃತ ಪಕ್ಷಿಯಂತೆ
ವಿದಾಯ ಹೇಳಿಯೇ ಬಿಟ್ಟಿತು
ಆ ಅಪರಿಚಿತ ಜ್ಯೋತಿ ಸದಾಕಾಲಕ್ಕೆ ಚಿರಸಿದ್ದೆಯಲ್ಲಿ
ಇದು ಏಕೆ ಹೀಗೆ !
ಏಕೆ ಇದು ಹೀಗೆ!!

ನಾನು ಬ್ರಹ್ಮರಾಕ್ಷಸನ ಸಜಲ ಹೃದಯದ ಶಿಷ್ಯ
ನಾಗಬೇಕೆಂದಿದ್ದೆ
ಅದರ ಅಪೂರ್ಣಕಾರ್ಯವನ್ನು
ಅದರ ವೇದನೆಯ ಸ್ರೋತವನ್ನು
ಸಂಗತ, ಪೂರ್ಣ ನಿಷ್ಕರ್ಷಗಳವರೆಗೆ
ತಲಪಿಸಲು.

ಶೋಷಿತರ ಬದುಕಿಗೆ ಸೂರ್ಯನ ಕಿರಣ : ಸತೀಶ್ ಚಂದರ್ ಕವಿತೆ

ಎಂ. ಮೊಹ್ಮದ್ ಭಾಷ ಗೂಳ್ಯಂ

ತೆಲುಗಿನ ಕಾವ್ಯವೇ ಹಾಗೆ! ಅದಕ್ಕೆ ಅನ್ಯಾಯದ ವಿರುದ್ಧ ಸಿಡಿದೇಳುವ ಶಕ್ತಿ ಇದೆ. ಶೋಷಿತರ ಪರ ನಿಂತು ಗುಡುಗು ಸಿಡಿಲಾಗಿ ಮೊಳಗುವ ಗಾಂಭೀರ್ಯವಿದೆ. ಶೋಷಕರ ಎದೆ ಸೀಳುವ ಇಂದ್ರಾಯುಧವಾಗಿದೆ. ತೆಲುಗಿನ ದಿಗಂಬರ ಕಾವ್ಯ, ಮಾರ್ಕ್ಸ್‌ವಾದ, ಪ್ರತಿಭಟನಾ ಕಾವ್ಯ ಪ್ರಗತಿಶೀಲ ಅಭ್ಯುದಯ ಮುಂತಾದ ಕಾವ್ಯ ಪ್ರಕಾರಗಳು ಮೇಲಿನ ಎಲ್ಲಾ ಅಂಶಗಳನ್ನು ಹೀರಿ ಬೆಳೆದಿದೆ. ಇದರಿಂದ ದ್ರಾವಿಡ ಭಾಷಾವಲಯದಲ್ಲಿ ತೆಲುಗು ಪ್ರತಿಭಟನಾ ಕಾವ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಇದೆಲ್ಲ ಭೂತ ವರ್ತಮಾನ ಕಾಲದ ಸಂಕ್ಷಿಪ್ತ ಇತಿಹಾಸ.

ಒಂದು ಕಾವ್ಯ ಪ್ರಕಾರದ ಆಯಾಮ, ರೂಪು ರೇಷೆಗಳ ಬದಲಾವಣೆಗೆ ಹಲವಾರು ಕವಿಗಳು ಕಾರಣರಿರಬಹುದು. ಆದರೆ ಹಳೆಯ ಸತ್ವಪೂರಿತ ಕಾವ್ಯಕ್ಕೆ ಕೆಚ್ಚೆದೆಯ ಮೆರುಗು ನೀಡಿ ಹೊಸ ಕಾವ್ಯ ಪರಂಪರೆ ಹುಟ್ಟು ಹಾಕುವುದು ಸಾಮಾನ್ಯ ಸಂಗತಿಯಲ್ಲ. ಶ್ರೀ ಶ್ರೀ ಚೆರಬಂಡರಾಜು, ನಗ್ನಮುನಿ, ಶೇಷೇಂದ್ರಶರ್ಮ, ಚಲಂ, ನಿಖಿಲೇಶ್ವರ್ ಆಲಿಶೆಟ್ಟಿ ಪ್ರಭಾಕರ್ ಮುಂತಾದ ಕ್ರಾಂತಿಕಾರಿ ಕವಿಗಳು ಈ ನಿಟ್ಟಿನಲ್ಲಿ ಕೆಲಸಮಾಡಿದವರು.

ಇಂಥ ಕವಿಗಳ ಆಶೋತ್ತರಗಳಿಗೆ ಧ್ವನಿಯಾಗಿ ನಿಂತು ತೆಲುಗು ಕಾವ್ಯ ಕ್ಷೇತ್ರದಲ್ಲಿ ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ಬರೆದು ಬೆಳೆಯುತ್ತಿರುವ ಸತೀಶ್ ಚಂದರ್, ಉದಯೋನ್ಮುಖ ಬರಹಗಾರ. ಪ್ರತಿಭಟನಾ ಕಾವ್ಯದಲ್ಲಿ ಭಿನ್ನತೆಯನ್ನು ಕಂಡುಕೊಂಡ ಪ್ರತಿಭಾವಂತ. ಮೂಲತಃ ಮಾರ್ಕ್ಸಿಸ್ಟ್ ಆದ ಈತನ ತೆಲುಗಿನ 'ಅಭ್ಯುದಯ ಕವಿ ಸಾರಥಿ' ಯಾಗಿ ಬೆಳಗ್ತಾ ಇದ್ದಾನೆ. ನಮ್ಮೆದುರು ನಡೆಯುವ, ಅನ್ಯಾಯ ಅತ್ಯಾಚಾರಗಳೇ ಈತನ ಕಾವ್ಯಕ್ಕೆ ಆಕರ. ಕೊಳಕು ವ್ಯವಸ್ಥೆಯ ವಿರುದ್ಧ ದಂಗೆಯೆದ್ದ ಸತೀಶರದು ಖಡ್ಗ ಕಾವ್ಯ; ಅಭ್ಯುದಯ, ಪ್ರಗತಿಶೀಲ-ಪ್ರತಿಭಟನೆಯಂತಹ ತೆಲುಗಿನ ಕ್ರಾಂತಿಕಾರಿ ಕಾವ್ಯಪ್ರವಾಹ ಹರಿದು ಬರುತ್ತಿರುವಾಗ ವಚನಕವಿತೆ ಒಂದರ್ಥದಲ್ಲಿ ಅಸಹನೀಯವಾಗಿತ್ತು. ಅದ್ಭುತ ಶಕ್ತಿ

ಪ್ರವಾಹದೆದುರು ಅದು ಮಂಕಾಗಿತ್ತು. ಆ ಸಂದರ್ಭದಲ್ಲಿ ಸತೀಷ್ ಚಂದರ್ ತೆಲುಗಿನ ವಚನ ಕವಿತೆಯ ಪ್ರತಿನಿಧಿಯಾದರು. ವಚನ ಕವಿತೆಯ ಮೂಲಕ ದಲಿತವಾದವನ್ನು ಸಮರ್ಥವಾಗಿ ಪ್ರಕಟಿಸಿದರು. ಆ ಕಾರಣದಿಂದ ತೆಲುಗಿನ ಆ ಖ್ಯಾತ ವಿಮರ್ಶಕರು ಈತನನ್ನು 'ವರ್ಧಮಾನದಿವಾಕರ' ಎಂದರು. ಕೆ.ಎನ್.ವೈ. ಪತಂಜಲಿಯ ವರಂತೂ ''ಸತೀಶ್‌ನ ಕವಿತೆಗಳು ರಕ್ತವನ್ನು ಮೆತ್ತಿಕೊಂಡು ನಿಂತಿವೆ. ಶೋಕಮಯವಾಗಿವೆ. ಪ್ರಳಯಾಗ್ನಿಯಾಗಿ ಉರಿಯುತ್ತಿವೆ. ಪರಿಮಳವನ್ನು ಬೀರುತ್ತಿವೆ. ಖಡ್ಗ ಕಠಾರಿಯಾಗಿವೆ. ಶಾಂತಿಯ ಕೈ ಚಾಚಿವೆ'' ಮುಂತಾಗಿ ಆತನ ಕವಿತೆಗಳ ಕುರಿತು ಮನದುಂಬಿ ಬರೆದದ್ದು ಇದೆ. ಹೀಗೆ ಅನನ್ಯವಾದ ಆತನ ಕಾವ್ಯ ಕುರಿತು ಹಲವು ಪುಟಗಳಷ್ಟು ಬರೆಯುವ ಮುನ್ನ ಆತನ ಪಂಚಮವೇದ ಕವನ ಸಂಕಲವನ್ನು ಅವಲೋಕಿಸುವುದು ಔಚಿತ್ಯಪೂರ್ಣವಾಗಿದೆ!

ಪಂಚಮವೇದ ಕವನಸಂಕಲನದಲ್ಲಿ ಎಪ್ಪತ್ತೆಂಟು ಕವಿತೆಗಳಿವೆ. ಒಂದೊಂದು ಕವಿತೆಯೂ ಒಂದೊಂದು ರೀತಿಯ ಕ್ರಾಂತಿಕಿರಣಗಳಾಗಿವೆ. ಕವಿತೆಯ ಹೊಂದಿಕೆಯಾಗಿರುವ ಭಾಷೆ, ಭಾವ ಭೀತಿಯನ್ನು ಮೀರಿ ಉರಿಯುತ್ತಿರುವ ವಾಸ್ತವಕ್ಕೆ ಅಜ್ಯವಾಗಿಯೂ - ನಾಂದಿಯಾಗಿಯೂ ಇದೆ .

ಸಮತಾವಾದವನ್ನು ಸಮರ್ಥಿಸುವ ಸತೀಶರಿಗೆ ಬಡಬಗ್ಗರ ಬಗ್ಗೆ ಸಹಜವಾದ ಅನುಕಂಪ, ದಯೆ, ಪ್ರೀತಿ ಇದೆ. ಶತಮಾನಗಳಿಂದ ಕಷ್ಟ ಜೀವಿಗಳನ್ನು ಮೌಢ್ಯತೆಗೆ ತಳ್ಳಿ ಬೆದರಿಸಿ - ಬೈಯ್ದು ಸಕಲ ಸುಲಿಗೆ ಮಾಡುತ್ತಿರುವ ಶೋಷಕರಿಗೆ ಸತೀಶರ ಕವಿತೆಗಳು ಸಿಂಹಸ್ವಪ್ನವಾಗಿವೆ. ನೊಂದವರಿಗೆ ನಂದಾದೀಪದಂತಿರುವ ಈತನ ಕವಿತೆ ಕಂಡು ದಣಿಯರು ಭಯ ಭ್ರಾಂತರಾದದ್ದೂ ಇದೆ !

''ಏಲಿನವಾರಿ ಚೀಕಟಿಕಳ್ಳಕೆಪ್ಪುಡೂ (ಆಳುವವರ ಕತ್ತಲ ಕಂಗಳಿಗೆ ಯಾವಾಗಲೂ) ಕಿರಣಾಲು ಮರಣಾಯುಧಾಲೇ'' (ಹೊಳೆಯುವ ಕಿರಣಗಳು ಮರಣಾಯುಧಗಳೇ) ಎನ್ನುತ್ತಾನೆ. ನೊಂದವರಿಗೆ ಕಿರಣಗಳಿಗೂ, ಕತ್ತಲ ಭೇದಿಸುವ ಖಡ್ಗಗಳಿಗೂ ಉಪಮಾಕರಿಸಿ ಬರೆಯುತ್ತಾನೆ.

ಶೋಷಣೆಯಲ್ಲಿ ಹಲವು ವಿಧಗಳಿರಬಹುದು. ಅದು ಯಾವುದೇ ನೋವಿರಲಿ ಯಾವಾಗಲೂ ಶೋಷಿತ ಧ್ವನಿಗೆ - ಶಕ್ತಿ ತುಂಬುವ ಚೈತನ್ಯಕವಿಯಾಗಿ -ಬೆನ್ನೆಲುಬಾಗಿ ನಿಲ್ಲುವುದು ಸತೀಶರ ಜಾಯಮಾನ .

ಆತನಿಗೆ ಅನ್ನವಿಲ್ಲದ ಮಗು ಅತ್ತರೂ ಚಿಂತೆ. ಬಡವನು ಕೆಮ್ಮಿದರೂ ಚಿಂತೆ. ಅನ್ಯಾಯ, ಅತ್ಯಾಚಾರಕ್ಕೆ ಒಳಗಾದ ಅಬಲೆಯನ್ನು ಕಂಡರಂತೂ ಕವಿ ಕೆಂಡಮಂಡಲ ವಾಗುತ್ತಾನೆ.

ನಾಗರೀಕುಲ ಕೌಗಿಳ್ಳಲೋನಖಕ್ಷತಾಲತೋಚಸ್ತುಂದಿ

ಈ ಚಾವುಲಕು ಮರಣಮೇ ಪ್ರಥಮ ಚಿಕಿತ್ಸ

ಕ್ರೂರ ಕ್ರೌರ್ಯದ ವಿರುದ್ಧ ನಿಲ್ಲುವುದು, ಹೋರಾಡುವುದು ಅಷ್ಟು ಸುಲಭವಲ್ಲ. ಅಂಥದರ ಪರ ಅಸಹಾಯಕತೆ ಮುಂದಾಗುತ್ತದೆ. ಅನ್ಯಮಾರ್ಗವಿಲ್ಲದಾಗ ಅತ್ಯಾಚಾರಕ್ಕೊಳಗಾದ ಹೆಣ್ಣು ಸ್ವಾಭಿಮಾನದಿಂದ ಸಾಯುತ್ತಾಳೆ. ಇದೇ ಈ ನಿಸ್ಸಹಾಯಕತೆಯೇ ಕ್ರೌರ್ಯಕ್ಕೆ ತಕ್ಕ ಶಿಕ್ಷೆ; ಪ್ರಾಯಶ್ಚಿತ್ತ ಕೂಡ ಎಂಬುದನ್ನು ಕವಿ ಬಹುಸೂಕ್ಷ್ಮವಾಗಿ ಸೂಚಿಸಿದ್ದಾನೆ.

ಆದರೆ ಸಾವೊಂದೇ ಸಕಲರೋಗ ನಿವಾರಣೆಗೆ, ಎಲ್ಲಾ ಸಮಸ್ಯೆಗೆ ದಿವ್ಯ ಔಷಧವಲ್ಲ ಹಾಗೇಂತ ಸಾವನ್ನು ಸ್ವೀಕರಿಸುತ್ತಾ ಸಾಯುವುದೂ ಸರಿಯಲ್ಲ. ಅಂದರೆ ಸಾವಿನ ವಿರುದ್ಧ ಸೆಟೆದು ನಿಲ್ಲಬೇಕು. ಸಾವಿನಂತೆ ಈ ಕ್ರೂರಾತಿಕ್ರೂರವಾದ ವ್ಯವಸ್ಥೆ ಕೂಡ ನಾವು ಭಯಪಟ್ಟರೆ ಇನ್ನಷ್ಟು ಹೆದರಿಸುತ್ತದೆ. ಇದಕ್ಕೆ ತಕ್ಕ ಚಿಕಿತ್ಸಕಗುಣವೆಂದರೆ ಪ್ರತಿಭಟನೆ ಒಂದು ಎಂಬುದು ಸತೀಶರ ಬಲವಾದ ನಂಬುಗೆಯಾಗಿದೆ.

ಯಾವಾಗಲೂ ಕ್ರೌರ್ಯವು ಬಲಿಷ್ಠವಾಗಿರುತ್ತದೆ. ಕೂಡಲೇ ಪ್ರತಿಭಟಿಸಬೇಕೆಂಬುದು ಕೂಡ ಹಾಸ್ಯಾಸ್ಪದವಾಗುತ್ತದೆ. ಈ ಅಂತರವನ್ನರಿತ ಕವಿ, ನೋವನ್ನು ಅನುಭವಿಸುವವರು ಹಂತಹಂತವಾಗಿ ಮೇಲೇರಿ ಬರಬೇಕೆನ್ನುತ್ತಾರೆ. ಶೋಷಣೆಗೊಳಗಾದವಳು At last ಕೆನ್ನೆಗಾದರೂ ಹೊಡೆಯುವುದು ಆಕೆಯ ಆದ್ಯ ಕರ್ತವ್ಯ! ಇಂಥ ಕ್ರಿಯೆ ಮಾಡುವವಳೇ ನಿಜವಾದ ಕ್ರಾಂತಿಕಾರಿಣಿ ಮುಂತಾಗಿ ಹರ್ಷಿತನಾದ ಕವಿ :

ವೇಯಿಪಡಗಲ ವಿಷನಾಗುನು ವೀರಬಾಹುತೋ ಪಟ್ಟಿನವಾಣ್ಣೆ

ಶವಾಲಕೇ ಕಾದು ಸರ್ಪಾಲಕೂ ಸೈತಂ

ಕಪಾಲ ಮೋಕ್ಷಾನ್ನಿ ಇವ್ವಗಲಿಗಿನ ವಾಳ್ಳೇ ನಾ ಚೆಲಿಕಾಳು?

‘ಸಾವಿರ ಹೆಡೆಯ ವಿಷಸರ್ಪವನ್ನು ವೀರಬಾಹುಗಳಿಂದ ಹಿಡಿದವನು

ಶವಗಳಿಗೆ ಮಾತ್ರವಲ್ಲ ಸರ್ಪಗಳಿಗೂ ಸಹ

ಕಪಾಲ ಮೋಕ್ಷವನ್ನು ಮಾಡುವವರೇ ನನ್ನ ನಿಜವಾದ ಗೆಳತಿಯರು

ಶೋಷಣೆಗೊಳಗಾದ ಪೌರಾಣಿಕ ಪಾತ್ರಗಳ ಕುರಿತು ಹಿಂದಿನ ತೆಲುಗು ಕವಿಗಳು ವ್ಯಾಸ ವಾಲ್ಮೀಕಿ ಅರುಂಧತಿಯನ್ನು ಆವಾಹನೆ ಮಾಡಿಕೊಂಡಿದ್ದಾರೆ. ಕುವೆಂಪು ಕೂಡ ಶಂಭುಕ, ಏಕಲವ್ಯವನ್ನು ಕುರಿತು ಬರೆದಿದ್ದಾರೆ. ಸತೀಶ್‌ಚಂದರ್ ಕುಂತಿ, ದ್ರೌಪತಿ, ಬುದ್ಧ, ಏಕಲವ್ಯರನ್ನು ಬಳಸಿಕೊಂಡು ಪೌರಾಣಿಕ ಪಾತ್ರಗಳ ಜೊತೆ ವರ್ತಮಾನವನ್ನು ತಳುಕು ಹಾಕಿ ತುಲನೆಮಾಡಿರುವನಾದರೂ ಈತನಿಗೆ ಕ್ರಿಸ್ತನೆಂದರೆ ಪಂಚಪ್ರಾಣ. ಅಂದರೆ, ಕ್ರಿಸ್ತನನ್ನು ಶೋಷಿತಧ್ವನಿಯಾಗಿ ದಲಿತಯೋಧನಾಗಿ ಚಿತ್ರಿಸಿರುವುದು ವಿಶೇಷವಾಗಿದೆ.

ಕ್ರಿಸ್ತನ ಪುನರುತ್ಥಾನವನ್ನು ಹೋರಾಟದ ಸಂಕೇತವೆಂಬಂತೆ ವಿಶ್ವಾಸವಿಟ್ಟಿದ್ದಾನೆ. ಆ ಕಾರಣದಿಂದ ಸತೀಶನ ಕಾವ್ಯದುದ್ದಕ್ಕೂ ಕ್ರಿಸ್ತನ ವಿಷಯ ಪುನರಾವೃತವಾಗುತ್ತಲೇ ಇದೆ.

''ಪಂಟಪೊಲಾಲ್ಲೋ ಶಿಶುವುಕು ಶಿಲುವಮರಣಂ'' -
''ಕಾನ್ವೆಂಟು ಕ್ರೀಸ್ತುಲಾರಾ''.
''ಶಿಲುವನು ಸಿಂಹಾಸನಂಲಾ ಅಧಿಷ್ಠಿಂಚಿನ''
''ವೀರುಲಕು ಶಿಲುವಲು''

ಮುಂತಾದ ಬೇರೆ ಬೇರೆ ಚರಣಗಳಲ್ಲಿ ಕ್ರಿಸ್ತನನ್ನು ಸ್ಮರಿಸಿದ್ದಾನೆ. ಹೋರಾಟದ ಸಂಕೇತದಂತೆಯೂ ಚಿತ್ರಿಸಿದ್ದಾನೆ. ಸತೀಶರ ಕೆಲವು ಕವಿತೆಗಳಲ್ಲಿ ದೌರ್ಜನ್ಯ -ಕ್ರೌರ್ಯವು ಹಸಿಹಸಿಯಾದ ಮಾಂಸದ ತೊಳೆಗಳಾಗಿ Fresh ಆಗಿದೆ. ತುಳಿತಕ್ಕೊಳಗಾದವನ ಆರ್ತನಾದ ಆರಿಹೋಗದಂತೆ ಹನಿ ಹನಿಯಾಗಿ ಕಣ್ಣಮುಂದೆ ನಿಲ್ಲುತ್ತದೆ.

''ಅನ್ನಿಟಿಕನ್ನಾ ಛಾತಿಲೋಪಲಗುಂಡೆಕಾಯ ಉಂಡಟಂ ನೇರಂ
ಬಾನಿಸಕೊಡುಕ್ಕಿ ಪ್ರೇಮೆಂದುಕನಿ
ಬರಿಸೆಲತೋ ಪೊಡಿಚಾರು''

(ಎಲ್ಲವುದಕ್ಕಿಂತಲೂ ಎದೆಯಲ್ಲಿ ಹೃದಯವಿರುವುದು ಅಪರಾಧ
ಗುಲಾಮ ನನ್‌ಮಗನಿಗೆ ಪ್ರೇಮಯಾಕೆಂದು
ಭಲ್ಲೆಗಳಿಂದ ಇರಿದರು)

ಅಂತ ಆಗ್ರಹ ವ್ಯಕ್ತಪಡಿಸುತ್ತಾನೆ. ಆದರೆ ಕೂಲಿಗಳು ಅಲ್ಲಿಗೇ ಸುಮ್ಮನಿರುವುದಿಲ್ಲ. ಗುಲಾಮನ ಸರ್ವನಾಶಕ್ಕೆ ಪಣತೊಡುತ್ತಾರೆ. ಅವನ ಸಂಪೂರ್ಣನಾಶವಾಗಬೇಕಾದರೆ - ಹೇಗಾದರೂ ಮಾಡಿ ಮೆದುಳಿಗೆ ಕೈ ಹಾಕಬೇಕು - ಇಲ್ಲಾಂದ್ರೇ ವಿದ್ಯೆ ಬುದ್ಧಿ ಕಲಿತು - ಸಕಲವಿದ್ಯಾ ಪಾರಂಗತರಾಗುತ್ತಾರೆ. ಇದು ಅವರ ದೃಷ್ಟಿಯಲ್ಲಿ ಅಕ್ಷೇಪಣೀಯ. ಆದಿಯಿಂದ ಇದೇ ಗೋಳು ಕೂಡ.

ಶಿರಸ್ಸಲೋ ಮೆದುಡುಂಡಂ ನೇರಂ
ಮಳ್ಳೀ ಮಳ್ಳೀ ರಾಜ್ಯಂಗಂರಾಯಕುಂಡಾ
ಮುಳ್ಳ ಕಿರೀಟಂ ಗುಚ್ಚಾರು

(ಶಿರಸ್ಸಿನಲ್ಲಿ ಮೆದುಳು ಇರುವುದು ಅಪರಾಧ
ಮತ್ತೆ ಮತ್ತೆ ರಾಜ್ಯಾಂಗ ಬರೆಯದಂತೆ
ಮೆದುಳಿಗೆ ಮುಳ್ಳಿನ ಕಿರೀಟ ಸಿಕ್ಕಿಸಿದರು.)

ಎನ್ನುವ ಸತೀಶ್‌ಚಂದರ್ ಊಳಿಗಮಾನ್ಯ ಪದ್ಧತಿಯ ಟಿಪಿಕಲ್ ಐಡಿಯಾಲಜಿಗಳ ರಹಸ್ಯಗಳನ್ನು ಅತ್ಯವಶ್ಯಕವಾಗಿ ಖಂಡಿಸುತ್ತಾರೆ.

ಹೀಗೆ ನೋವಿನ ನೆಲೆ ಹಿಡಿದು ಶೋಷಣೆಯ ಕಾರಣಗಳನ್ನು ವಿಶ್ಲೇಷಿಸುತ್ತ ಸಾಗುವ ಆತನ ಕಾವ್ಯಪ್ರವಾಹವು ಶೋಷಣೆಯ ಪರ ಧ್ವನಿಯಾಗಿ ಮಾತ್ರ ನಿಲ್ಲುತ್ತದೆ ಎಂಬ ಅಪವಾದವೂ ಇದೆ. ಈ ಕೊರತೆಯನ್ನು ಮನಗಂಡ ಕವಿ ಶೃಂಗಾರದ ಸಂವೇದನೆಯನ್ನು ಅಭಿವ್ಯಕ್ತಿಗೊಳಿಸಿದ್ದಾನೆ.

ಸಮುದ್ರಪು ವೊಡ್ಡುನ
ವೆನ್ನೆಲ ಕುಂಡ ಪೋತುಗಾ ಕುರುಸ್ತುನ್ನಪ್ಪುಡು
ಕಾವಾಲನಿ ತಡಿಸಿ ಮುದ್ದಯಿ
ಮನಂ ಗಾಢಂಗಾ ಕೌಗಿಲಿಂಚು ಕೋಲೇದೂ?

(ಕಡಲ ದಡದ ಮೇಲೆ
ಬೆಳದಿಂಗಳು ಸೋನೆಯಾಗಿ ಸುರಿಯುತ್ತಿರುವಾಗ
ಬೇಕೆಂದೇ ನೆನೆದು ಒದ್ದೆಯಾಗಿ
ನಾವು ಗಾಢವಾಗಿ ಆಲಿಂಗಿಸಿಕೊಳ್ಳಲಿಲ್ಲವೇ?)

- ಅಂತ ಶೃಂಗಾರಮಯವಾಗಿ ತನ್ನ ಗೆಳತಿಗೆ ಪ್ರಶ್ನಿಸುತ್ತಾನೆ. ಸತೀಶ್‌ನ ವೃತ್ತಿ ಸಮತಾವಾದವಾದ್ದರಿಂದ ಆತನ ಕಾವ್ಯ ಮೊದಲಿನಿಂದಲೂ ಹೆಚ್ಚಾಗಿ ಅನ್ಯಾಯದ ವಿರುದ್ಧ ದಂಗೆದ್ದಿರುವುದನ್ನು ಕಾಣುತ್ತೇವೆ. ಪ್ರವೃತ್ತಿಯಲ್ಲಿ ಭಾವಪ್ರಧಾನವಾದ ಕಾವ್ಯವನ್ನೂ ರಚಿಸಿರುವುದರಿಂದ ತೆಲುಗು ಭಾಷೆಗೆ ಭಾವುಕತೆ ತಂದುಕೊಟ್ಟವರಲ್ಲಿ ಇವರೂ ಪ್ರಮುಖರಾಗಿ ಕಾಣುತ್ತಾರೆ.

ಈ ಎಲ್ಲಾ ವೈವಿಧ್ಯತೆಗಳನ್ನು ಮೈಗೂಡಿಸಿಕೊಂಡ ಈ ಕವಿ ಅಭ್ಯುದಯ ಪಂಥದಲ್ಲಿ ಬೆಳೆಯುತ್ತಿರುವನಾದರೂ - ಸ್ವೇಚ್ಛೆ ಸ್ವಾಂತಂತ್ರ್ಯವನ್ನೇ ತನ್ನ ಕಾವ್ಯದ ಧ್ಯೇಯವಾಗಿಟ್ಟು ಕೊಂಡಿದ್ದರಿಂದ ಅಲ್ಲಲ್ಲಿ 'ಶುಷ್ಕ ವ್ಯಾಕರಣ' ವಾದವನ್ನು ಸಮರ್ಥಿಸಿದ್ದಾನೆ.

ಗೋಕಾಕರು ಸಮುದ್ರಗೀತೆಯಲ್ಲಿ ಸ್ವಚ್ಛಂದ ಕಾವ್ಯಕ್ಕೆ ಆಹ್ವಾನವಿತ್ತಂತೆ, ಸತೀಶರೂ ಕೂಡ ಛಂದೋ-ವ್ಯಾಕರಣ ಶೃಂಖಲೆ ಮುರಿದು, ಯಾವುದೇ 'ಬಂಧ'ವಿಲ್ಲದ ಭಾವಾಭಿವ್ಯಕ್ತಿಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಆದ್ದರಿಂದಲೇ ಇವರ ಕವಿತೆಗಳು ಶೀರ್ಷಿಕೆ ಅಥವಾ ಚರಣದ ಆದಿಯನ್ನು ನೋಡಿದ ಕೂಡಲೇ ಇಡೀ ಕವಿತೆಯ ಸಾರ ಸ್ಫುರಿಸುತ್ತದೆ. ಇಂಥ ಸ್ಪಷ್ಟತೆ ತೆಲುಗಿನ ಪ್ರತಿಭಟನಾ ಕವಿಗಳಿಗೆ ಲೋಪವಾಗಿ ಕಂಡಿರುವುದು ಅಚ್ಚರಿಯೇನಲ್ಲ; ಸತೀಶ್‌ರು ಮಾತ್ರ ಇದಾವುದನ್ನೂ ಗಮನಿಸುವುದಿಲ್ಲ ಎನ್ನುವುದಕ್ಕಿಂತ, ಲೆಕ್ಕಿಸುವುದಿಲ್ಲ ಎಂಬುದೇ ಸರಿ.

ಇದಕ್ಕೆ ಪೂರಕವಾಗಿ ಆತನ ಆಶಯವನ್ನು ಹೀಗೆ ಸ್ಪಷ್ಟಪಡಿಸಬಹುದು.

ನುದುಟಿಮುಬ್ಬುಲಮೀದಮಾಕೇಮಾತ್ರಂ ಮೋಜುಲೇದು
ಪಾಲಭಾಗಂ ನೀಲಾಕಾಶಂ ಕಾವಾಲನ್ನದೇ ಮಾಸ್ವಪ್ನಂ.

(ಹಣೆಯ ಮೇಲೆ ಮೂಡುವ ಹುಬ್ಬಿಗೆ ಮುಗಿಲಮೇಲೆ ನಮಗೆ ಮೋಜಿಲ್ಲ. ಲಲಾಟದೊಲಯವು ನೀಲಾಕಾಶವಾಗಬೇಕೆಂಬುದೇ ನಮ್ಮ ಕನಸು)

ಹೀಗೆ ಸತೀಶ್‌ಚಂದರ್ ಕವಿತೆಗಳು ಅತ್ತ ಊಳಿಗಮಾನ್ಯಕ್ಕೂ ಮಾರಣಯುದ್ಧಗಳಾಗಿವೆ. ಬಡಬಂಧುಗಳಿಗೂ ನೊಂದುಬೆಂದವರಿಗೂ ಬಯಲ ಬೆಳಕನ್ನು ತೋರುತ್ತವೆ.

~ ~ ~

ಕರೆ

ತೆಲುಗು : ಸತೀಶ್ ಚಂದರ್
ಅನು : ಎಂ. ಮಹಮ್ಮದ್ ಭಾಷಾ ಗೂಳ್ಯಂ

ಚಿತ್ರಲೆಯಾಗಿ ಅಲೆಯುತ್ತಿರುವ
ಮೇಘದ ಮಾಂತ್ರಿಕರೇ,
ಬನ್ನಿ ನನ್ನ ಕೈಬೆರಳು ಹಿಡಿದುಕೊಳ್ಳಿ
ಪ್ರಪಂಚವನ್ನೇ ಫುಟ್‌ಬಾಲ್‌ನಂತೆ
ಒದೆಯುವುದನ್ನು ಕಲಿಸುತ್ತೇನೆ.
ಮಾಗಿದ ಸಂಜೆ ಸೂರ್ಯನನ್ನು ಕತ್ತಲ ಬಿಲ್ಲಿನಿಂದ
ಕೊಯ್ಯುವುದನ್ನು ಕಲಿಸುತ್ತೇನೆ.

ಉಪ್ಪು ಕಡಲುಗಳನು ಮುಕ್ಕಳಿಸಿ
ಉಗುಳುತ್ತೇನೆ.
ಆಗಸದ ಒಡಲಿಗೆ ಸುತ್ತಿರುವ
ಸಿಲ್ಕ್ ಮೋಡಗಳನು
ಮುದುಡಿ ಬಿಸಾಡುವ ಉಪಾಯ ಹೇಳುತ್ತೇನೆ.

ಹುಡುಗಾಟಿಕೆಯ ಮೇಲೆ ಹೊದಿಸಿದ ಹೊಲಸ ಬೈಗಳು
ಸಂಪ್ರದಾಯದ ಉಡುಗೆಗಳು
ತನುವ ಮೇಲೆ ಚೆಲ್ಲಿರುವ ಚಲಾವಣೆ ಇಲ್ಲದ ನಾಣ್ಯಗಳು
ಅಲಂಕಾರಗಳು
ನಾಟಕೀಯ ಬಟ್ಟೆಗಳನು ತೆಗೆದು ಸಿನಿಮಾ ಹೋರ್ಡಿಂಗ್‌ನ ಮೇಲೆ
ಎಸೆದು ಬನ್ನಿ.

ನಗರದ ನಡು ಹೊಕ್ಕುಳ ತಾರು ರೋಡಿನ ಮೇಲೆ
ಮಳೆಯಲ್ಲಿ ನೆನೆಯುತ್ತಾ ನಗ್ನರಾಗಿ ನರ್ತಿಸೋಣ;
ಒಡೆತನವು ಮೂತಿಮುಚ್ಚಿಕೊಂಡು
ಮೌನವಾಗಿ ಮೂಲೆಯೊಳಗೆ ಮುದುಡಿ ಕುಳಿತುಕೊಳ್ಳುತ್ತದೆ;

ಕ್ರಮ ಶಿಕ್ಷಣದ ಭಾರವನ್ನು ಹೊತ್ತೋಗುತ್ತಿರುವ
ಕಾನ್ವೆಂಟ್ ಕ್ರಿಸ್ತರೇ;
ಬನ್ನಿ ನನ್ನ ಕಿರುಬೆರಳು ಹಿಡಿದುಕೊಳ್ಳಿ.
ಬೋಳುಮಾಳಿಗೆಯ ಹತ್ತಿ ಬ್ಲಾಕ್ ಬೋರ್ಡ್‌ಗಳನು ಗಾಳಿಪಟಮಾಡಿ
ಹಾರಿಸುವುದನ್ನು ಕಲಿಸುತ್ತೇನೆ.

ಛಟ್ಟೀಮಾಸ್ತರಿನ ಪೆಚ್ಚುಮೋರೆಯನ್ನು
ಹುಚ್ಚುಗೆರೆಗಳಲ್ಲಿ ಬಚ್ಚಿ ತೋರಿಸುತ್ತೇನೆ.
ಶಾಲಾಗೋಡೆಗೆ ತೂಗಾಡುವ ಗಂಟೆ ಗಡಿಯಾರಗಳ ರೆಕ್ಕೆಮುರಿದು
ಪ್ಲೇಗ್ರೌಂಡ್‌ನಲ್ಲಿ ಒದ್ದೋಡಿಸುತ್ತೇನೆ.

ರಿಕ್ಷಾಗಳಿಗಾಗಿ ಕೊನೆಯ ಮೆಟ್ಟಿಲ ಮೇಲೆ ಕಾಲಿಟ್ಟು ಕೂಡಿರುವ
ಚಿಣ್ಣರೇ! ಕಣ್ಣಿಯ ಮೇಲೆ ಕದಲದೇ ಕುಳಿತ – ಕಣ್ಣೀರ ಹನಿಗೆ
ಚಕ್ಕಲಗುಳಿ ಇಟ್ಟು ಗಲಗಲ ನಗಿಸುತ್ತೇನೆ.

ಹಸಿಮನಸುಗಳನು ಹರಿತವಾಗಿ ಕತ್ತರಿಸುವ ಕ್ರೋಟನ್‌ಕತ್ತರಿಗಳು
ಕಿಂಡರ್ ಗಾರ್ಡನ್‌ಗಳು
ಕೈ ಕೊರಳು ಕೊಯ್ಯಲು ಒಂದರಮೇಲೊಂದು
ಪೇರಿಸಿರುವ ಪಠ್ಯಪುಸ್ತಕಗಳು;
ಬನ್ನಿ; ಯೂನಿಫಾರ್ಮ್‌ಗಳನು ತೆಗೆದು ಪೋಲೀಸ್
                    ಪರೇಡ್ ಗ್ರೌಂಡ್ಸ್‌ನಲ್ಲಿ ಬಿಸಾಡುವ ಬನ್ನಿ.
ಮೃದುವಾದ ಉಸುಕಿನಲೆಯ ಮೇಲೆ ಪಥಚಲನೆ ಮಾಡೋಣ!
ಉಪದೇಶವು ಪುನಃ ಟ್ರೈನಿಂಗ್ ಶಾಲೆಗೆ ಸೇರುತ್ತದೆ ……

ತಾಯಿ ಒಡಲಿಂದ ಜಾರಿಹೋದ ಕರ್ಣಾದಿಗಳೇ !
ಬನ್ನಿ ನನ್ನ ಕಿರುಬೆರಳು ಹಿಡಿದುಕೊಳ್ಳಿ
ಯಮಧರ್ಮರಾಜನ ಕಾಡು ಕೋಣದಂತೆ ದಣಿಗಳ ಹೊಲದಲ್ಲಿ

ಸವಾರಿಮಾಡುತ್ತ ಹೋಗುವ ಪವಾಡವನ್ನು ಕಲಿಸುತ್ತೇನೆ.
ಮೆತ್ತನೆಯ ಕೈಗಳಿಂದ ಪಾಲಿಷ್ ಮಾಡಿದ ಬೂಟುಗಳ ಹೊಳಪಲ್ಲಿ
ವರ್ಷ ಕಾಲದ ಉದಯವನ್ನು ತೋರಿಸುತ್ತೇನೆ.

ಫ್ಯಾಕ್ಟರೀ ಲಾಕೌಟ್ ದಿವಸ
ಹೊಗೆ ಕೊಳವೆಯೊಳಗೆ ರಹಸ್ಯವಾಗಿ ಬಾಣಬಿರುಸು ಬೆಳಗಿಸಿ
ದೀಪಾವಳಿಯನ್ನು ಆಚರಿಸುತ್ತೇನೆ.
ಜಾರುತ್ತಿರುವ ಚಡ್ಡಿಗಳನು ಮೇಲಕ್ಕೆಳೆದುಕೊಳ್ಳುತ್ತ
ಮೂಗು ಏಗುರಿ ಹಾಕುವ ಚಿಕ್ಕ ಮೆಕಾನಿಕ್‌ಗಳೇ!
ಅಂಗೈಯಲ್ಲಿ ಬುಲೆಟ್ ಸ್ಟಾರ್ಟ್ ಮಾಡುವುದನ್ನು ಕಲಿಸುತ್ತೇನೆ.

ಮೈಗಳ್ಳರಿಗೆ ಬಯ್ಯುವ ಕೊನೆಯ ಬೈಗಳು
ಕಂದಮ್ಮಗಳ ಜೆವರ ಹನಿಗಳು
ತುಫಾನಿಗೆ ನೀಡುವ ಎಚ್ಚರಿಕೆಗಳು
ಚಿಕ್ಕಮಕ್ಕಳ ನಿಟ್ಟುಸಿರು;

ಬನ್ನಿ; ಲಗಾಮು ಹಿಡಿದು
ಬೋಧಿವೃಕ್ಷಗಳ ಸಮೂಹದ ಕೆಳಗೆ ಬನ್ನಿ.
ಹಾರಲಾದವರನ್ನು ಮೇಲಕ್ಕೆತ್ತಿ ಹಾರಿಬಿಡೋಣ
ವೃದ್ಧರನ್ನೂ ಸಹ ಬುದ್ಧರನ್ನಾಗಿ ಮಾಡೋಣ......

~ ~ ~

ಡೀಲಕ್ಸ್ ಸೆಂಟರ್‌ನಲ್ಲಿರುವ ಭಿಕ್ಷುಕ

ತೆಲುಗು : ಸತೀಶ್‌ಚಂದರ್
ಅನು : ಎಂ. ಮೊಹ್ಮದ್ ಭಾಷ ಗೂಳ್ಯಂ

ಅವನು
ಶಬ್ದ ಮಾಡುವುದಿಲ್ಲ
ಕೈಗಳನ್ನು ಚಾಚಿ ಯಾಚಿಸುವುದಿಲ್ಲ.
ನೀರಿಮಿರಿದ ನಯನಗಳ ತೆರೆಯ ಮೇಲೆ
ಒಣಗಿದ ಮೂಳೆಗಳನು ಪ್ರದರ್ಶಿಸುತ್ತಾನೆ.
ಅವನು ಡೀಲಕ್ಸ್ ಸೆಂಟರ್‌ನಲ್ಲಿರುವ ಭಿಕ್ಷುಕನೇ.
ಆದರೇನು;

ಅವ ನನ್ನ ದೇಶ ಪ್ರಜೆಗಳ ಪ್ರತಿನಿಧಿ
ರೆಕ್ಕೆ ಮುರಿದ ಮೂಕಪಕ್ಷಿಗಳ ಹಾಗೆ
ಮುಲುಗುತ್ತಾನೆ.
ಅವನಿಗಿರುವುದು ಮೊಂಡು ಕೈಗಳೇ
ತಟ್ಟೆಯಲ್ಲಿ ಬೋನವಿದ್ದರೂ
ಮುದ್ದೆ ಮಾಡಿ ನುಂಗಲಾರ.
ಇರುಳಾದರೆ ಸಾಕು.
ಕೂಳಿನ ಸುತ್ತಲೂ ಮುತ್ತಿಗೆ ಹಾಕುವ ಕೆಟ್ಟ ಕೈಗಳು;
ಮಹಾ ಸೋಮಾರಿಗಳು
ಮುದ್ದೆಗಳನು ನುಂಗಿ
ಅವನ ಬಾಯಿಗೆ ಬೋನಗಳು ಎಸೆಯುತ್ತವೆ.
　　　　ದೇಶ ಅವನದು
　　　　ತಟ್ಟೆ ಅವನದು
　　　　ಬೋನ ಅವನದು
　　　　ಬಾಯಿ ಮಾತ್ರ ಬೇರೊಬ್ಬರದು ......

ಡೀಲಕ್ಸ್ ಸೆಂಟರಿನಲ್ಲಿನ ಭಿಕ್ಷುಕನು
ನನ್ನ ದೇಶ ಸ್ವಾತಂತ್ರ್ಯಕೆ ಸಾಕ್ಷಿಯಾಗಿದ್ದಾನೆ.
ಅವನಿಗೆ ಸ್ವರವಿದ್ದರೂ
ಮಾತುಗಳಿಲ್ಲ.
ಸಿಟಿ ಬಸ್ಸುಗಳ ಗದ್ದಲದ ಮಧ್ಯೆ
ಅವನ ಮುಲುಗುವಿಕೆ ಯಾರಿಗೂ ಕೇಳಿಸದು.
ಮುಲುಗುವಿಕೆ ಮೌನವಾಗಿಯೂ
ಮೌನವನ್ನೇ ಅಂಗೀಕಾರವಾಗಿಯೂ
ಚಿತ್ರಿಸುವುದು ಪ್ರಜಾಸ್ವಾಮ್ಯದ ಸಂಪ್ರದಾಯ;
        ದೇಶ ಅವನದು
        ಕಂಠ ಅವನದು
        ಸ್ವರ ಅವನದು
        ಮಾತು ಮತ್ತೊಬ್ಬರದು.........

ಡೀಲಕ್ಸ್ ಸೆಂಟರಿನಲ್ಲಿರುವ ಭಿಕ್ಷುಕನು
ಕೋಳಿ ಕೂಗುವ ಮುನ್ನ ಎದ್ದೇಳುವನು.
ಅವನ ಹೊಟ್ಟೆಯೊಳಗಿನ ಕರುಳೇ ಅಲಾರಾಮ್ ಪೀಸುಗಳು.
ಎಂಜಲಿನ ತಟ್ಟೆಯಲ್ಲಿ
ಮೊಂಡು ಕೈಗಳ ಸದ್ದು.
ಒಣಗಿರುವ ಬೋನಗಳು ಚಂಪಾದ ಚಾಕುಗಳು
ಎಚ್ಚೆತ್ತ ಕಂಗಳು ನೆತ್ತರಿನ ಗಾಯಗಳು
ಸುಖವಾದ ನಿದ್ದೆಯೊಳಗೆ
ಸೋಮಾರಿಗಳ ಕಾಗುಣಿತಗಳು
ತಿರುಗಿ ಬಿದ್ದ ಎಂಜಲ ತಟ್ಟೆ
ಮೊಂಡು ಕೈಗೆ ವಿಷ್ಣು ಚಕ್ರ.
ಆಗ ಮಾತ್ರ
ಡೀಲಕ್ಸ್ ಸೆಂಟರಿನಲ್ಲಿರುವ ಭಿಕ್ಷುಕನು
ನಿಜವಾದ ನನ್ನ ದೇಶಭಕ್ತ........

ಧವಳದೈಸಿರಿ

ಸಂಸ್ಕೃತ : ಭಾರವಿ

ಕನ್ನಡಕ್ಕೆ : ಡಾ। ಪಿ. ಎಸ್. ರಾಮಾನುಜಂ

ಮೇರುವನು ಮೀರಲೆಂದೆತ್ತರಕೆ ಬೆಳೆದಿತೋ
ನೋಡಲು ದಿಗಂತವನು ತವಕದಿಂದೆದ್ದಿತೋ
ಗಗನವನೆ ನೆಗೆದು ದಾಟಲು ಸೆಟೆದು ನಿಂತಿತೋ
ಎತ್ತರದ ಬಿತ್ತರದ ಈ ಹಿಮಾಲಯವು.

ಒಂದು ಕಡೆ ತರಣಿಮಂಡಲ ದೀಪ್ತಿಯ ವ್ಯಾಪ್ತಿ
ಒಂದು ಕಡೆ ಕಾಳರಾತ್ರಿಯ ಕತ್ತಲೆಯ ನೃತ್ಯ.
ನೋಡಲಿದು ತನ್ನ ನಗುವಿನ ಬೆಳಕಿನಿಂದಿರುಳ
ನಿರಿದ ಗಜಚರ್ಮಧರ ಹರನ ಸಾದೃಶ್ಯ.

ತಪ್ಪಲಲಿ ಚಿನ್ನದೆಳೆ ಸಾಲುಗಳ ಚೆಲುವಿಂದ
ಫಣಿಪತಿಯ ಧವಳತೆಯು ಮೈಸಿರಿಯ ಗೆಲುವಿಂದ
ನಭದಿ ನೆಲಸಿದ ನಗವು ಮಿಂಚಿನಂಚನು ತಳೆದ
ಶರದಭ್ರವಿಭ್ರಮದ ಚೆಲುವ ಮೀರಿಸಿದೆ

ಭೂಗಗನ ಸುರಲೋಕದವರಿಗಿದು ಹಿತವಸತಿ
ಆದರಿವರೆಲ್ಲರೂ ಅದೃಷ್ಟಪರಸ್ಪರರು.
ತನ್ನ ಒಲುಮೆಯ ತೋರಲೆಂದು ಪರಮೇಶ್ವರನು
ಜಗದ ಪ್ರತಿನಿಧಿಯಾಗಿ ಇದ ಸೃಷ್ಟಿಸಿದನೋ!

ಮಣಿಕಿರಣ ನಿಕರಗಳ ವಸನವನು, ಸುರನಾರಿ
ಯರು ರಮಿಸಿರುವ ಲತಾಗೃಹಗಳನು, ತುಂಗಶಿಲೆ
ಗಳ ಗೋಪುರವ ಹೊಂದಿರುವ ಹಿಮದ ಭೂಧರವು
ಧರೆಯು ಧರಿಸಿದ ಪುರದ ಸೊಗಸ ಮೀರಿಸಿದೆ

ಸತತ ನೀರನು ಸುರಿಸಿ ಬಿಳಿಬಿದ್ದು, ಮಿಂಚುಗಳ
ಹೊಳಪಿರದೆ, ಗುಡುಗುಗಳ ಸದ್ದಿಲ್ಲದಾಗಿದ್ದು
ತಪ್ಪಲಲಿ ತೂಗಾಡುತಿರುವ ಮೋಡಗಳಿಂದ
ರೆಕ್ಕೆ ಹುಟ್ಟಿದ ಬೆಟ್ಟದಂತೆ ಕಾಣುತ್ತಿದೆ.

ಒಡಲೊಳಗೆ ಗಣಿಗಳನು, ಮದಗಜಗಳುರುಳಿಸಿದ
ತೀರವನು, ವಿಕಸಿತಸರೋಜಗಳ ವನಗಳನು
ಧರಿಸಿರುವ, ಇಷ್ಟಾರ್ಥಸಿದ್ಧಿಯನು ತೋರಿಸುವ
ಮಹಿಮೆಹೊಂದಿದ ತೀರ್ಥ ನದಿಗಳೋಡುತಿವೆ.

ನವವಿಕಸಿತ ಜಪಾ ಕುಸುಮಕಾಂತಿಯಂತಿರುವ
ಮಣಿಕಿರಣಗಳ ಹೊಳಪು ಪ್ರತಿಫಲಿಸಿ ತಪ್ಪಲಿನ
ಸ್ವರ್ಣಮಯಭಿತ್ತಿಯಲಿ ಸೃಷ್ಟಿಸಿದೆ ಕಾಂತಿಯನು
ಸಂಧ್ಯಾಸಮಯದರುಣ ಕಿರಣಗಳ ಭ್ರಾಂತಿಯನು.

ಎಲ್ಲಿ ನೋಡಿದರಲ್ಲಿ ನೀಪಸುಮಗಳ ರಾಶಿ.
ಸಾಲು ಸಾಲಾಗಿರುವ ಹೊಂಗೆ ಮರಗಳ ಮಾಲೆ
ಹಿಮತುಷಾರದ ನೀರ ತುಂತುರಿನ ಹಿತವೃಷ್ಟಿ,
ಚೆಲುವ ಮೊಗದಾನೆಗಳ ಗಂಭೀರಗಮನ.

ಇಲ್ಲಿಲ್ಲ ರತ್ನಗಳ ಕಾಂತಿವಿರಹಿತಶಿಖರ
ಸುಂದರಲತಾಗೃಹಗಳಿಲ್ಲದ ಗುಹೆಗಳಿಲ್ಲ
ಪುಲಿನ ಸರಸಿಜಗಳಿಲ್ಲದ ನದಿಗಳಿಲ್ಲಿಲ್ಲ
ನವಕುಸುಮಗಳ ಭಾರವಿರದ ಮರಗಳಿಲ್ಲ.

ಬೆಳ್ಳಗಿನ ಹಿಮದಂತೆ ನೀರಿರದ ನೀರದಗ
ಳಲ್ಲಿ ಮಣಿಗಣದ ಪ್ರಭೆಯಿಂದ ಕಾಮನಬಿಲ್ಲು.
ಶಿಖರದಲಿ ನಿಶ್ಚಲತೆಯಿಂದ ನಿಂತಿತು ಮೇಲೆ
ತಿಳಿಯುವುದು ಗುಡುಗಿನಿಂದದು ಮೋಡವೆಂದು.

ಎತ್ತರದ ತಪ್ಪಲಲಿ ಸೊಕ್ಕಿ ಹರಿಯುವ ಗಂಗೆ
ಬಂಡೆಗಳಪ್ಪಳಿಸಿ ಸುಳಿಯಾಗಿ ತುಂತುರಿನ

ಮಳೆಯಾಗಿ ಮೇಲೆದ್ದು ಬಿಳಿಮೋಡದಂತಾಗಿ
ಚಾಮರವ ಹಿಡಿದಂತೆ ಮೋಡಿ ಮಾಡುವಳು.

ರಾತ್ರಿ ಔಷಧಿಯಿಂದ ಹೊರಟ ಅಗ್ನಿಯ ಜ್ವಾಲೆ
ಗ್ರಹಗಳನು ಸುರಯಾನಗಳನು ಬೆಳಗಿಸುತ್ತಿದ್ದು
ಶಂಕರನ ಸೇವಿಸುವ ಜಪತಪೋನಿಷ್ಠರಿಗೆ
ಪ್ರತಿರಾತ್ರಿ ನೆನಪಿಸಿತು ತ್ರಿಪುರದಹನವನು.

ಸಿರಿಲತೆಯ ಕುಂಜಗಳೆ ಭವನಗಳು, ಓಷಧಿಯ
ದೀಪಗಳು ಚಂದನದ ಚಿಗುರುಗಳ ನವಶಯ್ಯೆ.
ಆಯಾಸವನು ಕಳೆವ ಕಮಲಿಸೀ ಮಾರುತವು
ಸ್ಮರಿಸುವರೆ ಸುರವಧುಗಳಿನ್ನು ಸ್ವರ್ಗವನು?

ಅರಳಿರುವ ನೆಲಕಮಲಗಳ ಪರಾಗವ ಮೇಲೆ
ಮಾರುತವು ಹಾರಿಸಿತು ಗಗನಾಂತರಾಳದಲಿ
ಅಲ್ಲಿ ಹರಡಿದ, ಕುಸುಮ ರಜವು ಗಾಳಿಗೆ ತಿರುಗಿ
ಕನಕಮಯ ಕೊಡೆಯ ಹಿಡಿದಂತೆ ಶೋಭಿಸಿದೆ.

ಶಾದ್ವಲದ ರಮ್ಯ ನವ ಕಾಂತಿಯಳಿಯುವುದಿಲ್ಲ.
ಕಮಲವನಗಳು ನಿತ್ಯ ಹಸಿರಾಗುತಿವೆ ಇಲ್ಲಿ.
ಅಚ್ಚರಿಯ ಕುಸುಮಗಳ ನಿಕರಗಳ ಧರಿಸಿರುವ
ಕೊಂಬೆಗಳ ಚಿಗುರುಗಳು ಬಾಡುವುದೇ ಇಲ್ಲ.

ಅತಿಗಹನ ವಿಷಯವಿದು ಈ ಹಿಮಾದ್ರಿಯು ಇದನು
ವರ್ಣಿಸಿವೆ ಆಗಮಗಳಲ್ಲಲ್ಲಿ ಕಷ್ಟದಲಿ.
ಪರಮಪುರುಷನ ತೆರದಿ ದಿಕ್ಕುಗಳ ವ್ಯಾಪಿಸಿದ
ಇದನು ತಿಳಿದವನೊಬ್ಬ. ಅವನೆ ಆ ಬ್ರಹ್ಮ.

ಈ ಪಾರ್ವತೀ ಜನಕನಿಗೆ ಸಮರು ಯಾರಿಲ್ಲ
ಮೂರುಲೋಕಗಳಿವಗೆ ಸರಿಸಾಟಿಯಲ್ಲ.
ಜನತೆ ತಿಳಿಯದ ವಿಭವ ವಿಶ್ವರೂಪದ ಭವನು
ಆ ಭವಾನೀ ಪತಿಯು ವಾಸಿಸುವನಿಲ್ಲಿ.

ಸುರನದಿಯ ತೀರದಲಿ ಮುಂಜಾವಿನಲಿ ದೇವ
ನಿಯಮದಲಿ ನಡೆವ ಶಿವಶಿವೆಯರಾ ಪದಚಿಹ್ನೆ
ಒಂದು ರಾಗಾರುಣಿತ, ಮತ್ತೊಂದು ಪುರುಷಪದ,
ತೋರುತಿದೆ ಅರ್ಧನಾರೀಶ್ವರನ ತತ್ವ.

ಹರನ ಹೊಂದಲು ತಪವ ಜಲದೊಳಗೆ ನಡೆಸಿರಲು
ಶಿವೆಯು ಬೆದರಿದಳು ಜಲಚರಾಘಾತದಲಿ.
ಅದ ನೋಡಿ ಶಿವನು ಬೆವರಿದ ಬೆರಳ ಕರದಿಂದ
ಅವಳ ಹಸ್ತವ ಹಿಡಿದ ಈ ಭೂಮಿಯಲ್ಲಿ.

ಹೊಸಬಳ್ಳಿ ಮರಚಿಗುರುಗಳ ಜಳಕವಾಡಿಸುತ
ಸುಧೆಯ ಸುರಿಸುವ ಕಿರಣಗಳ ಜಾಲದಿಂದ
ಕಾರಿರುಳ ಕಾಲಯಾಮಿನಿಗಳಲಿ ವನಮಧ್ಯ
ವನು ಧವಳವಾಗಿಸಿದೆ ಶಿವನಿಂದುಲೇಖ.

ಧವಳಕಿರಣಗಳಿಂದ ವ್ಯಾಪ್ತತನು, ದಿಕ್ಕುಗಳ
ನುರುಳಿಸಲು ಬಗ್ಗಿರುವ ಉಗ್ರತನುವಿನ ನಂದಿ
ಈ ಭಂಗಿಯಲಿ ಚಂದ್ರಭ್ರಾಂತಿಯನು ಮೂಡಿಸುವ
ಗಿರಿಕನ್ಯೆಯರ ಮನದಿ, ನೆಲಸಿರುವುದಿಲ್ಲಿ.

ಜನನಮರಣಗಳಿಂದ ಪರಮಪದವನು ಬಯಸಿ
ಬರುವ ಮೋಕ್ಷಪ್ರಿಯರಿಗೆಲ್ಲ ಲಭಿಸುವುದು ಭವ.
ಬಂಧನವ ಬಿಡಿಸುವ ಜ್ಞಾನ ಶಾಸ್ತ್ರಗಳಿಂದ
ಅಜ್ಞಾನವಳಿದು ಸುಜ್ಞಾನ ಬರುವಂತೆ.

~ ~ ~

ಅಸ್ಪಷ್ಟ ಅಳಲನ್ನು ಬೆನ್ನಟ್ಟುವ ಓ. ವಿ. ಉಷಾ

ಓ. ವಿ. ಉಷಾ (ಜನನ : ೧೯೪೮) ಅವರು ಈಗ ಮಲೆಯಾಳಿಯಲ್ಲಿ ಬರೆಯುತ್ತಿರುವ ಯುವ ಕವಯಿತ್ರಿಯರಲ್ಲಿ ಅತ್ಯಂತ ಮೇಧಾವಿ ಎಂದು ಪರಿಗಣಿಸಲ್ಪಡುತ್ತಾರೆ. ಅವರ ಕವಿತೆಗಳೆಂದರೆ, ಅವರ ಅಂತರ್ಮುಖೀ ಮನಸ್ಸನ್ನು ಆಕ್ರಮಿಸುವ ಭಾವನೆಗಳ ಛಾಯೆಯನ್ನು ಸೆರೆಹಿಡಿಯಬಲ್ಲ ಭಾವನೆಗಳ ತುಣುಕುಗಳು. ಕ್ಷೋಭೆಗೊಳಿಸುವ ವಿಷಣ್ಣತೆ ಅವರ ಕೃತಿಯಲ್ಲಿ ಸುಳಿದಾಡುತ್ತದೆ. ಆಕೆಯ ಕವನ ಸಂಕಲನ 'ಧ್ಯಾನಂ' (ಮೆಡಿಟೇಶನ್)ಗೆ ಮುನ್ನುಡಿ ಬರೆಯುತ್ತ ಸಾಹಿತಿ ಜಿ. ಶಂಕರ ಕುರೂಪ್, ಇಂಥ ಯುವ ಬರೆಹಗಾರ್ತಿಯ ಬರೆಹವನ್ನು ಅದೆಂತು 'ವಿಚಿತ್ರವಾದ ವಿಷಾದ ಛಾಯೆ' ಆವರಿಸಿಕೊಳ್ಳಲು ಸಾಧ್ಯವಾಯಿತು ಎಂದು ಅಚ್ಚರಿಪಡುತ್ತಾರೆ. ಆಕೆಯ ಜೀವನದ ಯಾವುದೇ ಒಂದು ವಿಶಿಷ್ಟವಾದ ಅನುಭವ ಇದಕ್ಕೆ ಕಾರಣವೆಂದು ಎನಿಸುವುದಿಲ್ಲ. ತಮ್ಮ ಬಾಲ್ಯದ ಮೌನ ಮತ್ತು ಒಂಟಿತನಗಳ ಬಗೆಗೆ ಸೂಚಿಸುತ್ತ ಆಗ ನಿಸರ್ಗದ ಪ್ರಭಾವ ಪ್ರಮುಖವಾಗಿ ತಮ್ಮ ಮನಸ್ಸಿನ ಮೇಲೆ ಆಗಿತ್ತೆಂದು ಉಷಾ ಹೇಳುತ್ತಾರೆ.

ಓ. ವಿ. ಉಷಾ ತಮ್ಮ ಸಂಸಾರದಲ್ಲಿ ಕೊನೆಯ ಮಗು. ಆಕೆಯ ತಂದೆ ಮಲಬಾರ್ ಸ್ಪೆಷಲ್ ಪೋಲೀಸ್ ಪಡೆಯಲ್ಲಿ ಸೇವೆ ಸಲ್ಲಿಸಿದವರು. ತಾಯಿಯ ಮಲೆಯಾಳೀ ಭಾಷೆಯ ಶ್ರೇಷ್ಠ ಸಾಹಿತ್ಯದ ಒಲುಮೆ ಬಾಲ್ಯದಲ್ಲಿಯೇ ಉಷಾ ಅವರನ್ನು ಕವಿತೆಗಳನ್ನು ಓದುವಂತೆ ಹಾಗೂ ಅವುಗಳನ್ನು ಕಂಠಪಾಠ ಮಾಡುವಂತೆ ಪ್ರೇರೇಪಿಸಿತು. ಹೆಸರಾಂತ ಕಾದಂಬರಿಕಾರ ಹಾಗೂ ವ್ಯಂಗ್ಯ ಚಿತ್ರಕಾರ ಓ. ವಿ. ವಿಜಯನ್ ಸೋದರ. ಆಂಗ್ಲ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಮುಗಿಸಿದ ನಂತರ ಆಕೆ ಅಂದು ಮುಂಚೂಣಿಯಲ್ಲಿದ್ದ ಒಂದು ಪ್ರಮುಖ ಪ್ರಕಾಶನ ಮಂದಿರವನ್ನು ಸಂಪಾದಕೀಯ ತರಬೇತಿಗಾಗಿ ಸೇರಿದರು. ಮುಂದೆ ಅದರ ಪ್ರಮುಖ ಸಂಪಾದಕರೂ ಆದರು. ಈಗ ಕೊಟ್ಟಾಯಂನ ಮಹಾತ್ಮಾಗಾಂಧಿ ಮುಕ್ತ ವಿಶ್ವವಿದ್ಯಾಲಯದ ಪ್ರಕಟನಾ ವಿಭಾಗದ ಮುಖ್ಯ ನಿರ್ದೇಶಕರಾಗಿದ್ದಾರೆ.

ಉಷಾ ಕಾವ್ಯ ರಚಿಸಲು ಪ್ರಾರಂಭಿಸಿದ್ದು ತನ್ನ ಹದಿಮೂರನೆಯ ವರುಷದಲ್ಲಿ. 'ಮಾತೃಭೂಮಿ' ವಾರಪತ್ರಿಕೆಯ ಮಕ್ಕಳ ವಿಭಾಗಕ್ಕೆ ನಿಯಮಿತವಾಗಿ ಬರೆದರು. ಆಮೇಲೆ ಪ್ರಬುದ್ಧೆಯಾದಂತೆ ಆಕೆಯ ಕವಿತೆಗಳು ಅದೇ ಪತ್ರಿಕೆಯಲ್ಲಿ ೧೯೭೩ರ ವರೆಗೆ ಪ್ರಕಟಿಸಲ್ಪಟ್ಟವು. ಮುಂದೆ ಹತ್ತು ವರುಷ ಬರೆದದ್ದು ಅತ್ಯಂತ ಕಡಿಮೆ. ೧೯೮೨ರಲ್ಲಿ ಆಕೆ ಪುನಃ ಬರೆಯಲು ಪ್ರಾರಂಭಿಸಿದರು. ಪ್ರಸ್ತುತ ಅನುವಾದಿತ ಕವನ 'ಮಾತೃಭೂಮಿ' ವಾರಪತ್ರಿಕೆಯಲ್ಲಿ ಫೆಬ್ರುವರಿ ೧೯೮೨ರಲ್ಲಿ ಪ್ರಕಟವಾಗಿತ್ತು. ಇಲ್ಲಿಯೂ ಅದೇ ಅಸ್ಪಷ್ಟ ಮೌನದ ಹೆಸರಿಸಲಾಗದ ಅಳಲು ಆಕೆಯ ಕೃತಿಯನ್ನು ಬೆಂಬತ್ತಿದೆ. ಅವರ ಬಹುಭಾಗ ಕಾವ್ಯ ಇನ್ನೂ ಪುಸ್ತಕ ರೂಪದಲ್ಲಿ ಪ್ರಕಟವಾಗಿಲ್ಲ.

~ ~ ~

ಬೇಟೆ

ಮಲಯಾಳಂ : ಓ. ವಿ. ಉಷಾ
ಅನು : ಪ್ರೊ। ವನಮಾಲಾ ಆಚಾರ್

ಅದು ಸುಡುತ್ತದೆ
ನಿಗಿನಿಗಿಸುವ ಈ ಬಿಳುಪಿನ ಮರಳು;
ಸುರುಳಿ ಸುತ್ತಿದ ತಂತಿಗಳು ಬರೆಯಿಡುತ್ತವೆ ದೇಹಕ್ಕೆ,
ನುಚ್ಚುನೂರಾಗಿಸುವ ಆಲಿಂಗನದಲ್ಲಿ .

ಯಾರು ನನ್ನನ್ನ ಜೀವಂತ ಎತ್ತೊಗೆದವರು
ಈ ಉರಿವ ಮರಳ ಕಣಗಳ ಮೇಲೆ?
ಎತ್ತರೆತ್ತರ ಬೆಳೆವ ನಿಚ್ಚಳತೆಯಲ್ಲಿ
ಈ ವೈಚಿತ್ರ್ಯವೆಲ್ಲವ ಕಣ್ಣಾರೆ ಕಾಣುತಿಹೆನು
ಮತ್ತದೋ ಕೆಲಸಾರುತ್ತಿರುವ ಭೀಷಣ ನಿರ್ಧಾರದ ಪಶುವನ್ನು.

ವಿಷಾದ ಬೆಂಕಿಯ ಕೃತಿ
ಅಡನಾಡಿ ನಡಿಗೆ, ಅದುಮಿದ ಗರ್ಜನೆಯೊಡನೆ
ತನ್ನ ಕೆನ್ನಾಲಗೆಯನ್ನದು ಸವರುತ್ತದೆ,
ನಿಧಾನವಾಗಿ, ತನ್ನ ಕೆಂಡದ ಅಧರಗಳ ಮೇಲೆ.

ಅದರ ಬಿರುನೋಟದಲ್ಲಿ,
ಚಿಮ್ಮಿಬರಲು ಕಾತರವಾಗಿರುವ
ಬರಸಿಡಿಲೆ ಇಹುದು.
ನನ್ನ ಆತ್ಮವನ್ನದು ಸೀಳುವುದು!

ಆ ಪಶು ಈಗ ನಿಲ್ಲುತ್ತದೆ
ಸನಿಹವೂ ಅಲ್ಲ, ದೂರವೂ ಅಲ್ಲ!

ಸಹಾಯಕ್ಕಾಗಿ ಕೂಗಲೆ?
ನನ್ನ ದನಿ ಉಡುಗಿದೆ
ಮತ್ತೆ ಇಲ್ಲಿ ಯಾರೂ ಇಲ್ಲ
ಮನುಷ್ಯರ ಕೂಗಳತೆಯಲ್ಲಿ.

ಆ ಪ್ರಾಣಿ ಇಟ್ಟಿಹುದೆ
ನಿಧಾನದ ಉರಿವ ಮುನ್ನಡೆಯನ್ನ?
ಆ ಕ್ರೂರ ದಂತಗಳು
ಶುಭ್ರ ದ್ರವರೂಪದ ಬೆಂಕಿಯನ್ನು ಹಿಡಿಸಿದುವೆ?

ದಿಟ; ಸನಿಹಕೆ ಬಳಿಸಾರುತ್ತದೆ ಅದು,
ಆರ್ಭಟನೆಯನ್ನು ಗರ್ಜಿಸಿ;
ತನ್ನ ಉರಿನಾಲಿಗೆ ಹೊರಚಾಚಿ
ಕೆಂಡಮುಂಡೆಗಳಾದ ಆ ತುಟಿಗಳನ್ನ ಸವರುತ್ತದೆ
ಅದು ನನ್ನ ಮೇಲೆ ಎರಗುತ್ತದೆ.
ದಯೆ?
ಅದರ ಲವಲೇಶವೂ ಕಾಣದು
ಅದರ ಕ್ರೂರ ಕಾಡುಕಣ್ಣುಗಳ ಹರವಿನಲ್ಲಿ
ಬಾನಿಗೆ ಬೆಂಕಿ ಬೀಳುತ್ತದೆ
ಭುವಿ ಧಗಧಗಿಸುತ್ತದೆ!

ಆ ಪಶು ನನ್ನ ಹೃದಯ ಬಗೆದು ಕಬಳಿಸುತ್ತದೆ
ಇದೀಗ ಒಂದೇ ಬೀಸಿನಲ್ಲಿ
ಹಿಡಿಯುತ್ತದೆ,
ನನ್ನ ದೇಹದ ಹಂದರದೊಳಗೆ ಬಂಧಿತ ಪುಟ್ಟ ಹಕ್ಕಿಯ
ಮತ್ತದು ಗುರುಗುಡುತ್ತದೆ, ಹೊರಳಾಡುತ್ತದೆ
ಘೋರ ಲೀಲೆಯಲಿ.

~ ~ ~

ಶಾಂತ ಶಿಲ್ಕೆ

ಶಾಂತ ಶಿಲ್ಕೆ ಅವರು (೧೯೨೧) ಮಾನಚಾರ್ ಎಂಬ ಸಣ್ಣ ಗ್ರಾಮದವರು. ಇದು ಮಧ್ಯಮಹಾರಾಷ್ಟ್ರದಲ್ಲಿದೆ. ಆ ಸಣ್ಣ ಗ್ರಾಮದಲ್ಲಿ ಓದು ಬರಹ ಬಲ್ಲವರು ಬಹುವಿರಳ. ಇವರ ತಂದೆ ತಾಯಿಯವರು ಓದು ಬರಹ ಬಲ್ಲವರು. ಇವರ ತಾಯಿ ನಿತ್ಯ ಓದುತ್ತಿದ್ದ ''ಮಾನಸಗೀತ ಸರೋವರ್'' ಮತ್ತು 'ಸ್ತ್ರೀ ಗೀತ ರತ್ನಾಕರ' ಇವರ ಮೇಲೆ ಗಾಢವಾದ ಪ್ರಭಾವ ಬೀರಿದವು. ಈ ಎರಡು ಕೃತಿಗಳು ಸ್ತ್ರೀಯರ ನಿತ್ಯ ಜೀವನದ ಹಾಡಾಗಿದ್ದವು. ಇದರಿಂದ ಅವರಿಗೆ ಸಾಹಿತ್ಯದಲ್ಲಿ ಹೆಚ್ಚು ಆಸಕ್ತಿ ಮೂಡುವಂತಾಯಿತು. ಅವರ ತಂದೆಯವರು ಅರಣ್ಯ ಇಲಾಖೆಯಲ್ಲಿ ರೇಂಜ್ ಆಫೀಸರ್ ಆಗಿದ್ದವರು. ಅವರು ವಿಶೇಷ ವ್ಯಕ್ತಿತ್ವದಮನುಷ್ಯರು; ಸಂಪ್ರದಾಯ-ಕಟ್ಟುಪಾಡುಗಳನ್ನು ಬಲ್ಲವರು;ಮಕ್ಕಳು ಸ್ವತಂತ್ರವಾಗಿ ಬಾಳುವುದನ್ನು ಇಚ್ಛಿಸಿದವರು. ಶಾಂತ ಶಿಲ್ಕೆಯವರು ಅವರ ಕುಟುಂಬದ ಹಿರಿಯ ಮಗಳು. ಆಕೆ ಒಂಭತ್ತನೇ ವರ್ಷದವರಿದ್ದಾಗ ತಂದೆಯವರು ದೈವಾಧೀನರಾದರು. ಅನಂತರ ಅವರು ಆ ಗ್ರಾಮವನ್ನು ಬಿಟ್ಟು ಪುಣೆಗೆ ಬಂದು ನೆಲಸಿದರು.

ಪುಣೆಯಲ್ಲಿ ಹಜರತ್‌ಪುಗ ಶಾಲೆಯಲ್ಲಿ ಸೇರಿದ ನಂತರ ಅವರು ಓದಿನಲ್ಲಿ ಹೆಚ್ಚು ಆಸಕ್ತಿ ತೋರಿದರು. ಸಂಸ್ಕೃತ ಮತ್ತು ಮರಾಠಿ ಸಾಹಿತ್ಯವನ್ನು ವಿಪುಲವಾಗಿ ಓದಿ ಬದಲಾವಣೆಯನ್ನು ಕಂಡುಕೊಂಡರು. ಆ ದಿನದ ಆ ಓದು ಅವರ ಜೀವನದ ಮುಖ್ಯ ಘಟನೆಯಾಗಿ ಪರಿವರ್ತನೆಗೊಂಡಿತು. ೧೯೪೪ರಲ್ಲಿ ಮರಾಠಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು.

ಶಾಂತ ಶಿಲ್ಕೆಯವರು ಕೆಲಸಗಳನ್ನು ಅರಸುತ್ತ ಮೊದಲು ಕರಡು ತಿದ್ದುವ ಕೆಲಸದಲ್ಲಿ ನಿರತರಾಗಿ ಪತ್ರಿಕೆಗಳಿಗೆ ವಿಪುಲವಾದ ಸಾಹಿತ್ಯವನ್ನು ಬರೆದರು. ಆಂಗ್ಲಭಾಷೆಯಿಂದ ಮರಾಠಿಗೆ ಅನೇಕ ಪುಸ್ತಕಗಳನ್ನು ಭಾಷಾಂತರಿಸಿದರು.

ಆನಂತರ 'ಚಿತ್ರಪ್ರಪಂಚ'ದಲ್ಲಿ ಚಿತ್ರಗೀತೆಗಳ ಜೊತೆಗೆ ಸಂಭಾಷಣೆಯನ್ನು ಬರೆದು ಪ್ರಸಿದ್ಧರಾದರು. ಮುಂಬಯಿ ಮಹಾವಿದ್ಯಾಲಯದಲ್ಲಿ ಮರಾಠಿ ಬೋಧಕರಾಗಿ ಸೇವೆ ಸಲ್ಲಿಸಿದರು.

~ ~ ~

ಸಂದು ಹೋದ ಐವತ್ತು

ಮರಾಠಿ : ಶಾಂತ ಶಿಲ್ಕೆ
ಅನು : ವಿ. ರಾಘವೇಂದ್ರ

ಐವತ್ತು ವಸಂತಗಳು ಸಂದವು
ನಾನು ಹಾಗೆಯೇ ಉಳಿದಿರುವೆ
ಚಿಕ್ಕ ಮಗುವಿನ ಪುಟ್ಟ ಹೃದಯದಲ್ಲಿ
ಸುಂದರ ಮಂದಿರದ ಬೊಂಬೆಯ ಮನೆಯಲ್ಲಿ ಕನಸ ಕಂಡು
ಸಂಸಾರದ ಎಲ್ಲಾ ಭಾರವನ್ನು ನಾನೇ ಹೊತ್ತು ಆ ಮಂದಿರದಲ್ಲಿ
ಮಕ್ಕಳ ಆಟದ ಭ್ರಮೆಯಲ್ಲಿ

ಆ ದೂರದ ಹಾದಿಯನ್ನು ನನ್ನ ಪುಟ್ಟ ಹೆಜ್ಜೆಗಳನ್ನಿಡುತ್ತ ನಡೆದೆ
ದಣಿವು ದೂರವಾಗಿ ಹೋಗಿ
ನಿರ್ವಹಣೆಯ ಜವಾಬ್ದಾರಿಯತ್ತ ಸಾಗಿ
ಇನ್ನೂ ದೃಢವಾದ ಹೆಜ್ಜೆಗಳನ್ನಿಡುತ್ತಾ ಸಾಗಿ
ಮಕ್ಕಳ ಕಥೆಯಲ್ಲಿ ನಡೆದಂತೆ ಭ್ರಮೆಯಾಗಿ
ಅಲಗಿನ ಕತ್ತಿಯೊಡನೆ ಹೋರಾಡಿ
ಸಿಹಿಯನ್ನು ಸವಿದು ಮೂಲದತ್ತ ಸಾಗಿ
ಬೆದರಿಕೆಯ ಗಟ್ಟಿತನದಲ್ಲಿ
ಒಮ್ಮೊಮ್ಮೆ ಗೆಲವು ಒಮ್ಮೊಮ್ಮೆ ಸೋಲು
ಕೊನೆಗೆ ಕತ್ತಿ ಮುರಿದಂತಾಗಿ
ಕಷ್ಟಗಳೇ ಸಂಶಯದ ಮಾಲೆಯಾಗಿ
ಸುಲಭದ ಹಾದಿಯಲ್ಲಿ ಪರಿಹರಿಸಲು ಹೋಗಿ
ಸಮಸ್ಯೆಗಳೇ ಬೊಂತೆಯಾಗಿ
ಚೌಕಟ್ಟಿನ ಸುತ್ತಿನೊಳಗೆ

ಆ ಮೊಗವ ನೋಡಿ
ದೂರದ ಯಾವುದೋ ಆಸೆಯಲ್ಲಿ ನಗುವೂ ಮೂಡಿ
ಅಮಾವಾಸ್ಯೆಯ ಕತ್ತಲಲ್ಲೂ ಬೆಳದಿಂಗಳಂತೆ ಮೂಡಿ
ಮಾಯವಾಗಿ ಹೋಗಿ
ಅರಳಿದ ಹೂ ನಲುಗಿ ಹೋಗಿ
ಮತ್ತೆ ಅರಳಿತು ನಗು ಮೊಗದಿ ಹಾಡಿ
ಸಂಗೀತದ ಧ್ವನಿಗಳು ಕಿವಿಗಳಿಗೆ ತಟ್ಟಿ
ನಿನ್ನೆಯಷ್ಟೇ ನಾ ಕಂಡದ್ದು
ಬಹಳ ವರ್ಷಗಳು ಸಂದ ಬಳಿಕ
ಮಾತನಾಡಿದಳು ಮನಬಿಚ್ಚಿ
ಅದೇ ಧಾಟಿಯಲ್ಲಿ ಧ್ವನಿಯು ಗಾಢವಾಗಿ ಹೋಗಿ
ಮೊದಲ ಬಾರಿಗೆ ನಾ ಕಂಡೆ ಆ ಧ್ವನಿಯಲ್ಲಿ
ನೋವಿನ ಛಾಯೆಯನ್ನು ನೆರೆಯುತ್ತಿರುವ ಕೂದಲಿನ ಹಾಗೆ.
ಗಮನಿಸದಾದೆ ಆ ಧ್ವನಿಯಲ್ಲಿ ನಾನು ಮೊದಲ ಬಾರಿಗೆ ಮೊನಚ್ಚನ್ನು
ನಿಸ್ಸಾರವಾದ ಪೊಳ್ಳನ್ನು
ಉಕ್ಕಿ ಹರಿಯುವ ಪ್ರವಾಹ ರೂಪದಲ್ಲಿ ಜೀವನದ ಆ ನೋವನ್ನು.

~ ~ ~

ನೀತಾ ರಾಮಯ್ಯ

ಆಕೆ ಜನಿಸಿದ್ದು (1940) ಸೌರಾಷ್ಟ್ರದ ಮೊರ್ವಿಟೌನಿನಲ್ಲಿ. ಬೊಂಬಾಯಿಯಲ್ಲಿ ವ್ಯಾಸಂಗ ಮುಗಿಸಿ ಅಲ್ಲೇ ವಾಸವಾಗಿದ್ದರೂ ತೌರೂರೆಂದರೆ ಇವತ್ತಿಗೂ ಸಂಬಂಧ ಉಳ್ಳವರು. ಅಲ್ಲಿನ ಹಳ್ಳಿಗಾಡಿನ ಜೀವನಕ್ರಮವನ್ನು ಅರಿತವರು. ಪ್ರಥಮವಾಗಿ ಮೋರ್ವಿಯ ಜಾನಪದ ಶೈಲಿ, ಪದ್ಧತಿ ಮತ್ತು ನಂಬಿಕೆಗಳು ಇವರ ಕೃತಿಗಳಲ್ಲಿ ಪ್ರಾಮುಖ್ಯತೆ ಪಡೆದಿವೆ. ಇವರು ಅನೇಕ ವರ್ಷಗಳ ಕಾಲ ಆಂಗ್ಲ ಭಾಷೆಯನ್ನು ಎಸ್.ಎನ್.ಡಿ.ಟಿ. ಹೆಣ್ಣು ಮಕ್ಕಳ ವಿಶ್ವವಿದ್ಯಾಲಯದಲ್ಲಿ ಬೋಧಿಸಿದವರು.

ಇತ್ತೀಚೆಗೆ ಬೊಂಬಾಯಿಯಲ್ಲಿ **"Margarate at word"** ಕವಿತೆಯ ಸಂಶೋಧನೆ ನಡೆಸಿ ಗುಜರಾತಿ ಭಾಷೆಗೆ ಭಾಷಾಂತರ ಮಾಡಿರುತ್ತಾರೆ.

ಇವರ ಸಾಹಿತ್ಯ ಅಪಾರ ಮೆಚ್ಚಿಗೆ ಪಡೆದಿದೆ ಹಾಗೂ ಹೆಸರಾಂತ ಗುಜರಾತಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ಇವರ ಕವನ ಸಂಕಲನವಾದ "Shabdane Raste" ೧೯೮೮ರಲ್ಲಿ ಹೊರಬಂದಿದೆ. ಇವರ ಅನೇಕ ಕವಿತೆಗಳು ಸ್ವಂತಿಕೆಯ ವಿಚಾರದ್ದಾಗಿದ್ದು ಪ್ರಾಪಂಚಿಕ ಸಂಬಂಧದ್ದಾಗಿವೆ. ಅದರಲ್ಲಿ ಒಬ್ಬ ವೃದ್ಧವ್ಯಕ್ತಿ ತನ್ನ ಮಗನನ್ನು ಕಳೆದುಕೊಂಡುದರ ವೇದನೆ ಪತ್ರರೂಪದಲ್ಲಿ ಅಡಗಿರುವುದು ಉಲ್ಲೇಖನೀಯ. ಎರಡು ಕವಿತೆಗಳು ಹೆಣ್ಣಿಗೆ ಸಂಬಂಧಿಸಿದ್ದು, ಪ್ರಸ್ತುತ ದಿನಗಳಲ್ಲಿ ಹೆಣ್ಣಿನ ಪಾತ್ರ ಮತ್ತು ಅವಳ ಬಲಾಬಲವನ್ನು ಕುರಿತದ್ದಾಗಿವೆ. ಇವೆರಡರಲ್ಲೂ ಹೆಣ್ಣು ಇತರರಿಗಾಗಿ ನಿರೀಕ್ಷಿತಳು ಎಂಬುದರ ವಿರುದ್ಧ ಸಿಡಿದೆದ್ದು ಸಾಹಿತ್ಯ ಸೃಷ್ಟಿಸಿದ್ದಾರೆ. ಜೊತೆಗೆ ಹೆಣ್ಣು ಮತ್ತು ಗಂಡಿನ ಸಂಬಂಧ ಭವಿಷ್ಯದಲ್ಲಿ ಮುಖ್ಯ ಎಂಬುದರ ಅರಿವನ್ನು ಪ್ರತಿಪಾದಿಸಿರುತ್ತಾರೆ. ಇತರೆ ಕವಿತೆಗಳಲ್ಲಿ ಸ್ವಾಭಾವಿಕ ದೃಶ್ಯ, ಸೃಷ್ಟಿ, ಸೊಬಗು, ಮಳೆ, ಮೋಡ, ಮರ, ಬಳ್ಳಿ ಹಾಗೂ ನದಿಗಳ ವರ್ಣನೆ ಇದೆ. ನಮಗೆ ಈ ಭೂಮಿ ಬೇಕಿದೆ ಹಾಗೆಯೇ ಈ ಭೂಮಿಗೆ ನಾವು ಬೇಕಿದೆ ಎಂಬುವುದನ್ನು ಹೇಳುತ್ತಾ ಈ ಭೂಮಿ ಮತ್ತು ಜಲ ಕೊನೆಗೆ ನಾಶದಂಚಿಗೆ ಕೊಂಡೊಯ್ಯುವುದಾಗಿವೆ ಎಂದು ಹೇಳುತ್ತಾರೆ.

ಆಕೆ ತನ್ನ ತಾಯಿ ಹಾಗೂ ಕಡೆಯ ಸಹೋದರನನ್ನು ೧೯೭೯ರ ಮೋರ್ವಿ ಮಿಂಚಿನ ಪ್ರವಾಹದಲ್ಲಿ ಕಳಕೊಂಡವರು. ಪ್ರವಾಹವು ಕೆಲವೇ ನಿಮಿಷಗಳಲ್ಲಿ ಮೋರ್ವಿಯ ಅರ್ಧ ಜನಸಂಖ್ಯೆಯನ್ನೇ ಆಹುತಿ ತೆಗೆದುಕೊಂಡಿತು.

ಇದರ ಪರಿಣಾಮವಾಗಿ ರಚಿಸಿದ ಕಾವ್ಯ "Ognisso-ognyaeshinun varas" ಅಂದರೆ ''೧೯೭೯ನೇ ವರುಷ''. ಈ ಕವಿತೆ ಏಪ್ರಿಲ್ ೧೯೮೫ರಲ್ಲಿ ಪ್ರಕಟಗೊಂಡಿದೆ.

ಅದೇ ರೀತಿ ಅವರ ಮತ್ತೊಂದು ಕವನ •"Treeji Ankhnun Jantarmantar" ೧೯೮೭ರ ಫೆಬ್ರುವರಿ ಮಾಹೆಯ 'ಕವಿತ'ದಲ್ಲಿ ಪ್ರಕಟಗೊಂಡಿದೆ.

ಇವರ ಅನೇಕ ಕವಿತೆಗಳು ಹಾಡುಗಳಾಗಿ ಜನಪದ ಸಾಹಿತ್ಯದ ಜಾಡಲ್ಲಿ ಯಶಸ್ವಿಯಾಗಿ ಜನರನ್ನು ತಲುಪಿವೆ. ಅದರಲ್ಲಿ ಅವರಿಗಿರುವ ನಗರ ಪ್ರದೇಶಗಳ ಜೀವನಾನುಭವ ಹಾಗೂ ತಮಗಿರುವ ಸಂಬಂಧಗಳನ್ನು ಒತ್ತಿ ಹೇಳುತ್ತವೆ. ಆಕೆಯ ವೈವಿಧ್ಯತೆ ಹಾಗೂ ನೇರ ಅನುಭವ ನುಡಿಗಳು ಇಲ್ಲಿ ಸಾಕ್ಷಿಯಾಗಿವೆ.

ಇವರ 'ಮಕ್ಕಳ ಕವನಗಳು' ಸಂಕಲನಕ್ಕೆ ಗುಜರಾತ್ ಸಾಹಿತ್ಯ ಪರಿಷತ್‌ನಿಂದ ೧೯೮೬ರಲ್ಲಿ ಪ್ರಶಸ್ತಿ ಬಂದಿದೆ.

~ ~ ~

ಮುಕ್ಕಣ್ಣಿನ ಮೇಲೆ

ಗುಜರಾತಿ : ನೀತಾ ರಾಮಯ್ಯ
ಅನು : ಹೆಚ್. ಕೃಷ್ಣಮೂರ್ತಿ

ಇದು ಹೀಗೆ ಹೇಳಿದೆ.
ಶಿವನ ಮುಕ್ಕಣ್ಣು ತೆರೆದರೆ
ಭೂಮಿಯೇ ಬೂದಿಯಾದೀತು.

ನೀನು ಎರಡು ಕಣ್ಣು ಪಡೆದಿರುವೆ
ಒಂದನ್ನು ಮುಚ್ಚಿದರೆ
ಕಾಣುವ ಅರ್ಧ ಪ್ರಪಂಚ ಕಾಣದು;
ಆಗ ಎರಡನೆಯ ಕಣ್ಣು ಮುಚ್ಚಿದರೆ
ಕಾಣುವ ಉಳಿದರ್ಧವೂ ಕಾಣದು;
ಎರಡು ಕಣ್ಣು ಒಟ್ಟಿಗೇ ಮುಚ್ಚಿದರೆ
ಕಾಣುವ ಪೂರ್ಣ ಪ್ರಪಂಚ ಕಾಣದು;

ಮುಕ್ಕಣ್ಣನು ತೆರೆದುನೋಡು
ನಿನ್ನ ದೃಷ್ಟಿ ಹಿಂದಿರುವ ಗೋಡೆಯ ಕೆಡವಿ
ಏಳು ಹೆಜ್ಜೆಯನಿಟ್ಟು
ನಿನ್ನೊಳಗಿನ ಬಿಳಿ ನೆರಳಿನೊಡಗೂಡಿ;
ಜ್ಞಾಪಕವಿರಲಿ;

ಹಿಂದೆ ತಿರುಗದಿರು ನೋಡದಿರು
ದಿಗಂತದ ವಿಮಾನ ಇಳಿವಂತೆ
ತುದಿ ಬೆಟ್ಟದಿಂದ ಕತ್ತಲೆಗೆ ಸರಿದು;
ನೇತಾಡು ತಲೆಕೆಳಕಾಗಿ
ಬಾವಲಿಯಂತೆ
ಕತ್ತಲಲ್ಲಿ;

ಮುತ್ತಿರುವ ಕತ್ತಲಲ್ಲಿ
ತಲೆ ಎತ್ತಿ ನಿಲ್ಲು
ನಿನ್ನೆರಡು ಪಾದಗಳಲ್ಲಿ
ಕತ್ತಲೆಯ ಕೇಂದ್ರದಿಂದ;

ಆಗ ನೀನು ಕಾಣದ್ದನು ಕಾಣುವೆ
ನಿನ್ನಾ ಮುಕ್ಕಣ್ಣಿನಿಂದ;
ಅದಾದ ಮೇಲೆ ಬೇಕಾಗುವುದಿಲ್ಲ
ನಿನಗಿರುವ ಎರಡು ಕಣ್ಣುಗಳು

ಜ್ಞಾಪಕವಿರಲಿ;
ನೀನು ಶಂಕರನಲ್ಲ
ಅವನ ಬಗ್ಗೆ ನಿನಗೇನೂ ತಿಳಿದಿಲ್ಲ
ಆತನ ಸತ್ಯ ಅಥವಾ ಮಿಥ್ಯವಾಗಲಿ.

ನಿನಗಿದು ಬೇಕಾಗಿರುವ ಪೃಥ್ವಿ
ತಬ್ಬಿ ನಿನ್ನನು ಹಿಡಿದಿದೆ
ನಿನ್ನ ಎಲ್ಲ ನರನಾಡಿಯಲ್ಲಿ ಹರಿವ ರಸ
ಪೃಥ್ವಿಯದ್ದು
ಅದು ಪರಿಮಳವಾಗಿಸಿ
ನಿನ್ನ ಬದುಕಿನ ಗಾತ್ರವ ಹೊತ್ತು
ನಿಂತಿದೆ ಅನಾದಿ ಕಾಲದಿಂದಲೂ

ಹೂಳು ನಿನ್ನದೆಲ್ಲ ಈ ಭೂಮಿ ಒಳಗೆ
ಅಲ್ಲಿಂದ ನೀ ಸಿಡಿದೆದ್ದು ಬಾ ಹೊರಗೆ
ಮುಕ್ಕಣ್ಣನು ತೆರದಾದ ಮೇಲೆ
(ಕಾಲದಿಂದ ಕಾಲಕ್ಕೆ, ತಲೆಮಾರಿನಿಂದ
ತಲೆಮಾರಿಗೂ
ಯಾವ ತೃಣವನ್ನಾದರೂ ಹಿಡಿದು
ನಿತ್ಯವೂ)

ಆಗ ಒಂದು ಎರಡು ಮುಕ್ಕಣ್ಣುಗಳು
ಅಗಣಿತ ನಿರಂತರ

~ ~ ~

ಅಂತಾರಾಷ್ಟ್ರೀಯ ಪುರಸ್ಕಾರ ಪಡೆದಿರುವ ಸ್ನೇಹಮಯಿ : ಡಾ. ಜಯಂತ ಮಹಾಪಾತ್ರ

ಡಾ. ಜಯಂತ ಮಹಾಪಾತ್ರ ಒರಿಸ್ಸಾದ ಕಟಕ್ ಜಿಲ್ಲೆಯಲ್ಲಿ ವಾಸವಾಗಿರುವ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಪ್ರಖ್ಯಾತಿ ಗಳಿಸಿದ ಕವಿ. ಒರಿಯಾ ಮತ್ತು ಹೆಚ್ಚಾಗಿ ಇಂಗ್ಲೀಷಿನಲ್ಲಿ ಕವನ ರಚಿಸುವ ಇವರು ಆಂಗ್ಲ ಭಾಷೆಯಲ್ಲಿ ಕವನ ರಚಿಸುವವರಲ್ಲಿ ಬಹು ಪ್ರಖ್ಯಾತರು. ಅನೇಕ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಪದವಿ ಪುರಸ್ಕಾರಗಳನ್ನು ಪಡೆದಿರುವ ಇವರು ಬಹಳ ಸಜ್ಜನ. ಸ್ನೇಹಮಯಿ. ವಿಶ್ವದ ಬಹುತೇಕ ದೇಶಗಳಲ್ಲಿ ಪ್ರವಾಸಮಾಡಿ ಕಾವ್ಯವಾಚನ ಮಾಡಿರುವ ಇವರ ಕಾವ್ಯ ಸರಳ, ಸುಂದರ, ಅಷ್ಟೇ ಮಧುರ. ಇಂಗ್ಲೀಷಿನಲ್ಲಿ ಸುಮಾರು ೧೫ ಕವನ ಸಂಗ್ರಹಗಳನ್ನು ಪ್ರಕಟಿಸಿರುವ ಇವರು ಹಲವು ಇತರ ಭಾಷಾಕವನಗಳನ್ನೂ ಅನುವಾದ ಮಾಡಿದ್ದಾರೆ.

~ ~ ~

ಫಲಾಂತರ

ಒರಿಯಾ : ಡಾ॥ ಜಯಂತ ಮಹಾಪಾತ್ರ
ಅನು : ದ್ವಾರಕಾನಾಥ್ ಹೆಚ್. ಕಬಾಡಿ

ಅರಿಯದ್ಯಾವುದೋ ಒಂದು ಧ್ವನಿ
ನಭದಂತರದ ಗಹನದಾಳದಿಂದ ತೇಲುತ್ತ,
ಕವಿದ ಕಡುಕತ್ತಲೆಯ ಕತ್ತರಿಸಿ,
ಅರಿವ ಜ್ಞಾನತಂತುಗಳ ತುಂಡರಿಸಿ,
ದ್ವೇಷ-ದುರಾಸೆಗಳ ಕೂಗ ಬಿತ್ತರಿಸಿ,
ಮಿನುಗುತಾರೆಗಳ ಸುಟ್ಟು ಕರಕಿಟ್ಟು,
ಕಡಲ ಅಮಾಯಕ "ಗಲ್" ಹಕ್ಕಿರೆಕ್ಕೆಗಳ
ಉಸಿರ ಕಟ್ಟಿಸಿದೆ.

ಆ ಧರೆಯ ಮೇಲಣ ಧ್ವನಿ
ಮನುಷ್ಯನ ಮುಖದಲ್ಲೇ ಮನುಷ್ಯನೇ
ಜೀವಂತ ಸಮಾಧಿ ಪಡೆದಂತೆ ತೇಲುತ್ತ ಬರುತ್ತದೆ.

ಸಾಗರ ತುಂಬಿದ ಅನನ್ಯ ಅಗಣಿತ ಅಪೂರ್ವ
ಜೀವರಾಶಿಗಳ
ತೇಲುವ ಶ್ವೇತ ಹಿಮಪುಷ್ಪಗಳ
ಕಪ್ಪಾಗಿಸಿ ಅವುಗಳ ಸೂಕ್ಷ್ಮಸಂವೇದೀ
ಸ್ಪರ್ಶಾಂಗಗಳ ಘಾತಗೊಳಿಸಿ
ತೇಲುವ ಮಾನವನ ಆ ಉನ್ಮತ್ತ ಅಹಮಿಕೆಯ ಧ್ವನಿ.

ಸಾಗರಜೀವಿಗಳು ನೊಂದು ವಿಲಿವಿಲಿ
ಒದ್ದಾಡುವುದ ಕಂಡ ಅಲೆಗಳು ನೊಂದು ಮುದುಡುತ್ತವೆ
ಇಲ್ಲಿ ಅಡೆತಡೆಯಿಲ್ಲದೆ ಸದಾ ನಡೆಯುವ

ಮಾನವನ ಮೇಲೆ ಮಾನವನೇ ಎಸಗುವ
ಅತ್ಯಾಚಾರಗಳ ವಿಷಮ ಸುಳಿಯಲ್ಲಿ ಸಿಲುಕಿ
ಸಾವೂ ಸತ್ತು ನಮ್ಮ ಸುತ್ತಲೂ ಘನಮೌನ
ಆವರಿಸಿದಾಗ
ಸಾಗರವೂ ಆ ಮದ ತುಂಬಿದ ಮಾನವ ನಿರ್ಮಿತ
ಕಾರ್ಗತ್ತಲೆಯ ತೆಕ್ಕೆಯಲಿ ಸಿಕ್ಕಿ ತಾನೂ ಸಾಯುತ್ತದೆ.

(ಗಲ್ಫ್ ಯುದ್ಧ ಕುರಿತು ರಚಿಸಿದ ಕವಿತೆ)

~ ~ ~

ಕಾಯಿಲೆ

ಒರಿಯಾ : ಡಾ. ಜಯಂತ ಮಹಾಪಾತ್ರ
ಅನು : ಡಾ. ದ್ವಾರಕಾನಾಥ್ ಹೆಚ್. ಕಬಾಡಿ

ಫಕ್ಕನೆ ನನ್ನ ಸುತ್ತ ಮುತ್ತ
ಸುಳಿದಾಡುವ ಕುಳಿರ್‌ಗಾಳಿ
ಗುಹೆಯೊಳಗಣ ತರದ ಮೆದು ಕತ್ತಲೆಯ ಸಂಜೆ
ಹತಾಶೆಯಿಂದ ಕೈಗಳ ಮೇಲೆತ್ತಿ ನಿಂತಂತಹ ಹಳೆಯ ಮನೆ
ಅಸಹನೆಯಿಂದ ದುರುಗುಟ್ಟುತ್ತಿರುವಂತಹ ಕಡು ಕತ್ತಲೆ
ತನ್ನದೇ ಶತ ಚಿಂತೆಗಳ ಮೇಲೇ
ಒತ್ತರಿಸಿ ಸೊರಗಿ ಕೊರಗಿ ಕುಸಿಯುತ್ತಿರುವ ಈ ದೇಹ
ಆ ಬೆಚ್ಚನೆಯ ನೀರು
ಮಂಚದ ಮೇಲೆ ತೊಳೆದು ಸ್ವಚ್ಛಗೊಳಿಸಿ ಹಾಸಿದ ಹಾಸಿಗೆ
ಇನ್ನೂ ಸುದೂರವೇ ಉಳಿದ ಆ ಸುಂದರ ಋತುಗಳ ಕಾಲ
ಈಗ ತಾನೂ ಒಂದು ಕವನವಾಗಬಯಸುವ ಸಂಜೆಗೆಂಪು
ಮತ್ತು ಎಗ್ಗಿಲ್ಲದ ಗಾಳಿಗೆ
ತನ್ನದೇ ಪದಗಳಿಂದ ತನ್ನೊಡನೆಯೇ ಮಾತನಾಡಿಸುವ ಚಪಲ
ಸುತ್ತುವರಿದ ವಸ್ತುಗಳ ಮುಟ್ಟಲು ನಾನು ಮಾಡುವ ಪ್ರಯತ್ನ
ಆದರೆ ಆದರೆ
ದೀಪವ ಬೆಳಗಿಸಲು ಇಲ್ಲಿ ಇನ್ನೂ ಯಾರೂ ಬರದಿರುವ ಸ್ಥಿತಿ.

~ ~ ~

ಎಡದ ಹಾದಿ ಸುಖದ ಹಾದಿ

ಇಂಗ್ಲ : ಡಾ| ಜಯಂತ ಮಹಾಪಾತ್ರ
ಅನು : ಗೀತಾ ವಿಜಯಕುಮಾರ್

ಕೊನೆಗಾಣದ ಮಳೆ, ಅಪ್ಪಾರಾವನಿಗೆ ಕಿರಿಕಿರಿಯುಂಟುಮಾಡಿತು. ವಾರದಿಂದಲೂ ಒಂದೇ ಸಮನೆ ಮಳೆ ಸುರಿಯುತ್ತಲೇ ಇದೆ. ಕೈಯಾಡಿಸಿದೆಡೆಯಲ್ಲೆಲ್ಲ ಬರೀ ತಳುವು, ತೇವ. ಗುಡಿಸಿಲ ಒದ್ದೆಯಾದ ಗೋಡೆಯ ಮೇಲೆ ಅವನ ದೃಷ್ಟಿ ನೆಟ್ಟಿತು. ಅಲ್ಲಲ್ಲಿ ಮಣ್ಣಿನ ಹೆಂಟೆಗಳು ಕಜ್ಜಿಗುಳ್ಳೆಯಂತೆ ಹೊರಗೆದ್ದಿದ್ದವು.

ಇಷ್ಟರಲ್ಲೇ ಅವನ ಸುತ್ತಲೂ ಬೆಳಕು ಹರಿಯುವುದರಲ್ಲಿತ್ತು. ಮೋಡಗಳ ಮರೆಯೊಳಗೆ ಅಡಗಿ ಕುಳಿತಿರಬಯಸುವ ಸೂರ್ಯನ ಮಂದಶಾಖದ, ತೇವಾಂಶ ಲೇಪಿತ ಜುಲೈ ತಿಂಗಳ ಮುಂಜಾವು. ದೂರದಲ್ಲೆಲ್ಲೋ ಧ್ವನಿವರ್ಧಕದಲ್ಲಿ ಜೋರಾಗಿ ಸಿನಿಮಾ ಹಾಡೊಂದು ಅರಚಿಕೊಳ್ಳುತ್ತಿತ್ತು. ಸುತ್ತಲಿನ ತೇವ ಅವನಲ್ಲಿ ಒಂದು ರೀತಿಯ ಮುಜುಗರವನ್ನುಂಟುಮಾಡಿತ್ತು. ತನ್ನ ಬಲಪಾದವನ್ನು ಕಡಿದ ಕಪ್ಪು ಗೊದ್ದವನ್ನು, ಬಹಳ ಸಾವಧಾನದಿಂದ ಕೈಯಿಂದ ಹೊಸಕಿ, ಮಳೆಯಿಂದಾಗಿ ಇನ್ನೂ ಹಸಿಯಾಗಿರುವ ತನ್ನ ಹಿಮ್ಮಡಿಯಲ್ಲಿ ಛಳಕುಂಟುಮಾಡಿದ ಸೀಳುಗಳನ್ನು ಮೃದುವಾಗಿ ಸವರಿಕೊಂಡ.

ನೇರವಾಗಿ ಅವನ ಹಿಂದಿರುವುದೇ, ಅವನ ಕಗ್ಗತ್ತಲ ಒಂಟಿಯೋಣಿಯ ಇಕ್ಕಟ್ಟಾದ ಗೂಡು. ಅಪ್ಪಾರಾವನಿಗೆ ತನ್ನ ಹೆಂಡತಿ ಹಾಗೂ ಅವಳಮ್ಮನ ಇರಿಯುವ ನೋಟ, ತನ್ನ ಬೆನ್ನನ್ನಿರಿಯುತ್ತಿರುವಂತೆ ಭಾಸವಾಯಿತು. ಕೇವಲ ನೆರಳನ್ನು ಮಾತ್ರ ಹಿಡಿದಿಟ್ಟುಕೊಳ್ಳುವ, ಮಾಸಿ ಚಿಂದಿಯಾದ ಚಾಪೆಯಿಂದಾವೃತವಾದ ಮುಂಬಾಗಿಲಿನಿಂದ ಅವನು ತನ್ನ ದೃಷ್ಟಿಯನ್ನು ಬೇರೆಡೆಗೆ ಹೊರಳಿಸಿದ.

ನೆರಳೇನೋ ಅವನಿಗರ್ಥವಾಯಿತು. ಆದರೆ ಅದನ್ನು ಅರ್ಥಮಾಡಿಕೊಳ್ಳುವ ಆವಶ್ಯಕತೆಯಾದರೂ ಎಲ್ಲಿದೆ? ತನಗೆ ತಾನೇ ಅವನು ಪ್ರಶ್ನಿಸಿಕೊಂಡ. ತಾನ್ಯಾರು? ತಾನೇನು ಮಾಡಬೇಕು? ಬಿಡಬೇಕು? ಇವುಗಳ ಕುರಿತು ಯೋಚಿಸುವುದಾದರೂ ಏಕೆ? ದಿನನಿತ್ಯ ಅವನು ತನ್ನ ರಿಕ್ಷಾದಲ್ಲಿ ಪ್ರಯಾಣಿಸುವ ಶ್ರೀಮಂತ ಸವಾರಿಗಳ ಬಗ್ಗೆ ಯೋಚಿಸಿ, ತನ್ನನ್ನು ತಾನೇ ಬಹಳವಾಗಿ ಶಪಿಸಿಕೊಳ್ಳುತ್ತಿದ್ದ. ಕೆಲವೊಮ್ಮೆ ಬಾಡಿಗೆ ಹಣ ಪಾವತಿ ಮಾಡಲು

ರಗಳೆಮಾಡುವಂಥವರುಗಳನ್ನು ಅವನು ಕಂಡಿದ್ದ. ಅಂಥವರು, ಅಪ್ಪಾರಾವನಂತಹ ಬಡವರನ್ನು ಸುಲಭವಾಗಿ ಹೊಸಕಿಹಾಕಿಬಿಡಬಹುದೆಂದುಕೊಂಡಿದ್ದರು. ಅಂತಹ ಸನ್ನಿವೇಶಗಳನ್ನು ಅನುಭವಿಸುವುದು ಬಹಳ ಕಷ್ಟ. ಆದರೆ ತನ್ನ ಬಳಿ ಪ್ರದರ್ಶಿಸಲು ಇರುವುದಾದರೂ ಏನು? ಕೇವಲ ಮೂಳೆ ಚಕ್ಕಳದ ಬಡಕಲು ದೇಹವೊಂದನ್ನು ಬಿಟ್ಟರೆ! ತಾನು ಬದುಕುಳಿಯಬೇಕಾದರೂ ಏಕೆ? ತನಗೆ ತಾನೇ ಅವನು ಪ್ರಶ್ನಿಸಿಕೊಂಡ.

ಅವನ ದೇಹ ಸ್ವಲ್ಪ ನಡುಗಿತು. ಯಾಂತ್ರಿಕವಾಗಿ ಅವನ ಹಣೆ ಬಳಿ ಕೈಗಳು ಸರಿದವು. ಬಹುಶಃ ಮಲೇರಿಯಾನೇ ಇರಬೇಕೆಂದು ಅವನು ತರ್ಕಿಸಿದ. ಆಯಾಸಗೊಳ್ಳದೆ ಒಂದೇ ಸಮನೆ ಮಳೆ ಸುರಿಯುತ್ತಲೇ ಇದೆ. ಗುಡಿಸಿಲಿನೆದುರಿನ ಕಡಿದಾದ ಚರಂಡಿಯಲ್ಲಿ ಕೊಳಕು ನೀರು ಕಾಲುವೆಯ ತರಹ ಬಿರುಸಿನಿಂದ ಹರಿಯುತ್ತಿತ್ತು. ಹೆಂಗಸರಿಬ್ಬರ ಧ್ವನಿ ಅವನ ಕಿವಿಗಪ್ಪಳಿಸಿತು. ಗಂಡಸಿನ ಧ್ವನಿ ಅವನ ಅತ್ತೆಯದು. ಮಳೆ ನೀರಿನ ಶಬ್ದದಲ್ಲಿ ಕ್ಷೀಣವಾಗಿ ಕೇಳಿ ಬಂದ ನೇರವಾದ ಅಲಕ್ಷ್ಯ ಧ್ವನಿ ಮಾಲತಿಯದು!

ಮಾಲತಿ! ಅವನು ಜ್ಞಾಪಿಸಿಕೊಂಡ ಹದಿನಾಲ್ಕರ ಪೀಚು ಕೈಗಳ, ಬಯಕೆ ಹೊರಹೊಮ್ಮದ, ರಹಸ್ಯಮಯ ಸ್ತನಗಳ ಕೃಶವಾದ ಹುಡುಗಿ. ಮದುಮಗಳಾಗಿ, ಮಧುರ ಸುವಾಸನೆ ತುಂಬಿದ ಕತ್ತಲಕೋಣೆಯೊಳಗೆ ಅವನಿಗಾಗಿ ಕಾದಿದ್ದಳು. ಆದರೆ ಅದು ಐದು ವರ್ಷಗಳ ಹಿಂದಿನ ಮಾತು. ಆದರೆ ಇಂದವನಿಗೆ ಆ ಐದು ವರ್ಷಗಳು ಸುದೀರ್ಘವೆನಿಸಿದವು. ಐದು ವರ್ಷಗಳ ಬಾಳ್ವೆ ಮತ್ತೊಮ್ಮೆ ಅವನ ಬಾಯಿಗೆ ಪ್ಯದುತ್ತ ತಂದಿತ್ತು. 'ಮಾಲು' ಅವನು ಸ್ವಲ್ಪ ಒರಟಾಗಿಯೇ ಕೂಗಿದ 'ನನಗೆ ತಿನ್ನೋಕೇನೂ ಕೊಡೋದಿಲ್ವೋ?'

ಗಾಳಿಯಲ್ಲಿನ ನೀರವತೆ, ಹಿಂದಿನದನ್ನೆಲ್ಲ ಅವನು ಮೆಲಕು ಹಾಕುವಂತೆ ಮಾಡಿತು. ಐದು ವರ್ಷಗಳ ಹಿಂದೆ ಘಟನೆಗಳು ಬೇರೆಯದೇ ರೀತಿಯದಾಗಿರುತ್ತಿದ್ದವು. ಇವೀಗ ಕಾಣಿಸಿಕೊಳ್ಳುತ್ತಿರುವಂತೆ, ಸದಾ ಲೊಚಗುಟ್ಟುವ ಗಯ್ಯಾಳಿಯಾಗಿರದೆ, ಅಮ್ಮ ಮೌನವಾಗಿ ಶಾಂತಳಾಗಿರುತ್ತಿದ್ದಳು. ಅವಳ ಮಗಳೂ ಕೂಡಾ ವಿಧೇಯಳಾಗಿದ್ದು, ವಿನಮ್ರತೆ ಯಿಂದಿರುತ್ತಿದ್ದಳು. ಸಂತೋಷದ ಭರಾಟೆಯಲ್ಲೊಮ್ಮೊಮ್ಮೆ ''ನಿಮ್ಮ ಮಗಳು ಬೇಸಿಗೆಯ ಗೇರು ಹಣ್ಣಿನಂತೆ'' ಅಂತ ಅಮ್ಮನ ಮುಂದೆ ಹೊಗಳಿದ್ದೂ ಉಂಟು. ದಿಟವಾಗಿಯೂ ಅವನು ಆ ರೀತಿ ಹೇಳಿದ್ದನೇ? ಮನದ ಅಸಮಾಧಾನ ಉಕ್ಕೇರಿ ಅವನು ಇವೀಗ ಕಿರುಚಿದ ''ಮಾಲತಿ ಹೇಳಿದ್ದು ಕೇಳಿಸಲಿಲ್ಲವೇನೇ? ನಿನ್ನನ್ನೇ ನಾನು ಕೂಗಿದ್ದು!''

ಕತ್ತಲನ್ನು ಭೇದಿಸಿಕೊಂಡು, ಗುಡಿಸಿಲಿನೊಳಗಿಂದ, ಕಟುವಾದ ಬೈಗಳು ಕೇಳಿಬಂದವು. ''ಅನ್ನ ಕೇಳೋದಕ್ಕೆ ಧೈರ್ಯ ನೋಡು, ದಂಡ ಪಿಂಡಕ್ಕೆ! ದುಡ್ಡೊಂದು ಬಂದು ಕೈಗೆ ಕಾಸಿಡೋತನಕ, ಬೇಯಿಸಿ ಹಾಕೋದಕ್ಕಾಗೋದಿಲ್ಲ ಅಂತ ಅದೆಷ್ಟು ಸಲ ಬಡ್ಕೋ ಬೇಕೋ! ಅದರೊಟ್ಟಿಗೆ ಮಾಲತಿಯ ಧ್ವನಿಯೂ ತೇಲಿಬಂತು 'ನಿನ್ನೇನೂ ದುಡಿಯೋಕೆ ಹೊರಹೋಗಿಲ್ಲ, ಬೆಳಗಾಗ್ತಾ ಇದ್ದ ಹಾಗೇನೇ ತಿನ್ನೋಕೆ ಕೇಳ್ತೀಯ. ಅನ್ನ ಹಂಕದಾದ್ರೂ ಎಲ್ಲಿಂದ? ಬರೀ ಗಾಳಿಯಿಂದಲೇ?''

ತನ್ನೊಳಗೆ ತಾನು ಹೇಡಿಯಂತೆ ಮುದುರಿಕೊಂಡಂತವನಿಗನ್ನಿಸಿತು. ಜ್ವರ, ಅವರ ಮೇಲಿನ ತನ್ನ ಹಿಡಿತವನ್ನು ಹೆಚ್ಚು ಮಾಡಿತ್ತು. ಕಾಲುಗಳನ್ನು ಮುದುಡಿಕೊಂಡು, ಮೊಣಕಾಲುಗಳ ನಡುವೆ ತಲೆ ಹುದುಗಿಸಿ, ಅವನು ಸೆಟ್ಟಗೆ ಕುಳಿತುಕೊಂಡ.

ದಿಟ, ನಿನ್ನೆ ಅವನು, ತನ್ನ ರಿಕ್ಷಾವನ್ನು ಬಾಡಿಗೆಗೆ ತುಳಿಯಲು ಹೊರ ತೆಗೆದೇ ಇರಲಿಲ್ಲ. ಹಾಗಂತ ಅದೇನು ಮಹಾಪರಾಧವೇನಲ್ಲ. ಪ್ರತಿಯೊಬ್ಬರ ಜೀವನದಲ್ಲಿ ಎಂದಾದರೊಮ್ಮೊ ಯಾವೊಂದು ಕೆಲಸಮಾಡಲೂ ಮನಸ್ಸಾಗದ ಪರಿಸ್ಥಿತಿ ಬಂದೇ ಬರುತ್ತೆ. ಅಂತಹ ದಿನಗಳಂದು ದಿನನಿತ್ಯದ ಕೆಲಸಕಾರ್ಯಗಳನ್ನು ಪೂರ್ಣಗೊಳಿಸಿಕೊಳ್ಳಲು ಕೂಡಾ ಮನಸ್ಸಾಗೋದಿಲ್ಲ. ಜವಾಬ್ದಾರಿ ಅನ್ನೋದು ಅವನಿಗೂ ಇಲ್ಲದೇ ಏನಿಲ್ಲ. ಅವನೇನು ಆ ಇಬ್ಬರು ಹೆಂಗಸರುಗಳಾಡಿದ ಮಾತುಗಳನ್ನು ಕೇಳಿಕೊಂಡು, ಕೈಕಟ್ಟಿಕೊಂಡು ಕುಳಿತಿರೋ ಅಂಥ ಜಾಯಮಾನದವನೂ ಅಲ್ಲ. ಅವರಿಬ್ಬರಿಗೂ ಸರಿಯಾಗಿಯೇ ಮಾಡ್ತಾನೆ....

ಒಳಗೊಳಗೇ ಅಪ್ಪಾರಾವನಿಗೆ ಸ್ವಲ್ಪ ಬಿಸಿ ಬಿಸಿ ಎನಿಸಿತು. ಅವನ ಮುಖ ಬೆಚ್ಚಗಾದಂತೆನಿಸಿತು. ಹತ್ತುದಿನದಿಂದಲೂ ಬೋಳಿಸದೇ ಹಾಗೇ ಬಿಟ್ಟಿದ್ದ ಗಡ್ಡದಲ್ಲಿ ತುರಿಕೆಯುಂಟಾಯಿತು. ಒಳನುಗ್ಗಿ ಆ ಇಬ್ಬರೂ ಹೆಂಗಸರನ್ನು ಚೆನ್ನಾಗಿ ಥಳಿಸಬೇಕೆಂದು ಮನಸ್ಸಾಯಿತು. ಅದರಲ್ಲೂ ಮಾಲತಿಯನ್ನು ! ಅವನ ಈ ರೀತಿಯ ಅನಿಸಿಕೆಗೆ ಕಾರಣವಿತ್ತು. ತನಗೆ ಆರೋಗ್ಯ ಸರಿಯಿಲ್ಲವೆಂಬುದನ್ನು ಅವರಿಗೆ ತಿಳಿಯಪಡಿಸುವುದೇ ಅವನ ಉದ್ದೇಶವಾಗಿತ್ತು. ಆದರೂ ಮಾಲತಿಯ ಧೋರಣೆ ಅವನಿಗೆ ನೋವುಂಟುಮಾಡಿತ್ತು. ತಾನು ಬಾಯಿ ಬಿಡದಿರುವುದೇ ಕ್ಷೇಮ ಎಂದವನ ಮನಸ್ಸಿಗನ್ನಿಸಿತು.

ಹಿಂದೆ ಅದೊಂದು ಕಾಲವಿತ್ತು. ಅವನ ಯಾವೊಂದು ಕೆಲಸಗಳಿಗೂ, ಖಚಿತವಾದ ಕಾರಣಗಳೇನು ಇರುತ್ತಿರಲಿಲ್ಲ. ಆದರೀಗ ಅಕಾರಣವಾಗಿಯೇ, ಸಾವು; ಅದರ ಪ್ರಭಾವಕ್ಕೆ ಅವನು ಒಳಗಾಗಿಬ್ಬಾದರೂ ಹೇಗೆ? ಪ್ರಪಂಚಕ್ಕೆ ತನ್ನ ಹಿರಿಮೆಯ ಮಟ್ಟವನ್ನು ತೋರಿಸಲೋಸುಗ, ಈಗಿಂದೀಗಲೇ ತನ್ನ ರಿಕ್ಷಾವನ್ನು, ಸವಾರಿಗಳ ಸಮೇತ ಎಳೆದುಕೊಂಡು ಹೋಗಿ, ಮಹಾನದಿಯ ಜೀಬ್ರಾ ಪಾಯಿಂಟ್‌ನ ಪ್ರಪಾತಕ್ಕೆ ತಳ್ಳಿ ಬಂದುಬಿಡಬೇಕೆನಿಸಿತು. ಒಮ್ಮೆಗೇ ಅವನ ಮೈಯಲ್ಲಿ ಶಕ್ತಿ ಸಂಚಾರವಾದಂತಾಗಿ, ಆ ಇಬ್ಬರು ಹೆಂಗಸರುಗಳನ್ನು ಅವರವರ ಸ್ವಸ್ಥಾನಗಳಲ್ಲಿ ಹೇಗಿರಿಸಬೇಕೆಂಬುದನ್ನು ಆಲೋಚಿಸಿ ಮನದೊಳಗೇ ಬೀಗತೊಡಗಿದ.

ನದಿಯಂಚಿನಿಂದ ಮಂದವಾದ ಗಾಳಿ ಬೀಸುತ್ತಿದೆ. ಮಳೆ ನಿಲ್ಲುವ ಸೂಚನೆಗಳೇನಿಲ್ಲ. ಮುದ ನೀಡದ ಬೆಳಗಿನ ಬೆಳಕಿನಲ್ಲಿ ಅವನು ತನ್ನನ್ನು, ತನ್ನ ರಿಕ್ಷಾವನ್ನು ಬಲವಂತವಾಗಿ ಎಳೆದುಕೊಂಡು ಮಳೆಯಲ್ಲಿಯೇ ಹೊರನಡೆದ.

ಒಳಗೆ ಕುಳಿತೇ ಮಾಲತಿ ತನ್ನ ಗಂಡನ ಹೆಜ್ಜೆಯ ಸಪ್ಪಳ, ಕಡಿದಾದ ರಸ್ತೆ ದಾಟಿ, ದೊಡ್ಡ ಬೀದಿಯ ಕಡೆ ಸಾಗುವುದನ್ನು ಕೇಳಿಸಿಕೊಂಡಳು. ಮಳೆ ನವಿರಾಗಿ ಅವಳ ಸುತ್ತ

ಜೇಡರಬಲೆಯಂತೆ, ಜಾಲ ನಿರ್ಮಿಸಿದಂತೆ ಅವಳಿಗನ್ನಿಸಿತು. ತನ್ನ ಮನೆಯೆಂದು ಕರೆಯಿಸಿಕೊಳ್ಳಲ್ಪಡುವ ಗೂಡನ್ನೊಮ್ಮೆ ಅವಳು ಕಣ್ಣಾಡಿಸಿದಳು. ಒಂದೆರಡು ಕಡೆ ಛಾವಣಿಯ ಚಾಡೆ ಕಿತ್ತುಹೋಗಿ ಬಿರುಕುಬಿಟ್ಟಿತ್ತು. ಮಳೆ ನೀರು ಒಳಹರಿದು ಬರಲು ಅವಕಾಶವುಂಟಾಗಿತ್ತು. ಮಳೆಗಾಲದ ಮೊದಲೇ ಛಾವಣಿ ಬದಲಾಯಿಸಬೇಕಿತ್ತು. ಒಳಗಿನಿಂದ ಅಮ್ಮ ಗೊಣಗಿದ್ದು ಕೇಳಿಸಿತು. ಜೂನ್ ತಿಂಗಳ ಪ್ರಾರಂಭದಲ್ಲಿಯೇ ಸವೆದ ಚಾಪೆಯ ಭಾಗ ಕಿತ್ತೊಗೆದು, ಛಾವಣಿಯ ಹೊಸ ಚಾಪೆ ಹಣೆಯಲ್ಪಟ್ಟಿರುತ್ತಿತ್ತು. ಆದರೆ ಈ ವರ್ಷ, ಕಡಿಮೆ ಮೊತ್ತದ ಬಾಡಿಗೆ ಹಣ ಕಟ್ಟಲು ಕೂಡಾ ಹಣ ಒದಗಿರಲಿಲ್ಲ. ವಯಸ್ಸಾದ ಮುದುಕಿ, ತನ್ನ ಗೊಣಗಾಟ ಮುಂದುವರಿಸಿದ್ದಳು. 'ಬೆಳಗಾಗೆದ್ದು ಒಂದು ತೊಟ್ಟು ಚಹ ಕೂಡಾ ಬಾಯಿಗೆ ಬಿದ್ದಿಲ್ಲ, ನನಗೇನಾದರೂ ಪ್ರಾಯವಿದ್ದಿರುತ್ತಿದ್ದರೆ, ಖಂಡಿತ ನಮಗೆ ಈ ಪರಿಸ್ಥಿತಿ ಒದಗ್ತಾ ಇರಲಿಲ್ಲ''.

ದೇವರೇ! ಮಾಲತಿ ಚಿಂತಿಸಿದಳು. ಇದೇನು ಜೀವನ! ತನ್ನ ತಾಯಿಯ ಗೊಣಗಾಟಕ್ಕೆ ಕಿವಿಗೊಡದೆ ಅವಳು ತನ್ನ ಪುಟ್ಟ ಕನ್ನಡಿಯೊಳಗೆ ಇಣುಕಿ ನೋಡಿಕೊಂಡಳು. ಅಲ್ಲಿ ಕಂಡ ಬಿಂಬ ಸಹಜವಾಗಿಯೇ ಅವಳಿಗೆ ತೃಪ್ತಿ ತಂದಿತ್ತು. ತುಟಿಯಂಚಿನಲ್ಲಿ ಹೂನಗೆ ಮೂಡಿಸಿತು. ಅವಳಿಂದ ಮರೆಮಾಚಲ್ಪಟ್ಟಿರುವುದರ ಬಗ್ಗೆ ಅವಳಿಗೆ ಅರಿವಿತ್ತೇ? ಮುರುಕು ಕನ್ನಡಿಯ ಹೊರ ಅಂಚಿನಲ್ಲಿರುವುದನ್ನು ಕೇವಲ ಅವಳೊಬ್ಬಳಿಂದ ಮಾತ್ರ ಕಂಡುಕೊಳ್ಳಲು ಸಾಧ್ಯವಿತ್ತು. ಅವಳ ಕಣ್ಣುಗಳಲ್ಲಿ ಪ್ರಶ್ನೆ ಮೂಡಿತ್ತು. ತೆಳುವಾಗಿ ನಾಜೂಕಾಗಿದ್ದ ಹುಡುಗಿ, ಮದುವೆಯ ನಂತರ ದೃಢಕಾಯದ ಹಟಮಾರಿ ಹೆಂಗಸಾಗಿ ಪರಿವರ್ತಿತಗೊಂಡಿದ್ದಳು. ತನ್ನ ದೇಹದ ಬಗೆಗಿನ ಆಲೋಚನೆಗಳು ಅವಳಿಗೆ ಹಿತವನ್ನುಂಟುಮಾಡುತ್ತಿದ್ದವು. ತನ್ನ ಬಗೆಗಿನ ಚಿಂತನೆ ಅವಳಲ್ಲೀಗ ರಹಸ್ಯಮಯ ವಿಸ್ಮಯದ ಅಲೆ ಎಬ್ಬಿಸುತ್ತಿದ್ದವು.

ತನ್ನ ಮೃದು ಶರೀರದ ಮೇಲೆ ಹರಿದಾಡುವ ತನ್ನ ಗಂಡನ ಕೈಗಳಿಂದ, ಪ್ರತಿನಿತ್ಯ ತಾನು ಕೊಳ್ಳುವ ಅಕ್ಕಿಯನ್ನು ಮಾರುವ ದಿನಸಿ ವ್ಯಾಪಾರಿಯ, ಗೊಂದಲಗೊಳ್ಳುವ ಕಣ್ಣುಗಳಲ್ಲಿ ಶಿವರಾತ್ರಿ ಉತ್ಸವಗಳಲ್ಲಿ ಬಕ್ಕ ಬಾಜಾರಿಯ ಪೂಜಾರಿಯ ವರ್ತನೆಯಿಂದ, ಸಿನೇಮಾ ಮಂದಿರಗಳೆದುರು ಕಳ್ಳ ಸಂತೆ ಟೀಕೇಟು ಮಾರುವ ಪಡ್ಡೆ ಹುಡುಗರುಗಳಿಂದ, ಎಲ್ಲಕ್ಕೂ ಮಿಗಿಲಾಗಿ ಬಹುಶಃ ಇನ್ನೂ ಹೆಚ್ಚಾಗಿ ಸಾರಾಯಿ ವ್ಯಾಪಾರಿ, ಕಾಸಿ ಬಿಸ್ವಾಲನಿಂದ ಅವಳಿಗೆ ಈಗಾಗಲೇ ತನ್ನಲ್ಲಿರುವ ಹೆಚ್ಚುಗಾರಿಕೆಯ ಬಗ್ಗೆ ಚೆನ್ನಾಗಿಯೇ ಮನವಟ್ಟಾಗಿತ್ತು.

ಇತರರ ದೃಷ್ಟಿ ತನ್ನ ಮಾಟವಾದ ಭುಜಗಳಿಂದಿಳಿದು, ಅಗಲವಾಗುತ್ತ ಹೋಗುವ ಸೊಂಟದವರೆವಿಗೂ ಪರಿಯುವುದನ್ನು ಜ್ಞಾಪಿಸಿಕೊಂಡು ಅವಳು ತನ್ನಲ್ಲೇ ನಕ್ಕಳು. ಇದರಲ್ಲಿ ಸೋತವರ್ಯಾರು? ಅವರುಗಳೇ? ಅವಳೇ? ಎಂಬುದನ್ನು ಅವಳಿಂದ ನಿರ್ಣಯಿಸಲಾಗಲಿಲ್ಲ. ಸಿನೇಮಾ ನಾಯಕಿಯರ ತರಹ ಕನಸು ಕಾಣುವುದು ಅವಳಿಗೆ ಪ್ರಿಯವಾಗಿತ್ತು. ರಾತ್ರಿಯ ನೀರವ ಕತ್ತಲನ್ನು ಕನಸುಗಳು ಭೇದಿಸಬಲ್ಲವು, ಬಹುಶಃ ಕತ್ತಲಾವರಿಸಿದ ಪರಿಚಿತ ಮನೆಯನ್ನು ಕೂಡಾ!

ಮಾಲತಿ ತಾನು ತನ್ನ ಗಂಡನನ್ನು ಪ್ರೀತಿಸುತ್ತಿರುವುದಾಗಿಯೇ ನಂಬಿದ್ದಳು. ಆದರೆ ಅವಳಿಗ ತನ್ನ ತಾಯಿಯೂ ಕೂಡಾ ಪ್ರಿಯಳಾಗಿದ್ದಳು. ತಾಯಿ ಮಗಳ ನಡುವೆ ಅವ್ಯಕ್ತ ಬಾಂಧವ್ಯವೊಂದು ಬೆಸೆದುಕೊಂಡಿತ್ತು. ಸಮಯ ಒದಗಿ ಬಂದಾಗಲೆಲ್ಲ, ಅದು ಅಪ್ಪಾರಾವನನ್ನು ದೂರ ಕಿತ್ತೊಗೆಯಬಲ್ಲದಾಗಿತ್ತು. ಅವರುಗಳ ಬಗೆಗಿನ ಅಪ್ಪಾರಾವನ ನಿರ್ಲಕ್ಷ್ಯತನವೇ ಈ ಪ್ರೀತಿಯ ಪ್ರತಿಭಟನೆಗೆ ಕಾರಣ ಎಂಬುದರಲ್ಲಿ ಲೇಶಮಾತ್ರವೂ ಸಂದೇಹವಿರಲಿಲ್ಲ. ಇದೀಗ ಗಂಡನ ನಿರ್ಗಮನದಿಂದಾಗಿ ಬಿಡುಗಡೆ ಹೊಂದಿದಂತಾಗಿ, ಒಮ್ಮೆಗೇ ಅದೇನನ್ನೋ ನಿರ್ಧರಿಸಿಕೊಂಡವಳಂತೆ, ಮಾಲತಿ ತನ್ನ ಎಣ್ಣೆ ಸವರಿದ ದಟ್ಟಕೂದಲುಗಳ ಮೇಲೆ ಒಮ್ಮೆ ಹಾಗೆಯೇ ಕೈಯಾಡಿಸುತ್ತ, ಸೀರೆಯ ನೆರಿಗೆಗಳನ್ನು ಸರಿಪಡಿಸಿಕೊಂಡಳು. ಗುಡಿಸಿಲಿನಿಂದ ಹೊರಬೀಳುವ ಮುನ್ನ ಜೋರಾಗಿ ''ಅಮ್ಮ ಒಲೆ ಹೊತ್ತಿಸಿರು, ನಾನೀಗಲೇ ಪೇಟೆಗೆ ಹೋಗಿ ಬಂದು ಬಿಡ್ತೀನಿ'' ಎಂದು ಕೂಗಿ ಹೇಳುತ್ತ ಹೊರನಡೆದಳು.

ಇಬ್ಬರು ಸವಾರಿಗಳನ್ನು ಕೂಡಿಸಿಕೊಂಡು, ಮಳೆಯಲ್ಲಿಯೇ, ಪೇಟೆಬೀದಿಯಲ್ಲಿ ತನ್ನ ರಿಕ್ಷಾವನ್ನು ತುಳಿಯುತ್ತ ಮುಂದೆ ಸಾಗುತ್ತಿರುವಂತೆಯೇ, ಅಪ್ಪಾರಾವನಿಗೆ ತನ್ನ ಕಾಲುಗಳ ಕೀಲುನೋವು ಉಲ್ಬಣಗೊಂಡಂತೆನಿಸಿತು. ಅವನ ಮೊಣಕಾಲುಗಳು ಥರಥರನೆ ನಡುಗಲಾರಂಭಿಸಿದವು. ಅವನು ಮನಸ್ಸಿನೊಳಗೆ ಅಂದುಕೊಂಡ, ಬಡವನಾಗಿರೋದೇ ಮೊದಲ ತಪ್ಪು. ಅದರಲ್ಲೂ ಹಾಯಿಲೆ ಬೀಳೋದು ಇನ್ನೂ ದೊಡ್ಡ ತಪ್ಪು. ತನ್ನ ಪಕ್ಕ ಸರಿದು ಮುಂದೆ ಸಾಗುವ ಕಾರು ಹಾಗೂ ಬೈಕಿನ ಚಾಲಕರಿಗೆ ತಾನು ಸಮನಾಗಲು ಹೇಗೆ ತಾನೇ ಸಾಧ್ಯ?

ಹಿಂದಿನಿಂದ ಕರ್ಕಶ ಧ್ವನಿಗೈಯುತ್ತ ವೇಗವಾಗಿ, ಅಪ್ಪಾರಾವನ ಸೈಕಲ್ ರಿಕ್ಷಾವನ್ನು ಹಾದು ಕಾರೊಂದು ಮುಂದೆ ಸಾಗಿ ಹೊರಟುಹೋಯಿತು. ಸಾಗಿ ಮುಂದೆ ಹೋಗುವಾಗ ರಸ್ತೆಯಲ್ಲಿನ ಕೆಸರನ್ನೆಲ್ಲ ಅಪ್ಪಾರಾವನ ಮೈ ಮೇಲೆ ಪ್ರೋಕ್ಷಣೆ ಮಾಡಿತ್ತು. ಅಪ್ಪಾರಾವ್ ಕೋಪಗೊಂಡು ಚಾಲಕನ ಮುಖವನ್ನೇ ದುರುಗುಟ್ಟಿನೋಡಿದ. ಹುಚ್ಚನಂತೆ ಕೂಗಾಡಿ ದೊಡ್ಡ ರಂಪ ಮಾಡಬೇಕೆಂದೆನಿಸಿದರೂ, ಕಾರಿನ ಚಾಲಕನ ಗಡಸು ಮುಖ, ಅವನ ನಿರ್ಣಯವನ್ನು ಬದಲಾಯಿಸುವಂತೆ ಮಾಡಿತ್ತು. ಮನದ ಬೇಗುದಿಯನ್ನು ಬದಿಗೊತ್ತಿ, ಅವನು ರಿಕ್ಷಾವನ್ನು ವೇಗವಾಗಿ ತುಳಿಯಲಾರಂಭಿಸಿದ.

ಅಪ್ಪಾರಾವನ ಮುಖ, ತಲೆಗಳಿಂದ ಸಣ್ಣಸಣ್ಣ ನೀರಿನ ತೊರೆಗಳಂತೆ, ಬೆವರಿಳಿಯಲಾರಂಭಿಸಿತು. ರೇಲ್ವೆ ನಿಲ್ದಾಣದ ಬಳಿಯೇ ತನ್ನ ಸವಾರಿಗಳನ್ನಿಳಿಸಿ, ಜ್ವರದ ತಾಪದಿಂದ ನಡುಗುತ್ತ ರಸ್ತೆಯಂಚಿನ ಚಹದಂಗಡಿಯತ್ತ ಸಾಗಿದ. ಈಗಾಗಲೇ ಬೆಂಚಿನ ಮೇಲೆ ಕೆಲವರು ರಿಕ್ಷಾ ಚಾಲಕರು ಕುಳಿತಿದ್ದರು. ಒಲೆ ಪಕ್ಕದ ಬೆಂಚಿನ ಮೇಲೆ ಕುಸಿದು ಕುಳಿತು, ಬಿಸಿ ಬಿಸಿ ಹೊಗೆಯಾಡುವ ಚಹದೊಡನೆ ಅಪ್ಪಾರಾವ್ ಎರಡು ಆಸ್ಪಿರಿನ್ ಗುಳಿಗೆಗಳನ್ನು ನುಂಗಿದ.

ತನ್ನ ಜನರ ಒಡನಾಟ ಅವನಿಗೆ, ಹೊರ ಪ್ರಪಂಚ ಹಾಗೂ ಚಳಿಯಿಂದ ತನ್ನನ್ನು ತಾನೇ ತಪ್ಪಿಸಿಕೊಳ್ಳಲು, ಬೆಚ್ಚಗಿನ ಹೊದಿಕೆಯಂತೆ ತೋರಿತು. ಚಹದಂಗಡಿಯಲ್ಲಿ ಪರಕು ಚಡ್ಡಿ ತೊಟ್ಟು, ಅಸಡ್ಡೆಯ ನಗೆ ಬೀರುತ್ತ ಚಹ ತಂದಿತ್ತ ಹುಡುಗ ಅವನಿಗೀಗ ತೀರಾ ಆಪ್ತನಂತೆ ಕಂಡು ಬಂದ. ಅಪ್ಪಾರಾವನಿಗೆ ತನ್ನ ಸ್ಥಾನದ ಅರಿವಿನಿಂದಾಗಿ ಅವ್ಯಕ್ತ ಸ್ನೇಹದ ಕೊಂಡಿಯೊಂದು ತನ್ನನ್ನು ಬಂಧಿಸಿರುವಂತ ಭಾಸವಾಯಿತು. ಅವನು ಹಾಗೆಯೇ ಕಣ್ಣು ಮುಚ್ಚಿ ಕುಳಿತ.

ಅವನ ಆಲೋಚನೆಗಳು ಮಾಲತಿಯತ್ತ ತಿರುಗಿದವು. ಆಕೆ ಅವನವಳೆನ್ನುವುದು ದಿಟ. ತಾನು ಬಯಸಿದಂತೆ ಅವಳ ನಡೆಯುವಳೆಂಬುದೂ ಅವನಿಗೆ ತಿಳಿದಿತ್ತು. ಆದರೂ ಕೆಲವೊಮ್ಮೆ ಆಕೆ ತನಗೆ ಸೇರಿದವಳೇ ಅಲ್ಲ ಎಂದು ಅವನ ಮನಸ್ಸಿಗನ್ನಿಸುತ್ತಿತ್ತು. ಅವಳಿಗಿನ್ನೂ ಚಿಕ್ಕ ಪ್ರಾಯ, ಬಯಸಲ್ಪಡುವವಳು, ತನ್ನ ಯೌವನವೇ ಅವಳಿಗೆ ಅತಿ ಮುಖ್ಯ ಎಂಬುದು ಅವಳನ್ನು ನೋಡಿದರೆ ಸುಲಭವಾಗಿ ಅರ್ಥವಾಗುತ್ತಿತ್ತು.

ರಾತ್ರಿ ಇನ್ನೇನು ಕೈತೊಳೆದುಕೊಂಡು ಬಂದು ಅವನು ಊಟಕ್ಕೆ ಕುಳಿತುಕೊಳ್ಳಬೇಕು, ತಟ್ಟನೆ ಅವನಿಗೆ ಕಾಲಿನ ಗೆಜ್ಜೆಯ ಸಪ್ಪಳ ಕೇಳಿಸಿತು.

ಮಾಲತಿ, ಅಲಕ್ಷ್ಯದಿಂದ ಅನ್ನ, ಪಲ್ಯ ಬಡಿಸಿದ್ದ ತಟ್ಟೆಯನ್ನು ಅವನ ಮುಂದೆ ತಂದಿಟ್ಟಿದ್ದಳು. ಮಾಂಸದ ಸಾರಿನ ವಾಸನೆ ಎಲ್ಲೆಡೆ ಹರಡಿತ್ತು. ಇಂದಿನ ದಿನ ಬಹಳ ಚೆನ್ನಾಗಿಯೇ ಸಂಪಾದನೆಯಾದ ತೃಪ್ತಿ ಅವನಿಗಿತ್ತು. ಅಂದು ಅವನು ತಾನು ಗಳಿಸಿದ ಇಪ್ಪತ್ತು ರೂಪಾಯಿಗಳಲ್ಲಿ ರಾತ್ರಿಯ ಊಟಕ್ಕೆಂದು ಹನ್ನೆರಡು ರೂಪಾಯಿಗಳನ್ನು ಮಾಲತಿಯ ಕೈಗಿತ್ತಿದ್ದ. ನಂತರ ಅವನು ಸಿನೇಮಾಗೆಂದು ಹೊರ ತೆರಳಿದ. ಆಗ ಅವನಿಗೆ ಜೀವನ ಅತಿ ಸರಳ ಎಂದು ಮನಸ್ಸಿಗನ್ನಿಸಿತ್ತು.

ಅಪ್ಪಾರಾವನ ಕಣ್ಣೆಲ್ಲ ಅವಳ ಕಾಲಿನ ಗೆಜ್ಜೆಯ ಮೇಲೇ ಇದ್ದವು. ಕಾಲ್ಗೆಜ್ಜೆಗಳು ಉನ್ಮಾದಗೊಳಿಸುವ ಸದ್ದು ಮಾಡುತ್ತಿದ್ದವು. ಉತ್ಸಾಹದಿಂದ ಮಾಲತಿ ಅವನ ಪಕ್ಕಕ್ಕೆ ಬಂದು ಕುಳಿತಿದ್ದಳು. ಇತರ ದಿನಗಳಿಗಿಂತ ಇಂದವಳ ಹೆಚ್ಚೆ ಹಗುರಾಗಿರುವಂತೆ ಅವನಿಗನ್ನಿಸಿತು.

ಆ ಕಾರಣವಾಗಿಯೇ ಅವನು ಬೇರಿನ್ನೇನನ್ನೋ ಊಹಿಸಿಕೊಳ್ಳಲಾರಂಭಿಸಿದ್ದ. ಅವಳ ಮುಖದಲ್ಲಿ ಮಿಂಚುತ್ತಿರುವ ನಗುವಿನ ಹಿಂದೆ ಬೇರಿನ್ನೇನಾದರೂ ರಹಸ್ಯ ಅಡಗಿರಬಹುದೇ? ಅವನು ತನ್ನನ್ನು ತಾನೇ ಪ್ರಶ್ನಿಸಿಕೊಂಡ.

''ನಿನಗೆ ಇದೆಲ್ಲಿಂದ ಬಂತು''?

''ಏನು? ಇದಾ!'' ಮಾಲತಿ ತನ್ನ ಕಾಲುಗಳನ್ನು ಮುಂದೆ ಮಾಡಿದಳು.

''ಹೌದು!''

''ಓ! ಅದಾ, ಪೇಟೆಯಲ್ಲಿ ಫುಟ್ಪಾತ ಮೇಲಿನ ವ್ಯಾಪಾರಿಯೊಬ್ಬನಿಂದ ಕಡಿಮೆ ಬೆಲೆಗೆ ತೊಗೊಂಡೆ.''

''ಅದರ ಬೆಲೆ ಎಷ್ಟು?''

''ಹದಿನಾಲ್ಕು ರೂಪಾಯಿ, ಪಂಚಲೋಹದ್ದು!''

''ಬೆಳ್ಳಿ ತರಹ ಕಾಣುತ್ತೆ!''

ನೀನು ಆ ರೀತಿ ಹೇಳೇ ಹೇಳ್ತೀಯ ಅಂತ ನನಗೆ ಚೆನ್ನಾಗಿ ಗೊತ್ತಿತ್ತು. ಅದು ನಕಲಿ ಅಂತ ಯಾರಿಗೂ ತಿಳಿಯೋದೇ ಇಲ್ಲ. ಅಲ್ವಾ!

ಮಾಲತಿ ತನ್ನ ಬಲಗಾಲನ್ನು ಮುಂದೆ ಚಾಚಿದ್ದಳು. ಅಪ್ಪಾರಾವನಿಗೆ ಆ ಹೊಳೆಯುತ್ತಿರುವ ವಸ್ತುವನ್ನು ಮುಟ್ಟಿ ನೋಡಬೇಕೆಂದೆನಿಸಿದರೂ, ಆ ರೀತಿ ಮುಟ್ಟಿನೋಡಲಾಗಲಿಲ್ಲ. ಗೆಜ್ಜೆಯ ಮೇಲ್ಭಾಗದಲ್ಲಿ ಕಾಣುವ ಕಾಫಿ ಬಣ್ಣದ ಕಂದು ಕಾಲುಗಳನ್ನು ಕಾಣುವಾಗಲೂ, ಅವನ ಧಮನಿಗಳಲ್ಲಿ ಯಾವುದೋ ಒಂದು ರೀತಿಯ ಅನುಮಾನ ಹರಿಯುತ್ತಿರುವಂತೆ ಅನ್ನಿಸಿತು.

ಬಹುಶಃ ಅವು ಬೆಳ್ಳಿಯವೇ ಇರಬೇಕು! ಅವನು ತರ್ಕಿಸಿದ. ಒಡವೆಗಳ ಬಗ್ಗೆ ಅವನಿಗೇನು ಅಷ್ಟಾಗಿ ತಿಳಿಯುತ್ತಿರಲಿಲ್ಲ. ಅವುಗಳ ಬಗೆಗಿನ ಅವನ ತಿಳುವಳಿಕೆ ಕಡಿಮೆಯದೆಂದೇ ಹೇಳಬೇಕು. ಹಗುರವಾದ ಗೆಜ್ಜೆಗಳ ನಿನಾದ ಅವನ ತಲೆಯೊಳಗಿನ್ನೂ ಗುಂಯ್‌ಗುಡುತ್ತಲೇ ಇತ್ತು.

* * *

ಆ ರಾತ್ರಿಯ ನಂತರ ನಾಲ್ಕು ತಿಂಗಳುಗಳೇ ಕಳೆದುಹೋಗಿವೆ. ಕಾಲಿನ ಗೆಜ್ಜೆಯ ಘಟನೆ ಮರೆತೇ ಹೋದಂತಾಗಿದೆ. ಆ ಘಟನೆಗೆ ಕಾರಣವಾದ ವಸ್ತುವೂ ಇದೀಗ ತನ್ನ ಸಹಜ ಹೊಳಪನ್ನು ಬಹುಮಟ್ಟಿಗೆ ಕಳೆದುಕೊಂಡಿದೆ. ದಿನ ಕಳೆದಂತೆ, ಮಾಲತಿಯ ಕಣ್ಣುಗಳಲ್ಲಿನ ರಹಸ್ಯಮಯ ಹೊಳಪಿನ ಬಗೆಗೇ ಅವನು ಚಿಂತಿಸಲಾರಂಭಿಸಿದ. ಮಾಲತಿಗೆ ನೋವುಂಟು ಮಾಡುವ ಮಾತುಗಳನ್ನಾಡಬೇಕೆಂದೆನಿಸಿದರೂ ಆ ರೀತಿ ಮಾಡದೆ, ಅವಳನ್ನು ಇನ್ನೂ ಆತ್ಮೀಯವಾಗಿ ಪ್ರೀತಿಸಲಾರಂಭಿಸಿದ. ತಮ್ಮ ಕುಟುಂಬದ ವರಮಾನವನ್ನು ಹೆಚ್ಚಿಸಲು, ಆಗೊಮ್ಮೆ ಈಗೊಮ್ಮೆ ಅವಳು ಸಣ್ಣ ಪುಟ್ಟ ಕೆಲಸಗಳನ್ನು ಒಪ್ಪಿಕೊಳ್ಳುತಿದ್ದ ವಿಷಯ ಅವನಿಗೆ ತಿಳಿದಿತ್ತು. ಆದರೆ ಇದೀಗ ತಮ್ಮ ಜೀವನ ಸುಗಮವಾಗಿ ಸಾಗುತ್ತಿಲ್ಲ ಎಂಬ ವಿಷಯವನ್ನು ಮಾತ್ರ ತನ್ನ ಮನಸ್ಸಿನಿಂದ ಅಳಿಸಿಹಾಕಲು ಅವನಿಂದ ಸಾಧ್ಯವಾಗಲಿಲ್ಲ. ಹಣದ ಸಮಸ್ಯೆ ಅವರಿಬ್ಬರ ನಡುವೆ ದೊಡ್ಡ ಕಂದರವನ್ನೇ ನಿರ್ಮಿಸಿತ್ತು. ಅದೊಂದನ್ನು ಬಿಟ್ಟರೆ ಅವರ ಮನದೊಳಗೆ ಬೇರಿನ್ನ್ಯಾವುದಕ್ಕೂ ಆಸ್ಪದವೇ ಇರಲಿಲ್ಲ. ಇದರಿಂದಾಗಿಯೇ ಅವರಿಬ್ಬರ ಮನಸ್ಸು ಸಂಕುಚಿತಗೊಂಡು ಬಡತನದ ಬೇಗೆಯಲ್ಲಿ ಕ್ರಮೇಣ ಕಮರಿ ಹೋಗುತ್ತಿತ್ತು.

ಮುಖದೆದುರು ಗುಂಯ್ ಗುಡುವ ಸೊಳ್ಳೆಯೊಂದು ಅವನನ್ನು ಎಚ್ಚರಿಸಿತ್ತು. ಸ್ವಲ್ಪ ಹೊತ್ತು ಹಾಗೆ ಅವನು ಕಣ್ಣು ಹತ್ತಿದಂತಾಗಿ ಮಲಗೇಬಿಟ್ಟಿದ್ದ. ಮಧ್ಯಾಹ್ನ ಸರಿದಿತ್ತು,

ಇದೀಗ ಪುನಃ ತುಂತುರು ಮಳೆ ಪ್ರಾರಂಭವಾಗಿತ್ತು. ಇನ್ನೊಂದು ಬಿಸಿ ಚಹ ತರಿಸಿಕೊಂಡು, ಅದು ಗಂಟಲಲ್ಲಿಳಿದಾಗ ಹಾಯೆನಿಸಿದ ಅನುಭವ ಪಡೆದುಕೊಂಡ. ಸಣ್ಣನಿದ್ದೆ ಬಹುಮಟ್ಟಿಗೆ ಅವನಿಗೆ, ಜ್ವರದಿಂದ ಚೇತರಿಸಿಕೊಳ್ಳಲು ನೆರವಾಗಿತ್ತು. ಆದರಿನ್ನೂ ಮೈಕೈನೋವು ಹಾಗೇ ಉಳಿದಿತ್ತು.

ಈವರೆಗೂ ಗಳಿಸಿದ ಹಣವನ್ನು ಅವನು ಜೇಬಿನಿಂದ ಹೊರತೆಗೆದು ಎಣಿಸಿದ. ಎಲ್ಲಾ ಒಟ್ಟು ಸೇರಿ ನಾಲ್ಕು ರೂಪಾಯಿ ಇತ್ತು. ಅಂದಿನ ರಾತ್ರಿ ಊಟಕ್ಕೆ ಬೇಕಾಗುವ ಒಂದು ಕಿಲೋ ಅಕ್ಕಿ, ಸೌದೆ, ಉಪ್ಪಿಗೆ ಅದು ಏನೇನೂ ಸಾಲದು. ಆ ಇಬ್ಬರು ಹೆಂಗಸರುಗಳೇ ತನಗಿಂತ ವಾಸ್ತವಕ್ಕೆ ಬಲುಹತ್ತಿರವಾಗಿರುವಂತೆ ಅವನಿಗನ್ನಿಸಿತು. ಸತ್ಯದ ಅರಿವಾಗಿ ಅವನಿಗೆ ವ್ಯಥೆಯಾಯಿತು. ತಾನು ಮನೆಗೆ ಹಿಂದಿರುಗಿದಾಗ ತನಗೆ ಸಿಗಬಹುದಾದ ಸ್ವಾಗತದ ಕುರಿತಾದ ಆಲೋಚನೆಯೇ ಅವನನ್ನು ಕ್ಯಾಕರಿಸಿ ಜೋರಾಗಿ ಉಗುಳುವಂತೆ ಮಾಡಿತ್ತು.

ಬಾಡಿಗೆಗೆಂದು ಅಲೆಯದೆ, ನೇರವಾಗಿ ರಿಕ್ಷಾವನ್ನು ಮನೆಗೊಯ್ಯುವುದೇ ಮೇಲೆಂದು ಅಪ್ಪಾರಾವ್ ನಿರ್ಧರಿಸಿದ. ಅವನ ಕಣ್ಣುಗಳಿಗೆ ಜೊಂಪು ಹತ್ತಿದ್ದಾಗಲೇ ಈಸ್ಟ್‌ಕೋಸ್ಟ್ ಗಾಡಿ ಸ್ಟೇಷನ್ನಿಗೆ ಆಗಮಿಸಿ, ನಿರ್ಗಮಿಸಿತ್ತು. ಈಗ ಸ್ಟೇಷನ್ ಬಳಿ ಹೆಚ್ಚಾಗಿ ಜನಸಂದಣಿ ಇರಲಿಲ್ಲ.

ಸಿನೇಮಾ ಮಂದಿರದ ಬಳಿಯ ಅಂಗಡಿ ಸಾಲನ್ನು ಅವನು ತಲುಪುವಷ್ಟರಲ್ಲಾಗಲೇ ಬೀದಿದೀಪಗಳು ಹತ್ತಿಕೊಂಡುಬಿಟ್ಟಿದ್ದವು. ಜನಸಂದಣಿಯೂ ಅತಿ ಹೆಚ್ಚಾಗಿತ್ತು. ಇನ್ನೇನು ಸ್ವಲ್ಪ ಹೊತ್ತಿನಲ್ಲೇ ಸಿನೇಮಾದ ರಾತ್ರಿಶೋ ಆರಂಭವಾಗಿಬಿಡುತ್ತೆ. ದಣಿದ ಅವನ ದೇಹಕ್ಕೆ ಜನಸಂದಣಿಯನ್ನು ಹಾದುಹೋಗುವುದು ಬಹಳ ಕಷ್ಟಕರವಾದ ಕೆಲಸವಾಗಿತ್ತು. ರಸ್ತೆಯ ಅಂಚಿನಲ್ಲಿ ನಿಂತ ಪರಿಚಿತ ಹೂಮಾರುವವರ ಬಳಿ ಮಾಲತಿಗೆಂದು ಮಲ್ಲಿಗೆದಂಡೆ ಕೊಂಡುಕೊಳ್ಳಬೇಕೆಂದು ಮನಸ್ಸಿನಲ್ಲಿ ಅನ್ನಿಸಿದರೂ ಆ ರೀತಿ ಮಾಡದೆ ಅವನು ಕಾಫಿಗೆಂದು ಪಕ್ಕದಲ್ಲೇ ಇದ್ದ ಕೆಫೆಯೊಳಗೆ ನುಗ್ಗಿದ. ಮೊದಲೇ ಅಪಾರ ಜನಸಂದಣಿ ಅದರಲ್ಲೂ ಅವರುಗಳ ದುಂದುವೆಚ್ಚ ಅವನ ಮನಸ್ಸನ್ನು ಇನ್ನೂ ಖಿನ್ನಗೊಳಿಸಿತ್ತು. ತನ್ನ ಮನೆಯ ಪಕ್ಕದ ಕೆರೆಯನ್ನು ಸುತ್ತಿ ಬಳಸಿ, ಸಣ್ಣಪುಟ್ಟ ರಸ್ತೆಗಳನ್ನು ದಾಟಿಕೊಂಡು ಅವನು ರಸ್ತೆ ಸವೆಸಿದ. ಕತ್ತಲಲ್ಲಿ ಕೇವಲ ಧ್ವನಿಮಾತ್ರ ಕೇಳಿ ಬರುತ್ತಿತ್ತು. ನೇರವಾಗಿ ತನ್ನ ಬಳಿಗೇ ನುಗ್ಗಿದ ಬೀದಿನಾಯಿಯನ್ನು ತಡೆಯಲು ಹೋಗಿ ಅವನು ಆಯತಪ್ಪಿದ.

ರಸ್ತೆಯ ತುದಿಯಲ್ಲಿ ಹಬೀಬ್ ಐವತ್ತೈದು ಪೈಸೆಗೊಂದರಂತೆ, ಬೇಯಿಸಿದ ಮೊಟ್ಟೆಯನ್ನು ಮಾರುತ್ತ ನಿಂತುಕೊಂಡಿದ್ದ. ಅಪ್ಪಾರಾವ್ ಕಣ್ಣಿಗೆ ಬಿದ್ದೊಡನೆ ಅವನು ಕಿರುಚಿಕೊಂಡ, ''ಇವತ್ತು ಮೊಟ್ಟೆ ಬೇಡ್ವೇನಯ್ಯ ಅಪ್ಪಾರಾವ್ !''

ಹೊಟ್ಟೆ ಚುರುಗುಟ್ಟುತ್ತಿದ್ದರೂ, ಅಪ್ಪಾರಾವ್ ಬೇಡವೆಂದು ತಲೆ ಅಲ್ಲಾಡಿಸಿದ. ಅವನಿಗೀಗ ಮನೆಗೆ ಹಿಂತಿರುಗಿ ವಿಶ್ರಾಂತಿ ಪಡೆಯಬೇಕಿತ್ತು. ಜ್ವರ ಅವನನ್ನು ಇನ್ನಷ್ಟು

ಕಂಗಾಲುಗೊಳಿಸಿತ್ತು. ಅವನು ಕೂಲಿಕಾರರ ಗುಂಪೊಂದನ್ನು ದಾಟಿಕೊಂಡು ಮುನ್ನಡೆದ. ನಂತರ ಹೆಣ್ಣು ಮಕ್ಕಳು ಹಾಗೂ ಹೆಂಗಸರ ಗುಂಪು. ಆ ಗುಂಪಿನಲ್ಲಿ ಒಬ್ಬಾಕೆ ಸುಂದರಳಾಗಿರುವುದನ್ನು ಅವನು ಕಣ್ಣಂಚಿನಿಂದಲೇ ಗಮನಿಸಿದ. ನಂತರ ತರಕಾರಿ ಮಾರುತ್ತಿರುವವರ ಬಳಿ ಮರೆಯಲ್ಲಿ ಅದ್ಯಾರೋ ಒಬ್ಬಾಕೆ, ಗಂಡಸೊಬ್ಬನೊಡನೆ ಮೆಲು ಧ್ವನಿಯಲ್ಲಿ ಮಾತನಾಡುತ್ತ ನಿಂತಿರುವುದು ಅವನ ಗಮನಕ್ಕೆ ಬಂತು.

ಆಕೆ ಮಾಲತಿ! ಗಂಡಸು ಸಾರಾಯಿ ವ್ಯಾಪಾರಿ ಕಾಸಿ ಬಿಸ್ವಾಲ್!

ಅಪ್ಪಾರಾವನ ಹಳೆಯ ಅನುಮಾನಕ್ಕೆ ಕಡ್ಡಿ ಗೀರಿದಂತಾಗಿ, ಭುಗಿಲೆದ್ದಿತು. ಮುಡಿಯಲ್ಲಿ ಮಲ್ಲಿಗೆ ದಂಡೆ ಮುಡಿದು. ತುಟಿಗಳಲ್ಲಿ ಗೆಲುವಿನ ನಗೆ ಹೊತ್ತ ಅವಳನ್ನು ಅಂತೂ ಕೊನೆಗೆ ಅಪ್ಪಾರಾವ್ ಸೆರೆ ಹಿಡಿದಿದ್ದ.

ಅವಳಿಗೆದುರಾಗಿ ಹಾದುಹೋಗುವುದನ್ನು ತಪ್ಪಿಸಲು, ಬೇಕಂದೇ ಅವನು ರಸ್ತೆ ದಾಟಿದ. ಈಗಿಂದೀಗಲೇ ಅವಳನ್ನು ತರಾಟೆಗೆ ತೆಗೆದುಕೊಂಡರೆ, ಅದರಿಂದ ಏನೇನೂ ಪ್ರಯೋಜನವಿಲ್ಲ. ಜನನಿಬಿಡ ಪೇಟೆಬೀದಿಯಲ್ಲಿ ಅವಳ ಕೆನ್ನೆಗೊಂದು ರಾಚಿ, ಕಾಲಿಗೆ ಬಿದ್ದು ತಪ್ಪು ಒಪ್ಪಿಕೊಳ್ಳುವಂತೆ ಮಾಡೋದೇನೋ ಸರಿಯಾದದ್ದೇ. ಆದರೆ ಮೊದಲು ಅವನು ತನ್ನನ್ನು ತಾನೇ ಸಂಭಾಳಿಸಿಕೊಂಡ. ಮೊದಲು ರಿಕ್ಷಾವನ್ನು ಅದರ ಮಾಲೀಕರಿಗೆ ಒಪ್ಪಿಸಬೇಕು. ಆನಂತರ...

ಅಪ್ಪಾರಾವ್ ಮನೆಗೆ ಹಿಂದಿರುಗಿದಾಗ ಮಾಲತಿ ಮನೆಯಲ್ಲಿದ್ದು ಅವನ ಊಟ ಅಣಿಗೊಳಿಸಿದ್ದಳು. ಗಾಳಿಯಲ್ಲಿ ಮಲ್ಲಿಗೆಯ ಕಂಪು ನವಿರಾಗಿ ಪಸರಿಸಿತ್ತು.

ಅಲಕ್ಷಭಾವದಿಂದ ಅವಳ ಮುಖವನ್ನೇ ಅವನು ದಿಟ್ಟಿಸಿದ. ಮೆಲುನಡಿಗೆಯಲ್ಲಿ ನಡೆಯುತ್ತ ಬಂದ. ತನಗೆ ಬಡಿಸುತ್ತಿರುವ ಅವಳಲ್ಲಿ, ಹೊಸಭಾವ ಮೈದುಂಬಿರುವಂತೆ ಅವನಿಗೆ ಭಾಸವಾಯಿತು. ಅಥವಾ ಅದು ಅವನ ಕಲ್ಪನೆ ಮಾತ್ರವೇ! ನಿಷ್ಠೆಯಿಂದ ತನ್ನನ್ನು ಪ್ರೀತಿಸುವ ಮಾಲತಿ ತನಗೆ ದ್ರೋಹ ಬಗೆದದ್ದಾದರೂ ಹೇಗೆ? ಅವನು ಚಿಂತಿಸಿದ. ಇದನ್ನು ಕುರಿತು ಚಿಂತಿಸುತ್ತಲೇ ಅವಳ ಪಕ್ಕ ಮಲಗಿ ರಾತ್ರಿ ಇಡೀ ಉರುಳಾಡುತ್ತ ಅವಳ ನುಣುಪಾದ ಕೊರಳನ್ನು ಒಮ್ಮೆಗೇ ಹಿಚುಕಿಹಾಕಿಬಿಡಬೇಕೆಂದು ಹಲವಾರು ಸಲ ಅವನ ಮನಸ್ಸಿಗನ್ನಿಸಿತ್ತು. ತನ್ನ ಅನುಮಾನಗಳೆಲ್ಲ ದಿಟ ಅನ್ನೋದೂ ಅವನಿಗೆ ತಿಳಿದಿತ್ತು. ಪುನಃ ಅವನು ಮೌನಕ್ಕೆ ಶರಣಾಗಿ ಕಡಿಮೆ ಮಾತುಗಳನ್ನಾಡಲಾರಂಭಿಸಿದ. ತನ್ನ ಹೆಚ್ಚಿನ ಸಮಯವನ್ನೀಗ ಅವನು ಮನೆಯ ಹೊರಗೇ ಕಳೆಯಲಾರಂಭಿಸಿದ.

ಮಾಲತಿಯ ಕಾಲ್ಗೆಜ್ಜೆಗಳು ಅವಳು ಹೇಳಿದ್ದಂತೆ ಕಡಿಮೆ ಬೆಲೆಯದ್ದೇನಲ್ಲ. ಅವು ಬೆಳ್ಳಿಯವು ಅನ್ನೋದು ಒಂದು ದಿನ ಅವನಿಗೆ ಅರ್ಥವಾಗಿತ್ತು. ಬಹಳ ನೋವೂ ಆಗಿತ್ತು. ತನಗೆ ಇದರ ಬಗ್ಗೆ ಮೊದಲೇ ಅನುಮಾನವಿತ್ತೆಂದು ಅವನು ಒಪ್ಪಿಕೊಂಡ. ಮೇಲಿಂದ ಮೇಲೆ ಅವನು ತನ್ನನ್ನು ಸಾವಿನ ಬಗೆಗಿನ ಆಲೋಚನೆಗಳಲ್ಲೇ ತೊಡಗಿಸಿಕೊಳ್ಳಲಾರಂಭಿಸಿದ.

ಕೊಲೆ ಮಾಡುವುದೇನೋ ಸುಲಭ. ಅದರಿಂದ ಸುಲಭವಾಗಿ ತಪ್ಪಿಸಿಕೊಳ್ಳಬಹುದೆಂಬುದೂ ಅವನಿಗೆ ತಿಳಿದಿತ್ತು. ತಟ್ಟನೆ ಅವನಿಗೆ ಲಕ್ಷ್ಮಿ ಜ್ಞಾಪಕಕ್ಕೆ ಬಂದಳು. ಹದಿನೆಂಟರ ಆಕೆಯ ಬಟ್ಟೆಗೆ ಬೆಂಕಿ ಬಿದ್ದು ಸುಟ್ಟಗಾಯದಿಂದಾಗಿ ಅವಳು ಸಾವನ್ನಪ್ಪಿದ್ದಳು. ಲಕ್ಷ್ಮಿಯ ಮನೆ ಇದ್ದುದು ಹತ್ತುಮಾರು ದೂರದಲ್ಲಿ. ಆ ಮನೆಯಲ್ಲಿ ಲಕ್ಷ್ಮಿ ಹಾಗೂ ಅವಳ ಗಂಡ ಮಾತ್ರ ಇದ್ದದ್ದು. ಕತ್ತಲ ಕೋಣೆಯೊಳಗೆ ನಡೆದದ್ದಾದರೂ ಏನು ಎನ್ನುವುದನ್ನು ಬಲ್ಲವರ್ಯಾರು?

ಬಹಳ ವ್ಯಥೆಯಿಂದಲೇ ದಿನಗಳುರುಳುತ್ತಿದ್ದವು . ಅದರೊಟ್ಟಿಗೆ ಅಪ್ಪಾರಾವನ ಸಂಚು ಸಾಗಿತ್ತು .

ಈ ನಡುವೆ ಅಪ್ಪಾರಾವ್ ಅಪರೂಪಕ್ಕೊಮ್ಮೆ ಮಾತ್ರ ತನ್ನ ರಿಕ್ಷಾವನ್ನು ಹೊರತೆಗೆಯಲಾರಂಭಿಸಿದ್ದ. ಅವನೀಗ ತನ್ನ ಹೆಚ್ಚಿನ ಸಮಯವನ್ನು ಶಿವಾಲಯದ ಹಿಂದಿನ ಓಣಿಯಲ್ಲಿ ನಡೆವ ಇಸ್ಪೇಟಿನ ಜೂಜಿನಲ್ಲಿ ಕಳೆಯಲಾರಂಭಿಸಿದ್ದ. ಇದೀಗ ಅವನು ಆದಿ ಅಂತ್ಯವಿರದ ಗೆರೆಯಂತಾಗಿದ್ದ. ಯಾವುದಕ್ಕೂ ಸೇರಿದವನಾಗಿರಲಿಲ್ಲ. ಒಂದಲ್ಲ ಒಂದು ದಿನ ಕಾಲ ಮಾಲತಿಯನ್ನು ನಿಸ್ತೇಜಗೊಳಿಸುತ್ತದೆಂಬುದನ್ನು ಅವನು ನಂಬಿದ್ದ. ಬಹಳ ಆಶ್ಚರ್ಯಕರ ! ತನ್ನ ವ್ಯಥೆಯೊಳಗೆ, ತನ್ನ ಪ್ರಾಮುಖ್ಯತೆಯೂ ಅಡಗಿರುವುದು ಅವನಿಗೆ ಮನವರಿಕೆಯಾಗಿತ್ತು.

ಆಗಲೇ, ಒಮ್ಮಿಂದೊಮ್ಮೆಗೇ ಅವನಿಗೆ ಆ ಆಲೋಚನೆ ಹೊಳೆದದ್ದು !

ಮಳೆಗಾಲ ಮುಗಿದು ಇದೀಗ ಶರದ್ ಋತು ಪ್ರಾರಂಭವಾಗಿತ್ತು. ಗಾಳಿ ಹಿತವಾಗಿತ್ತು. ನದಿಯ ದಡದ ಮೇಲಿನ ಮರಳದಿಣ್ಣೆಯ ಬಳಿಯ ಹುಲ್ಲಿನ ಗಂಧ ಹೊತ್ತು ಗಾಳಿ ಬೀಸುತ್ತಿತ್ತು. ಆ ಗಾಳಿ ತನ್ನನ್ನು ಬಂಧಿಸದೆ ತನ್ನ ಸುತ್ತ ಜಾಲವೊಂದನ್ನು ನಿರ್ಮಿಸಿದಂತೆ ಅವನಿಗನ್ನಿಸಿತು. ಕೆಲವೊಮ್ಮೆ ಅವನ ಮನದ ಎಲ್ಲ ಪ್ರಶ್ನೆ ಗಾಳಿಯಲ್ಲಿ ತೂರಿಹೋಗಿ ದಂತೆನಿಸುತ್ತಿತ್ತು. ಇದೀಗ ಬೇರೆಯವರನ್ನು ವಿಚಾರಿಸುವುದೇನೂ ಅವನಿಗುಳಿದಿರಲಿಲ್ಲ.. ಸುಖದಿಂದ ತಾನು ಅತ್ಯಲ್ಪ ಅಂತರದಲ್ಲೇ ವಂಚಿತನಾಗಿದ್ದೇನೆಂದು ಅವನಿಗನ್ನಿಸಿತ್ತು. ಅದರ ಅರಿವು ಅವನಿಗಾಗಿತ್ತು.

ಎಲ್ಲವನ್ನೂ ಅವನು ಬಹಳ ಬೇಗನೆ ಮರೆತುಬಿಡುತ್ತಾನೆ. ತನ್ನ ಹಾಗೂ ಮಾಲತಿಯ ನಡುವೆ ಏರ್ಪಟ್ಟಿದ್ದ ಸಂದೇಹ, ಮಾಲತಿಯ ಹಾದರ, ಅವನು ಅವೆಲ್ಲವನ್ನು ತನ್ನ ಮನೆಯ ಹಿತ್ತಲಲ್ಲಿ ಹೂತುಬಿಡುತ್ತಾನೆ. ಅಷ್ಟೇ ಅಲ್ಲ, ಅವನು ಅದೆಲ್ಲವನ್ನು ತನ್ನ ಮನದಿಂದಲೂ ಮರೆಮಾಚಿಡುವ ಪ್ರಯತ್ನ ಪಡುತ್ತಾನೆ. ತನಗೊಂದು ಉತ್ತಮ ಜೀವನ ಕಾದಿದೆಯೆಂದು ತನಗೆ ತಾನೇ ಸಮಾಧಾನಪಡಿಸಿಕೊಳ್ಳುತ್ತಾನೆ. ತನಗಾಗಿ ತಾನೇ ರೂಪಿಸಿಕೊಂಡಿರುವ ಹೊಸ ಪಾತ್ರದಲ್ಲಿ ತನ್ನನ್ನು ನಮ್ರ ಹಾಗೂ ಆತ್ಮೀಯನನ್ನಾಗಿ ಕಲ್ಪಿಸಿಕೊಂಡು, ಮನದೊಳಗೇ ಹಿಗ್ಗುತ್ತಾನೆ.

ಮಾಲತಿಯೊಡನೆ ಒರಟಾಗಿ ನಡೆದುಕೊಂಡರೆ ಪ್ರಯೋಜನವಿಲ್ಲ ಎಂಬ ನಿರ್ಣಯಕ್ಕೆ

ಬಂದ ನಂತರವೂ ಅವಳು ತನ್ನನ್ನು ಈಗಲೂ ಪ್ರೀತಿಸುತ್ತಿದ್ದಾಳೆನ್ನುವುದು ಅವನಿಗ ಖಚಿತವಾಗಿ ತಿಳಿದಿತ್ತು . ಇದೀಗ ಅವನು ಅದೇನನ್ನು ಮಾಡಹೊರಟಿದ್ದನೋ, ಅದು ಎಲ್ಲರ ಹಿತದೃಷ್ಟಿಯಿಂದಲೇ ನಿರ್ಣಯಿಸಲ್ಪಟ್ಟಿತ್ತು.

ಆಗಸದಲ್ಲಿ ತಾರೆಗಳಿಂದ ಆವೃತವಾದ ನವೆಂಬರಿನ ಒಂದು ಸಂಜೆಯಲ್ಲಿ ಅಪ್ಪಾರಾವ್ ಏನೊಂದೂ ಮಾತನಾಡದೆ ಮನೆಗೆ ಹಿಂದಿರುಗಿದ್ದ. ಒಂದೆರಡು ಕ್ಷಣ ಮಾಲತಿಯನ್ನೇ ದಿಟ್ಟಿಸಿ 'ಬೇಗ ರೆಡಿಯಾಗು' ಎಂದಷ್ಟೆ ಹೇಳಿದ.

ಗಂಡನ ಮಾತು ಅವಳನ್ನು ಚಿಂತೆಗೀಡು ಮಾಡಿತ್ತು. ತನ್ನನ್ನು ಅವನು ಅದೆಲ್ಲಿಗೆ ಕರೆದೊಯ್ಯಬಯಸಿದ್ದಾನೋ, ಎಂದವಳು ಯೋಚಿಸಿದಳು. ಸಾಮಾನ್ಯವಾಗಿ ಅವನು ಈ ರೀತಿ ವರ್ತಿಸುವವನಲ್ಲ. ಅವನ ಕಣ್ಣುಗಳಲ್ಲಿ ಅವಳಿಗೆ ಬೇರೇನೋ ಗೋಚರಿಸುತ್ತದೆ. ಮೂಲೆಯಲ್ಲೇ ಕುಳಿತಿದ್ದ ತನ್ನಮ್ಮನ ಕಡೆಗೊಮ್ಮೆ ಅವಳು ಕಣ್ಣು ಹಾಯಿಸುತ್ತಾಳೆ.

ಚಾಪೆಯ ಮೇಲೆ ಕುಳಿತು ತನ್ನ ಮನೆ, ಕಂದನ ಬಗೆಗೆ ಕನಸು ಕಾಣುತ್ತಿದ್ದ ಮಾಲತಿ ಒಮ್ಮೆ ತಲೆ ಎತ್ತಿ ಅವನನ್ನು ದಿಟ್ಟಿಸುತ್ತಾಳೆ. ಮದುವೆಯಾಗಿ ವರ್ಷ ಐದು ಕಳೆದರೂ ಅವಳ ಮಡಿಲಿನ್ನೂ ಬರಿದಾಗಿಯೇ ಉಳಿದಿತ್ತು.

"ಈಗಲೇ ಹೊರಡಬೇಕೇ?" ಅವಳು ಅವನನ್ನು ಪ್ರಶ್ನಿಸುತ್ತಾಳೆ. "ಎಲ್ಲಿಗೆ?" ಅವಳ ಧ್ವನಿ ಕಂಪಿಸುತ್ತದೆ. ಅವಳಿಗೆ ಅವಳ ಕಂದನ ಅರಿವಾಗಿರಬಹುದೇ? ಚಿತ್ರ ಮಂದಿರಗಳಲ್ಲಿ ಇದೀಗ 'ಪ್ರೇಮನಗರ' ಕಿಕ್ಕಿರಿದ ಜನಸಂದಣಿಯೊಂದಿಗೆ ಪ್ರದರ್ಶಿತವಾಗುತ್ತಿದೆ. ಬಹುಶಃ ಅದಕ್ಕೇನಾದರೂ ಸಾದಾ ಬೆಲೆಯಲ್ಲಿ ಟಿಕೇಟು ಖರೀದಿಸಲು ತನ್ನ ಗಂಡನಿಗೆ ಸಾಧ್ಯವಾಗಿರಬಹುದೇ?

"ರಾತ್ರಿಯ ಆಟಕ್ಕಾ?" ಅವಳು ಪುನಃ ಪ್ರಶ್ನಿಸುತ್ತಾಳೆ.

"ಪ್ರಶ್ನೆ ಬೇಡ."

"ಮತ್ತೆಲ್ಲಿಗೆ?"

"ಹೌದು ಸಿನಿಮಾಗೇನೇ!" ಬಹಳ ವಿಚಿತ್ರ ಸ್ವರದಲ್ಲಿ ಅವನು ಉತ್ತರಿಸುತ್ತಾನೆ. ನಂತರ ಅವಳಮ್ಮನನ್ನೊಮ್ಮೆ ದಿಟ್ಟಿಸಲು ಹಿಂದೆ ತಿರುಗುತ್ತಾನೆ. ವಯಸ್ಸಾದ ಮುದುಕಿಯ ಕಣ್ಣುಗಳು ಪ್ರಾಣಿಗಳ ಕಣ್ಣುಗಳಂತೆ ಹೊಳೆಯುವುದನ್ನು ಕಂಡು ಅವನಿಗೆ ದಿಗಿಲಾಗುತ್ತದೆ.

ಅಮ್ಮನ ಜೋಪಾಸನೆಯಲ್ಲೇ ಅವಳು ಶೃಂಗರಿಸಿಕೊಳ್ಳುವುದನ್ನು ಅವನು ಗಮನಿಸುತ್ತಾನೆ. ಹಸಿರು ಬಣ್ಣ ಅವಳಿಗೆ ತುಂಬಾ ಚೆನ್ನಾಗಿಯೇ ಒಪ್ಪುತ್ತದೆ. ಕಿರಿಬೆರಳಂಚಿನಿಂದ ಕಣ್ಣಿಗೆ ಕಾಡಿಗೆ ತೀಡಿಕೊಳ್ಳುವುದನ್ನು, ರತ್ನದಂತೆ ಹೊಳೆವ ಅಗ್ಗದ ಮೂಗುತಿಯ ತಿರುಪನ್ನು ಸರಿಪಡಿಸಿಕೊಳ್ಳುವುದನ್ನು ಅವನು ಗಮನಿಸುತ್ತಾನೆ.

ನಂತರ ತನ್ನೊಳಗೇ ಅವಳು ಮುದುಡಿಕೊಳ್ಳುತ್ತಿರುವುದನ್ನೂ ಅವನು ಗಮನಿಸುತ್ತಾನೆ.

ಪ್ಲಾಸ್ಟಿಕ್‌ನ ಕಮಾನಿನಿಂದ ಆವೃತವಾದ ಅವನ ರಿಕ್ಷಾ ವರಾಂಡದೆದುರಿಗೇ

ನಿಲ್ಲಿಸಲ್ಪಟ್ಟಿದೆ. ಗಾಡಿಯ ಬ್ರೇಕಿಗೆ ಸಿಕ್ಕಿಸಿದ್ದ ರಬ್ಬರ್ ಬ್ಯಾಂಡನ್ನು ತೆಗೆದು ಚಾಲಕನ ಸೀಟಿಗೆ ಹಾರಿಕುಳಿತುಕೊಂಡು ಅವಳನ್ನು ಹತ್ತಿ ಕುಳಿತುಕೊಳ್ಳುವಂತೆ ಸನ್ನೆ ಮಾಡುತ್ತಾನೆ. ನಂತರ ನಿಧಾನವಾಗಿ ರಿಕ್ಷಾ ತುಳಿಯುತ್ತ ಪೇಟೆಯ ಬೀದಿಯ ಕಡೆ ಸಾಗುತ್ತಾನೆ.

ಅವಳು ಮೇಲುದನಿಯಲ್ಲಿ ಪಿಸುಗುಟ್ಟಿದ್ದು ಅವನಿಗೆ ಕೇಳಿಸುತ್ತದೆ. ''ನಾವು ಎಲ್ಲಿಗೆ ಹೋಗ್ತಿದೇವೆ, ಹೇಳಿ!'' ಅವನು ತನಗದು ಕೇಳಿಸಲೇ ಇಲ್ಲವೆನ್ನುವಂತೆ ಸುಮ್ಮನಿದ್ದು ಬಿಡುತ್ತಾನೆ. ಅವನ ಯೋಚನೆಗಳು ನೆಡಲ್ಪಟ್ಟು ಮುಂದಿನ ಹಾದಿಯನ್ನೇ ದಿಟ್ಟಿಸುತ್ತಾನೆ. ಕತ್ತಲಲ್ಲೇ ಅವನು ಕೆಲವೊಬ್ಬರನ್ನು ಗುರುತಿಸುತ್ತಾನೆ. ಅವರನ್ನೆಲ್ಲ ದಾಟಿಕೊಂಡು ಮುಂದೆಸಾಗಿ ಅವನು ಪುನಃ ಮತ್ತೊಂದು ರಸ್ತೆಯಲ್ಲಿ ತಿರುಗಿಕೊಳ್ಳುತ್ತಾನೆ. ಆ ರಸ್ತೆಯಲ್ಲೇ ಅನತಿದೂರ ಮುಂದೆ ಸಾಗಿ, ಪುಟ್ಟ ಮನೆಯೊಂದರ ಮುಂದೆ ಅವನು ತನ್ನ ಗಾಡಿಯನ್ನು ನಿಲ್ಲಿಸುತ್ತಾನೆ.

ಕತ್ತಲು ಭೂಮಿ ಆಕಾಶವನ್ನು ಏಕಮಾಡಿದಂತಿದೆ. ನೆತ್ತಿಯ ಮೇಲಿನ ನಕ್ಷತ್ರಪುಂಜ ನಡೆಯಲಿರುವ ಬಲಿಗೆ ಸಾಕ್ಷಿಯಾಗಿ ಹೊಳೆಯುತ್ತಿದೆ. ಮನೆಯೊಳಗಿಂದ ಮಂದ ಬೆಳಕು ಕಾಣಿಸುತ್ತಿದೆ.

ಅವನು ಕತ್ತಲಲ್ಲೇ ಮುಂದ ಸಾಗಿಹೋಗಿ ಮನೆಯ ಬಾಗಿಲನ್ನು ಬಡಿಯುವುದನ್ನು ಮಾಲತಿ ಗಮನಿಸುತ್ತಾಳೆ. ಒಮ್ಮೆಗೇ ಬಾಗಿಲು ತೆರೆದುಕೊಂಡು ''ಅಪ್ಪಾರಾವ್ ನೀನಾ''? ಎಂಬ ಗಡಸು ಧ್ವನಿ ತೇಲಿ ಬರುತ್ತದೆ. ತನ್ನ ಗಂಡ ಒಳಹೊಕ್ಕೊಡನೆ ಪುನಃ ಬಾಗಿಲು ಮುಚ್ಚಿಕೊಂಡ ಸದ್ದು ಅವಳಿಗೆ ಕೇಳಿಸುತ್ತದೆ.

ಕೆಲವು ನಿಮಿಷಗಳ ನಂತರ ಪುನಃ ಬಾಗಿಲು ತೆರೆದುಕೊಂಡು, ಅವಳ ಗಂಡ ಹೊರ ಬರುತ್ತಾನೆ. ಅವ್ಯಕ್ತ ಭೀತಿಯೊಂದು ತನ್ನನ್ನಾವರಿಸಿದಂತೆ ಅವಳಿಗನ್ನಿಸುತ್ತದೆ. ಸರಸರನೆ ಅವನು ರಿಕ್ಷಾದ ತನಕ ನಡೆದುಬಂದು ಅವಳಿಗೆ ಕೆಳಗಿಳಿಯಲು ನೆರವಾಗಲು ತನ್ನ ಕೈ ಮುಂದೆ ಚಾಚುತ್ತಾನೆ. ಬೆನ್ನುಹುರಿಯಿಂದ ಛಳಕೊಂದು ಎದ್ದು ಭಯದಿಂದ ಅವಳ ಎದೆ ಡವಡವ ಹೊಡೆದುಕೊಳ್ಳಲಾರಂಬಿಸುತ್ತದೆ.

''ಬಾ – !''

ಅವನ ಧ್ವನಿಯಲ್ಲಿನ ಒರಟುತನ ಅವಳನ್ನು ಇನ್ನೂ ರಿಕ್ಷಾಗೇ ಅಂಟಿ ಕುಳಿತುಕೊಳ್ಳುವಂತೆ ಮಾಡುತ್ತದೆ. ಅವನ ಧ್ವನಿಯಲ್ಲಿನ ಅಧಿಕಾರ ಅವಳನ್ನು ಇನ್ನೂ ಅಧೀರಗೊಳಿಸುತ್ತದೆ.

''ತರಲೆ ಮಾಡಬೇಡ, ಬಾ ನನ್ನ ಜೊತೆ!''

''ಆದರ!'' ದೈನ್ಯಳಾಗಿ ಅವಳು ಬೇಡಿಕೊಳ್ಳುತ್ತಾಳೆ. ವಿಚಿತ್ರವಾಗಿ ಅವಳ ಧ್ವನಿ ಕಂಪಿಸಲಾರಂಭಿಸುತ್ತದೆ.'' ನನ್ನನ್ನು ಅಲ್ಲಿಗ್ಯಾಕೆ ಕರೆದುಕೊಂಡು ಹೋಗ್ತಾ ಇದೀಯ ?''

ಇಲ್ಲಿಯತನಕ ಮೆಲುಧ್ವನಿಯಲ್ಲಿ ಮಾತನಾಡುತ್ತಿದ್ದ ಅವನು, ಒಮ್ಮೆಗೇ ಸ್ಫೋಟಗೊಂಡವನಂತೆ ಕಿರುಚಿಕೊಳ್ಳುತ್ತಾನೆ. 'ನಿರ್ಲಜ್ಜ ಹೆಣ್ಣೇ ನನಗೆದುರಾಡಬೇಡ. ಆ ನನ್ಮಗ ಬನ್ಸೀಲಾಲನ ಜೊತೆ ಮಲಗೋವಾಗ ಏನನ್ನಿಸುತ್ತೆ? ನಾನೇನು ಕುರುಡ ಅಂತ ಅಂದುಕೊಂಡಿದ್ದೆಯಾ ಹೇಗೆ?'

ಮಾಲತಿಗೆ ತನ್ನ ಶರೀರದೊಳಗಿನ ಶಕ್ತಿಯೆಲ್ಲ ಒಮ್ಮೆಗೇ ಬತ್ತಿಹೋದಂತೆನಿಸುತ್ತದೆ. ಮುಂದೆ ಕಾದಿರಬಹುದಾದುದನ್ನು ನೆನೆದೇ ಅವಳು ನಿಸ್ತೇಜಳಾಗುತ್ತಾಳೆ.

''ಅಯ್ಯೋ ದೇವರೇ!'' ಅವಳು ಉದ್ಗರಿಸುತ್ತಾಳೆ. ಗಂಟಲಿನೊಳಗಿನಿಂದ ಸತ್ತ ಧ್ವನಿ ಕೇಳಿಸೋದಿಲ್ಲ. ''ಬಾ ಹೆಣ್ಣೇ! ಆತ ನಿನಗಾಗಿ ಇಡೀ ರಾತ್ರಿ ಕಾದು ಕುಳಿತಿರೋ ದಕ್ಕಾಗೋದಿಲ್ಲ''.

ಎಂದು ಅವಳನ್ನು ದರದರನೆ ಮನೆಯ ತನಕ ಎಳೆದೊಯ್ಯುತ್ತಾನೆ. ಕೊನೆಗೂ ಅವಳನ್ನು ಬಲವಂತವಾಗಿ ಒಳತಳ್ಳಿ ಬಾಗಿಲು ಮುಚ್ಚುತ್ತಾನೆ. ನಂತರ ದಿಟ್ಟಹೆಜ್ಜೆ ಹಾಕುತ್ತ ರಿಕ್ಷಾದವರೆಗೂ ನಡೆದು ಬರುತ್ತಾನೆ. ಬಾಗಿಲು ಮುಚ್ಚಿಕೊಂಡು ಅಗುಳಿ ಹಾಕಿದ ಸದ್ದು ಕೇಳಿಬರುತ್ತದೆ.

ಶರದ್ ಋತುವಿನ ಮಂಜು ನವಿರಾಗಿ ನಗರಪ್ರದೇಶದ ಮೇಲೆಲ್ಲ ಹರಡಿದೆ. ಅದರ ಮೃದುಹೊದಿಕೆ ಮನೆ, ಮರಗಳ ಆಕಾರವನ್ನೇ ಮಂಕುಗೊಳಿಸಿತ್ತು. ಅಪ್ಪಾರಾವ್ ಬೀಡಿ ಸೇದಲಾರಂಭಿಸುತ್ತಾನೆ. ಐದು ನಿಮಿಷಗಳ ಮೊದಲಷ್ಟೇ ಅವನು ಪಡೆದಿದ್ದ ಮೂವತ್ತು ರೂಪಾಯಿಗಳ ಮೇಲೆ ಮತ್ತೊಮ್ಮೆ ಕೈ ಸವರಿ ಹಣ ಇರುವುದನ್ನು ಖಾತರಿಪಡಿಸಿಕೊಳ್ಳುತ್ತಾನೆ. ಪೂರ್ವ ನಿರ್ಧಾರಿತ ಯೋಜನೆಯ ಪ್ರಕಾರ ಇದನ್ನು ಪ್ರಾರಂಭ ಅನ್ನೋದು ಅವನಿಗೂ ತಿಳಿದಿದೆ. ಅವನು ಅಂದುಕೊಂಡಂತೆ ನಾವು ಸುಖದಿಂದ ಅತ್ಯಲ್ಪ ಅಂತರದಿಂದ ದೂರವಾಗಿರುತ್ತೇವೆ. ಸುಖ ಬಯಸೋದಾದ್ರೆ ಬಹುಶಃ ನಾವು ಎಡದ ಹಾದಿ ಹಿಡಿಲೇಬೇಕು. ನಾಳೆಗಾಗಿ ಅವನಲ್ಲೀಗ ಬೇಕಾದಷ್ಟಿದೆ. ತನಗೆ ಹಾಗೂ ಇತರರಿಗೂ ಸಾಕಾಗುವಷ್ಟು. ಬಹುಶಃ ನಾಳೆ ಅವನ ಪಾಲಿಗೆ ಉತ್ತಮವಾಗಿರುತ್ತೆ.

ಒಮ್ಮೆಗೇ ಅವನಿಗೆ ಒಂದೆ ತಾಸು ಕಂಡಿದ್ದ ಸುಂದರ ಮುಖ ನವೆಂಬರಿನ ತಿಳಿಗಾಳಿಯಲ್ಲಿ ಸುಮಧುರ ಸಂಗೀತದಂತೆ ತೇಲಿಬರುತ್ತದೆ.

~ ~ ~

ಪ್ರಗತಿಶೀಲ ಚಿಂತನೆಯ ಜಹೀದಾ ಜೈದಿ

೧೯೩೮ರಲ್ಲಿ ಜನಿಸಿದ ಜಹೀದಾ ಜೈದಿಯುವರು ೧೯೫೫ರಿಂದ, ಅಲಿಗಢದ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದು, ಇತ್ತೀಚೆಗಷ್ಟೆ ಸೇವೆಯಿಂದ ನಿವೃತ್ತಿಹೊಂದಿದ್ದಾರೆ. ಇವರು ಇದೇ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ್ದು, ಲಂಡನ್ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದರು. ಅಲಿಗಢದ ಆಧುನೀಕರಣ ಮತ್ತು ಪ್ರಗತಿಶೀಲ ಚಿಂತನದ ಸುದೀರ್ಘ ಇತಿಹಾಸ ಜಹೀದಾ ಜೈದಿಯುವರ ಮೇಲೆ ತೀವ್ರ ಪ್ರಭಾವ ಬೀರಿದವು. ಜಹೀದಾ ಜೈದಿಯುವರು ಎಂಟು ವರ್ಷದ ಬಾಲಕಿಯಾಗಿದ್ದಾಗ ಇವರ ತಂದೆ ಮುಸ್ತಾನ್ ಜೈದಿ ನಿಧನರಾದರು. ಇವರ ತಂದೆಯುವರು ಜಹೀದಾ ಜೈದಿಯುವರಿಗೆ ಗಾಲಿಬ್, ಇಕ್ಬಾಲ್ ಮತ್ತು ಪರ್ಶಿಯಾದ ಕವಿ ಹಫೀಜ್ ಮುಂತಾದವರ ಕಥೆ ಮತ್ತು ಕವನಗಳನ್ನು ಹೇಳುತ್ತಿದ್ದರು. ಇವರ ಮೇಲೆ ಪ್ರಭಾವ ಬೀರಿದ ಮತ್ತೊಬ್ಬ ವ್ಯಕ್ತಿಯೆಂದರೆ ಇವರ ಅಕ್ಕ ಸಬೀರ ಜಹೀದಾ ಜೈದಿ.

ಜಹೀದಾ ಜೈದಿಯುವರ ಚಿಂತನಾಶಕ್ತಿ ಹಂತ ಹಂತವಾಗಿ ವಿಕಾಸಹೊಂದುತ್ತಾ ಹೋಯಿತು. ಅವರೇ ಹೇಳುವಂತೆ ಈ ವಿಕಾಸದ ಹಂತಗಳೆಂದರೆ - ಧಾರ್ಮಿಕ, ಮಾರ್ಕ್ಸ್‌ವಾದ, ಮಾನವತಾವಾದ ಹಾಗೂ ಅಸ್ತಿತ್ವವಾದಗಳಾಗಿವೆ. ಜೀವನದ ವೈಯಕ್ತಿಕ ಅನುಭವ ಹಾಗೂ ಅವಲೋಕನದಿಂದ ಅವರು ಅಸ್ತಿತ್ವದ ಸ್ಥಿರತೆಯನ್ನು ಸ್ವಾಭಾವಿಕವಾದ ಅಭಿವೃದ್ಧಿ ಎಂದು ಪರಿಗಣಿಸಿದರು. ಅವರೇ ಹೇಳುವಂತೆ ಅಸ್ತಿತ್ವವಾದವೆಂದರೆ, ಪಶ್ಚಿಮದ ದೇಶಗಳಲ್ಲಿ ಯಾಂತ್ರೀಕರಣಗೊಂಡ ಸಮಾಜದಲ್ಲಿ ಪರಾಧೀನಗೊಂಡ ಜನರ ಅನಿವಾರ್ಯ ಫಲವೆಂದೂ, ಪೂರ್ವದೇಶಗಳಲ್ಲಿ ಧಾರ್ಮಿಕ ಮತ್ತು ರಾಜಕೀಯ ನಿರಂಕುಶಾಧಿಕಾರದಿಂದ ಭಗ್ನಗೊಂಡ ಮಾನವೀಯ ಮೌಲ್ಯಗಳ ಸಂಬಂಧವೆಂದೂ ಅವರು ತಿಳಿಸಿದ್ದಾರೆ.

ಜಹೀದಾ ಜೈದಿಯುವರು ೧೯೪೮ರಲ್ಲಿ ಕಾವ್ಯರಚನೆಯ ಕಾರ್ಯವನ್ನು ಆರಂಭಿಸಿದರು. ಅವರ ಮೊದಲ ಕವನ ಸಂಕಲನ ''ಜು - ಇ ನಗ್ಮ'' (ಸಂಗೀತ ವಾಹಿನಿ) ೧೯೬೨ರಲ್ಲಿ ಪ್ರಕಟವಾಯಿತು. ಅವರ ಆರಂಭಿಕ ಅನೇಕ ಕವನಗಳು ಪಾಕಿಸ್ತಾನದ ಸಾಹಿತ್ಯ ಪುರವಣಿ

ಹಾಗೂ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡವು. ೧೯೭೨ರಲ್ಲಿ ಪ್ರಕಟಗೊಂಡ "ಆತಿಷ್ - ಇ - ಸಯಾಲ್" (ಅಗ್ನಿ ಪ್ರವಾಹ) ಕವನ ಸಂಕಲನವು ೧೯೬೫ ಮತ್ತು ೧೯೭೧ರ ಮಧ್ಯೆ ರಚಿಸಿದ ಕವನಗಳನ್ನು ಒಳಗೊಂಡಿದೆ. ಇವರು "ಯರ್ಮ" ಎಂಬ ಪದ್ಯನಾಟಕವನ್ನೂ ಸಹಾ ರಚಿಸಿದ್ದಾರೆ. ಜಹೀದಾ ಜೈದಿಯವರ ಕಾವ್ಯಜೀವನದ ಮೇಲೆ ಪ್ರಭಾವ ಬೀರಿದ ಚಿಂತಕರೆಂದರೆ ಫ್ರೆಡರಿಕ್ ನಿಟ್ಚೆ, ಕಾರ್ಲ್ ಯೂಂಗ್, ಜೀನ್, ಪಾಲ್, ಸಾರ್ತ್ರೆ ಮತ್ತು ಫ್ರಾಂಜ್ ಕಾಫ್ಕ. ಸಮಕಾಲೀನ ಸಾಹಿತ್ಯದಂತೆ ಇವರ ಕವನಗಳೂ ಸಹ ಏಕಾಂತತೆ, ಮಾನಸಿಕ ಜುಗುಪ್ಸೆ ಮತ್ತು ಅಸ್ತಿತ್ವವಾದ ಮುಂತಾದ ವಿಷಯಗಳನ್ನು ಒಳಗೊಂಡಿವೆ.

~ ~ ~

ಬಾಂಧವ್ಯ

ಉರ್ದು : ಜಹೀದಾ ಜೈದಿ
ಅನು : ಎಸ್. ಗೋವಿಂದಪ್ಪ

ಅಂದೊಮ್ಮೆ ಥಳಥಳಿಸುವ ಎಲ್ಲಾ ಸುಂದರ ನಸುನೋಟ ನನ್ನದಾಗಿತ್ತು,
ಇಂದು ಮಬ್ಬು ಕವಿದಿದೆ.
ಅಂದೊಮ್ಮೆ ಅಧರಗಳ ಅಲರುನುಡಿಗಳು ನನ್ನದಾಗಿದ್ದವು,
ಇಂದು ಹೃದಯವಿಹೀನ ಮುದ್ರಿಕೆಗಳಾಗಿವೆ.
ನನ್ನದಾಗಿವೆ ಇಂದು ನಿನ್ನ ಚಿತ್ತದ ಚಿರಸ್ಮರಣ ಸುಳಿಗಳು,
ನಿನ್ನ ಕೊನೆಯಿಲ್ಲದ ಜೀವನ ಅಧ್ಯಾಯಗಳು,
ನಿನ್ನ ನೋವಿನ ಕಹಿದಿನಗಳು,
ನಿನ್ನ ಉಗ್ರವಾದ ಮನೋವಿಕಾರಗಳು.

ನಿನ್ನ ಮುಳ್ಳುಗಳ ಹಾದಿ ನನ್ನ ಪಾದಗಳ ಗಾಯಗೊಳಿಸಿವೆ,
ನಿನ್ನ ಹೃದಯದ ತೀವ್ರ ವೇದನೆ ನನ್ನ ಪಕ್ಕೆಲುಬುಗಳನ್ನು ತಟ್ಟಿ ಘಾಸಿಗೊಳಿಸಿದೆ,
ನೀನು ಅನುಭವಿಸುತ್ತಿರುವ ಪ್ರತಿ ನೋವು
ನಾನು ಅನುಭವಿಸುತ್ತಿರುವುದೇ.

ನೀ ನುಂಗಿರುವ ಪಾಷಾಣಗಳು,
ತುಕ್ಕುಹಿಡಿದು ಶಿಥಿಲಗೊಳಿಸಿವೆ ನನ್ನ ನೆತ್ತರನ್ನು. .
ಉಕ್ಕಿನ ಬಟ್ಟೆ ತೊಟ್ಟ ಗೋಡೆಗಳು ಸಿಡಿದು ಸೀಳಿಕೊಂಡಿವೆ.
ಮರುಭೂಮಿಯಲ್ಲಿ ಮಾಯವಾದ
ನಿನ್ನ ಪ್ರತಿ ಕೂಗು,
ನಿನ್ನ ಕೂಗೇ.

ಒಮ್ಮೆ ನಿನ್ನ ಹಿಡಿದಿಟ್ಟಿದ್ದ ಉತ್ಕಟ ಲಾಲಸೆ
ಇಂದು ಕೇವಲ ಕನಸು,
ಬಾಂಧವ್ಯದ ಬಾಧೆ
ಗಾಯಗಳ ಪಯಣ
ಎರಡು ಆತ್ಮಗಳ ಸಮ್ಮಿಳನ.

~ ~ ~

ಹೊಸ ಕೋನಗಳು

ಉರ್ದು : ಜಹೀದಾ ಜೈದಿ
ಅನು : ಎಸ್. ಗೋವಿಂದಪ್ಪ

ರಾತ್ರಿ ಏಕೆ ಶೀತಲಾತ್ಮ ಹೊಂದಿದೆಯೋ?
ಮೌನದ ಭಾಷೆ ಯಾವುದೋ?
ಗಾಳಿಯ ಬಣ್ಣ ಯಾವುದೋ?
ಯಾವ ಧ್ವನ್ಯಸೂಚಿಯೋ ಈ ಅಮಿತ ವೈಶಾಲ್ಯ?
ಯಾವ ಭಾವಗಳನ್ನು ಬಿಂಬಿಸುತ್ತದೆಯೋ ನೆರೆತ ಆಕಾಶದ ಛಾಯೆ?
ಆತ್ಮದ ನೆಲೆ ಯಾವುದೋ?
ಭಾವೋದ್ರೇಕದ ನೋಟದಲ್ಲಿಯೋ?
ಅಥವಾ ತುಟಿಗಳ ಚಲನೆಯಲ್ಲಿಯೋ?
ಎಲ್ಲಿ ಭೇದಿಸುವುದು ಇವುಗಳ ರಹಸ್ಯ?
ಜ್ಞಾನದ ಆಸ್ಥಾನದಲ್ಲಿಯೋ
ಅಥವಾ ದುಃಖದ ಜೀವನದಲ್ಲಿಯೋ?

~ ~ ~

ಬಿಟ್ಟುಬಿಡು ಮಕ್ಕಳಾಟ

ಉರ್ದು : ಜಹೀದಾ ಜೈದಿ
ಅನು : ಪ್ರೊ। ನಲ್ಲೂರು ಪ್ರಸಾದ್

ಸಾಕಿನ್ನು ಬಿಟ್ಟುಬಿಡು ಈ ಮಕ್ಕಳಾಟ
ನಿರ್ನಾಮವಾದ ನಗರಗಳ ಬೂದಿಯೊಳಗಿಂದ
ಕಟ್ಟುವುದು ಹೇಗೆ ಕೋಟೆಗಳನ್ನು?

ಕಟ್ಟಿದ್ದೆ ನೀನೊಮ್ಮೆ ಆಟದ ಮನೆಗಳನ್ನು
ಆದರದು ಮರಳಿನಲಿ,
ನಗುವ ಸಾಗರದ ಮರಳಿನಲಿ.
ಪುಟಾಣಿ ಮಣ್ಣುಮನೆಗಳು
(ಶರಧಿ ಕೊಟ್ಟಿತ್ತು ನಿನ್ನ ಪಾದದಡಿ ತನ್ನೆಲ್ಲ ನಿಧಿ)
ರವಿಯ ಅನೇಕ ತುಂಟ ಕಿರಣಗಳನು
ಅದಕೆ ಕಾವಲಿರಿಸಿದ್ದೆ,
ಆಗಸಕೆ ಬಾಗಿ ಮಾತುಗಳ ಪಿಸುಗುಟ್ಟಿದ್ದೆ.

ಆಗಲೂ ಸ್ವೇಚ್ಛಾಚಾರಿ ಸಾಗರ
ನುಂಗಿ ನೊಣೆಯಿತು
ನಿನ್ನೆಲ್ಲ ಮರಳಮನೆಗಳನ್ನು.
ಆದರೀಗ ಅದು ಮರಳು
ನೀಲಿ ಸಾಗರದ ನಗುವ ಮರಳು.........

ಎಲ್ಲಿವರೆಗೆ, ನಿರ್ನಾಮಗೊಂಡ
ನಗರಗಳ ಬೂದಿಯೊಳಗಿಂದ
ಕೋಟೆ ಕೊತ್ತಲುಗಳ ಕಟ್ಟುವಾಟ?
ಸಾಕು
ಇನ್ನಾದರೂ ಬಿಟ್ಟುಬಿಡು ಈ ಮಕ್ಕಳಾಟ.

~ ~ ~

ಜನಸಾಮಾನ್ಯರ ಭರವಸೆ : ಸಾಹಿರ್ ಲೂಧಿಯಾನ್ವಿ

ಏಜಾಸುದ್ದೀನ್ 'ಫೈರೋಜ್'

೧೯೨೧ರಲ್ಲಿ ಲೂಧಿಯಾನದ ಒಬ್ಬ ಜಾಗೀರುದಾರನ ಮನೆಯಲ್ಲಿ ಕವಿ 'ಸಾಹಿರ'ನು ಜನಿಸಿದನು. ಇವನ ತಂದೆಗೆ, ಇವನ ತಾಯಿಯನ್ನು ಬಿಟ್ಟು ಬೇರೆ ಪತ್ನಿಯರು ಸಹ ಇದ್ದರು. ಮನೆಯಲ್ಲಿ ಸಾಹಿರನೊಬ್ಬನೇ ಮಗುವಾಗಿದ್ದರಿಂದ. ಇವನ ಪೋಷಣೆ ಪ್ರೀತಿ ಮತ್ತು ವಾತ್ಸಲ್ಯದಿಂದಲೇ ಸಾಗಿತ್ತು. ಇನ್ನೂ ಸಾಹಿರನು ಮಗುವಾಗಿದ್ದಾಗಲೇ ಸುಖ ಮತ್ತು ವೈಭವದ ಬಾಗಿಲು ಇವನಿಗಾಗಿ ಮುಚ್ಚಿಹೋಯಿತು. ಏಕೆಂದರೆ, ಸಾಹಿರನ ತಾಯಿ ಗಂಡನ ಲಂಪಟತೆಯಿಂದ ಬೇಸತ್ತು ವಿವಾಹ ವಿಚ್ಛೇದನ ಮತ್ತು ಜಾಗೀರಿನಿಂದ ದೂರವಾಗ ಬೇಕಾಯಿತು. ಈ ಘಟನೆಯ ಜೊತೆಯಲ್ಲಿಯೇ ನಿರಾಶೆ ಮತ್ತು ಕಷ್ಟ ಕಾರ್ಪಣ್ಯಗಳು ಮುತ್ತಿಕೊಂಡವು.

ಸಾಹಿರ್ ಮತ್ತು ಅವನ ತಾಯಿಗೆ ಸುಖ, ಸಂತೋಷ ದೂರವಾದರೂ ಅವುಗಳ ಅಭಿಲಾಷೆ ಮಾತ್ರ ದೂರವಾಗಲಿಲ್ಲ. ಇದರ ಪರಿಣಾಮವಾಗಿ ತಾಯಿಯ ಒಡವೆಗಳನ್ನು ಮಾರಬೇಕಾಯಿತು. ಇಷ್ಟಾದರೂ ಸ್ವಾಭಿಮಾನ ಉಳಿದಿತ್ತು. ಮೊಕದ್ದಮೆಯಲ್ಲಿ ಸೋತು ಅವಮಾನಿತನಾದ ತಂದೆ ಸಾಹಿರನನ್ನು ಕೊಲ್ಲಿಸುವ, ಇಲ್ಲದೆ ಹೋದರೆ ತಾಯಿಯಿಂದ ಅವನನ್ನು ಬೇರ್ಪಡಿಸುವ ಬೆದರಿಕೆ ಹಾಕಿದನು. ಮಮತೆಯ ಭಂಡಾರವಾದ ತಾಯಿ ತನ್ನ ಕಳೆದುಳಿದ ನಿಧಿಯಾಗಿದ್ದ ಸಾಹಿರನನ್ನು ಕಳೆದುಕೊಳ್ಳಲು ಒಪ್ಪಲಿಲ್ಲ, ಅವನನ್ನು ನೋಡಿಕೊಳ್ಳಲು ರಕ್ಷಕನನ್ನು ನೇಮಿಸಿದಳು. ಅವನು ಒಂದು ಕ್ಷಣವೂ ಸಾಹಿರನನ್ನು ಒಬ್ಬಂಟಿಗನನ್ನಾಗಿ ಬಿಡುತ್ತಿರಲಿಲ್ಲ. ಈ ರೀತಿಯ ಸಂಕುಚಿತ ವಾತಾವರಣದಿಂದ ಅವನ ಮನಸ್ಸಿನಲ್ಲಿ ಒಂದು ತರಹದ ಜುಗುಪ್ಸೆ ಮತ್ತು ವಿಚಿತ್ರ ಭಯ ಹುಟ್ಟಿತು. ಇದರ ಪರಿಣಾಮವಾಗಿ ಅವನಲ್ಲಿ ವಿಭಿನ್ನ ಮಾನಸಿಕ ಪ್ರಶ್ನೆಗಳೆದ್ದವು.

ಸಾಹಿರನು ಬಹಳ ಕಷ್ಟದಿಂದ ಕಾಲೇಜಿಗೆ ಸೇರಿದ. ಆಸೆ ಆಕಾಂಕ್ಷೆಗಳ ಹಗಲುಗನಸನ್ನು

ಅವನು ಕಂಡಿದ್ದ. ಆರ್ಥಿಕ ಪರಿಸ್ಥಿತಿ ಮತ್ತು ನಿಸ್ಸಹಾಯಕತೆಯ ಕಾರಣ ಅದು ಹಗಲುಗನಸಾಗಿಯೇ ಉಳಿಯಿತು. ಅವನು ಪ್ರೇಮಿಸಿದ್ದನು. ಸಮಾಜದ ಬಂಧನಗಳು ಅವನ ಪ್ರೇಮವನ್ನು ನೋಡಿ ಸಹಿಸಲಿಲ್ಲ. ಬಲಾತ್ಕಾರವಾಗಿ ಅವನನ್ನು ಕಾಲೇಜಿನಿಂದ ತೆಗೆದುಹಾಕಿದರು. ಇದಾದನಂತರ ತನ್ನ ಇಚ್ಛೆ ಮತ್ತು ಸ್ವಭಾವದ ವಿರುದ್ಧವಾಗಿ ತನ್ನ ಹಾಗೂ ತಾಯಿಯ ಹೊಟ್ಟೆ ಹೊರೆಯಲು ಚಿಕ್ಕ ಚಿಕ್ಕ ನೌಕರಿಗಳನ್ನು ಮಾಡಬೇಕಾಯಿತು. ಬಿಕ್ಕಿ ಬಿಕ್ಕಿ ಅಳುತ್ತಾ ದಾರುಣದುಃಖವನ್ನು ಸಹಿಸುತ್ತಾ ಸಾಹಿರ್ ಎಷ್ಟೋ ದಿನಗಳನ್ನು ನೂಕಬೇಕಾಯಿತು. ಹೆಜ್ಜೆ ಹೆಜ್ಜೆಗೂ ದುಃಖ ಮತ್ತು ಸುಖದ ಮಧ್ಯೆ ಸಂಘರ್ಷ ನಡೆಯುತ್ತಿತ್ತು. ಈ ಸಂಘರ್ಷದ ಪರಿಣಾಮ ಭಾವುಕತೆ ಮತ್ತು ಬುದ್ಧಿಯ ಮೇಲೂ ಬಿತ್ತು. ಈ ಸಂಘರ್ಷವೇ ಕಾಲೇಜಿನ ಸಾಮಾನ್ಯ ವಿದ್ಯಾರ್ಥಿಯಾದ ಸಾಹಿರನನ್ನು ಕವಿ ಸಾಹಿರನನ್ನಾಗಿ ರೂಪಿಸಿತು. ಇದರ ಪರಿಣಾಮವಾಗಿ ಅವನ ಅಂತರಂಗದ ಕಹಿಯೆಲ್ಲಾ ಸಾಹಿತ್ಯದ ಸಿಹಿಯಾಗಿ ಹರಿಯಿತು.

"ತಲ್‌ಖಿಯಾಂ" ಕವಿ ಸಾಹಿರನ ಮೊದಲನೆಯ ಕೃತಿ. ಈ ಕವಿತಾ ಸಂಗ್ರಹ ೧೯೪೫ರಲ್ಲಿ ಹೊರಬಂದಿತು. ಇದು ಪ್ರಕಟವಾದಾಗ ಸಾಹಿರನಿಗೆ ೨೩ ವರ್ಷ ವಯಸ್ಸಾಗಿತ್ತು. ಇಷ್ಟು ಚಿಕ್ಕ ವಯಸ್ಸಿನಲ್ಲಿ ಅವನ ಮನಸ್ಸಿನ ಮೇಲಾದ ಕಹಿ ಅನುಭವಗಳ ಕವಿತಾ ರೂಪವನ್ನು ಈ ಸಂಗ್ರಹದಲ್ಲಿ ನೋಡಬಹುದು. ಇದರ ಪ್ರಕಟನೆಯೊಂದಿಗೆ ಸಾಹಿರನು ಉರ್ದು ಸಾಹಿತ್ಯ ಜಗತ್ತಿನಲ್ಲಿ ಅಪಾರವಾದ ಕೀರ್ತಿ ಗಳಿಸಿದನು.

೧೯೪೮ರಲ್ಲಿ ಸಾಹಿರನು ಲಾಹೋರಿನಲ್ಲಿ ನಿರಾಶ್ರಿತನಾಗಿದ್ದನು. ಆಗ ಲಾಹೋರಿನಲ್ಲಿ ವಾಕ್-ಸ್ವಾತಂತ್ರ್ಯವಾಗಲೀ ಅಥವಾ ಲೇಖನ ಸ್ವಾತಂತ್ರ್ಯವಾಗಲೀ ಇರಲಿಲ್ಲ. ಸಾಹಿರನಿಗೆ ಇಲ್ಲಿ ಸುಖ ದೊರಕಲಿಲ್ಲ. ಇಲ್ಲಿ ಅವನ ಸ್ನೇಹಿತರು ಯಾರೂ ಇರಲಿಲ್ಲ. ಹೆಸರುಗಳಿಂದ ಮಾತ್ರ ಹಿಂದೂ ಮತ್ತು ಸಿಖ್ಖರಾಗಿದ್ದ, ತನ್ನ ಜೊತೆಯಲ್ಲಿ ಜೀವನ ಕಳೆದ ಸ್ನೇಹಿತರನ್ನು ಬಿಟ್ಟಿರುವುದು ಸಾಹಿರನಿಗೆ ದುಃಖದ ಸಂಗತಿಯಾಗಿತ್ತು. ಇದೇ ಕಾಲದಲ್ಲಿ ಇವನು ಲಾಹೋರಿನಿಂದ ಹೊರಡುತ್ತಿದ್ದ "ಸವೇರಾ" ಎಂಬ ಪತ್ರಿಕೆಯ ಸಂಪಾದಕನಾಗಿದ್ದನು. ರಾಜ್ಯದ ವಿರುದ್ಧವಾಗಿ ಲೇಖನಗಳು ಬರೆಯುತ್ತಾನೆಂಬ ಆಪಾದನೆಯ ಮೇಲೆ ಪಾಕಿಸ್ತಾನ ಸರ್ಕಾರ ದಸ್ತಗಿರಿಯ ವಾರಂಟ್ ಜಾರಿಮಾಡಿತು. ಇದಾದ ನಂತರ ಸಾಹಿರ್ ದೆಹಲಿಗೆ ಬಂದನು. ಒಂದು ವರ್ಷದವರೆಗೆ ಅಲ್ಲಿದ್ದು ಬೊಂಬಾಯಿಗೆ ಬಂದು ಚಲನಚಿತ್ರ ಜಗತ್ತನ್ನು ಪ್ರವೇಶಿಸಿದನು.

ಕವಿಯಾಗಿ ಸಾಹಿರನು ಕಣ್ಣು ಬಿಟ್ಟಾಗ 'ಇಕ್ಬಾಲ್' ಮತ್ತು 'ಜೋಶ್'ರವರ ನಂತರ, ಉರ್ದು ಶಾಯರಿಯ (ಕಾವ್ಯದ) ಕ್ಷೇತ್ರದಲ್ಲಿ ಫಿರಾಖ್, ಫೈಜ್, ಮಜಾಜ್ ಮುಂತಾದ ಕವಿಗಳು ಅಗ್ರಗಣ್ಯರಾಗಿದ್ದರು. ಜನಸಾಮಾನ್ಯರು ಇವರ ಕವಿತಾವಾಣಿಯಿಂದ ಪರಿಚಿತರಾಗಿದ್ದರು. ಈ ಕಾಲದಲ್ಲಿ ಯಾವ ಹೊಸ ಕವಿಯೂ ತನ್ನ ಕಾಲದ ಸಿದ್ಧಹಸ್ತರಾದ ಸಮಕಾಲೀನರಿಂದ ಪ್ರಭಾವಿತನಾಗದೇ ಇರುತ್ತಿರಲಿಲ್ಲ. ಇವನ ಮೇಲೂ 'ಫೈಜ್' ಮತ್ತು 'ಮಜಾಜ್'ರವರ ಪ್ರಭಾವ ಬಿದ್ದಿತು. ಮೊದ ಮೊದಲು ಸಾಹಿರನ ಕವಿತೆ ಕೇವಲ 'ಫೈಜ್'ರವರ ಅನುಕರಣೆ ಎಂಬ ಭಾವನೆ ಜನರಲ್ಲಿ ಮೂಡಿತ್ತು. ಏಕೆಂದರೆ, ಇವನ ಕವಿತೆಯಲ್ಲಿ 'ಫೈಜ್'ರ ರೀತಿಯ ಸುಲಲಿತ ಮೃದು ಸ್ವರ, ಶಬ್ದಗಳ ಸುಂದರ ಜೋಡಣೆ ಮತ್ತು ನಾದಾತ್ಮಕ ತನ್ಮಯತೆಯ ವರ್ಣನೆ ಇತ್ತು. ಇಷ್ಟಿದ್ದರೂ ಸಂತ ಸಾಹಿರನ ಕವಿತೆಯಲ್ಲಿ ವ್ಯಕ್ತಿಗತ ಅನುಭವದ ಚಿತ್ರಗಳು ಎದ್ದು ಕಾಣುತ್ತಿದ್ದುವು. ಅವನ ಕವಿತೆಗಳಲ್ಲಿ ಶ್ರೀಮಂತ ವರ್ಗದ ಬಗ್ಗೆ ಜುಗುಪ್ಸೆ ಮತ್ತು ವಿದ್ರೋಹವನ್ನು ಕಾಣಬಹುದು. ಇದಕ್ಕೆ ಕಾರಣ ಅವನ ಪ್ರೇಯಸಿಯ ತಂದೆ ಎಂದರೆ ತಪ್ಪಾಗಲಾರದು. ಸಾಮಾಜದ ಕಟು ಅನುಭವದಿಂದಾದ ಈ ಪ್ರತಿಕ್ರಿಯೆಗೆ ದುಃಖದಲ್ಲಿ ಬೆಂದು ಹೊರಬಂದಿದ್ದ ಅವನ ಚೇತನ ದಾರಿ ತೋರಿಸಿತು. ಇದರ ಪರಿಣಾಮವಾಗಿ ಅವನ ಹೃದಯದಿಂದ ಭಾವನೆಗಳ ಚಿಲುಮೆ ಉಕ್ಕಿ ಬಂದಿತು. ಇದರಲ್ಲಿ ಫೈಜ್ ಮತ್ತು ಮಜಾಜ್‌ರವರ ಅನುಕರಣೆಗಿಂತಲೂ ಹೆಚ್ಚಾಗಿ ಕವಿಯ ವ್ಯಕ್ತಿಗತ ಅನುಭವಗಳ ಮುದ್ರೆ ಎದ್ದು ಕಾಣುತ್ತಿತ್ತು. ಇದರ ಅರಿವು ಸಾಹಿತ್ಯ ಜಗತ್ತಿಗೂ ಆಯಿತು.

ಪರಿಸ್ಥಿತಿಗಳ ಒತ್ತಡದಿಂದಲೇ ಸಾಹಿರನು ಈ ರೀತಿ ಬರೆಯಲು ಸಾಧ್ಯವಾಯಿತು.

''ಮೈ ಎನ್ ಅಜ್‌ದಾದ್ ಕಾ ಬೇಟಾ ಹೂಂ ಜಿನ್ ಹೋನೆ ಪೈಹಮ್ !
ಅಜ್‌ನಬೀ ಖೌಂಕೆ ಸಾಯೆ ಕೀ ಹಿಮಾಯತ್ ಕೀ ಹೈ,
ಗದರ್ ಕಿ ಸಾಅತೆ ನಾಪಾಕ್ ಸೆ ಲೇಕರ್ ಅಬ್‌ತಕ್ !
ಹರ್ ಕಡೇ ವಕ್ತ್ ಮೇ ಸರಕಾರ್ ಕೀ ಕಿಸಮತ್ ಕೀ ಹೈ!!''

(ಬ್ರಿಟಿಷರು ಗುಲಾಮಗಿರಿಯನ್ನು ನಮ್ಮ ಮೇಲೆ ಹೇರಿದ ಆ ಗಳಿಗೆಯಿಂದ ಹಿಡಿದು ಇಲ್ಲಿಯವರೆಗೆ, ಇಂತಹ ಪರಿಸ್ಥಿತಿ ಬಂದರೂ ಕೂಡ, ಸರಕಾರದ ಸೇವೆ ಮಾಡಿದ ಮತ್ತು ಆಗಂತುಕ ಜಾತಿಗೆ ನಿರಂತರವಾಗಿ ಬೆಂಬಲಕೊಟ್ಟ, ಆ ಹಿರಿಯ ಕುಲದಲ್ಲಿ ನಾನು ಜನಿಸಿದವನು).

ಈ ಉದ್ಧರಣದಲ್ಲಿಯೂ ಸಾಹಿರನ ಮಾನಸಿಕ ಪರಿಸ್ಥಿತಿಯ ಶಬ್ದಚಿತ್ರವನ್ನು ನೋಡಬಹುದು :

''ಕಿ ಜಿಂದಗೀ ತೆರೆ ಜುಲ್ಫೋಂಕೆ ನರ್ಮ್ ಛಾವೋಂ ಮೇ,
ಗುಜರ್‌ನೆ ಪಾಲೇತೊ ಶಾದಾಬ್ ಹೋ ಬೀ ಸಕ್‌ಲೇ ಥೀ
ಏ ತೀರ್‌ಗೀ ಜೊ ಮೇರಿ ಜೀಸ್ತ್‌ಕ ಮುಕದ್ಧರ್ ಹೈ,
ತೇರಿ ನಜರ್ ಕಿ ಶು ಆವೊ ಮೇ ಶೋಭ ಸಕತೀ ಥೀ''

(ನಿನ್ನ ಮುಂಗುರುಳಿನ ಮೃದು ನೆರಳಿನಲ್ಲಿ ಬದುಕುವ ಅವಕಾಶ ನನಗೆ ದೊರಕಿರುತ್ತಿದ್ದರೆ, ನನ್ನ ಜೀವನ ಸಂತೋಷದಿಂದ ಹಸಿರಾಗುವ ಸಾಧ್ಯತೆ ಇತ್ತು. ನನ್ನ ಭಾಗ್ಯ ದುಃಖದ ಕಗ್ಗತ್ತಲೆಯಿಂದ ತುಂಬಿದೆ. ಅದರ ಮೇಲೆ ನಿನ್ನ ಕಟಾಕ್ಷದ ರಶ್ಮಿಗಳು ಬಿದ್ದಿರುತ್ತಿದ್ದರೆ, ಅದರಿಂದ ದುಃಖದ ಕತ್ತಲೆಯನ್ನು ಮರೆಯಬಹುದಾಗಿತ್ತು).

ಅಗಾಧವಾದ ಅನುಭವದ ಮತ್ತು ವೀಕ್ಷಣಾಶಕ್ತಿಯ ಕಾರಣ, ಸಾಹಿರನಿಗೆ ತನ್ನ ಸಮಕಾಲೀನರಾದ ಬೇರೆ ಕವಿಗಳಿಗಿಂತ ಉಚ್ಛ ಸ್ಥಾನ ದೊರಕಿದೆ. ಕಲಾತ್ಮಕ ಶೃಂಗಾರವನ್ನು ಬಿಟ್ಟು ತನ್ನ ಕವಿತೆಯಲ್ಲಿ ಯಾವ ತರಹದ ಮಿಶ್ರಣವನ್ನೂ ತರದೆ ಯಥಾರ್ಥವನ್ನು ಚಿತ್ರಿಸುವ ಗುಣ ಸಾಹಿರನದು. ಇದರಲ್ಲಿ ಸಮಾಜದ ಬಗ್ಗೆ ಕಟು ವಿಮರ್ಶೆ ಮತ್ತು ಕವಿಯ ಭಗ್ನ ಹೃದಯದ ವಿರಹವನ್ನು ನೋಡಬಹುದು.

ವಾಸ್ತವಿಕವಾಗಿ ಸಾಹಿರ ರೊಮ್ಯಾಂಟಿಕ್ ಕವಿ. ಪ್ರೇಮದ ಅಸಫಲತೆಯಿಂದ ಅವನ ಹೃದಯ ಬೆಂದುಹೋಯಿತು. ಈ ನೋವು ಜೀವನದ ಬೇರೆ ಎಲ್ಲಾ ಚಿಂತೆಯನ್ನೂ ಮರೆಸಿತು. ಮಿಲನದ ಸವಿಗಳಿಗೆಯನ್ನು ನೆನೆದು ಸುಖಪಡುತ್ತಿದ್ದ ಕವಿ ವಿರಹದಲ್ಲಿ ಅದೇ ಸವಿಗಳಿಗೆ, ಅದೇ ಪ್ರೇಯಸಿಯ ಮುಖ ಮತ್ತು ಅದೇ ಸುಂದರ ಕಣ್ಣುಗಳನ್ನು ನೆನೆಯುತ್ತಾ ದುಃಖಪಡುತ್ತಿರುವನು. ಈಗ ನಿರಾಶೆಯ ಮಡಿಲೇ ಅವನಿಗೆ ಆಶ್ರಯವಾಗಿದೆ. ಇಷ್ಟಾದರೂ ಸಹ ಅವನ ನೊಂದ ಮನ ದುಃಖದಿಂದ ಭಾರವಾಗಿ ತನ್ನ ಪ್ರೇಯಸಿಯನ್ನು ಈ ರೀತಿ ಪ್ರಶ್ನಿಸುತ್ತದೆ;

''ಮೇರೆ ಖ್ವಾಬೋಂಕೆ ಝುರೋಕೋಂಕೊ ಸಜಾನೆವಾಲೀ,
ತೆರೆ ಖ್ವಾಬೋಂಮೆ ಕಹೀಂ ಮೇರಾ ಗುಜರ್ ಹೈಕಿ ನಹೀ!
ಪೂಛಕರ್ ಅಫನೀ ನಿಗಾಹೋಂಸೆ ಬತಾದೆ ಮುಝ್ ಕೋ
ಮೇರಿ ರಾತೋಂಕೆ ಮುಕದ್ಧರ್ ಯೇ ಸಹರ್ ಹೈ ಕಿ ನಹಿ !!''

(ನನ್ನ ಕನಸಿನ ಚಿಲುಮೆಗಳನ್ನು ಅಲಂಕರಿಸುವವಳೇ! ನನ್ನ ಭಾಗ್ಯದ ರಾತ್ರಿಯಲ್ಲಿ ಸುಪ್ರಭಾತವಿರುವುದೇ ಹೇಳು? ನಿನ್ನ ಕನಸಿನಲ್ಲಾದರೂ ನನ್ನ ಬಾಳ್ವಿಗೆ ಸ್ಥಾನವಿದೆಯೋ ಇಲ್ಲವೋ, ನಿನ್ನ ದೃಷ್ಟಿಯನ್ನು ಕೇಳಿ ತಿಳಿಸು.)

ಸಾಹಿರ್ ತನ್ನ ಜೀವಮಾನಪೂರ್ತಿ ತನ್ನ ಪ್ರೇಯಸಿಯನ್ನು ಇದೇ ರೀತಿ ಪ್ರಶ್ನಿಸುತ್ತಾನೆ. ಸರಿಯಾದ ಉತ್ತರ ಪಡೆಯದೆ ದುಃಖಪಡುತ್ತಾನೆ. ಅವನ ಹೃದಯ ಶೋಕದ ನೆಲೆಯಾಗಿದೆ. ನಾರಿಯ ಪ್ರೇಮದಿಂದ ಪ್ರಾರಂಭವಾದ ಅವನ ಕವಿತೆ ಅಲ್ಲಿಯವರೆಗೆ ಮಾತ್ರ ಸೀಮಿತವಾಗದೆ ಇನ್ನೂ ಮುಂದೆ ಹೋಗಿದೆ. ಅವನ ವ್ಯಕ್ತಿಗತ ಪ್ರೇಮ ಸಾಮೂಹಿಕ ಪ್ರೇಮವಾಗಿ ಬದಲಾವಣೆ ಹೊಂದಿದೆ.

ತನ್ನ ಪ್ರೇಮದ ಈ ಸಾಮೂಹಿಕ ಕೂಟವನ್ನು ನೋಡಿದ ತಕ್ಷಣ ಕವಿ ತನ್ನ ಪ್ರೇಯಸಿಯ ಪ್ರೇಮಿಯಾಗದೆ ಮನುಷ್ಯಮಾತ್ರನ ಪ್ರೇಮಿಯಾಗುತ್ತಾನೆ ಮತ್ತು ತನ್ನ ಪ್ರೇಯಸಿಯನ್ನು ಆಕ್ಷೇಪಿಸುತ್ತಾನೆ....

''ಕಿಸ್ ದರ್ಜಾ ದಿಲ್‌ಶಿಕನ್ ಥೆ ಮುಹಬ್ಬತ್ ಕೆ ಯಾದಸೇ
ಹಂ ಜಿಂದಗೀ ಮೇ ಫಿರ್ ಕೋಯಿ ಅರ್‌ಮಾ ನ ಕರ್ ಸಕೇ''
(ಪ್ರೇಮದ ಆ ಘಟನೆಗಳು ನನ್ನ ಹೃದಯವನ್ನು ಚುಚ್ಚಿ
ಹಾಕಿದವು. ಮತ್ತೆ ಜೀವನದಲ್ಲಿ ಯಾವ ರೀತಿಯ
ಆಸೆ ಆಕಾಂಕ್ಷೆ ಇಡಲೂ ಸಾಧ್ಯವಾಗಲಿಲ್ಲ).
''ತುಝ್ ಕೊ ಖಬರ್ ನಹೀ ಮಗರ್ ಇಕ್ ಸಾದಾ ಲೌಹ್‌ಕೋ,
ಬರ್ಬಾದ್ ಕರ್‌ದಿಯಾ ತೆರೆ ದೋ ದಿನ್ ಕೆ ಪ್ಯಾರ್ ನೇ.''
(ನಿನ್ನ ಎರಡು ದಿನದ ಪ್ರೇಮ ಒಬ್ಬ ಸಾಮಾನ್ಯ ಜೀವಿಯ
ಸರ್ವನಾಶ ಮಾಡಿತು. ಈ ಮಾತಿನ ಪರಿವೆಯೇ ನಿನಗಿಲ್ಲ).

ಈ ರೀತಿ ಹೇಳಿ ಕವಿ ಇನ್ನೂ ಮುಂದೆ ಹೋಗುತ್ತಾನೆ. ತನ್ನ ಪ್ರೇಯಸಿಗೆ ಬಹು ಸ್ಪಷ್ಟ ರೂಪದಲ್ಲಿ ತನ್ನ ದುಃಖವನ್ನು ತಿಳಿಸುತ್ತಾನೆ-

''ತುಂಹಾರೇ ಗಮ್ ಕೆ ಸಿವಾ ಔರ್ ಭೀ ತೊ ಗಮ್ ಹೈ ಮುಝೆ;
ನಿಜಾತ್ ಜಿನ್ ಸೆ ಮೈ ಏಕ್ ಲಹಜಾ ಪಾ ನಹೀ ಸಕತಾ!
ಏ ಊಂಚೆ ಊಂಚೆ ಮಕಾನೋಂಕೆ ದ್ಯೂಡಿಯೋಂಕೆ ತಲೆ,
ಹರ್ ಏಕ್ ಗಾಂ ಪೇ ಭೂಕೆ ಭಿಕಾರಿಯೋಂ ಕಿ ಸದಾ!
ಯೆ ಕಾರ್‌ಖಾನೋಂ ಮೆ ಲೋಹೆ ಕಾ ಶೋರ್ ಗುಲ್ ಜಿಸ್ ಮೇ,
ಹೈ ದಫನ್ ಲಾಖೋಂ ಗರೀಬೋಂಕಿ ರೂಹ್ ಕಾ ನಗ್‌ಮಾ!
''ಏ ಗಮ್ ಬಹುತ್ ಹೈ ಮೇರಿ ಜಿಂದಗೀ ಮಿಟಾನೆ ಕೋ,
ಉದಾಸ್ ರಹಕೆ ಮೇರೆ ದಿಲ್ ಕೊ ಔರ್ ರಂಜ್ ನದೋ,
ತುಂಹಾರೇ ಗಮ್ ಕೆ ಸಿವಾ ! ಔರ್ ಭೀ ಗಮ್ ಹೈ ಮುಝೆ''.

(ನಿನ್ನ ದುಃಖಕ್ಕಿಂತಲೂ ಹೆಚ್ಚು ದುಃಖ ನನಗಿದೆ. ಅದರಿಂದ ಒಂದು ಕ್ಷಣ ಕಾಲವೂ ಮುಕ್ತಿ ಹೊಂದಲು ಸಾಧ್ಯವಿಲ್ಲ. ನನಗೆ ದೊಡ್ಡ ದೊಡ್ಡ ಹೊಸ್ತಿಲಿನ ಕೆಳಗೆ ಹೆಜ್ಜೆ ಹೆಜ್ಜೆಗೂ ನಿಂತು ಕೂಗುತ್ತಿರುವ ಹಸಿದ ಭಿಕ್ಷುಕರ ವಾಣಿ ಕೇಳುತ್ತಿದೆ. ಈ ಕಾರ್ಖಾನೆಯ ಕಬ್ಬಿಣದ ಶಬ್ದದಲ್ಲಿ ಲಕ್ಷಗಟ್ಟಲೆ ಬಡವರ ಆತ್ಮದ ಗೀತೆಗಳು ಹುದುಗಿಕೊಂಡಿವೆ. ನನ್ನ ಅಸ್ತಿತ್ವವನ್ನು ನಾಶಮಾಡಲು ಈ ದುಃಖವೇ ಸಾಕಾಗಿದೆ. ನೀನು ಖಿನ್ನಳಾಗಿ ನನ್ನ ಮನಸ್ಸಿಗೆ ಹೆಚ್ಚು ನೋವನ್ನುಂಟುಮಾಡಬೇಡ, ನಿನ್ನ ದುಃಖಕ್ಕಿಂತಲೂ ಹೆಚ್ಚು ದುಃಖ ನನಗಿದೆ.)

ಇಲ್ಲಿಗೇ ಕವಿ ಸಾಹಿರನ ದುಃಖ ಸಮಾಪ್ತವಾಗಲಿಲ್ಲ. ಇವನದು ದುಃಖದಲ್ಲಿಯೂ ಸುಖ ಕಾಣುವ ಆಸೆಯಾಗಿತ್ತು. ಈ ಸುಖವನ್ನು ಕವಿ ತನ್ನ ಕವಿತೆಯಲ್ಲಿ ಕಂಡಿದ್ದ. ಪ್ರೇಮ ಭಾವನೆಗಳಿಗೆ ಸುಂದರವಾದ ಕವಿತೆಯ ಉಡುಪನ್ನು ತೊಡಿಸಿ, ಅದಕ್ಕೆ ಅಲಂಕಾರ ಮಾಡಿ, ಅದರಲ್ಲಿ ತನ್ನ ಪ್ರೇಯಸಿಯನ್ನು ಕಂಡಿದ್ದ. ಭಾವಾವೇಶದಲ್ಲಿ ತನ್ಮಯನಾಗಿ ಅದರ

ಮಹಿಮೆಯನ್ನು ಹಾಡಿದ. ಇದರಿಂದಲೂ ಕವಿ ತೃಪ್ತನಾಗಲಿಲ್ಲ. ಅವನ ದೃಷ್ಟಿ ವಾಸ್ತವಿಕತೆಯ ಕಡೆ ಸಾಗಿತು. ಜಗತ್ತಿನಲ್ಲೇ ಪ್ರೇಮದ ಪ್ರಸಿದ್ಧ ಸ್ಮಾರಕವಾದ 'ತಾಜ್‌ಮಹಲ್' ಕುರಿತು ಕವಿ ಈ ರೀತಿ ವರ್ಣಿಸುತ್ತಾನೆ :

''ಅನ್‌ಗಿನತ್ ಲೋಗೋಂ ನೆ ದುನಿಯಾ ಮೆ ಮೊಹಬ್ಬತ್ ಕೀ ಹೈ
ಕೌನ್ ಕಹ್‌ ಹೈ ಕಿ ಸಾದಿಕ್ ನ ಥೆ ಜಸ್‌ಬೇ ಉನ್‌ಕೆ?
ಲೇಕಿನ್ ಉನ್ ಕೆ ಲಿಯೇ ತಶ್‌ಹೀರ್ ಕಾ ಸಮಾನ್ ನಹೀಂ,
ಕ್ಯೊಂಕಿ ವೇ ಲೋಗ್ ಭೀ ಅಪನಿ- ಹೀ ತರಹ್ ಮುಫಲಿಸ್ ಥೆ''

(ಈ ಜಗತ್ತಿನಲ್ಲಿ ಎಣಿಸಲಾರದಷ್ಟು ಜನ ಪ್ರೇಮಿಸಿದ್ದಾರೆ. ಅವರ ಭಾವನೆಗಳು ಸತ್ಯವಾಗಿಲ್ಲವೆಂದು ಯಾರು ತಾನೇ ಹೇಳಲು ಸಾಧ್ಯ. ಆದರೆ ತಮ್ಮ ಪ್ರೇಮವನ್ನು ಪ್ರಚಾರ ಮಾಡುವಷ್ಟು ಚೈತನ್ಯ ಅವರಲ್ಲಿರಲಿಲ್ಲ. ಇದಕ್ಕೆ ಕಾರಣವೇನೆಂದರೆ ಈ ಎಲ್ಲಾ ಪ್ರೇಮಿಗಳು ನನ್ನ ಹಾಗೆ ನಿರ್ಧನರು.)

ಇದೇ ಕವಿತೆಯ ಅಂತಿಮ ಪಂಕ್ತಿಗಳಲ್ಲಿ ಕವಿ ನಗ್ನಸತ್ಯವನ್ನು ಈ ರೀತಿ ವ್ಯಕ್ತಪಡಿಸುತ್ತಾನೆ.

''ಇಕ್ ಶಾಹನ್‌ಶಾಹ್ ನೆ ಅಪನೀ ದೌಲತ್ ಕಾ ಸಹಾರಾ ಲೇಕರ್!
ಹಮ್ ಗರೀಬೋಂ ಕಿ ಮೊಹಬ್ಬತ್ ಕ ಉಡಾಯ ಹೈ ಮಜಾಕ್!!''

(ಒಬ್ಬ ಚಕ್ರವರ್ತಿ ತನ್ನ ಐಶ್ವರ್ಯದ ಸಹಾಯ ತೆಗೆದುಕೊಂಡು ಬಡವರಾದ ನಮ್ಮ ಪ್ರೇಮದ ಹಾಸ್ಯ ಮಾಡಿದ್ದಾನೆ).

ಮೇಲ್ಕಂಡ ಪಂಕ್ತಿಗಳಲ್ಲಿ ಪ್ರಗತಿಶೀಲ ಭಾವನೆಯನ್ನು ಕಾಣಬಹುದು. ತನ್ನ ಕವಿತಾ ಸಂಕಲನ ''ಮೇರೆ ಗೀತ್ ತುಂಹಾರೆ ಹೈಂ''ನಲ್ಲಿ ಕವಿ ಈ ರೀತಿ ಪ್ರತಿಜ್ಞೆ ಮಾಡುತ್ತಾನೆ.

''ಆಜ್ ಸೆ ಏ ಮಜ್ದೂರ್ ಕಿಸಾನೊ! ಮೇರೆ ರಾಗ್ ತುಂಹಾರೇ ಹೈಂ,
ಫಾಕಾಕಶ್ ಇನ್‌ಸಾನೋ! ಮೇರೆ ಜೋಗ್ ಬಿಹಾಗ್ ತುಂಹಾರೇ ಹೈಂ.
ಜಬ್‌ತಕ್ ತುಂ ಭೂಕೆ ನಂಗೆ ಹೋ, ಏ ಶೋಲೆ ಖಾಮೋಶ್‌ನ ಹೋಂಗೆ.
ಜಬ್‌ತಕ್ ಬೇ ಆರಾಂ ಹೋ ತುಂ, ಏ ನಗ್‌ಮೆ ರಾಹತ್ ಕೋಜ್‌ನ ಹೋಂಗೆ''.

(ಓ ರೈತ ಕಾರ್ಮಿಕರೇ! ನನ್ನ ರಾಗಗಳು ನಿಮ್ಮದಾಗಿವೆ. ಓ ಹಸಿದ ಬಂಧುಗಳೇ! ನನ್ನ ಜೋಗ್ ಮತ್ತು ಬಿಹಾಗ್ ನಿಮ್ಮದಾಗಿವೆ. ಎಲ್ಲಿಯವರೆಗೆ ನೀವು ಅನ್ನ ಮತ್ತು ಬಟ್ಟೆ ಇಲ್ಲದೆ ಇರುವಿರೋ, ಅಲ್ಲಿಯವರೆಗೆ ಈ ಕೆಂಡಗಳು ಕಿಡಿ ಕಾರುವುದನ್ನು ಬಿಡುವುದಿಲ್ಲ. ಎಲ್ಲಿಯವರೆಗೆ ನೀವು ವಿಶ್ರಾಂತಿ ಇಲ್ಲದೆ ದುಡಿಯುತ್ತಿರುವಿರೋ, ಅಲ್ಲಿಯವರೆಗೆ ನನ್ನ ಈ ಗೀತೆಗಳಿಗೆ ಶಾಂತಿಯಿಲ್ಲ).

ನಮ್ಮ ಸಮಾಜ ವಿಭಿನ್ನ ವರ್ಗಗಳಲ್ಲಿ ವಿಭಜಿಸಲ್ಪಟ್ಟಿದೆ. ನಮ್ಮ ಕವಿಗಳೂ ಸಹ ವಿವಿಧ ವರ್ಗಗಳಿಂದ ಬಂದಿರುವರು. ಯಾರಾದರೂ ಲೇಖಕ ತನ್ನ ಎಲ್ಲೆಯಿಂದ ಹೊರಬರಲು

ಸಾಧ್ಯವಿಲ್ಲದಿದ್ದರೂ, ಅವನಲ್ಲಿ ಮಾನಸಿಕ ಶ್ರೇಷ್ಠತೆ ಮತ್ತು ವಾಸ್ತವಿಕತೆಯ ಅರಿವಿದ್ದರೆ, ತನ್ನ ಎಲ್ಲೆಯಲ್ಲಿದ್ದುಕೊಂಡೇ, ಆದರ್ಶ ಮತ್ತು ಪ್ರಗತಿಶೀಲ ಸಾಹಿತ್ಯವನ್ನು ರಚಿಸಬಲ್ಲ. 'ಬೂರ್ಜ್ವಾ' ಲೇಖಕ ತನ್ನ ವರ್ಗದ ಅನೈತಿಕ ಮತ್ತು ಸಾಮೂಹಿಕ ವ್ಯವಹಾರಗಳ ಚಿತ್ರವನ್ನು ಸ್ಪಷ್ಟವಾಗಿ ಚಿತ್ರಿಸಿದರೆ ಅವನೂ ಸಹ ನೇರವಾಗಿ ವರ್ಗ ಸಂಘರ್ಷದಲ್ಲಿ ಭಾಗವಹಿಸಿದಂತೆ, ಕಾರ್ಮಿಕ ಮತ್ತು ರೈತನಷ್ಟೇ ಕಾರ್ಯಸಿದ್ಧಿ ಮಾಡಿದಂತೆ ಆಗುತ್ತದೆ. ಕೇವಲ ಕಾರ್ಮಿಕ ಮತ್ತು ರೈತರ ಮೇಲೆ ವಾಸ್ತವಿಕತೆಯನ್ನು ಅರಿಯದೆಯೇ ಕವಿತೆ ರಚಿಸಿದರೆ ಅಥವಾ ಲೇಖನ ಬರೆದರೆ, ಅವನು ಪ್ರಗತಿಶೀಲ ಲೇಖಕ ಅಥವಾ ಕವಿ ಎನಿಸಿಕೊಳ್ಳುವುದಿಲ್ಲ. ಸೌಭಾಗ್ಯವಶಾತ್ ಸಾಹಿರನು ನಮಗೆ, ಯಾವುದನ್ನು ಪ್ರಪಂಚ.

ಅವನಿಗೆ ಅನುಭವಾಮೃತದ ರೂಪದಲ್ಲಿ ಕೊಟ್ಟಿದೆಯೋ, ಸಾಮೂಹಿಕ ರೂಪದಲ್ಲಿ ಅದನ್ನೇ ನಮಗೆ ಕೊಡುತ್ತಿದ್ದಾನೆ. ಅವನ ಅನುಭವವಾಣಿ ವಸ್ತ್ರಧರಿಸಿ ನಮ್ಮಮುಂದೆ ಬಂದಿದೆ. ಅವನ ಕಾವ್ಯಶ್ರೀ ''ತಲ್ ಖಿಯಾಂ'', ''ಗಾತಾ ಜಾಯೇ ಬಂಜಾರಾ'' ಮುಂತಾದ ಕೃತಿಗಳಲ್ಲಿ ಸುರಕ್ಷಿತವಾಗಿದೆ. ಚಲನಚಿತ್ರಗಳಿಗೆ ಅವನು ನೂರಾರು ಹಾಡುಗಳನ್ನು ಬರೆದಿದ್ದಾನೆ. ಅವನ ಹಾಡುಗಳಲ್ಲಿ ಜೀವನದ ಅನುಭವವಿದೆ, ಸಾಹಿತ್ಯದ ಸೌರಭವಿದೆ, ಗೀತೆಗಳ ನಿನಾದವಿದೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸಮಾಜದ ನಗ್ನಸತ್ಯವಿದೆ.

''ತಲ್ ಖಿಯಾಂ'' ಅವನ ಪ್ರಥಮ ಕೃತಿ. ಜೀವನದ ಕಹಿ, ಇದರಲ್ಲಿ ತುಂಬಿದೆ. ''ಮೇರೆ ಗೀತ್ ತುಂಹಾರೆ ಹೈ'' ನಂತರ ಬಂದ ಸಂಕಲನ. ಇದರಲ್ಲಿ ಕವಿಯ ಪ್ರಗತಿಶೀಲ ಗೀತೆಗಳಿವೆ. ಮತ್ತು ''ಗಾತಾ ಜಾಯೇ ಬಂಜಾರ'' ಚಿತ್ರಗೀತೆಗಳ ಸಂಗ್ರಹ. ''ಫಿಲಂ ಜರ್ನಸ್ಟ್ ಅಸೋಸಿಯೇಷನ್'' ಕಡೆಯಿಂದ ಸಾಹಿರನಿಗೆ ''ವ್ಯಾಸ'' ಚಲನಚಿತ್ರದ ಗೀತೆಗಳಿಗಾಗಿ ೧೯೫೮ರಲ್ಲಿ ''ಕ್ರಿಟಿಕ್ಸ್ ಅವಾರ್ಡ್'' ಸಿಕ್ಕಿತು.

೧೫ ವರ್ಷಗಳಿಂದ ಸಾಹಿರ್ ಬೊಂಬಾಯಿಯಲ್ಲಿ ಚಿತ್ರಗೀತೆಗಳನ್ನು ಬರೆಯುತ್ತಿದ್ದಾನೆ. ಚಿತ್ರಗೀತಕಾರರಿಗೆ ಆದರ್ಶವಾಗಿದ್ದಾನೆ. ಪ್ರಸಿದ್ಧ ಕವಿ ''ಕೈಫೀ ಆಜ್ಮಿ''ರವರ ಪ್ರಕಾರ ಸಾಹಿರ ಚಲನಚಿತ್ರ ಜಗತ್ತಿನಲ್ಲಿ ಎಷ್ಟು ವಿಧಗಳಿವೆಯೋ, ಅದೆಲ್ಲದರ ಪರಿಚಯ ಪಡೆದುಕೊಂಡಿದ್ದಾನೆ. ಚಿತ್ರಗೀತೆಗಳನ್ನು ಬರೆಯುತ್ತಾ ಬರೆಯುತ್ತಾ ಯಾವಾಗ ನಿರ್ದೇಶಕ ಅಥವಾ ನಿರ್ಮಾಪಕನಾಗುತ್ತಾನೋ ಅದು ನಮಗೆ ಗೊತ್ತಿಲ್ಲ. ಆದರೆ ಅವನನ್ನು ನಾನು ಮೊದಲು ನೋಡಿದ್ದಾಗ ಅವನು ಸಾಹಿರನಾಗಿದ್ದ. ಕಡೆಯಲ್ಲಿ ನೋಡುವಾಗಲೂ ಅವನು ಸಾಹಿರ (ಕವಿ) ನಾಗಿಯೇ ಉಳಿದಿರುತ್ತಾನೆ.

ಕವಿ ಸಾಹಿರ್ ದುಃಖ ಜ್ವಾಲೆಯಲ್ಲಿ ಬೆಂದು ಬಡತನದಿಂದ ನರಳುತ್ತಿರುವ ಜನಸಾಮಾನ್ಯರಿಗೆ ಮತ್ತು ರೈತ ಕಾರ್ಮಿಕರಿಗೆ ಭರವಸೆ ನೀಡಿದ್ದಾನೆ.

''ಮೇರೆ ಫನ್, ಮೇರಿ ಉಮ್ಮೀದೇ, ಆಜ್ ಸೇ ತುಂ ಕೋ ಅರ್ಪನ್ ಹೈ,
ಆಜ್ ಸೇ ಮೇರೆ ಗೀತ್ ತುಂಹಾರೆ ದುಃಖ್ ಔರ್ ಸುಖ್ ಕಾ ದರ್ಪನ್ ಹೈ''

(ಇಂದಿನಿಂದ ನನ್ನ ಕಲೆ, ನನ್ನ ಆಸೆಗಳು, ನಿಮಗೆ ಅರ್ಪಿತವಾಗಿವೆ, ನನ್ನ ಕವಿತೆಗಳು ನಿಮ್ಮ ಸುಖ ದುಃಖಗಳ ದರ್ಪಣ. ಇಂದಿನಿಂದ ನನ್ನ ಹಾಡುಗಳು ನಿಮ್ಮದಾಗಿವೆ).

ಈ ರೀತಿ ತನ್ನ ಸರ್ವಸ್ವವನ್ನು ಜನ ಸಾಮಾನ್ಯರಿಗೆ ಅರ್ಪಿಸಿ ೧೮ನೇ ಅಕ್ಟೋಬರ್ ೧೯೮೦ರಂದು ಈ ಲೋಕದಿಂದ ಹೊರಟುಹೋದನು.

~ ~ ~

ಸ್ತ್ರೀ ಸ್ಪಂದನದತ್ತ ಒಲವು ತೋರುವ ಸುಗತಾಕುಮಾರಿ

ಸುಗತಾಕುಮಾರಿಯವರ ಕವನಗಳನ್ನು ಮಲಯಾಳಿ ಕಾವ್ಯಕ್ಷೇತ್ರದ ನವ್ಯ ಭಾವಗೀತೆಗಳು ಎಂದು ಪರಿಗಣಿಸಲಾಗಿದೆ. ಇವರ ಕವನಗಳು ಚಿಂತನಾತ್ಮಕ. ಪಲಾಯನವಾದವಲ್ಲದ, ಪ್ರಭಾವಶಾಲಿ ಸಾಮರ್ಥ್ಯವುಳ್ಳ ಕೇಂದ್ರಬಿಂದುಗಳನ್ನು ಒಳಗೊಂಡಿವೆ. "ತನ್ನೊಳಗಿರುವ ದಳುರಿಯಿಂದ । ಕೆರಳಿದ ಜ್ವಾಲೆಗಳನ್ನು ಚಿಮ್ಮುವ । ನೋವಿನ ಜ್ವಾಲಾಮುಖಿ ಎಂದರೆ ನನಗೆ ಇಷ್ಟ" ಎಂದು ಅವರ 'ಏಕಾಕಿ' ಕವನದಲ್ಲಿ ಬರೆದಿದ್ದಾರೆ. ಇವರ ಮತ್ತೆರಡು ಕವನಗಳು ಶ್ರೀ ಕೃಷ್ಣನ ಪುರಾಣ ಕತೆಯನ್ನು ಆಧರಿಸಿ ಬರೆಯಲ್ಪಟ್ಟಿವೆ. - "ಕೃಷ್ಣ ನೀ ಎನ್ನೆ ಅರಿಯಿಲ್ಲ" (ಕೃಷ್ಣ ನೀ ನನ್ನ ಅರಿತಿಲ್ಲ) ಮತ್ತು "ಕಡಾನೆ" (ಅರಣ್ಯ ಏದು) ಈ ಕವನಗಳಲ್ಲಿ ಶ್ರೀ ಕೃಷ್ಣ ಮತ್ತು ರಾಧೆಯರ ಪ್ರಣಯವನ್ನು ಮಾನವನ ಹೆಬ್ಬಯಕೆಯ ವಿರಹಗಾಥೆಯನ್ನಾಗಿ ಪರಿವರ್ತಿಸಲಾಗಿದೆ. "ಈ ರಾಧೆ ಆತ್ಮ ಸಮ್ಮತೆಯಾಗಿರುವುದರಿಂದ । ಜೀವನ ಒಂದು ನಿರಂತರ ಅನ್ವೇಷಣೆ". ಇದನ್ನು ಸ್ತ್ರೀಯರ ದುರಂತಾನ್ವೇಷಣೆಯ ಪ್ರೇಮವೆಂದು ಒಪ್ಪಿಕೊಂಡಿದ್ದಾರೆ. ಇವರ ಇತರೆ ಕವನಗಳಲ್ಲಿ ಸ್ತ್ರೀಯರ ಸಹಜ ಹಾಗೂ ನೈಜ ಮನೋಧರ್ಮವನ್ನು ಪ್ರಶ್ನಿಸಲಾಗಿದೆ.

ಮಲೆಯಾಳಿ ಕವಿ ಬೋಧೇಶ್ವರನ್ ಹಾಗೂ ವಿ. ಕೆ. ಕಾರ್ತ್ಯಾಯಿನಿ ದಂಪತಿಗಳ ಎರಡನೇ ಮಗಳಾಗಿ ಸುಗತಾಕುಮಾರಿ ಆರಮ್ಮುಲದಲ್ಲಿ ಹುಟ್ಟಿದರು. ಇವರ ತಾಯಿ ಕೇರಳದಲ್ಲಿ ಸ್ನಾತ್ತಕೋತ್ತರ ಪದವಿ ಪಡೆದ ಪ್ರಥಮ ಮಹಿಳೆಯಾಗಿದ್ದಾರೆ ಹಾಗೂ ತಿರುವನಂತಪುರಂನ ಹೆಸರಾಂತ ಮಹಿಳಾ ಕಾಲೇಜ್‌ನಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ನಿರಂತರ ಅಧ್ಯಯನ ಹಾಗೂ ಮನೆಯಲ್ಲಿ ನಡೆಯುತ್ತಿದ್ದ ಸಾಹಿತ್ಯಿಕ ಚರ್ಚೆಗಳು ಸುಗತಾಕುಮಾರಿಯವರ ಸಾಹಿತ್ಯ ಪ್ರತಿಭೆಯ ಬೆಳವಣಿಗೆಗೆ ಸಹಾಯಕವಾದವು. ಸುಗತಾ ಕುಮಾರಿಯವರು ತಿರುವನಂತಪುರಂನಲ್ಲಿ 'ತತ್ವಶಾಸ್ತ್ರ'ದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಇವರು ತಮ್ಮ ಚಿಕ್ಕವಯಸ್ಸಿನಲ್ಲೇ ಕವನಗಳನ್ನು ಬರೆಯುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅವರು ಸಮಾಜಸೇವೆಯಲ್ಲೂ ನಿರತರಾಗಿದ್ದಾರೆ. ನಮ್ಮ

ದೇಶದಲ್ಲಿರುವ ಕೆಲವು ಪುರಾತನ ಅರಣ್ಯಗಳನ್ನು ಸಂರಕ್ಷಿಸಲು ಎಪ್ಪತ್ತರ ದಶಕದಲ್ಲಿ ರಾಷ್ಟ್ರವ್ಯಾಪಿ ಚಳುವಳಿ ನಡೆಸಿದರು. ಕೇರಳದ 'ಸೈಲೆಂಟ್ ವ್ಯಾಲಿ' ಪ್ರದೇಶದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದ್ದ ಜಲವಿದ್ಯುತ್ ಉತ್ಪಾದನಾ ಯೋಜನೆಯ ವಿರುದ್ಧ ಚಳುವಳಿ ನಡೆಸಿದರು. ಪರಿಣಾಮವಾಗಿ ಆರಂಭದಲ್ಲಿ ಸ್ವಾಸ್ಥ್ಯ ಸಂವೇದನೆಯಿಂದ ಕೂಡಿದ್ದ ಅವರ ಕಾವ್ಯಕ್ಷೇತ್ರ, ಸಾಮಾಜಿಕ ಅವ್ಯವಸ್ಥೆ ಹಾಗೂ ಸಾಮಾಜಿಕ ತಾರತಮ್ಯಕ್ಕೆ ಸ್ತ್ರೀ ಸ್ಪಂದನದ ಕಡೆ ತಿರುಗಿತು. ''ಪಂಜಾಬ್'' ಎಂಬ ಕವನವು ಅವರು ಭಾಗವಹಿಸಿದ್ದ ಮಹಿಳಾ ಚಳುವಳಿಗೆ ಉತ್ತಮ ಉದಾಹರಣೆಯಾಗಿದೆ. ''ಅಮ್ಮ'' ಕವನವು ಶ್ರೀ ಕೃಷ್ಣನ ತಾಯಿ ದೇವಕಿಯ ಕಥೆಯನ್ನು ಆಧರಿಸಿದ್ದು, ಹೇಗೆ ದೇವಕಿ ತನ್ನ ಸಹೋದರ ಕಂಸನಿಗೆ ಬಲಿಪಶುವಾಗುತ್ತಾಳೆ ಎಂಬುದನ್ನು ವಿವರಿಸುತ್ತದೆ. ''ಪಂಕುಂಜು ತೊಣ್ಣುರುಕಳಿಲ್'' ಎಂಬ ಕವನ ಸ್ತ್ರೀ ಶೋಷಣೆಯನ್ನು ಬಗ್ಗೆ ತೆರೆದಿಟ್ಟ ಕನ್ನಡಿಯಾಗಿದೆ.

ಸುಗತಾಕುಮಾರಿಯವರಿಗೆ ಅನೇಕ ಸಾಹಿತ್ಯ ಪುರಸ್ಕಾರಗಳು ಸಂದಿವೆ. ೧೯೭೮ರಲ್ಲಿ ''ರಾತ್ರಿಮಳ'' (ಇರುಳುಮಳೆ) ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಈ ಶೀರ್ಷಿಕೆಯ ಕವನವನ್ನೇ ಇಲ್ಲಿ ಭಾಷಾಂತರಿಸಲಾಗಿದೆ. ೧೯೮೧ರಲ್ಲಿ ''ಅಂಬಾಳಮಣಿ'' ಕವನ ಸಂಕಲನಕ್ಕೆ ಮೂರು ಪ್ರಶಸ್ತಿಗಳು ಲಭಿಸಿವೆ. ಅವುಗಳಲ್ಲಿ ಪ್ರತಿಷ್ಠಿತ ''ಕುಮಾರನ್ ಆಸನ್'' ಪ್ರಶಸ್ತಿಯೂ ಒಂದು (೧೯೮೪). ಇವರ ಇತರೇ ಕವನ ಸಂಕಲನಗಳೆಂದರೆ ''ಪದಿರಪ್ಪೂಕ್ಕಳ್'' (ಮಧ್ಯರಾತ್ರಿ ಹೂವುಗಳು) - ೧೯೬೭. ''ಪಾವಂ ಮಾನವ ಹೃದಯಂ'' (ದೀನಮಾನವ ಹೃದಯ) - ೧೯೬೮. ''ಪ್ರಣಾಮಂ'' (ಅಭಿನಂದನೆ) ಮಹಾತ್ಮಗಾಂಧಿಯ ಮೇಲೆ ಬರೆದಿರುವ ಏಳು ಕವನಗಳ ಸಂಕಲನವಾಗಿದೆ ಮತ್ತು ''ಇರುಳ್ ಚಿರಕುಕಳ್'' (ಕತ್ತಲೆಯ ರೆಕ್ಕೆಗಳು) - ೧೯೬೯.

~ ~ ~

ಇರುಳುಮಳೆ

ಮಲಯಾಳಿ : ಸುಗತಾ ಕುಮಾರಿ
ಅನು : ಎಸ್ ಗೋವಿಂದಪ್ಪ

ಇರುಳುಮಳೆ
ಹುಚ್ಚಿಯುವತಿಯಂತೆ
ಅಳುತ್ತಾ, ನಗುತ್ತಾ, ರೋದಿಸುತ್ತಾ,
ಕಾರಣವಿಲ್ಲದೆ
ಗೊಣಗುತ್ತಾ ಸುರಿಯುತ್ತಲೇ ಇದೆ ಬಿಡುವಿಲ್ಲದೆ,
ಅಡ್ಡಾದಿಡ್ಡಿಯಾಗಿರುವ
ಅವಳ ಉದ್ದನೆಯ ತಲೆಗೂದಲನ್ನು ಹೊಯ್ದಾಡಿಸುತ್ತಾ.

ಇರುಳುಮಳೆ
ಮಬ್ಬಾದ ಮುಸ್ಸಂಜೆಯ ಚಿಂತಾಕ್ರಾಂತ ಮಗಳು
ದೀರ್ಘರೋದನದಿಂದ ಸುಣುಚುತ್ತಾ,
ಈ ದವಾಖಾನೆಯೊಳಗೆ ಧಾವಿಸಿ
ಅವಳ ಚಾಚಿರುವ ಶೀತಲ ಕೈ ಬೆರಳುಗಳನ್ನು
ಕಿಟಕಿಯಲಿ ತೂರಿಸಿ
ಸ್ಪರ್ಶಿಸುತ್ತಿರುವಳು ನನ್ನ.

ಇರುಳುಮಳೆ
ಮುಲಕುಗಳು ಮತ್ತು ಬೀಭತ್ಸ ಕಂಪನಗಳು
ಆಕ್ರಂದನಗಳು
ಥಟ್ಟನೆ ತಾಯಿಯೊಬ್ಬಳ ಆರ್ತನಾದ
ನನ್ನ ಬೆಚ್ಚಿಬೀಳಿಸಿದಾಗ ಕೈಗಳಿಂದ ನನ್ನ ಕಿವಿಗಳನು ಮುಚ್ಚಿಕೊಂಡೆ
ಬಿಕ್ಕಿ ಬಿಕ್ಕಿ ಅಳುತ್ತಾ ನನ್ನ ಹಾಸಿಗೆಯಲ್ಲೊರಗಿದೆ,
ನೀನು ನನ್ನ ಆತ್ಮೀಯನಂತೆ

ಅಂಧಕಾರದಿಂದ ಬಂದೆ ಹಿತವಾದ ನುಡಿ ತಂದೆ,
ಯಾರೋ ಹೇಳಿದರು
ವ್ಯಾಧಿಗ್ರಸ್ತ ಭಾಗ ಕತ್ತರಿಸಿ ತೆಗೆದುಹಾಕಬಹುದೆಂದು,
ಆದರೆ ಅಗಾಧ ನೋವಿನಲ್ಲಿರುವ ಸವೆದ ಹೃದಯಕ್ಕೆ
ಮಾಡುವುದಾದರೂ ಏನು?

ಇರುಳುಮಳೆ,
ನನ್ನ ಪ್ರೀತಿಗೆ ಸಾಕ್ಷಿ
ಆ ಹಿಂದಿನ ಶುಭರಾತ್ರಿಗಳಲ್ಲಿ
ಜೋಗುಳವಾಡಿ ನಿದ್ರೆಬರಿಸುತ್ತಿದ್ದವಳು
ನನ್ನ ಪುಳಕಗೊಳಿಸಿ ಉಲ್ಲಾಸವ ನೀಡಿ
ನಗಿಸಿದ
ಶುಭ್ರಬೆಳದಿಂಗಳಿಗಿಂತಲೂ ಅತ್ಯಾನಂದವ ಕೊಟ್ಟವಳು.

ಇರುಳುಮಳೆ
ನನ್ನ ಇಂದಿನ ದುಃಖಕ್ಕೆ ಸಾಕ್ಷಿ.
ನೋವಿನ ಹಾಸಿಗೆಯಲ್ಲಿ ಬೆವತು ನರಳುತ್ತಾ
ನಿದ್ರೆಯಿಲ್ಲದ ರಾತ್ರಿಗಳಲ್ಲಿ
ಒಂಟಿಯಾಗಿ ನೋವಿನ ರಾಟಿಯಲ್ಲಿ
ಅಳುವುದನ್ನು ಮೈ ಮರೆತು
ಹೆಪ್ಪುಗಟ್ಟಿದ ಹಿಮಬಂಡೆಯಾಗಿರುವ
ನಿನಗೆ ಹೇಳಲೇಬೇಕು.

ಇರುಳುಮಳೆ
ನಾನು ಬಲ್ಲೆ ನಿನ್ನ ದಯಾಪರ ದುಃಖದ ನಿನಾದ
ನಿನ್ನ ಮರುಕ ಮತ್ತು ಮುಚ್ಚಿಟ್ಟ ಕ್ರೋಧ
ಒಂಟಿಯಾಗಿದ್ದಾಗ ನಿನ್ನಲ್ಲಿ ಉಮ್ಮಳಿಸುವ ನೋವು ಮತ್ತು ಕಣ್ಣೀರು.
ಮತ್ತೆ ಬೆಳಗಾದಾಗ
ನಿನ್ನ ಮುಖ ಒರೆಸಿಕೊಂಡು ಬರುವ ಸೋಗಿನ ನಗು,
ನಿನ್ನ ತವಕ ಮತ್ತು ನಟನೆ
ಇದೆಲ್ಲವನ್ನು ನಾನು ಹೇಗೆ ಅರಿಯಲಿ?
ನನ್ನ ಗೆಳತಿ ನಾನೂ ನಿನ್ನಂತೆಯೇ
ನಾನೂ ನಿನ್ನಂತೆಯೇ ಇರುಳಲ್ಲಿ ಮಳೆ.

~ ~ ~

ಕೆನಡಾದಲ್ಲಿ ನೆಲೆಸಿರುವ ಐ. ಮಾ. ಮುತ್ತಣ್ಣ

ಶ್ರೀ ಐ. ಮಾ. ಮುತ್ತಣ್ಣನವರು ಕೊಡಗಿನ ಐಚೆಟ್ಟಿರ ಕುಟುಂಬಕ್ಕೆ ಸೇರಿದವರು. ವೃತ್ತಿಯಲ್ಲಿ ಉಪಾಧ್ಯಾಯರು. ಎಂಬತ್ತರ ಹರೆಯದವರು. ಚಿಕ್ಕಂದಿನಿಂದಲೇ ಸಾಹಿತಿಗಳು, ತ್ರಿಭಾಷಾ ಕವಿ. ಕೊಡಗಿನ ಸಂಸ್ಕೃತಿಯ ಬಗ್ಗೆ ೧೯೬೭ ರಿಂದ ೧೯೯೧ರ ವರೆಗೆ ೩೦ಕ್ಕೂ ಹೆಚ್ಚು ಪುಸ್ತಕಗಳನ್ನೂ ಕೆಲವು ಕನ್ನಡ ನಾಟಕಗಳನ್ನೂ ಬರೆದಿರುವರು.

A Tiny Model State 'ಜನರಲ್ ತಿಮ್ಮಯ್ಯ' 'ಫೀಲ್ಡ್ ಮಾರ್ಶಲ್ ಕಾರ್ಯಪ್ಪ' ಈ ಕೃತಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಬಿಡುಗಡೆ ಮಾಡಿದೆ. ೧೯೮೦ರಲ್ಲಿ ಅವರಿಗೆ ಅಂತಾರಾಷ್ಟ್ರೀಯ ಕೀರ್ತಿ ಹಾಗೂ ಸನ್ಮಾನ ಲಭಿಸಿದೆ.

"Coorg Memories", 'ಶಾಕುಂತಳ ನಾಟಕ' - ಕನ್ನಡದಿಂದ ಕೊಡವ ಭಾಷೆಗೆ, 'Merchant of vennies ಇಂಗ್ಲೀಷ್‌ನಿಂದ ಕೊಡವ ಭಾಷೆಗೆ ಭಾಷಾಂತರಿಸಿದ್ದಾರೆ . ಕನ್ನಡ ಹಾಗೂ ಇಂಗ್ಲೀಷ್‌ನಲ್ಲಿ ೮೦ಕ್ಕೂ ಹೆಚ್ಚು ಟಿಪ್ಪಣಿಗಳು ಓಂದು, ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಸ್ಟೇಟ್ಸ್‌ಮನ್ ಪತ್ರಿಕೆಗಳಲ್ಲಿ ಬಂದಿವೆ. ''ಕೊಡವ ಜಾನಪದ'' Kodava's and Gala-Lela. ಕೃತಿಗಳನ್ನು ಬರೆದಿರುವ. ಶ್ರೀ ಮುತರು ೀಗ ೆನಡಾದಲ್ಲಿ ಇದ್ದಾರೆ.

~ ~ ~

ಉಷಾ

ಕೊಡವ ಮೂಲ : ಐ. ಮಾ. ಮುತ್ತಣ್ಣ
ಕನ್ನಡಕ್ಕೆ : ಮಂಡೀರ ಜಯಾ ಅಪ್ಪಣ್ಣ

ಕಲ್ಲು ಗಲ್ಲಿ ಇಳಿದು । ಹೂ ಕೆರೆ ತೀರದಿ ।
ಬೆಳಗಿನ ಜಾವದಿ । ಕಾಣುತ್ತದೋ ....
ಸೂರ್ಯ ಕಿರಣದಿ । ಹೊಳೆಯುವ ರಂಗದು
ಚೆಲ್ಲಿ ಕುಣಿಯುವ । ದೇವಿಯದೋ....

ಬೆಟ್ಟಕಾಡಿನ ಮರೆ । ಬೆಳಗಿನ ಜಾವದಿ
ಹೊಂಬೆಳಕಿನ ದೀಪ । ತಟ್ಟೆಯದೊ ।
ನೀಲಿಸೀರೆಗದೊ । ಏಳು ರಂಗಿನ ಜರಿ ।
ಕೆಂಪು ಜರಿಯುಟ್ಟು । ರೇಷ್ಮೆಯುಟ್ಟೊ ।

ಮಾವಿನ ಎಲೆಸುಳಿ । ನಸುನಗು ಕೆಂದುಟಿ ।
ನಗುನಗುತ ಬಂದಳಾ । ಮಾಯಕವೋ ।
ನಡುಗುವ ಚಳಿಯಲ್ಲಿ । ಹೂ ಮಂಜು ಮಣಿಮಾಲೆ ।
ಕಟ್ಟಿ ಕತ್ತಿಗೆ ಬಂದ । ಭದ್ರಕಾಳೀ ॥

ಒಳ್ಳೆಯ ದಿನವಿದೊ । ಉದಯದಿ ಬೀಸಿದೆ ।
ಮರೆಯಾದ ಚಂದ್ರನ । ತಂಪು ಗಾಳಿ ।
ಕಲ್ಲು ಗಲ್ಲಿ ಇಳಿದು । ಹೂ ಕೆರೆ ತೀರದಿ ।
ಬೆಳಗಿನ ಜಾವದಿ । ಉಷೆ ಬಂದಳೋ ॥

~ ~ ~

ಬ್ರಹ್ಮಗಿರಿಯ ಮೇಲೆ

ಕೊಡವ : ಐ. ಮಾ. ಮುತ್ತಣ್ಣ
ಅನು : ಮಂಡೀರ ಜಯಾ ಅಪ್ಪಣ್ಣ

ಬೆಟ್ಟ ಹತ್ತಿ । ನಿಂತು ನಿಂತು ।
ಹತ್ತಿ ನಡೆದು । ನಾ ಸೋತೆನೊ ।
ಜನರ ಗುಂಪಲಿ । ಮುಂದು ಮುಂದಕೆ ।
ದಾಟಿ ಹಾದು ನಾ । ಹೋದೆನೊ ।

ಸುತ್ತ ಮತ್ತ । ನಿಂತು ನೋಡಿದೆ ।
ಕಂಡೆ ಬೆಟ್ಟದ । ಸಾಲನೂ ।
ಹತ್ತಿ ನಾ ಕತ್ತೆತ್ತಿ ನೋಡಿದೆ ॥
ಭೂ ದೇವಿಯ । ಆ ರೂಪನೂ ।

ಬೆಟ್ಟದಂಬದಿ । ಗುಡ್ಡ ಸಾಲದು ।
ಮೇಲೆ ಮೇಲೆ । ದಿಗಂತದೀ ।
ಹವಳ ಕೊಡಗಿನ । ಬೆಟ್ಟ ಸಾಲದು ।
ಮೋಡ ಮಾಲೆಯ । ಮುಡಿಯಿತೋ ॥

ದೂರ ದೂರದಿ ಕಂಡ ನೋಟವೋ
ರಂಗು ನಕ್ಷೆಯ ಚಂದವೋ ॥
ಬೆಟ್ಟ ಹತ್ತಿ । ನಿಂತು ನಿಂತು
ಹತ್ತಿ ನಡೆದು । ನಾ ಸೋತೆನೋ ॥

~ ~ ~

ಕೊಡಗಿನ ಕವಯಿತ್ರಿ ಮುಂಡೀರ ಜಯಾ ಅಪ್ಪಣ್ಣ

ಇವರು ಕೊಡಗಿನ ಬೇತುಗ್ರಾಮದವರು. ಇವರು ಕೈಗಾರಿಕೋದ್ಯಮಿಗಳು. ಕೊಡವ, ಕನ್ನಡ, ಇಂಗ್ಲಿಷ್‌ನಲ್ಲಿ ಒಟ್ಟು ೧೫೦ಕ್ಕೂ ಹೆಚ್ಚಿನ ಕವನ-ಹಾಡುಗಳನ್ನು ರಚಿಸಿದ್ದಾರೆ. ಇವರ ಕವನ ಸಂಗ್ರಹ ''ಪಾಟ್ ಜೊಪ್ಪೆ'' ಎನ್ನುವ ಪುಸ್ತಕವನ್ನು ಕರ್ನಾಟಕ ಕೊಡವ ಅಕಾಡೆಮಿ ಪ್ರಕಟಿಸಿದೆ. 'ವೇದಿಕೆ' ಎಂಬ ಮೂರು ನಾಟಕಗಳ ಸಂಗ್ರಹ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯಕೊಡವ ಮೇಳದಲ್ಲಿ ಬಿಡುಗಡೆಯಾಯಿತು.

ಬೆಂಗಳೂರು ದೂರದರ್ಶನದ 'ಕವನ ಕಾವೇರಿ' ಎಂಬ ಪ್ರಪ್ರಥಮ ಕವಿಗೋಷ್ಠಿಯ ಏಳು ಕವಿಗಳಲ್ಲೊಬ್ಬರಾಗಿದ್ದರು. ೧೯೯೭ರಲ್ಲಿ ಮೈಸೂರು ಜಗನ್ಮೋಹನ ಅರಮನೆಯಲ್ಲಿ ನಡೆದ 'ಕಾವ್ಯೋತ್ಸವ'ದಲ್ಲಿ ಕೊಡಗನ್ನು ಪ್ರತಿನಿಧಿಸಿದ ಕವಿಯಾಗಿ ಕೊಡವ ಹಾಗೂ ಕನ್ನಡ ಕವನ ವಾಚಿಸಿದ್ದರು. ಇವರ ಕವನ, ಹಾಡು, ನಾಟಕ, ಸಣ್ಣಕತೆಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇತ್ತೀಚೆಗೆ ಇವರ ಕೊಡವ ಹಾಡುಗಳ ಕ್ಯಾಸೆಟ್ ''ಪೊಂಗೊರ'' ಎಂಬ ಹೆಸರಲ್ಲಿ ಬಿಡುಗಡೆಯಾಗಿದೆ.

~ ~ ~

ನನ್ನೂರು ನನ್ನ ಜನ

ಮೂಲ : **ಕೊಡವ ಭಾಷೆ**

ಅನು : **ಮಂಡೀರ ಜಯಾ ಅಪ್ಪಣ್ಣ**

ನಾ ಬರೆವೆ ನನ್ನೂರ । ನನ್ನ ಜನ ವಿವರ ।
ನೀಸಿದ ಹಾಡು ನಡೆ । ಓ ಹಾಡುಗಾರ ।
ನೀನಾಗು ಕೇಳಿ ಇದ । ಸವಿ ಜೇನ ಭ್ರಮರ ।
ನನ್ನ ಕೈ ಇದ ಬರೆದು । ಕನ್ನಡ ಸಿರಿ ಅಮರ ॥ ನಾ ॥

ಅದೊ ನೋಡು ಧುಮ್ಮಿಕ್ಕಿ । ಹರಿವ ಕಾವೇರಿ ।
ಆ ಬೆಟ್ಟವೇ ಅವಳ । ಹುಟ್ಟು ಬ್ರಹ್ಮಗಿರಿ ।
ಆ ಪಚ್ಚೆ ಪೈರನ್ನೆ ಉಟ್ಟ । ಪುಷ್ಪಗಿರಿ ।
ಅದೆ ನಾಯ ಪೊಲಗೆದ್ದ । ವೀರ ಮಡಿಕೇರಿ ॥ ನಾ ॥

ರಾಜಗಜ ಜೋಡಾಗಿ । ನಿಂತಿಹಾ ಕೋಟೆ ।
ರಾಜಗದ್ದುಗೆ । ಮುದ್ದುರಾಜನಾ ಪೇಟೆ ।
ರಾಜ ಚಿಕ್ಕವೀರ । ರಾಜೇಂದ್ರ ಪೇಟೆ ।
ರಂಜನೆಗಿತ್ತಂದು ನಾಗರಹೊಳೆಯ ಬೇಟೆ ॥ ನಾ ॥

ಹರಡಿದೆ ಬಿಳಿ ಬಟ್ಟೆ । ಕಾಫಿಹೂ ಏಲಕ್ಕಿ ।
ಹೊತ್ತಿದೆ ಕಿತ್ತಲೆಹಣ್ಣು । ಮೆಣಸು ಸಣ್ಣಕ್ಕಿ ।
ಹಾಡುತ್ತಿದೆ ಇಂಚರವ । ಕೋಗಿಲೆ ಬೆಳ್ಳಕ್ಕಿ ।
ಹೆಜ್ಜೇನು ತೂಗುತಿದೆ । ಮರಮರದಿ ಸೊಕ್ಕಿ ॥ ನಾ ॥

ಹುಲಿಯ ಹಾಲನು । ಮೆದ್ದ ಚಂಗುಮಣಿಶೂರ ।
ಹಿಡಿದಾನೆ ಮಂಡೀರ । ಮುತ್ತಣ್ಣನೂರ ।
ಜಮ್ಮ ಕೊಡಗಿನ ಕವಿ । ಅಪ್ಪಚ್ಚವೀರ ।
ಜಾನಪದ ನಕ್ಷತ್ರ । ದೇವಯ್ಯಧೀರ ॥ ನಾ ॥

ತಿಮ್ಮಯ್ಯ ಕಾರ್ಯಪ್ಪ । ರಣಧೀರ ಕೂಟ ।
ತಿನ್ನು ನೀ ಕಾಡಂದಿ । ಬಿದಿರಮೆಳೆ ಊಟ ।
ಅಬ್ಬಿ ಜಲಪಾತವದೊ । ಅಬ್ಬಬ್ಬ ನೋಟ ।
ಅಲ್ಲಿ ರಾಜಸೀಟ । ಮಂಜುಮಣಿ ಪೀಠ ॥ ನಾ ॥

ನನ್ನಪ್ಪ ಕೊಡಗನಾವ । ಜರತಾರಿ ಪೇಟ।
ನೀ ನೋಡು ಜರಿದಟ್ಟಿ । ಕುಪ್ಪಸವ ತೊಟ್ಟ ।
ನಯ ಬೆಳ್ಳಿಸರ ಪೀಚೆ । ಕತ್ತಿಯಾ ಸೊಂಟ ।
ನನ್ನಜ್ಜ ಒಡಿಕತ್ತಿ । ಕೋವಿಯಾ ನಂಟ ॥ ನಾ ॥

ಸುಂದರೀ ನನ್ನವ್ವ । ಕೊಡವತಿ ಧೀರೆ ।
ಸಿಂಧೂರ ಹಣೆ ತುಂಬಿ । ಓಂದೆನೆರಿಗೆ ಸೀರೆ ।
ಚಂದ್ರಹಾರವ ತೊಟ್ಟು । ಎದೆಮೀಟಿ ನೀರೆ ।
ಚಂದನಸು ನಗುಮುಖಿದಿ । ಮಿನುಗುವಳು ತಾರೆ ॥ ನಾ ॥

~ ~ ~

ನಗರ ಪ್ರಶಾಂತವಾಗಿದೆ

ತೆಲುಗು : ಡಾ| ಸಿ. ನಾರಾಯಣರೆಡ್ಡಿ
ಅನು : ಮಾರ್ಕಂಡಪುರಂ ಶ್ರೀನಿವಾಸ

ನಿನಾದಗಳಿಲ್ಲ
ನಿರಶನ ಸಭೆಗಳಿಲ್ಲ
ಹೂಂಕಾರಗಳಿಲ್ಲ
ಮೆರವಣಿಗೆಗಳಿಲ್ಲ
ಸುಡುವ ಹಣೆಗಳಿಲ್ಲ
ಓಡುವ ಮುಷ್ಟಿಗಳಿಲ್ಲ
ಮುಷ್ಕರಗಳಿಲ್ಲ
ಸಂಘರ್ಷಗಳಿಲ್ಲ
ಪಂಥಗಳಿಲ್ಲ
ಸುಡುವಿಕೆಗಳಿಲ್ಲ.

ಕಾರ್ಟೂನುಗಳ ಗದ್ದಲವಿಲ್ಲ
ಕರಪತ್ರಗಳ ಹಾರಾಟವಿಲ್ಲ
ಎದೆ ಬಿರಿಯಲಿಲ್ಲ
ಧೂಳು ಕೊಡವಲಿಲ್ಲ
ಕಸುರೂ ಇಲ್ಲ
ಎಸೆತವಿಲ್ಲ
'ಧಮ್ಕೀ' ಇಲ್ಲ
ಧರಣಿ ಇಲ್ಲ
ಗಲಭೆ ಇಲ್ಲ
ಅಶಾಂತಿ ಇಲ್ಲ

ನಗರ ಪ್ರಶಾಂತವಾಗಿದೆ
ಅರೆ ಮುಚ್ಚಿದ ಕಣ್ಣಿನಂತೆ,
ಜಗತ್ತತ್ವವನ್ನು ಹಣೆದುಕೊಂಡ
ಭಗವದ್ಗೀತಾ ಸೂತ್ರದಂತೆ,
ಏನೋ?
ಈ ತೂಗುವ ಕಣ್ಣುಗಳಲ್ಲಿ
ಯಾವ ಚಂಡಮಾರುತಗಳವೆಯೋ
ಏನೋ?

~ ~ ~

ನಿನಗೊಂದು ಸಮುದ್ರ ಕೊಡುತ್ತೇನೆ

ತೆಲುಗು : ಡಾ। ಸಿ. ನಾರಾಯಣ ರೆಡ್ಡಿ
ಅನು : ಮಾರ್ಕಂಡಪುರಂ ಶ್ರೀನಿವಾಸ

ನಿನಗೊಂದು ಸಮುದ್ರ ಕೊಡುತ್ತೇನೆ.
ಅದನ್ನು ಮೈತುಂಬಾ ಹೊದೆದು ಮಲಗಿಕೊ.
ಆಗ ನೋಡು ನೀನು -
ಆಳವಾದ ಆಲೋಚನೆಯಾಗುತ್ತೀಯೆ.
ಧೈರ್ಯತುಂಬಿ ನಡೆಯುವ ಉಸಿರಾಗುತ್ತೀಯೆ.

ನಿನಗೊಂದು ರಸ್ತೆ ಕೊಡುತ್ತೇನೆ.
ಅದನ್ನು ನಿನ್ನ ಅಂಗಾಲುಗಳಿಗಂಟಿಸಿಕೊ.
ಆಗ ನೋಡು ನೀನು -
ಆಗ್ರಹವನ್ನು ಮುಷ್ಟಿ ಹಿಡಿಯುವ ದನಿಯಾಗುತ್ತೀಯೆ.
ಹಸಿವನ್ನು ಮೆರವಣಿಗೆ ಮಾಡುವ ಪ್ರಜೆಯಾಗುತ್ತೀಯೆ.

ನಿನಗೊಂದು ಆಕಾಶ ಕೊಡುತ್ತೇನೆ.
ಅದನ್ನು ಮಡಚಿ ನಿನ್ನ ಬುರುಡೆಯಲ್ಲಿ ತೂರಿಸಿಕೋ.
ಆಗ ನೋಡು ನೀನು -
ಗ್ರಹಗಳು ತಲೆದೂಗುತ್ತವೆ ಕೋಲೆಬಸವನಂತೆ,
ನಕ್ಷತ್ರಗಳು ಬೆರಳುಗಳಿಗೆಟಕುತ್ತವೆ ಬೆಣ್ಣೆಮುದ್ದೆಯಂತೆ.

ನಿನಗೊಂದು ಧ್ವಜ ಕೊಡುತ್ತೇನೆ -
ಅದನ್ನು ಬಿಚ್ಚಿ ನಿನ್ನ ಶ್ವಾಸಕ್ಕೇರಿಸಿಕೊ.
ಆಗ ನೋಡು ನೀನು -
ಪಥಚಲನೆ ಮಾಡುತ್ತವೆ ಸಮಿತ್ತುಗಳು ಪಂಜುಗಳಂತೆ,
ಪ್ರತಿಧ್ವನಿಸುತ್ತವೆ ಗುಡಿಸಿಲುಗಳು ಗುಹೆಗಳಂತೆ.

~ ~ ~

ಕೊಂಕಣಿಯ 'ಕವಿರಾಜ' ಡಾ. ಮನೋಹರರಾವ್ ಸರದೇಸಾಯಿ

ಗೌರೀಶ್ ಕಾಯ್ಕಿಣಿ

ನಮ್ಮ ಉತ್ತಮ ಭಾರತೀಯ ಆಂಗ್ಲ (Indo Anglican) ಕವಿಗಳಲ್ಲಿ ಒಬ್ಬರಾದ ಖ್ಯಾತಿವೆತ್ತ ಶ್ರೀ ಆರ್ಮಂಡೋ ಮೆನೇಜಸ್ ಅನ್ನುತ್ತಾರೆ - ''ಮನೋಹರರಾವ್ ಸರದೇಸಾಯಿಯವರಿಗೂ ಮುಂಚೆ ಪರಿಶುದ್ಧವಾದ ಗೋಮಾಂತಕೀಯ ಕಾವ್ಯವೆಂಬುದು ಇದ್ದಿಲ್ಲ''. ಗೋವೆಯ ವಿಲೀನೀಕರಣ ಭಾರತದಲ್ಲಿ ಆಗುವ ತನಕ ಅದು ಉಂಟಾಗುವುದು ಸಾಧ್ಯವಿಲ್ಲ. ಡಾ. ಮನೋಹರರಾಯರಿಗಿಂತ ಮುಂಚೆ ಭಾರತೀಯ-ಪೋರ್ತುಗೀಜ ಕಾವ್ಯವು ಇತ್ತು. ಹಾಗೆಯೇ ಗೋಮಾಂತಕೀಯರೇ ಬರೆದ ಭಾರತೀಯಾಂಗ್ಲ ಕಾವ್ಯವೂ ಇತ್ತು. ಆದರೆ ಅದು ಗೋವೆಯದೇ ಕಾವ್ಯವಾಗಿರಲಿಲ್ಲ. ಆದ್ದರಿಂದ ಅದು ನಿಜವಾದ ಕಾವ್ಯವಿದ್ದಿಲ್ಲ. ಇದೊಂದು ವಿರೋಧಾಭಾಸದ (Paradox) ವಾಕ್ಯವಲ್ಲ. ನೈಜ ಕಾವ್ಯದ ನೈಜಲಕ್ಷಣವೆಂದರೆ ಅದು ಯಾರ ಕುರಿತು ಬರೆದಿದೆಯೋ ಯಾರು ಅದನ್ನು ಹಾಡುತ್ತಾರೆಯೋ ಅವರ ಎದೆಯಲ್ಲಿ ಆ ಕಾವ್ಯ ಪಡಿನುಡಿಯಬೇಕು, ಪ್ರತಿಧ್ವನಿಗೊಳ್ಳಬೇಕು. ಮನೋಹರರಾಯರು ಗೋಮಾಂತಕೀಯ ಕೇಳುಗರ ಸಮುದಾಯಕ್ಕೆ ಓದಿ ಅಥವಾ ಹಾಡಿ ಕಾಣಿಸಿದಾಗ ಅದು ಆ ಜನರು- ಮೌನವಾಗಿಯೇ ಆಗಿರಲಿ- ಆ ಕಾವ್ಯವನ್ನು, ಈ ಕವಿಯನ್ನು ಕೊಂಡಾಡುವಂತೆ ಮಾಡಬಲ್ಲದು.

ಮನೋಹರರಾಯರ ಕಾವ್ಯವು ಜನರ ಹೃದಯವನ್ನು ನೇರವಾಗಿ ಹೋಗುತ್ತದೆ. ಅದಕ್ಕೂ ಹೆಚ್ಚಾಗಿ ಯಾವದೇ ಗೋಮಾಂತಕೀಯನು ಆದಷ್ಟೋ ಶಿಷ್ಟನೋ, ವಿಶಿಷ್ಟನೋ, ರಾಷ್ಟ್ರೀಯ ಭಾವವನ್ನು ಮೀರಿದವನೋ ಆಗಿರಲಿ, ಆತನ ಅಂತಃಕರಣವನ್ನು ನೇರವಾಗಿ ಪ್ರವೇಶಿಸುತ್ತದೆ.

ಕವಿ ಆರ್ಮಂಡೋ ಮೆನೇಜಸ್ ಅಂದದ್ದು ತ್ರಿಕಾಲಾಬಾಧಿತವಾದ ಸತ್ಯ. ''ಕವಿಗೆ ಕವಿ ಮುನಿವಂ'' ಎಂಬುದು ಅಷ್ಟು ಸತ್ಯವಲ್ಲ. ವರಕವಿಯ ಮರ್ಮವನ್ನು ಇನ್ನೊಬ್ಬ ವರಕವಿಯೇ ಬಲ್ಲ, ನರಕವಿಯಲ್ಲ. ನಿಜವಾದ ಮಾತೆಂದರೆ ಮನೋಹರ ಸರದೇಸಾಯರು ಬರೆದ ಪ್ರತಿಯೊಂದು ಪಂಕ್ತಿಯಲ್ಲಿಯೂ ಗೋವೆಯು ವಿಜೃಂಭಿಸುತ್ತದೆ. ಅಲ್ಲಿಯ

ಮಣ್ಣಿನ, ತೆಂಗು ಕೌಂಗಿನ, ಮೀನಸಾರಿನ, ಜಾಜಿ, ಮಲ್ಲಿಗೆ ಒಗರು ಕಂಪಿನ ಸೊಗಡನ್ನು ಸೂಸುತ್ತದೆ. ಗೋವೆಯನ್ನು ರೂಪುಗೊಳಿಸಿದ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಗತಿಗಳಿಗೆ ಒಂದು ಮನಮಿಡಿಯುವ ಪಡಿನುಡಿಯನ್ನು ನಾವು ಕೇಳುತ್ತೇವೆ. ಪೌರಾಣಿಕ ಪರಶುರಾಮನಿಂದ ಪೋರ್ತುಗೀಸ್ ದಬ್ಬಾಳಿಕೆಯವರೆಗೆ, ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಿಂದ ಡಾ. ರಾಮಮನೋಹರ ಲೋಹಿಯಾರು ಹೂಡಿದ ಗೋವಾ ವಿಮೋಚನೆಯ ಹೋರಾಟದವರೆಗೆ ವಿವಿಧ ಐತಿಹಾಸಿಕ ಘಟನೆಗಳಿಗೆ ಅವರ ಕಾವ್ಯವು ನಿರರ್ಗಳವಾಗಿ ಸ್ಪಂದಿಸುತ್ತದೆ.

ಡಾ. ಮನೋಹರರಾಯರ ಕವಿಚರಿತ್ರೆಯ ಹರವು ವಿಶಾಲ. ಐತಿಹಾಸಿಕ ಚುನಾವಣೆಗಳು, ಡಾ. ಲೋಹಿಯಾ-ಜವಾಹರಲಾಲರ ಭೆಟ್ಟಿಗಳು, ಸಾಹಿತ್ಯ ಅಕಾದೆಮಿಯಿಂದ ದೊರೆತ ಮನ್ನಣೆ, ಗೋವಾ ಕೊಂಕಣೆ ಮಂಡಲದ ಸ್ಥಾಪನೆ, ಅದರ ಅಧ್ಯಕ್ಷತೆ, ಕೊಂಕಣೆ ಸಾಹಿತ್ಯ ಸಮ್ಮೇಲನದ ಅಧ್ಯಕ್ಷತೆ ಇತ್ಯಾದಿ ಇತ್ಯಾದಿ ಮಹತ್ವದ ಮೈಲುಗಲ್ಲುಗಳು ಅದನ್ನು ಗುರುತಿಸುತ್ತವೆ.

ಗೋವೆಯ ಜನಮನದ ಜೀವನೋತ್ಸಾಹ (La Joie de Vivre) ಅವರ ಕಾವ್ಯಪ್ರತಿಭೆಯಲ್ಲಿ ವಾರಸ ಹಕ್ಕಿನಿಂದ ನೆಲೆಯೂರಿದೆ. ಅದು ಅಲ್ಲಿ ಗೋವೆಯ ಪ್ರಸನ್ನ ಜಲವಾಯು ಹಾಸು-ಬೀಸಿನಂತೆ ಆ ತೀರದಿಂದ ದೂರದೇಶಗಳ ತೀರದ ಕನಸುಗಳನ್ನು ಕಾಣುವ ಕುತೂಹಲದ ಅದಮ್ಯ ಒಲವನ್ನು ವ್ಯಕ್ತಗೊಳಿಸುತ್ತದೆ. ನಿಜವಾಗಿಯೂ ಮನೋಹರರಾಯರ ಕಾವ್ಯದ ಸೊಲ್ಲು ಸೊಲ್ಲುಗಳಲ್ಲಿ ಗೋವೆಯು ಮಿಡಿಯುತ್ತದೆ, ಸ್ನಿಗ್ಧ ಗಂಭೀರವಾಗಿ ನುಡಿಯುತ್ತದೆ.

ಈ ಕವಿಯ ಜನ್ಮ ೧೯೨೫ರಲ್ಲಿ ಪಣಜಿಯಲ್ಲಿ. ಇವರ ತಂದೆ ಶ್ರೀ ಲಕ್ಷ್ಮಣರಾವ್ ಸರದೇಸಾಯಿ ಸ್ವಯಂ ಮರಾಠಿಯಲ್ಲಿ ಅಗ್ರಗಣ್ಯ ಕಥಾಲೇಖಕರಾಗಿದ್ದರು. ಅವರ ನೆರಳಿನಲ್ಲಿ ನಲಿದಾಡಿದ ಮನೋಹರರಾಯರು ಪುಸ್ತಕಗಳ ಪ್ರಪಂಚದಲ್ಲಿಯೇ ಕೊನರಿದರು, ಕಳೆಗೊಂಡು ಬೆಳೆದರು. ಮನಮೆಚ್ಚುವಷ್ಟು, ಮನೆ ಮುಚ್ಚುವಷ್ಟು ಗ್ರಂಥ ಅವರ ಆಟೋಂಬಲವಾಯಿತು. ಅವರ ಜ್ಞಾನದೃಷ್ಟಿ, ಕಲಾಭಿರುಚಿ ಜಾಗೃತವಾಗಿ ಮನಸ್ಸು ಮೊಗಪಡೆಯಿತು. ಅವರು ಎಳೆ ವಯಸ್ಸಿನಿಂದಲೇ ಲಲಿತಲೇಖನದಲ್ಲಿ ತಮ್ಮ ಲೆಕ್ಕಣಿಯನ್ನು ಲೀಲಾಜಾಲವಾಗಿ ಪಳಗಿಸಿದರು. ಆರಂಭದಲ್ಲಿ ಅವರು ಬಹುಕಾಲ ಮರಾಠಿಯಲ್ಲಿಯೇ ಸಾಹಿತ್ಯವನ್ನು ನಿರ್ಮಿಸಿದರು. ಮರಾಠಿ ನಿಯತಕಾಲಿಕಗಳಲ್ಲಿ ಅವರ ಕಥೆ, ಲೇಖನಗಳು ಪ್ರಕಟಗೊಂಡವು.

ಆದರೆ ಅವರ ಪ್ರಥಮ ಕವನ ಸಂಗ್ರಹವು ಮೈಮೂಡಿ ಬಂದದ್ದು ಕೊಂಕಣಿಯಲ್ಲಿ. ''ಗೊಂಯಾ ತುಜಾ ಮೊಗಾಖಾತಿರ್'' (''ಗೋವೆಯೇ ನಿನ್ನ ಪ್ರೀತಿಗಾಗಿ''). ಇದು ೧೯೫೭-೫೮ರ ಅವಧಿಯಲ್ಲಿ. ಅದೂ ಫ್ರಾನ್ಸ್‌ದಲ್ಲಿ ಆಗ ಪ್ರಾಧ್ಯಾಪಕ ಮನೋಹರ

ಸರದೇಸಾಯರು ಫ್ರೆಂಚ್ ಸಾಹಿತ್ಯದ ಉಚ್ಚ ವ್ಯಾಸಂಗಕ್ಕಾಗಿ ಶಿಷ್ಯವೃತ್ತಿಯನ್ನು ಪಡೆದು ಪ್ಯಾರಿಸ್ಸಿಗೆ ಹೋದಾಗ ರಚಿಸಿದ್ದಾಗಿದೆ. ಫ್ರೆಂಚ್ ಸಾಹಿತ್ಯವನ್ನು ಲಲಿತ ಹಾಗೂ ವೈಚಾರಿಕ ಅಂಗದಲ್ಲಿ ಅವರು ವಿಶಾಲವಾಗಿ ಅರಗಿಸಿಕೊಂಡಿದ್ದರು. ಆದರೆ ಅವರ ಕಾವ್ಯ ಸ್ಫುರಿಸಿದ್ದು ತಾಯ್ನುಡಿ ಕೊಂಕಣಿಯಲ್ಲಿ. ಆಡುಮಾತಿನ ಸಲಿಗೆಯ ಖಾಸಗಿ ಋಷಿಯ ಕೊಂಕಣಿಯ ತಲೆಗೆ ಅವರು ಕಾವ್ಯದ ದಿವ್ಯ ಮುಕುಟವನ್ನು ಏರಿಸಿದರು! ಈ ಆತ್ಮಪ್ರತ್ಯಯದ ಜಾಗೃತಿ ಅವರಲ್ಲಿ ಸ್ವಚ್ಛಂದ ಸ್ವತಂತ್ರ ಫ್ರೆಂಚ್ ಸಾಹಿತ್ಯದ ಉಪಾಸನೆಯಿಂದಲೇ ಉಂಟಾಗಿರಬೇಕು.

ಮನೋಹರರಾಯರ ಕಾವ್ಯದ ಉತ್ತಮಾಂಶಗಳು ಈ ಪ್ರಥಮ ಪ್ರಕಟಣೆಯಲ್ಲಿಯೇ ಪ್ರಕಾಶಗೊಂಡವು- ತಮ್ಮ ಸರಳ ಸತ್ಯ ಸುಂದರ ಮತ್ತು ಓಜಸ್ವಿಯಾದ ಅರ್ಥಗೌರವಕ್ಕೆ ಚ್ಯುತಿಬಾರದ ಪದ ಲಾಲಿತ್ಯದಲ್ಲಿ. ಸ್ವಯಂ ಕವಿಗೆ ತನ್ನ ಆ ಕವನಗಳೆಲ್ಲಾ ಪ್ರಸಿದ್ಧಿ ಪಡೆಯುವವೆಂಬ ನಿರೀಕ್ಷೆ ಅಷ್ಟು ಇದ್ದಿಲ್ಲ. ಅವರು ಫ್ರಾನ್ಸಿನಿಂದ ಪ್ಯಾರಿಸ್ ವಿಶ್ವವಿದ್ಯಾಲಯವು ನೀಡಿದ ಡಾಕ್ಟರೇಟಿನೊಂದಿಗೆ ಮರಳಿ ಗೋವೆಗೆ ಬಂದ ನಂತರ ೧೯೬೧ರಲ್ಲಿ ಈ ಸಂಕಲನವು ಹೊರಗೆ ಬಂತು. ಸೋಜಿಗವೆಂದರೆ ಈ ಕಾವ್ಯದ ಒಕ್ಕಣೆ, ವಾಗ್ವೈರಣೆ ಅಲ್ಲಿಯ ಹಿಂದೂ ಮತ್ತು ಕ್ರೈಸ್ತ ಉಭಯ ಸಮಾಜದ ರಸಿಕರಿಗೆ ಒಮ್ಮೆಲೇ ಮೆಚ್ಚಿಗೆಯಾಯಿತು. ನವಿರಾದ ಮೃದು-ಮಧುರ ನಯಗಾರಿಕೆಯಿಂದ ಆ ಕವನಗಳು ಅಪೂರ್ವ ಕಾಂತಿ ತಳೆದು ನಳನಳಿಸುತ್ತಿದ್ದವು. ಈ ಸಂಕಲನಕ್ಕೆ ಡಾ. ರಾಮಮನೋಹರ ಲೋಹಿಯಾ ಅವರೇ ಮುನ್ನುಡಿ ಬರೆದರು. ಅದರಲ್ಲಿ ಅವರ ಉದ್ಗಾರ ಇದು: "It is rare to see father and son excelling in the same occupation; but where such a thing happens. it calls for a celebration... Manohar is gifted with the lyrical quality of which good poetry is made."

* * *

ಡಾ. ಮನೋಹರ ರಾಯರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮರಾಠಿ ಮತ್ತು ಪೋರ್ತುಗೀಜನಲ್ಲಿ ಆಯಿತು. ಪೋರ್ತುಗೀಜ ಗೋವೆಯ ಅಧಿಕೃತ ರಾಜವ್ಯವಹಾರದ ಭಾಷೆಯಾಗಿತ್ತು. ಫ್ರೆಂಚ್ ಅವರ ಎರಡನೆಯ (ಐಚ್ಛಿಕ) ಭಾಷೆ.

ಮಾಧ್ಯಮಿಕ ಶಿಕ್ಷಣ ಮುಗಿಸಿ ಮನೋಹರರು ಮುಂಬಯ ಮಿಲ್ಟನ್ ಕಾಲೇಜು ಸೇರಿದರು. ಅಲ್ಲಿ ಬಿ.ಎ. ಮತ್ತು ಎಂ.ಎ. ಮುಗಿಸಿದರು. ಅವೆರಡರಲ್ಲಿಯೂ ಅವರು ಪ್ರಥಮ ವರ್ಗದಲ್ಲಿ ಪ್ರಥಮರಾದರು! ಆಗ ಫ್ರೆಂಚ್ ಸರಕಾರದಿಂದ ಅವರಿಗೆ ಇನ್ನೂ ಉನ್ನತ ವ್ಯಾಸಂಗಕ್ಕಾಗಿ ಒಂದು ಶಿಷ್ಯವೃತ್ತಿ ದೊರೆಯಿತು - 1952ರಲ್ಲಿ, ಅದು ಅವರ ಒಂದು ಪ್ರಬಂಧಕ್ಕೆ ಆಗಿತ್ತು. "ಫ್ರಾನ್ಸಿನಲ್ಲಿ ಭಾರತದ ಬಿಂಬ" - ಆ ಪ್ರಬಂಧದ ವಿಷಯ. ಮುಂದೆ ಆರು ವರ್ಷ ಅವರು ಫ್ರಾನ್ಸಿನಲ್ಲಿಯೇ ಉಳಿದರು. ಪ್ಯಾರಿಸ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪಡೆದರು. ಆರು ವರ್ಷಗಳಲ್ಲಿ ಅವರು ಫ್ರೆಂಚ್ ಸಾಹಿತ್ಯ ಹಾಗೂ ಪ್ರಚಲಿತ

ಸಾಹಿತಿಗಳ ನಿಕಟ ಪರಿಚಯ ಮಾಡಿಕೊಂಡರು. ಒಂದು ಸೋಜಿಗವೆಂದರೆ, ಅವರಿಗೆ ಭಾರತದ ಅಂಥ ಸಂಪರ್ಕವೂ ಫ್ರೆಂಚ್ ಗ್ರಂಥಕರ್ತರ ಮುಖಾಂತರವೇ ಆಯಿತು! ಆಗಲೇ ಹೆಸರಾದ ಭಾರತೀಯ ಚಿತ್ರಕಾರರ ನಿಕಟ ಪರಿಯವೂ ಅವರಿಗೆ ಘಟಿಸಿತು. ಅಲ್ಲಿ ಸಾಹಿತ್ಯ ಪ್ರಜ್ಞೆ ಮಾತ್ರವಲ್ಲ; ಅವರ ರಾಜಕೀಯ ತಾತ್ವಿಕ ಸಂಸ್ಕಾರವೂ ತೀವ್ರವಾಗಿ ಬೆಳೆಯಿತು. ಪೋರ್ತುಗಾಲದ ಸರ್ವಾಧಿಕಾರಿ ಸಾಲಾಝಾರನ ದಬ್ಬಾಳಿಕೆಯನ್ನು ಪ್ರತಿಭಟಿಸುವ, ಪೋರ್ತುಗೀಜ ದೇಶಭಕ್ತರ ಮತ್ತು ಎಲ್ಲ ಬಗೆಯ ವಸಾಹತುಗಾರಿಕೆಯನ್ನು ಕಟುವಾಗಿ ವಿರೋಧಿಸುವ ಫ್ರೆಂಚ್ ಬುದ್ಧಿಜೀವಿಗಳ ಸಂಪರ್ಕವೂ ಮನೋಹರರಾಯರ ಮೇಲೆ ಘನವಾದ ಮುದ್ರೆಯೊತ್ತಿತು.''Right is wrong: Left is right'ಎಂಬ ಧೋರಣೆ ಅವರದಾಯಿತು. ಮುಂದೆ ಅವರ ಕವನಗಳಲ್ಲಿ ಒಡಮೂಡಿದ ಸಮಾಜವಾದದ ಛಾಯೆ ಈ ಸಮಾಗಮದ ಫಲ.

ತಾಯ್ನಾಡಿನಿಂದ ದೂರ ಸಮುದ್ರದಾಚೆಗೆ ಇರುವಾಗಲೇ ಮನೋಹರರಾಯರಲ್ಲಿ ತಮ್ಮ ತಾಯ್ನುಡಿ ಕೊಂಕಣಿಯ ಉತ್ಕಟ ಪ್ರೀತಿ ಉಕ್ಕೇರಿತು. ಅಲ್ಲಿಗೆ ಅವರ ಆ ತನಕದ ಮರಾಠೀ ಲೇಖನ ಹಿಂಜರಿಯಿತು. ತಮ್ಮದೇ ಆದ ವಾದ ವೈಖರಿ ಹಾಗೂ ಶಬ್ದ ಸೌಷ್ಠವದಲ್ಲಿ ಚಿತ್ರಮಯವಾಗಿ ರೂಪುಗೊಂಡು ಪುಂಖಾನುಪುಂಖವಾಗಿ ಅವರಿಂದ ಕೊಂಕಣಿ ಕವನಗಳು ಹೊರಹೊಮ್ಮಿದವು. ಹಿಂದೆ ಹೇಳಿದಂತೆ ೧೯೬೧ರಲ್ಲಿ ಅವರ ಕೊಂಕಣಿ ಕವನಗಳ ಪ್ರಥಮ ಸಂಕಲನ ಪ್ರಕಟವಾಯಿತು. ಗೋವೆಯ ವಿಮೋಚನೆಯ ನಂತರ ಆ ಕವನಗಳು ಗೋವೆಯ ಕುರಿತು ಪ್ರೀತಿ ಪುಲಕಿತವಾದ ಆ ಕೃತಿಗಳು - ಗೋವೆಯಲ್ಲಿ ಪ್ರಚುರವಾಗಿ ಪ್ರಚಾರಗೊಂಡವು.

ಈ ತನಕ ಡಾ. ಮನೋಹರರಾಯರ ೩೦-೩೫ ಕೃತಿಗಳು ಬೆಳಕು ಕಂಡಿವೆ. ಅವುಗಳಲ್ಲಿ ಹೆಚ್ಚು ಹೆಸರಾದವು ಇಂತಿವೆ- ''ಆಜರೆ ಡೊಲಾರ್ ಪಡ್ಲಿ ಬುಡ್ಲಿ'' (೧೯೬೧), ಗೊಂಯಾ ತುಜೆ ಮೊಗಾ ಖಾತಿರ್ (೧೯೬೧), ಜಾಯಾತ್ ಜಾಗೆ (೧೯೬೪), ಜಾಯೋಜುಯೊ (೧೯೭೦), ಪಿಸೋಲಿಂ (೧೯೭೮), ಮಜೆ ಗೊಂಕಾರಾನೋ, 'ಹೂಂದರಾನ್ ಚೀಸಭಾ, ಹೀ ಲೋಕ ಶಾಹಿ'- ಮುಂತಾದವು.

ಇವುಗಳಲ್ಲಿ ಕೊಂಕಣಿ ಭಾಷೆಯ ಮತ್ತು ಸಂಸ್ಕೃತಿಯ ಸಮರ್ಥನೆಯನ್ನು ಮೀರಿದ ಕೆಲವು ಕೃತಿಗಳಿರುತ್ತವೆ. ಉದಾ: ಜಯ ಪುಣ್ಯಭೂಮಿ ಜಯ ಭಾರತ (೧೯೬೫). ಇವರ ಜಾಯೋ ಜುಯೋ ಕವನ ಸಂಗ್ರಹ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಪುರಸ್ಕಾರವನ್ನು ಗಳಿಸಿತು.

ಈ ಜಾಯೋ ಜುಯೋ ಕವನಗಳು ರವೀಂದ್ರನಾಥ ಠಾಗೋರರ 'Stray Birds' (ಬಿಡಿ ಹಕ್ಕಿಗಳು) ಎಂಬ ಪ್ರಸಿದ್ಧ ಕವನ ಸಂಕಲನದ ಮಾದರಿಯಾಗಿವೆ- ಅವುಗಳ ಸಂಕ್ಷಿಪ್ತ ಸೂಕ್ತ ಶೈಲಿಯಲ್ಲಿ. ಆದರೆ ಇವೆಲ್ಲಾ ತೀರ ಮೌಲಿಕ, ಸ್ವತಂತ್ರ ಕೊಂಕಣಿಯ ಜಾಡಿನಲ್ಲಿಯೇ

ಹೊರತು ಠಾಗೋರರ ಅನುಕರಣವಲ್ಲ. ಈ ಕವನಗಳೆಲ್ಲಾ ಗೋವೆಯ ರಸಿಕ ಸಮುದಾಯದಲ್ಲಿ ಅತ್ಯಂತ ಜನಪ್ರಿಯವಾಗಿವೆ. ಅಭಿವ್ಯಕ್ತಿಯ ಸಾಚಾ-ಸರಳತನ ಮತ್ತು ಸಮೃದ್ಧವಾದ ಕಾವ್ಯಗುಣದಿಂದಾಗಿ ಈ ಜಾಯೋ ಜುಯೋ ಸಂಕಲನವು ಸಾಮಾನ್ಯ ರಸಿಕ ಜನರಲ್ಲಿ ಹೇಗೋ ಇತರ ಕವಿ ಸಮೂಹದಲ್ಲಿಯೂ ಪ್ರೀತಿ ಮತ್ತು ಪ್ರಶಂಸೆಗೆ ಕಾರಣವಾಗಿದೆ.

ಹಾಗೆಯೇ ಮನೋಹರರಾಯರ 'ಪಿಸೋಲಿಂ' (ಪಾತರಗಿತ್ತಿ ಪತಂಗಗಳು) ಸಂಕಲನದಲ್ಲಿ ತೀರ ವ್ಯಕ್ತಿಗತ ಎನಿಸುವ ಉದ್ಗಾರಗಳಿವೆ. ಆದರೆ ಒಂದೊಂದು ಕವನವೂ ಭಾವುಕ ಓದುಗನಿಗೆ ಒಂದು ವೈಣಿಕ (Lyrical) ಸತ್ವದ ಸ್ಪಂದನವನ್ನು ಒದಗಿಸುತ್ತದೆ. ಇವು ಚೀನಿ 'ಹೈಕು'ಗಳಂತೆ ಚಿಕ್ಕಪುಟ್ಟ ಕವನಗಳು. ಕೆಲವಂತೂ ಕೇವಲ ಎರಡು ಮೂರು ಸಾಲಿನವು. ಕಿರಿದಾದರೂ ಅರ್ಥಗೌರವದಲ್ಲಿ ಹಿರಿದಾದವು..

ಡಾ. ದೇಸಾಯಿಯರ ಕಾವ್ಯದ ಪ್ರಭಾವ ಕೊಂಕಣಿ ಕಾವ್ಯಲೋಕದ ಮೇಲೆ ಘನವಾಗಿ ಆಗಿದೆ. ಅವರ 'ಜಾಯೋ ಜುಯೋ' ಕವನಗಳು ಇನ್ನೊಬ್ಬ ಹಿರಿಯ ಕವಿ ಶ್ರೀ ಬಿ. ಬಿ. ಬೋರಕರ ಅವರ ಮೇಲೆ ಆಳವಾದ ಪ್ರಭಾವ ಬೀರಿವೆ. ನಿಜವಾಗಿಯೂ ಕೊಂಕಣಿ ಕಾವ್ಯಲೋಕದಲ್ಲಿ ಶ್ರೀ ಬೋರಕರ, ಶ್ರೀ ಆರ್. ವಿ. ಪಂಡಿತ ಮತ್ತು ಡಾ. ಮನೋಹರ ಸರದೇಸಾಯಿ ದಿಗ್ಗಜರಿದ್ದಂತೆ. ಬೋರಕರರು ಬಹುಕಾಲ ಮರಾಠಿ ಸಾಹಿತ್ಯದಲ್ಲಿ ಉದ್ದಾಮ ಕವಿಯಾಗಿ ಮೆರೆದವರು. ಆಮೇಲೆ ಕೊಂಕಣಿಗೆ ಒಲಿದವರು. ಪಂಡಿತರು ಕೊಂಕಣಿಯಲ್ಲಿ ವಿಪುಲ ಕವನಗಳನ್ನು ಬರೆದವರು.(ಅವುಗಳಲ್ಲಿ ಹಲವಾರು ಕವನಗಳನ್ನು ನಿವೃತ್ತ ನ್ಯಾಯಾಧೀಶ ಶ್ರೀ ಗ್ರೇ ಅವರು ಇಂಗ್ಲಿಷಿಗೆ ಅನುವಾದಿಸಿದ್ದಾರೆ.) ಆದರೆ ಅವರ ಕಾವ್ಯದಲ್ಲಿ ಕಸುವು ಇದ್ದಷ್ಟು ಮಟ್ಟದಲ್ಲಿ ನವಿರು ಇಲ್ಲ (More force than grace). ಆದರೆ ನಮ್ಮ ಮನೋಹರರಾಯರ ಕಾವ್ಯ ಸುಕುಮಾರ, ಸುಂದರವಿದ್ದಷ್ಟೇ ಸತ್ವಶಾಲಿ. ಮಾತಿನ ಮೇಲೆ ಅವರ ಹಿಡಿತ ಅಪ್ರತಿಮ. (ಇವರ ಕೆಲವು ಮಾದರಿಗಳನ್ನು ಕೊನೆಗೆ ಕೊಡಲಾಗಿದೆ). ಇನ್ನೊಂದು ವಿಶೇಷವೆಂದರೆ ಇವರು ಮಕ್ಕಳ ಬಗ್ಗೆಯೂ ಮೂರು ನಾಲ್ಕು ಸಂಕಲನಗಳಲ್ಲಿ ಕವನಿಸಿದ್ದಾರೆ (ಅವು 'ಗೋಡ್ ಗೋಡ್ ಗೀತ'' ಎಂದು ಹೆಸರಾಗಿವೆ). ಅವುಗಳಲ್ಲಿ ಒಂದು 'ಬೇಬಿ ಚೆ ಶಾಜರ.' ಬಾಲಪ್ರಪಂಚದಲ್ಲಿ ಬಹಳ ಪ್ರಿಯವಾಗಿದೆ.

ಡಾ. ಮನೋಹರರಾಯರು ವರಕವಿಗಳು 'ಕವೀನಾಂ ಕವೀ''. ೧೯೬೬ರಲ್ಲಿ ಗೋವೆಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸಂಘವು ಮನೋಹರರಾಯರಿಗೆ ಸಮರ್ಪಕವಾಗಿಯೇ 'ಕವಿರಾಜ' ಎಂಬ ಬಿರುದನ್ನು ಅರ್ಪಿಸಿತು. ಆಕಾಶವಾಣಿಯ ದೇಶಭಕ್ತಿ ಕಾವ್ಯದ ಪ್ರಥಮ ಪಾರಿತೋಷಕವೂ ಅವರಿಗೆ ಸಂದಿತು.

* * *

ಡಾ. ಮನೋಹರ ಸರದೇಸಾಯಿಯವರಿಗೆ ಕಾವ್ಯವು ಶ್ರೀಮುಖ. ಇದರ ಜೊತೆಗೇ

ಅವರ ಕರ್ತೃತ್ವಕ್ಕೆ ಇತರ ಭಾಗ್ಯಮುಖಗಳೂ ಇವೆ. ಅವೆಲ್ಲ ಈ ಕವಿರಾಜನ ಸಾರ್ವಜನಿಕ ಸನ್ಮಾನಕ್ಕೆ ಕಾರಣವಾಗಿವೆ. ಅವರು ಫ್ರೆಂಚ್ ಸಾಹಿತ್ಯದ ಪ್ರಾಧ್ಯಾಪಕರಾಗಿ ಮುಂಬೈಯ ವಿಲ್ಸನ್ ಕಾಲೇಜಿನಲ್ಲಿಯೂ, ಸೋಮಯ್ಯ ಕಾಲೇಜಿನಲ್ಲಿಯೂ ಸೇವೆ ಸಲ್ಲಿಸಿದರು. ಹೆಲ್‌ಸಂಕಿಯಲ್ಲಿ ವರ್ಲ್ಡ್ ಏಸೋಸಿಯೇಶನ್ ಆಫ್ ರೆಫ್ಯೂಜೀಸ್ ಪ್ರಾಬ್ಲಮ್ಸ್ ಸಂಘಟನೆಯ ವಿಶ್ವಪರಿಷತ್ತಿನಲ್ಲಿ ಭಾಗವಹಿಸಿದ್ದರು (೧೯೫೬). ಸ್ವಾತಂತ್ರ್ಯ ಮತ್ತು ಶಾಂತಿಯ ವಿಶ್ವಸಂಘಟನೆಯ ಅಧಿವೇಶನದಲ್ಲಿ ಭಾಗವಹಿಸಿದ್ದರು. ಹುಂಬರ್ಗದಲ್ಲಿ, ದಿಲ್ಲಿಯಲ್ಲಿ ಆಕಾಶವಾಣಿಯ ಕಾರ್ಯವಾಹಿಗಳಾದರು. ವಿದೇಶ ಸೇವೆಯಲ್ಲಿ (೧೯೬೦). ಮಾರ್ಮಗೋವಾದಲ್ಲಿ ಆನೆಯ ಕೊಂಕಣಿ ಪರಿಷತ್ತಿನ ಅಧ್ಯಕ್ಷರಾದರು (೧೯೬೨). ಗೋವೆಯ ಕೊಂಕಣಿ ಬಾಷಾ ಮಂಡಳದ ಅಧ್ಯಕ್ಷರಾದರು (೧೯೬೪ ರಿಂದ ೭೦ರ ತನಕ). ಗೋವಾದಲ್ಲಿ ಫ್ರಾನ್ಸ್ ಅಸೋಸಿಯೇಶನ್ ಸ್ಥಾಪಿಸಿದರು (೧೯೭೦). ಎರಡು ಸಲ ಗೋವಾ ಕಲಾ ಅಕಾಡಮಿಯಿಂದ ಪುರಸ್ಕಾರ (೧೯೭೨ ಮತ್ತು ೭೩). ರಷ್ಯಾಕ್ಕೆ ಪ್ರಯಾಣ - ಶಿಷ್ಯವೃತ್ತಿ ಪಡೆದರು (೧೯೭೭). ಮುಂಬೈ ವಿಶ್ವವಿದ್ಯಾಲಯದಲ್ಲಿ ಫ್ರೆಂಚ್ ರೀಡರ್ ಆಗಿ ಕೆಲಸ ಮಾಡಿದರು (೧೯೭೮-೮೫). ಸಾಹಿತ್ಯ ಅಕಾಡೆಮಿಯಿಂದ 'ಪಿಸೋಲಿಂ' ಕವನ ಸಂಕಲನಕ್ಕೆ ಪುರಸ್ಕಾರ ಪಡೆದರು (೧೯೮೦). ಗೋವಾ ವಿಶ್ವವಿದ್ಯಾಲಯದಲ್ಲಿ ಫ್ರೆಂಚ್ ಮತ್ತು ಪೋರ್ತುಗೀಸ್ ಅಧ್ಯಾಪನಕ್ಕೆ ಕೋ-ಆರ್ಡಿನೇಟರ್ (೧೯೮೫-೯೦), ಗೋವಾ ಕೊಂಕಣಿ ಅಕಾಡೆಮಿಯ ಉಪಾಧ್ಯಕ್ಷ (೧೯೮೫-೯೨), ಕೊಂಕಣಿ ವಿಶ್ವಕೋಶಕ್ಕೆ ಸಂಪಾದಕ (೧೯೯೧), ಗೋವಾ ಸರಕಾರದಿಂದ ಸಾಂಸ್ಕೃತಿಕ ಪ್ರಶಸ್ತಿ ಪ್ರಾಪ್ತಿ (೧೯೯೧-೯೨), ಅಂತರರಾಷ್ಟ್ರೀಯ ಲಯನ್ಸ್ ಕ್ಲಬ್ ಪ್ರಶಸ್ತಿ (೧೯೯೨-೯೩), ಹಿಂದಿ ಅಕಾಡೆಮಿಯಿಂದ ಸಾತವಾಹನ ಪ್ರಶಸ್ತಿ (೧೯೯೩).

ಇಷ್ಟೆಲ್ಲಾ ಸನ್ಮಾನ-ಮನ್ನಣೆಗಳಿಂದ ವಿಭೂಷಿತರಾದ ಡಾ. ಮನೋಹರ ಸರದೇಸಾಯಿ ಕೊಂಕಣಿಯ ಕವಿ, ಜನತೆಯ ಕವಿ ಮಾತ್ರವಲ್ಲ ಕವಿಗಳ ಕವಿ. ಕಾವ್ಯವು ಅವರಿಗೆ ಒಂದು ಚಿರಂತನ ಶೋಧ. ''ಹಾಳೆಗಳ ಉಸುಕಿನ ಮರುಳುಗಾಡಿನಲ್ಲಿ ಶಬ್ದಗಳ ಒಂಟೆಗಳೊಂದಿಗೆ ನಾನು ಓಯಸಿಸ್ಸಿನ ಹುಡುಕಾಟದಲ್ಲಿ ಇದ್ದೇನೆ'' ಎನ್ನುತ್ತಾರೆ ಈ ಕವಿರಾಜರು.

~ ~ ~

'ಕವಿರಾಜ'ರ ಕೆಲವು ಆಯ್ದ ಕವನಗಳು

ಕೊಂಕಣಿ : ಡಾ। ಮನೋಹರರಾವ್
ಅನು : ಗೌರೀಶ ಕಾಯ್ಕಿಣಿ

(ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತ 'ಪಿಸೋಳಿಂ' ಮತ್ತು ಇನ್ನಿತರ ಕೃತಿಗಳಿಂದ ಆಯ್ದ ಕೆಲವು ಮಾದರಿಗಳ ಅನುವಾದ)

ಬಹಳ ಬಹಳ ಮಾಡುವುದಿದೆ
ರಕ್ತದಿಂದ ಹೊಲ ಸಿಂಪಡಿಸುವುದಿದೆ
ಬದುಕು ಬಂಡೆಗೆ ಕರುಳು ತಿಕ್ಕಿ
ಮಿಂಚು ಜಗಕೆ ಕೊಡವುದಿದೆ !

* * *

ನನ್ನ ಉತ್ತರ ಗುದ್ದಲಿಯದು
ಮಣ್ಣು ಮೊಗೆವ ಕುಠಾರಿಯದು
ಚಾಲೂಕಿನ ಪೆಟ್ಟು ತಿಂದು
ಕಲ್ಲು ಒಡೆವ ಕುಟುಕಸದು !

* * *

ಸಲೀಸು ಉತ್ತರ
ನೇರ ಕತ್ತು
ಇಷ್ಟೇ ನನಗೆ
ಸಿಗಲಿ ಸಂಪತ್ತು

* * *

ಸಂಜೆಯ ಜಾವಿನ ನೆಳಲಿನಂತೆ
ತಾಯಿ ನೆಲದ ರಾಗ ಮಮತೆ
ಉದ್ದ ಉದ್ದ ಚಾಚುತ್ತದೆ.

* * *

ಸಂಸಾರದಲ್ಲಿ ಎಲ್ಲಿದ್ದರೂ
ಅವನ ಮನಸ್ಸಿನಲ್ಲಿ ಗೋವೆ
ಮತ್ತು ಸದಾ ಕಣ್ಣ ಮುಂದೆ
ತೂಗಾಡುವ ತೆಂಗು-ಬಾಳೆ.

* * *

ಮಾತಿನ ಬತ್ತಿ ಹೊಸೆದು
ಹಚ್ಚಿದೆ ಚಿಂತನೆಯ ಜ್ಯೋತಿ
ಅಲ್ಪವಾದರೂ ಮಾಡಿದೆ ಪೂಜೆ
ಬೆಳಕಿನದು

* * *

ಮಾಡುವಿಯೇನು? ಬರೆಯುವೆಯಾ
ಬೆಳಕಿನ ಕಡಲಲ್ಲಿ
ನೆಳಲು ಗೀರುವೆಯಾ?

* * *

ದುಃಖ ಮರೆಯಿಸಲು ನಗುವೆ
ಇಡಿಯ ಸಂಸಾರ ವಂಚಿಸುವೆ!

* * *

ತುಂಬಿದ ಪೇಟೆ
ಯಾವುದು ನಿನ್ನದು?
ಯಾವುದು ನನ್ನದು?

* * *

ಗೃಹಸ್ಥನ ಮೋಟರು ಮುರಿಯುತ್ತದೆ
ಆಗ ಅದನ್ನು
ಬಡವ ದೂಡಬೇಕಾಗುತ್ತದೆ

* * *

ಗೃಹಸ್ಥ ಹೇಳುತ್ತಾನೆ-
''ಹಸಿವೆ ಆಗೊಲ್ಲಾ
ಮದ್ದು ಕೊಡು!''
ಬಡವ ಎನ್ನುತ್ತಾನೆ-
''ಹಸಿವೆ ಆಗ್ತದೆ
ವಿಷ ಕೊಡು''.

* * *

ನಾನಾದೆನಿಂದು ಸಂಪಿಗೆ
ಎಲೆಗಳೆಲ್ಲಾ ಉದುರಿ ಬಿದ್ದವು ಧರೆಗೆ
ಮೈತುಂಬ ಹೂವೇ ಹೂವು ನನಗೆ

* * *

ಹೂವಿಗೆ ಹೇಳಿದೆ ''ಅರಳಬೇಡ''
ಹೂವು ಹೇಳಿತು ''ಆಡಬೇಡ''

* * *

ಎಣ್ಣೆ ಸಂದಿತು
ಬತ್ತಿ ಬಿದ್ದಿತು
ಹಣತೆ ಮಾತ್ರ
ಹಾಗೆಯೇ ಉಳಿಯಿತು!

* * *

ಉತ್ತರಗಳೆಲ್ಲವೂ ಹುಚ್ಚು
ಶಾಣೆತನ ಕಲಿಸುವುದು ಯಾರಿಗೆ
ಮತ್ತು ಹೇಗೆ?

* * *

ಬತ್ತಿ ಉರಿಯಿತು
ರಾತ್ರಿ ಸರಿಯಿತು
* * *

ಚೆನ್ನಾಯಿತು
ತರುಣಿ ಇದ್ದಾಗಲೇ ಬಿಟ್ಟು ಹೋದಿ
ನನ್ನ ಮನದಲ್ಲಿ
ನೀನು ಎಂದೆಂದಿಗೂ
ತರುಣಿಯೇ ಉಳಿದಿ
* * *

ಇಂದು ನನ್ನ ಗೋವೆಯಲ್ಲಿ
ನೋಡು
ಅದೆಷ್ಟು ಜನ ಸವೆಯುತ್ತಾರೆ
ಜಡಿಮಳೆಯ ಧಾರೆಯಡಿಗೆ
ಕಂಬಳಿ ಇಲ್ಲದೆ ನಡೆಯುತ್ತಾರೆ
ಎಷ್ಟು ಪೋರರು ಹಿಟ್ಟು-ನೀರು
ಹಾಲೆಂದು ಸುರಿಯುತ್ತಾರೆ !
* * *

ಇಂದು ಇಲ್ಲಿ ಹೊಸ ಗೋವೆಯಲ್ಲಿ
ಹೊಸ ಯುಗವೆ ಒದಗಿದೆ
ಬೂದಿಯೊಳಗಿನ ಕಿಡಿ ಎಚ್ಚೆತ್ತು
ಕೆಂಡವಾಗಿ ಉರಿವಿದೆ.
* * *

ಮಹಿಳಾ ಶೋಷಣೆಯ ವಿರುದ್ಧ ಬಂಡಾಯದ ಧ್ವನಿಯೆತ್ತುವ ಅಮೃತಾ ಪ್ರೀತಮ್

ಪ್ರಸಿದ್ಧ ಪಂಜಾಬಿ ಕವಯಿತ್ರಿ. ''ಕಾಗಜ್ ತೆ ಕ್ಯಾನ್‌ವಾಸ್''ಎಂಬ ತಮ್ಮ ಕಾವ್ಯಕ್ಕಾಗಿ 1981ರಲ್ಲಿ ಭಾರತೀಯ ಜ್ಞಾನಪೀಠ ಪುರಸ್ಕಾರವನ್ನು ಪಡೆದವರು. ಪಂಜಾಬಿ ಭಾಷೆಗೆ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟವರೆಂಬ ಅಗ್ಗಳಿಕೆಯೂ ಇವರದೇ. 1957ರಲ್ಲಿ ''ಸುನಹರೆ'' ಎಂಬ ಕವನ ಸಂಕಲನಕ್ಕೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದರು. ಇವರು ಹುಟ್ಟಿದ್ದು ಆಗಸ್ಟ್, 31, 1919ರಲ್ಲಿ ಗುಜರಾಮ್‌ವಾಲಾದಲ್ಲಿ. ಮೂಲತಃ ಕವಯಿತ್ರಿಯಾದ ಅಮೃತಾ ಪ್ರೀತಮ್ ಅವರು ಸಣ್ಣಕಥೆ, ಕಾದಂಬರಿ, ಪ್ರಬಂಧ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ನೀಡಿದ್ದಾರೆ. ಯಾವನೇ ವ್ಯಕ್ತಿಯ ಜೀವನದಲ್ಲಿ ಪ್ರೇಮವನ್ನು ಮೂಲಭಾವನೆಯನ್ನಾಗಿ ಪರಿಗಣಿಸುವ ಅಮೃತಾ ಪ್ರೀತಮ್ ತಮ್ಮ ಕಾವ್ಯದಲ್ಲಿ ಅದನ್ನೇ ಮುಖ್ಯ ಸಾಧನವನ್ನಾಗಿ ಪರಿಗಣಿಸುತ್ತಾರೆ. ತಮ್ಮ ಕಾವ್ಯದಲ್ಲಿ ಮಹಿಳೆಯರ ಶೋಷಣೆಯ ವಿರುದ್ಧ ಬಂಡಾಯದ ದನಿ ಎತ್ತುತ್ತಾರೆ. ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ತಮ್ಮ ತಿರಸ್ಕಾರವನ್ನು ವ್ಯಕ್ತಪಡಿಸುತ್ತಾರೆ. ''ಪತ್ತರ್ ಗೀತ್''ಮತ್ತು ''ಲಾಮ್ ತಾನ್ ಮೌನ್'' ಆ ಬಗೆಯ ಕವನಗಳನ್ನು ಒಳಗೊಂಡಿರುವ ಕವನ ಸಂಕಲನಗಳು.

ವಿಶಿಷ್ಟ ಭಾವಗೀತಾತ್ಮಕ ಗದ್ಯಶೈಲಿಯ ಬರಹಗಾರ್ತಿ ಎಂದು ಹೆಸರಾಗಿದ್ದಾರೆ.

'ಅಲ್ಹಣಾ' 'ಇಕ್ಸ್‌ಸ್ವಾಲ್'- ಇವರ ಹೆಸರಾಂತ ಕಾದಂಬರಿಗಳು. ಜಂಗ್ಲೀಬೂಟ್, ಚಂದ್ರಿದ ಹೌಂಕಾ, ಆಖ್ರೀಖತ್, ಅಜನಬಿ - ಅವರ ಸಣ್ಣಕಥಾ ಸಂಕಲನಗಳು.

''ರಸೀದಿ ಟಿಕೆಟ್'' ಅವರ ಆತ್ಮಕಥೆ.

~ ~ ~

ಬರಲಿಲ್ಲ ನೀನು

ಪಂಜಾಬಿ : ಅಮೃತಾ ಪ್ರೀತಮ್
ಅನು : ರಾ. ಲಕ್ಷ್ಮೀನಾರಾಯಣ

ಚೈತ್ರ ಮಗ್ಗುಲು ಬದಲಾಯಿಸಿತು
ಕುಸುಮಗಳು ವರ್ಣಗಳ ಮೇಳಕಾಗಿ
ರೇಷ್ಮೆಯನು ರಾಶಿ ಮಾಡಿದುವು.
ಬರಲಿಲ್ಲ ನೀನು.

ಹಗಲುಗಳು ದೀರ್ಘವಾದುವು
ದ್ರಾಕ್ಷಿಗಳು ಕೆಂಪಾದುವು
ಕುಡುಗೋಲುಗಳು ಗೋಧಿತೆನೆಗಳನು ಮುದ್ದಿಸಿದುವು
ಬರಲಿಲ್ಲ ನೀನು.

ಮುಗಿಲುಗಳ ಸಾಮ್ರಾಜ್ಯ ಬೀಡುಬಿಟ್ಟಿತು
ಭೂಮಿ ತನ್ನ ಎರಡೂ ಕೈಚಾಚಿ
ಆಗಸದ ಕರುಣ ವರುಷವನು ಕುಡಿಯಿತು
ಬರಲಿಲ್ಲ ನೀನು.

ಮರಗಳು ಮಾಟ ಮಾಡಿದುವು
ಕಾಡಕಡೆಯಿಂದ ಬೀಸಿಬಂದ
ಎಲರ ತುಟಿಗಳಲಿ
ಜೇನಹನಿಗಳನು ತುಂಬಿದವು
ಬರಲಿಲ್ಲ ನೀನು.

ಋತು ಒಂದು ಜಾದೂ ಮಾಡಿತು
ತಿಂಗಳುದಯಿಸಿ ರಜನಿಯ ಹಣೆಯಲಿ
ಮಸ್ತಕಾಭರಣವನು ತೊಡಿಸಿಬಿಟ್ಟ
ಬರಲಿಲ್ಲ ನೀನು.

ತಾರೆಗಳು ಇಂದು ಮತ್ತೆ ಹೇಳಿದುವು
ವಯಸ್ಸಿನ ಅಂಗಳದಲ್ಲಿ
ಈಗಲೂ ದೈವದ ದೀಪಗಳು
ಉರಿಯುತ್ತಿವೆ ಎಂದು
ಬರಲಿಲ್ಲ ನೀನು.

ಗಾಢ ನಿದ್ರೆಯ ತಳದಿಂದ
ಈಗಲೂ ಬೆಳಕು ಹೊರಹೊಮ್ಮುತ್ತಿದೆ ಎಂದು
ಕಿರಣಗುಚ್ಛವದು ಸಾರುತ್ತಿದೆ
ಬರಲಿಲ್ಲ ನೀನು.

~ ~ ~

ಚಳಿ

ಪಂಜಾಬಿ : **ಅಮೃತಾ ಪ್ರೀತಮ್**
ಅನು : **ಡಿ. ಭರತ್**

ನನ್ನ ಜೀವ ನಡುಗಿತು,
ನೀಲಿಯಾಯಿತು ತುಟಿಗಳು
ಶುರುವಾಯಿತು
ಕಂಪನ ನನ್ನ ಪಾದಗಳಿಂದ

ಬಾಳೆಂಬ ಈ ಬಾಂದಳದ ನಡುವೆ
ಗತಕಾಲದ ಮೋಡಗಳು ಗುಡುಗಿ
ಶೀತಲ ಆಲಿಕಲ್ಲುಗಳು
ನ್ಯಾಯದಂತೆ ತುಂಬಿವೆ ನನ್ನಂಗಳದಲಿ

ಕೇರಿಗಳ ನಡುವಿನ ಕೆಸರಿನಾಳದೊಳಗೆ ಸಾಗಿ
ನನ್ನ ಬಳಿ ನೀ ಬಂದರೆ
ನಿನ್ನ ಪಾದಗಳ ತೊಳೆಯುವೆ
ಮತ್ತು ಹೊಲಿಗೆಯೇರಿಸಿ
ನಿನ್ನ ಸಮಸ್ತ ಕಂಬಳಿಯ ಕೆಳಗೆ
ಬಹುಶಃ ನನ್ನ ಕೈ ಪಾದಗಳ ಬೆಚ್ಚಗಿರಿಸಿ

ಒಂದು ಲೋಟದ ಸೂರ್ಯಕಾಂತಿ
ಉಸಿರು ಹೀರಲು ಆಸ್ಪದ ಕೊಡಲಿ ನನಗೆ;
ಮತ್ತದೇ ಸೂರ್ಯಕಾಂತಿಯ ಚೂರನ್ನು
ನನ್ನ ಗರ್ಭದೊಳಗೆ ನಿರಿಗೆಯಾಗಿಸಿ
ಬಹುಶಃ ಹೀಗೇ
ಕಳೆಯುತ್ತಿದೆ ನನ್ನ ಜೀವನವೆಂಬ ಚಳಿಗಾಲ.

ಒಂದು ಕತೆ

ಪಂಜಾಬಿ : ಅಮೃತಾ ಪ್ರೀತಮ್
ಅನು : ಡಿ. ಭರತ್

ಪರಿಶುದ್ಧ ಹಾಲಂತೆ ನನ್ನ ಪ್ರೀತಿ
ಎಷ್ಟೋ ವರುಷದ ಹಳೆಯ ಅಕ್ಕಿಯಂತೆ
ಗೀಚಿದ ಮತ್ತು ತೊಳೆದ
ಮಣ್ಣಿ ಮಡಕೆಯಾ ಹೃದಯದಲಿ

ನೆನೆದ ಸೌದೆಯಂತೆ ಜಗವು
ಎಲ್ಲವೂ ಮಂಕಾಗಿ ಜೊತೆಯ ಹೊಗೆಯಲಿ
ರಾತ್ರಿಯ ಹಿತ್ತಾಳೆ ಪಾತ್ರೆಯಂತೆ
ನಿಸ್ತೇಜವಾದ ಬೆಳ್ಳಿಯ ಲೇಪ ಚಂದಿರ

ಕಲ್ಪನೆಗಳು ಮಸುಕಾಗಿ
ಕನಸುಗಳು ದುರ್ವಾಸನೆಯಾಗಿ
ಮತ್ತು ನಿದ್ದೆ ಕಹಿಯಾಗಿ ತಿರುಗಿ

ಬದುಕಿನ ಬೆರಳ ಮೇಲಿನ
ತೊಡಕು ಉಂಗುರದಂತೆ
ಇವೆ ನೆನಪುಗಳು ಬಿಗಿಯಾಗಿ
ಕಾಲವೆನುವ ಅಕ್ಕಸಾಲಿಯಿಂದ ಎಂಬಂತೆ
ಮಣ್ಣಿನ ಬೀಜ ನಡುವೆಯೇ ಜಾರಿದಂತೆ
ಮಂಕಾಗಿದೆ ಪ್ರೇಮದ ದೇಹ

ಗೀತೆಯೆಂಬ ಅಂಗಿಗೆ
ಹೇಗೆ ಹಾಕಲಿ ಹೊಲಿಗೆ
ನನ್ನ ಯೋಚನೆಗಳೆಂಬ ದಾರವೆಲ್ಲಾ ಸಿಕ್ಕಾಗಿ
ನನ್ನ ಲೇಖನಿಯ ತುದಿ ಮುರಿದು ಹೋಗಿ
ಇಡೀ ಕತೆ
ಕಳೆದೇಹೋಯಿತು.

~ ~ ~

ಬೆಂಕಿಯುಗುಳುವ ಬಾಣ:ಮಾಲಿನಿ ಭಟ್ಟಾಚಾರ್ಯ

ಬಂಗಾಳಿಯಲ್ಲಿ ಬರೆಯುವ ಮಾಲಿನಿ ಭಟ್ಟಾಚಾರ್ಯ (೧೯೪೨) ಅವರ ನಾಟಕಗಳು ಜನರ ಮನಸ್ಸಿನಲ್ಲಿ ಜೀವಂತವಾಗಿ ಉಳಿದುಕೊಂಡಿದ್ದ ಪ್ರಕರಣಗಳನ್ನೇ ಆಧರಿಸಿ ಸೃಷ್ಟಿಗೊಂಡವುಗಳಾಗಿದ್ದು ಅವು ಕಲ್ಕತ್ತಾದಲ್ಲಿದ್ದ 'ಸಚೇತನ' ಮಹಿಳಾ ಸಮುದಾಯದ ಮೂಲಕ ಪ್ರದರ್ಶನಗೊಂಡವು. ಮಾಲಿನಿ ಭಟ್ಟಾಚಾರ್ಯ 'ಸಚೇತನ'ದ ಸಂಸ್ಥಾಪಕ ಸದಸ್ಯೆ. ಬಂದೋರ್ ನಾಚ್ (ಕೋತಿ ಕುಣಿತ), ಎತೋ ರೋಕ್ತೋ ಕೆನೋ (ಯಾಕೆ ರಕ್ತಪಾತ?) ನಾಟಕಗಳಿಂದ ಅವರು ಅಪಾರ ಪ್ರಸಿದ್ಧಿ ಪಡೆದರು.

ಕಲ್ಕತ್ತಾದಲ್ಲಿ ಹುಟ್ಟಿದ ಮಾಲಿನಿ ಭಟ್ಟಾಚಾರ್ಯ ಪ್ರೆಸಿಡೆನ್ಸಿ ಕಾಲೇಜಿನ ಪದವೀಧರೆ. ೧೯೬೪ರವರೆಗೆ ಜಾಧವ್‌ಪುರ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಬೋಧಿಸುತ್ತಿದ್ದರು. ಅವರ ಮೊದಲ ಸಣ್ಣಕಥೆ ''ಮೃಣಾಲಿನಿ ಗೊಷಾಲೇರ್ ಶಬ್'' (ಮೃಣಾಲಿನಿ ಗೊಷಾಲ್‌ರ ಶವ) ಪ್ರಸಿದ್ಧ ಪತ್ರಿಕೆ 'ಎಕ್ಸಾನ್'ನಲ್ಲಿ ೧೯೬೩ರಲ್ಲಿ ಪ್ರಕಟವಾಯಿತು. ಮಹಿಳಾವಾದಿ ಹೋರಾಟಗಳಿಂದಲೂ ಎಡಪಂಥೀಯ ರಾಜಕೀಯ ಚಟುವಟಿಕೆಗಳಿಂದಲೂ ಗಮನ ಸೆಳೆದ ಮಾಲಿನಿಯವರು 'ಎಕ್ಸಾನ್'ನಲ್ಲಿ ಕವಿತೆ ಮತ್ತು ವಿಮರ್ಶಾ ಲೇಖನಗಳನ್ನು ಬರೆಯುವುದನ್ನು ಮುಂದುವರಿಸಿದರಲ್ಲದೆ 'ಅನುಷ್ಟುಪ್' ಮತ್ತು 'ಬಾರೋಮಾಷ್' ನಿಯತಕಾಲಿಕಗಳಲ್ಲೂ ಬರೆಯತೊಡಗಿದರು. ಡೇರಿಯೋ ಫೋನ 'ವೇಕಿಂಗ್ ಅಪ್' ಕೃತಿಯನ್ನು ಬಂಗಾಳಿ ರಂಗಭೂಮಿಗೆ ಕೊಂಡೊಯ್ದರು. ಮಕ್ಕಳ ಅಧ್ಯಯನದ ದಿಗಂತವನ್ನು ಪರಿವರ್ತಿಸುವ ಗುರಿ ಹೊಂದಿದ್ದ ''ನೀಲ್‌ಕಮಲ್ ಲಾಲ್‌ಕಮಲ್'' ಪತ್ರಿಕೆಯ ಸಂಪಾದಕಿಯಾಗಿ ಕೆಲವು ಕಾಲ ಕಾರ್ಯನಿರ್ವಹಿಸಿದರು. ೧೯೮೯ರಲ್ಲಿ, ಮತ್ತೆ ೧೯೯೧ರಲ್ಲಿ ಅವರು ಲೋಕಸಭೆಗೂ ಚುನಾಯಿತರಾಗಿದ್ದರು.

ಇಲ್ಲಿ ಅನುವಾದಿಸಲಾಗಿರುವ ''ಮೇಯೆ ದಿಲೆ ಸಜಿಯೆ'' (ಮಗಳನ್ನು ಕೊಡುವುದು) ನಾಟಕದ ಕೊನೆಯ ಭಾಗ-ಮದುವೆಯ ಸಂದರ್ಭದಲ್ಲಿ ವರದಕ್ಷಿಣೆಯನ್ನು ಕೊಡುವ ಮತ್ತು ಪಡೆಯುವ ಅನಿಷ್ಟಕಾರೀ ಸಂಪ್ರದಾಯದ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು

ರೂಪಿಸುವ ಉದ್ದೇಶದಿಂದ ಬರೆದದ್ದು. ಆಭರಣಗಳನ್ನು ಹೇರಿಕೊಂಡು ಗಂಡನ ಮನೆಗೆ ಹೊರಡಲು ಸಿದ್ಧವಾದ ವಧು ತನ್ನೆಲ್ಲ ಆಕಾಂಕ್ಷೆ, ಅಭಿರುಚಿಗಳನ್ನು ಬಿಟ್ಟು ಹೋಗಬೇಕಾಗುತ್ತದೆನ್ನುವುದನ್ನು ನಾಟಕದ ಶೀರ್ಷಿಕೆ ಸೂಚಿಸುತ್ತದೆ. ನಾಟಕದ ಪ್ರಮುಖ ಪಾತ್ರಧಾರಿ ಹದಿನೆಂಟನೇ ಶತಮಾನದ ಪುರಾಣೋಕ್ತ ಪ್ರತಿಮೆ ಮತ್ತು ಹತ್ತೊಂಭತ್ತನೇ ಶತಮಾನದ ಮಹಾಕೃತಿಯಾದ ಬಂಕಿಮಚಂದ್ರ ಚಟರ್ಜಿಯವರ 'ದೇವಿ ಚೌಧುರಾಣಿ' ಕಾದಂಬರಿಯ ನಾಯಕಿ. ದೇವಿ ಚೌಧುರಾಣಿಯು ಶ್ರೀಮಂತರನ್ನು ದೋಚಿ ಆ ಸಂಪತ್ತನ್ನು ಬಡವರಿಗೆ ಹಂಚುತ್ತಿದ್ದಳು. ಬಂಕಿಮಚಂದ್ರರ ಕಾದಂಬರಿಯ ಪ್ರಫುಲ್ಲ ಜಮೀನುದಾರನೊಬ್ಬನ ಮಗನ ಹೆಂಡತಿಯಾಗಿ, ಗಂಡ ಮತ್ತು ಮಾವನಿಂದಲೇ ಹಿಂಸೆಗೊಳಗಾಗಿ, ಕೊನೆಗೆ ಅವರ ಮನೆಯಿಂದಲೇ ಹೊರದೂಡಲ್ಪಡುತ್ತಾಳೆ. ಮುಂದೆ ಅವಳೇ ದೇವಿಚೌಧುರಾಣಿ ಎಂಬ ಡಕಾಯಿತರಾಣಿಯಾಗಿ ತನ್ನನ್ನು ಹಿಂಸೆಗೊಳಪಡಿಸಿದ್ದವರ ಮೇಲೆ ಸೇಡು ತೀರಿಸಿ ಕೊಳ್ಳುತ್ತಾಳೆ.

'ಮೇಯೆ ಬಿಲೆ ಸಜಿಯೆ' ನಾಟಕದಿಂದ ಆಯ್ಕೆ ಮಾಡಿಕೊಳ್ಳಲಾಗಿರುವ ಈ ಭಾಗದಲ್ಲಿ ದೇವಿ ಚೌಧುರಾಣಿ ಇಪ್ಪತ್ತನೇ ಶತಮಾನದ ವರ ಮತ್ತು ಅವನ ತಂದೆಯ ವಿಚಾರಣೆಯ ನೇತೃತ್ವ ವಹಿಸಿದ್ದಾಳೆ. ಬಂಕಿಮಚಂದ್ರರ ಕಾದಂಬರಿಯ ಪೂರ್ವಕಥಾಸೂಚನೆ ಅನೇಕ ಕಡೆ ಪುನರಾವರ್ತನೆಗೊಂಡಿದೆ. ಕೊನೆಯಲ್ಲಿ ದೇವಿ ತನ್ನ ಮುಖವಾಡ ತೆಗೆದಾಗ ವರ ಮತ್ತು ಅವನ ತಂದೆ ವ್ಯಕ್ತಪಡಿಸುವ ಪ್ರತಿಕ್ರಿಯೆಯಂತೂ ಕಾದಂಬರಿಯಿಂದ ಪದಶಃ ಎತ್ತಿಕೊಂಡ ಮಾತುಗಳೇ ಆಗಿವೆ. ಮೂಲ ನಾಟಕ ಚಮತ್ಕಾರಿಕವೂ ಪ್ರಾಸಭರಿತವೂ ಆದ ಬಂಗಾಳಿ ಜಾನಪದ ಸೊಗಡಿನ ದ್ವಿಪದಿಗಳಲ್ಲಿದೆ.

ಮೇಯೆ ದಿಲೆ ಸಜಿಯೆ

ಬಂಗಾಳಿ : ಮಾಲಿನಿ ಭಟ್ಟಾಚಾರ್ಯ
ಅನು : ಬೈರಮಂಗಲ ರಾಮೇಗೌಡ

ಮಗಳನ್ನು ಕೊಡುವುದು

ದೃಶ್ಯ - ೩

ನಾಟಕದ ಪಾತ್ರಗಳು

ವಧು/ದೇವಿ (ದೇವಿ ಚೌಧುರಾಣಿಯಂತೆ ವೇಷಮರೆಸಿಕೊಂಡವಳು)
ವರ
ಕನ್ಯಾಪಿತೃ
ವರನ ತಂದೆ
ರಂಗರಾಜ್ - ದೇವಿ ಚೌಧುರಾಣಿಯ ಕಾರ್ಯಭಾರಿ
ಮೇಳ

ದೇವಿ ಚೌಧುರಾಣಿ ನ್ಯಾಯಾಸ್ಥಾನದಲ್ಲಿ ಆಸೀನಳಾಗಿದ್ದಾಳೆ. ಆಕೆಯ ಒಂದು ಪಕ್ಕದಲ್ಲಿ ಅವಮಾನದ ಸಂಕೇತವಾದ ಕಪ್ಪುಬಣ್ಣದ ಮೂರ್ಖಟೊಪ್ಪಿಗಳನ್ನು ತಮ್ಮ ತಲೆಯ ಮೇಲೆ ಧರಿಸಿಕೊಂಡಿರುವ ವರ ಮತ್ತು ಆತನ ತಂದೆ ನಿಂತಿದ್ದಾರೆ; ಕನ್ಯಾಪಿತೃ ಮತ್ತು ರಂಗರಾಜ್ ಆಕೆಯ ಇನ್ನೊಂದು ಪಕ್ಕದಲ್ಲಿ ನಿಂತಿದ್ದಾರೆ.

ವರ : ಇದು ನ್ಯಾಯ ! - ನಮ್ಮ ಹೆಸರುಗಳನ್ನು ಕಸವಾಗಿ ಪರಿಗಣಿಸಲಾಗಿದೆ.

ಕನ್ಯಾಪಿತೃ : ದಯಾಳುವಾದ ದೇವರೇ, ನಿನಗೆ ನಾನು ವಂದಿಸುತ್ತೇನೆ.

ವರನ ತಂದೆ : ಇದು ಸರಿಯಲ್ಲ. ನಮ್ಮನ್ನು ಇದು ಚಿಂತಿಸುವಂತೆ ಮಾಡಿದೆ .

೧ನೇ ಮೇಳ : ಆದರೆ ಅವರು ಹಣ ತೆಗೆದುಕೊಂಡಿಲ್ಲವೆಂಬುದನ್ನು ನೀವು ಒಪ್ಪಿಕೊಳ್ಳಬೇಕು.

ದೇವಿ : ಅದು ಬದಲಾದ ಅದೃಷ್ಟ - ಇಲ್ಲದಿದ್ದರೆ ಅವರು ಈಗಾಗಲೇ ಜೈಲಿನಲ್ಲಿರಬೇಕಾಗಿತ್ತು. ಮಗಳ ಮದುವೆಗಾಗಿ ಕನ್ನಡಿಗಳನ್ನು, ತಿಜೋರಿಗಳನ್ನು, ಹಾಸಿಗೆ - ಜಮಖಾನಗಳನ್ನು ಕೊಂಡು ಅವರ ಜೇಬನ್ನು ಖಾಲಿಮಾಡಿಸಿದರಲ್ಲವೆ? ಅದೂ ಕೂಡ ಹಣವೆನ್ನುವುದನ್ನು ನೀವು ಒಪ್ಪಿಕೊಳ್ಳುತ್ತೀರಲ್ಲವೆ?

೨ನೇ ಮೇಳ : ಈ ಮಾತು ನೂರಕ್ಕೆ ನೂರರಷ್ಟು ಸತ್ಯ. ಗುಲಾಬಿಯನ್ನು ಯಾವ ಹೆಸರಿನಿಂದ ಕರೆದರೇನು, ಅಲ್ಲವೇ?

೩ನೇ ಮೇಳ : ವಧು ತರಬೇಕಾದ ಚಿನ್ನದ ವಿಚಾರವೇನು? ತೋಳ್ಬಂದಿ, ಕೈಬಳೆ, ಕಂಠಹಾರ, ಉಂಗುರ? ಈ ಬಾರಿ ಹಣವನ್ನೇನೂ ತೆಗೆದುಕೊಳ್ಳದಿರಬಹುದು. ಆದರೆ ಅದಷ್ಟೇ ನಿಮ್ಮ ಅಪರಾಧವನ್ನು ಮನ್ನಿಸದು.

ವರನ ತಂದೆ : ಪ್ರಾಮಾಣಿಕವಾಗಿ ಹೇಳುತ್ತೇನೆ ತಾಯಿ, ಇದು ಪರಮ ಅನ್ಯಾಯ. ನಾನು ಬಡಮನುಷ್ಯನಾದ್ದರಿಂದ ನಿಮ್ಮನ್ನು ಅತಿಕ್ರಮಿಸಿ ಹೋಗಲಾರೆ. ನಿಮ್ಮ ಮನಸ್ಸಿಗೆ ವಿರುದ್ಧವಾಗಿ ನಡೆಯಲಾರೆ. ಆದರೆ ನನಗಿಂತ ಶ್ರೀಮಂತರಾಗಿರುವವರ ವಿಚಾರವೇನು - ಅವರೇಕೆ ಆರಾಮವಾಗಿದ್ದಾರೆ? ಅಂಥವರನ್ನು ಬಿಟ್ಟು ನನ್ನನ್ನು ಶಿಕ್ಷಿಸುತ್ತಿರುವುದೇಕೆ?

೪ನೇ ಮೇಳ : ಸರ್ಕಾರದೊಂದಿಗೆ ಒಳ್ಳೆಯ ಸಂಬಂಧವಿರಿಸಿಕೊಂಡಿರುವ ವರ್ತಕ ಸಾಧುಖಾನ್‌ನ ಮೊಮ್ಮಗಳು ಶ್ರೀಮಂತನೊಬ್ಬನ ಪುತ್ರನನ್ನು ಮದುವೆಯಾದಳು. ಆಗ ಸಾಧುಖಾನ್ ಎಷ್ಟು ಸಂಪತ್ತನ್ನು ವೆಚ್ಚಮಾಡಬೇಕಾಯಿತೆನ್ನುವುದು ನಿಮಗೆ ತಿಳಿದಿದೆಯೇ?

೫ನೇ ಮೇಳ : ಮುನ್ನೂರು ಗ್ರಾಮ್ ಚಿನ್ನ ಅಷ್ಟೇ ಅಲ್ಲ, ಓಹ್! ಆ ಮೊತ್ತಕ್ಕೆ ಎರಡರಷ್ಟು ಹಣ! ಮದುವೆ ಮುಗಿದು ವಧೂವರರು ಮಧುಚಂದ್ರಕ್ಕೆ ಹೊರಟಾಗ ಸಾವಿರಾರಕ್ಕೆ ಮೇಲ್ಪಟ್ಟ ಹಣದ ಖರ್ಚು! ಅದೂ ಅವರು ಮಧುಚಂದ್ರಕ್ಕೆ ಹೊರಟದ್ದು ಬ್ಯಾಂಕಾಕ್‌ಗೆ. ಆದರೆ ನೀವು ನಮ್ಮನ್ನು ಕೇಳುತ್ತೀರಿ- ನಾವು ಬಡವರು, ಅವರೆಲ್ಲ ನಿಜವಾಗಿಯೂ ಸುರಕ್ಷಿತತೆಯ ಭರವಸೆಯಲ್ಲಿರುತ್ತಾರೆ ಅಂತ.

ದೇವಿ : ನೀವು ಎಸಗಿರುವ ಅಪರಾಧಕ್ಕೆ ನಾವು ತೋರಬಹುದಾದ ತಾತ್ಸಾರಕ್ಕಿಂತ ನೀವು ಕೆಳಮಟ್ಟದಲ್ಲಿದ್ದೀರಿ. ಬಲಿಷ್ಠರೆದುರು ನಿಮ್ಮ ತಲೆಯನ್ನು ವಿನಯಪೂರ್ವಕವಾಗಿ ಬಾಗಿಸುತ್ತೀರಿ. ಅವರು ಕೈಯಲ್ಲಿ ತೋರಿಸಿದ್ದನ್ನು ತಲೆಯಮೇಲೆ ಹೊತ್ತುಕೊಂಡು ಮಾಡುತ್ತೀರಿ. ಅವರು ಮಾಡಿದ್ದನ್ನೆಲ್ಲ ಚಾಚೂ ತಪ್ಪದೆ ಅನುಕರಿಸುತ್ತೀರಿ. ಇದಕ್ಕೆ ಪ್ರತಿಯಾಗಿ ಅವರು ನಿಮ್ಮ

ಅಂದಿನ ಮೇಲೆ ಒದ್ದರೆ ಅಥವಾ ನಿಮ್ಮ ರಕ್ತ ಹೀರಿದರೆ ನಿಮ್ಮ ತಣ್ಣಗಿನ ಮನಸ್ಥಿತಿಯಿಂದ ಹೊರಬರುತ್ತೀರಿ. ನಿಮ್ಮ ಪೌರುಷವನ್ನೆಲ್ಲ ನಿಮ್ಮ ಹೆಣ್ಣುಮಗಳ ಮೇಲೆ ತೋರಿಸಲು ನೋಡುತ್ತೀರಿ. – ಛೀ. ಅವಿವೇಕಿಗಳೆ!

೬ನೇ ಮೇಳ : ಇವತ್ತಿನ ಹೊಸ ಹೆಣ್ಣುಗಳು ಬಲುಬೇಗನೆ ಅತ್ತೆಯರಾಗಿ ರೂಪುಗೊಂಡು, ತಾವು ಸೊಸೆಯಾಗಿದ್ದಾಗ ಅನುಭವಿಸಿದ್ದ ಸಂಕಟಗಳನ್ನು ತಮ್ಮ ಸೊಸೆಯರ ಮೇಲೆ ಪ್ರಯೋಗಿಸಲು ಮುಂದಾಗುತ್ತಾರೆ. ತಲೆಮಾರುಗಳು ಉರುಳಿದರೂ ಅವಳ ಬದುಕನ್ನಾಳುತ್ತಿರುವ ಈ ಕ್ರೂರ ನೀತಿಯಿಂದ ಅವಳಿಗೆ ಬಿಡುಗಡೆಯೇ ಇಲ್ಲ. ತಾಯಿ, ಮಗಳು, ಸಹೋದರಿ, ಹೆಂಡತಿ ಎಲ್ಲರೂ ಇದಕ್ಕೆ ಬಲಿಪಶುಗಳೇ!

೨ನೇ ಮೇಳ : ಒಂದು ಹೆಣ್ಣು – ಒಂದು ಗಂಡು ಮದುವೆಯಾಗಲೊಪ್ಪಿದರೆ ಅದು ಬಹು ಸರಳ! ಅದಕ್ಕೇಕೆ ಮಸಿಬಳಿಯುವಾಟ! ಒಂದು ಅಲಂಕರಣ ಮೇಜಿಗಾಗಿ, ಗೋದ್ರೆಜ್ ಲೇಬಲ್ ಇರುವ ಒಂದು ಉಕ್ಕಿನ ಬೀರುವಿಗಾಗಿ ಇಷ್ಟೆಲ್ಲ ರಂಪವೇಕೆ? ಅದು ಹಾಗಿರಲಿ. ನೀವು ಹೇಳಿ ಸ್ವಾಮಿ, ಆಕೆ ನಿಮ್ಮ ಮಗನನ್ನು ಮದುವೆಯಾದಳು. ಜೀವನ ಸಂಗಾತಿಯಾಗಿಸಿಕೊಳ್ಳುವ ಭರವಸೆಯಿತ್ತ ಆ ಹುಡುಗಿಗೆ, ಅವಳಿಗೆ ಯೋಗ್ಯವೆನಿಸುವ ಗಂಡನಾಗುವ ಸಲುವಾಗಿ ಅವನೇನು ಮಾಡಿದ್ದಾನೆ? ಅವನ ಅರ್ಹತೆಯನ್ನು ಹೇಗೆ ಸಾಬೀತುಪಡಿಸಿದ್ದಾನೆ? ಹೇಳಿ.

೩ನೇ ಮೇಳ : ನಾನು ಎಲ್ಲರೂ ಗಮನಿಸಲೆಂದು ಈ ಮಾತು ಹೇಳುತ್ತಿದ್ದೇನೆ. ಶ್ರೀಮಂತರ ಮನೆಗಳಲ್ಲಿ ಏನು ನಡೆಯುತ್ತದೆಂದು ನಿಮಗೆ ತಿಳಿದಿದೆಯೇ? ವರದಕ್ಷಿಣೆ ಸಾಲದೆಂದು ಅನ್ನಿಸಿದಾಗಲೆಲ್ಲ ಮುದ್ದಾದ ಹೆಣ್ಣುಗಳಿಗೆ ಬೆಂಕಿ ಹಚ್ಚಿ ಕೊಲ್ಲಲಾಗಿದೆ. ಸ್ಟೌವ್ ಸಿಡಿದು ಜ್ವಾಲೆಯಾಗಿ ಹೊಮ್ಮಿದೆ; ದಿನಕ್ಕೊಂದು ಸಾವೆಂದು ಅಂಕಿಅಂಶ ಹೇಳುತ್ತದೆ. ದೊಡ್ಡ ಹೆಸರಿನಲ್ಲಿ ದೊಡ್ಡ ಪ್ರತಿಫಲವನ್ನು ಪಡೆಯುವ ನಿಮ್ಮ ಚೆಲ್ಲಾಟಗಳನ್ನು ನಿಲ್ಲಿಸುವ ಕಾಲ ಈಗ ಬಂದಿದೆ. ಬದಲಾದ ಕಾಲಕ್ಕನುಸಾರವಾಗಿ ನೀವೂ ಬದಲಾಗುವುದು ಅನಿವಾರ್ಯವಾಗಿದೆ. ಇಲ್ಲವಾದಲ್ಲಿ ಈ ಕಾಲವೇ ನಿಮ್ಮನ್ನು ಕ್ಷಮಿಸದು.

ವರನ ತಂದೆ : ನೀವೊಬ್ಬ ಮಗನನ್ನು ಪಡೆದಿರುವಿರಾ ಸ್ವಾಮಿ? ಇಲ್ಲವೇ? ನಾನು ಹಾಗೆಂದು ಭಾವಿಸಿದ್ದೆ. ಮಗನೊಬ್ಬನಿಗೆ ಮದುವೆ ಮಾಡಿದ ಮೇಲೆ ನಿಮಗೆ ತಿಳಿಯುತ್ತದೆ – ಮದುವೆಯ ದಿನ ಆಹಾರಕ್ಕಾಗಿ ಅವನು ಎಷ್ಟು ಖರ್ಚು ಮಾಡುತ್ತಾನೆಂದು; ಮಗನೊಂದಿಗೆ ತನ್ನ ಇಡೀ ಜೀವಮಾನ

ಕಳೆಯುವ ಹುಡುಗಿಯು ಹೊಟ್ಟೆಬಟ್ಟೆಗಳಿಗಾಗಿ ಎಷ್ಟು ಸುರಿಯಬೇಕಾಗುವುದೆಂದು; ಇದಲ್ಲದೆ ಮುಂದೆ ಬರುವ ಮಕ್ಕಳಿಗಾಗಿ ಖರ್ಚು ಮಾಡುವವರಾರು ಹೇಳಿ?

ಆನೇ ಮೇಳ : ವಿಸ್ಮಯಗಳು ಎಂದಿಗಾದರೂ ಕೊನೆ ಮುಟ್ಟುವುದುಂಟೆ? ನೀವೊಂದು ಕುದುರೆಯನ್ನು ಜೀವಾವಧಿ ಭೋಗ್ಯಕ್ಕಾಗಿ ಪಡೆದಿರಿ ಎಂದಿಟ್ಟುಕೊಳ್ಳಿ. ಆಗ ಅದಕ್ಕೆ ತಗಲುವ ಮೇವಿನ ವೆಚ್ಚವನ್ನು ವರ್ಷಗಳ ಲೆಕ್ಕದಲ್ಲಿ ಅಳೆಯುತ್ತೀರೇನು? ನೀವು ಕೊಳ್ಳುವ ಹೆಣ್ಣನ್ನು ಸಾಯುವವರೆಗೆ ದುಡಿಮೆಗೆ ಹಚ್ಚುತ್ತೀರಿ. ಅದಕ್ಕೆ ಪ್ರತಿಫಲವಾಗಿ ಅವಳಿಂದ ಬೆವರು ಮತ್ತು ಕಣ್ಣೀರನ್ನು ಪಡೆಯುತ್ತೀರಿ.

ವರನ ತಂದೆ : ಬನ್ನಿ ಸ್ನೇಹಿತರೆ ಈಗ ಎಲ್ಲ ಹೊಸದಾಗಿ ಪ್ರಾರಂಭಿಸೋಣ. ನಮ್ಮ ಸ್ಪರ್ಧಾಟಗಳನ್ನೂ, ಹರಾಜು ಕೂಗುವುದನ್ನೂ ಮರೆತುಬಿಡೋಣ. ನಾನು ನಿಜಕ್ಕೂ ಹೃದಯವಂತನೆಂಬುದು ನಿಮಗೆ ತಿಳಿಯುತ್ತಿಲ್ಲವೆ? ನನ್ನ ಮಗ ಒಪ್ಪುವುದಾದರೆ ನಾನು ಅವಳನ್ನು ಮನೆಗೆ ಕರೆದುಕೊಂಡು ಹೋಗುತ್ತೇನೆ .

ವರ : ಸುಂದರ ಮೈಬಣ್ಣದ ಹೆಂಡತಿಗಾಗಿ ನಾನು ಎಂದೆಂದಿನಿಂದಲೂ ಕನಸು ಕಂಡವನಾದರೂ ನಾನು ಇವಳನ್ನು ನನ್ನ ಜೀವನಸಂಗಾತಿಯಾಗಿ ಇರಿಸಿಕೊಳ್ಳಬಲ್ಲೆ. ಅವಳ ಅಸುಂದರ ಮುಖವನ್ನು ಯಾವುದಾದರೂ ಪೌಡರ್ ನೇರ್ಪುಗೊಳಿಸಬಲ್ಲದು. ಆದರೆ ನನ್ನನ್ನು ಇಂಥ ದುರವಸ್ಥೆಗೀಡು ಮಾಡಿದವನು ನನ್ನ ತಂದೆಯೇ.

ದೇವಿ : ಇದಿಷ್ಟು ಸಾಕೀಗ. ವಧುವಿನ ತಂದೆಯೆಲ್ಲಿದ್ದಾರೆ? ಅವರಿಲ್ಲದೆ ಇದನ್ನು ತೀರ್ಮಾನಿಸಲಾಗದು.

ಕನ್ಯಾಪಿತೃ : ಓ ತಾಯಿಯೇ, ನೀವು ನನ್ನ ಮುಖವನ್ನು ರಕ್ಷಿಸಿದಿರಿ.

ದೇವಿ : ನಾನೇ? ನಿನ್ನ ಮುಖವನ್ನೇ? ನಿನ್ನ ಮಗಳ ಸಮಾಚಾರವೇನು? ಅವಳೂ ಕೂಡ ನಿನ್ನಂತೆ ಮುಖವನ್ನು ಹೊಂದಿದವಳಲ್ಲವೆ?

ಕನ್ಯಾಪಿತೃ : ಅವಳೂ ರಕ್ಷಿಸಲ್ಪಟ್ಟಳು ತಾಯಿಯೇ. ಅವಳು ಆತ್ಮಪೂರ್ವಕವಾಗಿ ನಿಮ್ಮನ್ನು ಆಶೀರ್ವದಿಸುತ್ತಾಳೆ. ಅವಳೀಗ ತನ್ನ ಮನೆಯನ್ನೂ ಗಂಡನನ್ನೂ ಪಡೆದಂತಾಯಿತು. ನಾನು ಖರ್ಚು ಮಾಡಿದ ಹಣ ಈಗ ಸಾರ್ಥಕವಾದಂತಾಯಿತು.

ದೇವಿ : ಆದರೆ ನಿನ್ನನ್ನಿನ್ನೂ ವಿಚಾರಣೆಗೊಳಪಡಿಸಿಲ್ಲವಲ್ಲ !

ಕನ್ಯಾಪಿತೃ : ಅಯ್ಯೋ ದೇವರೆ, ನಾನೇಕೆ ವಿಚಾರಣೆಗೊಳಗಾಗಬೇಕು?

೫ನೇ ಮೇಳ : ಆದರೆ ಅವನೊಬ್ಬ ಫಿರ್ಯಾದಿ. ಅವನನ್ನೇಕೆ ವಿಚಾರಣೆಗೊಳ ಪಡಿಸಬೇಕು?

ದೇವಿ : ಏಕೆಂದರೆ, ಮಗಳು ಇರಬೇಕಾದ ಜಾಗ ಮನೆ ಮಾತ್ರ, ಗಂಡನೇ ಅವಳ ಗುರಿ ಮತ್ತು ಸರ್ವಸ್ವ, ನಾಲ್ಕು ಗೋಡೆಗಳಿಂದ ಸುತ್ತುವರಿದ ಮನೆಯೆಂಬ ಸೆರೆಮನೆಯನ್ನು ಅದೃಷ್ಟ ಮತ್ತು ಸನ್ನಿವೇಶಗಳು ಕ್ರೂರ ತಂತ್ರಕ್ಕೊಳಪಡಿಸದ ಹೊರತು ಬಿಟ್ಟು ಹೊರಬರಬಾರದೆನ್ನುವ ತಿಳುವಳಿಕೆಯನ್ನು ತುಂಬಿ ಮಗಳನ್ನು ಬೆಳೆಸಿದವನೀತ.

೫ನೇ ಮೇಳ : ಇದು ನಿಜವೇ?

ಕನ್ಯಾಪಿತೃ : ಇಲ್ಲ, ಇಲ್ಲ, ನಾನವಳಿಗೆ ಶಿಕ್ಷಣ ಕೊಡಿಸಿದ್ದೇನೆ.
ಅವಳು ಪದವೀಧರಳಾಗಿದ್ದಾಳೆ. ಅವಳು ಹೊರಗೆ ಹೋಗುವ ವಿಚಾರದಲ್ಲಿ ನಾನೆಂದೂ ನಿರ್ಬಂಧ ಹೇರಿಲ್ಲ.

ದೇವಿ : ಅದೆಲ್ಲ ಏತಕ್ಕೆ, ಬೇಡುವುದಕ್ಕಾಗಿಯೇ? ಬಿ. ಎ. ಪದವಿ ಸಂಗಾತಿಯ ಹೊಂದಾಣಿಕೆಗೆ ಸಹಾಯಕ್ಕೆ ಬರುತ್ತವೆಂದು ನೀನು ಬಲ್ಲೆ. ಒಂದು ಪದವಿಯು ಬೇಟೆಯನ್ನು ಹಿಡಿಯಲು ನಿನ್ನ ಸಹಾಯಕ್ಕೆ ಬರುತ್ತದೆ. ಅವಳು ನಡೆಸುತ್ತಿರುವ ಪರಾವಲಂಬಿತ ಬದುಕಿನಿಂದ ಹೊರಬಂದು ಇಂದು ಸ್ವತಂತ್ರ ಬದುಕನ್ನು ರೂಪಿಸಿಕೊಳ್ಳದೇ ಹೋದಲ್ಲಿ ನೀನು ಅದಕ್ಕಾಗಿ ಅವಳನ್ನು ದೂಷಿಸಲು ಹಿಂದೆಮುಂದೆ ನೋಡುವುದಿಲ್ಲ.

೬ನೇ ಮೇಳ : ಇಲ್ಲ, ಅದು ಮಹಿಳೆಯರಿಂದಾಗುವ ತಪ್ಪು ಹಣ ಮತ್ತು ಆಭರಣಗಳು ಅತ್ಯವಶ್ಯಕವೆಂದು ಹಟ ಹಿಡಿಯುವವರು ಹುಡುಗಿಯರೇ ಆಗಿದ್ದಾರೆ. ಅವರ ತಂದೆಯರೇ ಅವರ ಪಾಲಿನ ಚಿನ್ನದಮೊಟ್ಟೆಯಿಡುವ ಕೋಳಿಗಳಾಗಿದ್ದಾರೆ. ಅವನು ಚಿನ್ನದಮೊಟ್ಟೆಯಿಡದೇ ಹೋದಲ್ಲಿ ಅವರ ಕಣ್ಣೀರಿನ ಕಟ್ಟೆಯೊಡೆಯುತ್ತದೆ.

ದೇವಿ : ಏನು ! ಹಾಗಾದರೆ ಹಟಮಾರಿತನದ, ಕಂಬನಿ ಸುರಿಸುವ ಹೆಣ್ಣು ಮಕ್ಕಳಿಗಾಗಿ ಅವರ ತಂದೆಯರು ವಿಷವನ್ನು ಖರೀದಿಸಬೇಕೆ? ಅದಕ್ಕೆ ಬದಲು ಅವರು ಅವಳನ್ನು ರಕ್ಷಿಸುವುದಕ್ಕಾಗಿ, ಜೀವಂತ ವಾಗಿಡುವುದಕ್ಕಾಗಿ ಹೆಣಗಬಾರದೆ?

ರಂಗರಾಜ್ : ಸುಡುಗಂಬದತ್ತ ಸಾಗುವುದಕ್ಕಾಗಿಯೇ ಇಷ್ಟೆಲ್ಲ ಹಣವನ್ನು ತೆರಲಾಗುತ್ತಿದೆಯೆಂಬ ವಿಚಾರವಾದರೂ ಅವಳ ರಕ್ತವನ್ನು ಕುದಿಸಬಾರದೆ? ಬಹು ಬೇಗನೆ ಅಥವಾ ತಡವಾಗಿಯಾದರೂ ಮದುವೆಗಳು ಹೆಣ್ಣನ್ನು ಕೊಲ್ಲುವ ಶಾಸ್ತ್ರಗಳಾಗುತ್ತಿದ್ದರೂ 'ಎಲ್ಲಾ

ಅವರವರ ಅದೃಷ್ಟ' ಎಂದು ಹೇಳುವುದು ಅಥವಾ ಭಾವಿಸುವುದು ಮೂರ್ಖತನವಲ್ಲವೇ?

ದೇವಿ : ನೀವು ಅವಳಿಗೆ ಲಕ್ಷಾಂತರ ಹಣ ಕೊಟ್ಟರೂ ಅವಳು ಕೆಲವೊಮ್ಮೆ ಮುದ್ದುಮಾಡಿಸಿಕೊಳ್ಳುವ, ಕೆಲವೊಮ್ಮೆ ಚಚ್ಚಿಸಿಕೊಳ್ಳುವ ಗೊಂಬೆಯೇ ಆಗಿದ್ದಾಳೆ!

ಕನ್ಯಾಪಿತೃ : (ಮೊಣಕಾಲೂರಿ) ಹೌದು. ನನಗೀಗ ಅದು ಅನುಭವದಿಂದ ಗೊತ್ತಾಗಿದೆ. ನನ್ನ ಮಗಳೇ ಅಂಥ ಕಷ್ಟ ಅನುಭವಿಸಿದಳು. ತಾಯಿಯೇ ನೀನೊಬ್ಬಳು ದೇವತೆ. ಇದನ್ನು ಸರಿಪಡಿಸುವುದು ಹೇಗೆಂದು ನೀವೇ ಹೇಳುತ್ತೀರಾ?

ಮೇಳ : (ಮೊಣಕಾಲೂರಿ) ಹೌದು. ದಯವಿಟ್ಟು ಹೇಳಿ, ನಾವು ಇದನ್ನು ಸರಿಪಡಿಸುವುದು ಹೇಗೆಂದು.

ರಂಗರಾಜ್ : ಮಾನವನ ಗೋಳುಗಳು ಏನೇ ಇದ್ದಾಗ್ಯೂ ಅವನು ದೇವತ್ವವನ್ನು ಪಡೆದವನಲ್ಲ. ಅಲ್ಲದೆ ಯಾವ ದೇವರೂ ನಿಮಗೆ ಪರಮಾನಂದವನ್ನು ತರಲಾರ ಅಥವಾ ಸ್ವಾತಂತ್ರ್ಯದ ದಾರಿಯನ್ನು ತೋರಲಾರ. (ದೊಣ್ಣೆಯನ್ನು ಬೀಳಿಸಿ ಪಕ್ಕಕ್ಕೆ ಚಲಿಸುವನು)

ದೇವಿ : ನಾನು ಇವತ್ತಿನವಳಲ್ಲ. ನಿರಂತರ ಅಸ್ತಿತ್ವವೇ ನಾನಾಗಿದ್ದೇನೆ. ನಿಮ್ಮ ಹೃದಯಾಂತರಾಳದ ಅಭಿಲಾಷೆಯೇ ನಾನಾಗಿದ್ದೇನೆ. ಸಾಕಷ್ಟು ಸಮಯ ನಾನು ಇಲ್ಲಿಗೆ ಬಂದಿದ್ದರೂ ನೀವು ನನ್ನನ್ನು ಮರೆತಿರುವಿರಿ. ಆದ್ದರಿಂದಲೇ ನಾನು ಮರಳಿ ಬಂದಿದ್ದೇನೆ. ನಾನು ದೇವತೆಯೂ ಅಲ್ಲ, ರಾಣಿಯೂ ಅಲ್ಲ. ನಾನು ನಾನೇ. (ತನ್ನ ಮುಖವಾಡವನ್ನು ತೆಗೆಯುವಳು)

ಕನ್ಯಾಪಿತೃ : ನನ್ನ ಮಗಳಿವಳು!

ವರ : ಪ್ರಫುಲ್ಲಾ - ನೀನೊಬ್ಬಳು ಡಕಾಯಿತೆ ! ನಿನಗೆ ಧಿಕ್ಕಾರವಿರಲಿ.

ವರನ ತಂದೆ : ಏನು! ದೇವಿ ಚೌಧುರಾಣಿಯಲ್ಲ, ಆದರೆ ನಮ್ಮ ಮೊದಲ ಸೊಸೆ ! ಈವರೆಗೆ ಇವಳೆಲ್ಲಿದ್ದಳು? ಯಾರೊಡನೆ ಜೀವಿಸುತ್ತಿದ್ದಳು?

ಕನ್ಯಾಪಿತೃ : ಅವಳು ಬುದ್ಧಿ ಭ್ರಮಣೆಗೊಳಗಾದವಳು. ಅವಳ ವ್ಯಥೆ, ಸಂಕಟಗಳು ಅವಳನ್ನು ಹುಚ್ಚಿಯಾಗಿಸಿವೆ. ಈ ರೀತಿಯಾಗಿ ಮೊದಲೆಂದೂ ಅವಳು ವರ್ತಿಸಿರಲಿಲ್ಲ. ಮೂರ್ಖ ಹುಡುಗಿಯೇ ನಿನಗೆ ನಾಚಿಕೆಯಾಗುವುದಿಲ್ಲವೇ? ಕೂಡಲೇ ಮನೆಗೆ ಹೊರಡು - ಇಲ್ಲವಾದರೆ ನಾನು ನಿನ್ನ ಮೂಳೆಗಳು ಮುದ್ದೆಯಾಗುವಂತೆ ಚಚ್ಚುವೆ. (ಹೊಡೆಯಲು ಕೈ ಎತ್ತುತ್ತಾನೆ)

ವಧು : ಸಾಧ್ಯವಿಲ್ಲ ! (ಅವನ ಕೈಯನ್ನು ಹಿಡಿಯುತ್ತಾಳೆ)

ಮೇಳ : ಇಲ್ಲ, ನೀವು ಅವಳನ್ನು ಹೊಡೆಯಲಾಗದು.

ವರನ ತಂದೆ : ನೀವೇ ನೋಡಿದಿರಲ್ಲ ಈಗ? ನಿಭಾಯಿಸಲು ಸುಲಭಳಲ್ಲದ ಹುಡುಗಿಯಿವಳು. ನಮ್ಮೆಲ್ಲರ, ಅವಳ ಗಂಡನ, ಗಂಡನ ಮನೆಯವರ ಮರ್ಯಾದೆಯನ್ನೆಲ್ಲ ಹೇಗೆ ಕಳೆದಳೆಂಬುದನ್ನು ನೀವೇ ನೋಡಿ.

ವರ : ಅವಳೊಂದು ಬೆಂಕಿಯುಗುಳುವ ಬಾಣದಂಥವಳು ! ಅವಳು ಒಳ್ಳೆಯ ಹುಡುಗಿಯಾಗಿದ್ದಲ್ಲಿ ಮನೆಯಲ್ಲೇ ಕುಳಿತು ಕಣ್ಣೀರು ಸುರಿಸುತ್ತಿದ್ದಳು. ಹೊರಗೆ ಬಂದು ಇಷ್ಟು ದೊಡ್ಡ ಹುಯಿಲೆಬ್ಬಿಸುತ್ತಿರಲಿಲ್ಲ. ನೋಡಿಲ್ಲಿ, ಈ ಆಟವನ್ನೆಲ್ಲ ನಿಲ್ಲಿಸಲೇಬೇಕು. ಇಲ್ಲವಾದರೆ ನಾನು ನಿನ್ನನ್ನು ಕರೆದೊಯ್ಯಲಾಗದು.

ವಧು : ನನ್ನನ್ನು ಕರೆದುಕೊಂಡು ಹೋಗುವುದೆ? ನನ್ನನ್ನು ಕರೆದುಕೊಂಡು ಹೋದುದಕ್ಕಾಗಿ ಎಷ್ಟು ಬಾರಿ ನಾನು ಹೊಡೆತ ತಿನ್ನಬೇಕಾಯಿತು. ಅದೆಷ್ಟು ಬಾರಿ ಉಪವಾಸ ಬೀಳಬೇಕಾಯಿತು ! ಅದಕ್ಕಾಗಿ ನಾನೇನೇನನ್ನು ತಾನೇ ಮಾಡಲಿಲ್ಲ? ಈಗ ಅದೆಲ್ಲ ನಿಮಗೆ ಬಿಟ್ಟದ್ದು. ನೀವು ಕರೆದೊಯ್ಯುವ ಸಲುವಾಗಿ ನಾನು ಅಳುವುದನ್ನು ನೀವಿನ್ನು ನೋಡಲಾರಿರಿ.

ವರನ ತಂದೆ : ಏನು? ನೀನೊಂದು ಹೆಣ್ಣೆಂಬುದನ್ನು ಮರೆಯುದಿರು, ನನ್ನ ಹುಡುಗಿ. ನೀನು ಹೇಗೆ ಜೀವಿಸಬೇಕೆಂದು ಯೋಚಿಸಿದ್ದಿ ? ನೀನು ಏನನ್ನು ತಿನ್ನುತ್ತಿ ? ನಿನ್ನ ತಂದೆಯಂತೂ ಇನ್ನು ನಿನ್ನ ಹೊಟ್ಟೆಗೆ ಹಾಕಲಾರ. ಏನಾದರೂ ಇದು ಅವನ ದೊಡ್ಡ ಸಮಸ್ಯೆಯೆಂದೇ ತೋರುತ್ತದೆ.

ವಧು : ಅವನು ನನ್ನನ್ನು ಸಾಕುವ ಅಗತ್ಯವಿದೆಯೆಂದು ಹೇಳಿದವರಾರು? (ರಂಗರಾಜ್ ಕಡೆಗೆ ಕೈ ತೋರಿಸುತ್ತ)
ಇವರು ಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯೊಂದನ್ನು ನಡೆಸುತ್ತಿದ್ದು, ಅಲ್ಲಿ ನನಗೊಂದು ನೌಕರಿಯನ್ನು ಕೊಡಲಿದ್ದಾರೆ. ಅದು ನನ್ನ ಜೀವನೋಪಾಯದ ಮಾರ್ಗವಾಗಲಿದೆ.

ಕನ್ಯಾಪಿತೃ : ನಿನ್ನಿಂದ ಈಗ ಎಂಥ ಅನಾಹುತವಾಯಿತು ನೋಡು. ಅವರು ನಿನ್ನನ್ನು ಎಂದೆಂದಿಗೂ ಮನೆಗೆ ಕರೆದೊಯ್ಯಲಾರರು.

ವಧು : ಅದೀಗ ನಮಗೆ ಸಂಬಂಧಿಸಿದ ವಿಷಯವಲ್ಲ ತಂದೆಯೇ, ಅದೇನಿದ್ದರೂ ಅವರ ಸಮಸ್ಯೆ ಮಾತ್ರ.

ಮೇಳ : ಹೌದು, ಅದು ಅವರ ಸಮಸ್ಯೆ. ಅದೀಗ ಅವರ ಸಮಸ್ಯೆ ಮಾತ್ರ.

ನೀವೊಂದು ಮುಗುಳ್ನಗೆಯಿಂದ ಚಂದ್ರನನ್ನೂ ಖರೀದಿಸಬಹುದು. ಚಿನ್ನ ಮತ್ತು ಹಣದಿಂದ ಕಂಬನಿಯನ್ನೂ ಕೊಳ್ಳಬಹುದು. ಮತ್ತು ಅದೆಲ್ಲವನ್ನೂ ಬಿಟ್ಟಾಗ ನೀವು ನಿಂಬೆರಸದಿಂದಲೂ ಸಂತೃಪ್ತರಾಗಬಹುದು.

೨ನೇ ಮೇಳ : ಮತ್ತು ಮಾರಾಟಗಾರ ಅದೆಲ್ಲವನ್ನೂ ಹೊಸದರಂತೆ ಹಿಂದಕ್ಕೆ ಪಡೆಯಬಹುದು.

೩ನೇ ಮೇಳ : ದುಡಿಯಲು ಮತ್ತು ಅವನ ಸೇವೆ ಮಾಡಲು ಎರಡು ಕೈಗಳು, ಮತ್ತೆ ಮಕ್ಕಳು? ಅದು ಅವಳು ಮಾಡಬಹುದಾದ ಕನಿಷ್ಠ ಸೇವೆ. ಇದರಿಂದ ಹೊರತಾದದ್ದೇನನ್ನೂ ಅವಳು ಮಾಡಲಾರಳು.

೪ನೇ ಮೇಳ : ಓ, ಹೌದು. ಅವಳೊಂದು ಮುಗುಳ್ನಗೆಯೊಂದಿಗೆ ಇದನ್ನೆಲ್ಲಾ ಮಾಡಲು ಸಿದ್ಧಳಿದ್ದಾಳೆ.

೫ನೇ ಮೇಳ : ಸಾಯುವವರೆಗೆ ಕೆಲಸ. ಇದು ಲೇಂಕಾರದ ಮಾತೂ ಅಲ್ಲ, ಕೆರಳಿಸುವ ಉಪದೇಶವೂ ಅಲ್ಲ.

೬ನೇ ಮೇಳ : ಮತ್ತು ಒಂದು ಹೆಣ್ಣು, ಒಬ್ಬಳು ಮಡದಿ, ಒಂದು ಮಾನವಜೀವಿ ತನ್ನ ಮನೆಯಲ್ಲಿ ಪ್ರತಿದಿನವೂ ಸೊಕ್ಕಿನಿಂದ ಸ್ಫೋಟಗೊಳ್ಳುವುದು. ಒಬ್ಬ ಪರೋಪಜೀವಿಯಾಗಿ ನಾನು ಇಷ್ಟನ್ನು ಮಾತ್ರ ಹೇಳಬಹುದು.

ದೇವಿ : ಒಂದು ಹೆಣ್ಣು - ಒಬ್ಬಳು ಕೇವಲ ಮಾನವಜೀವಿ - ಪ್ರತಿಯೊಂದು ಕೆಲಸವನ್ನೂ ತನ್ನ ಸ್ವಂತದ್ದೆಂದು ಕರೆಯುವಂತೆ ಪ್ರತಿಯೊಂದು ಕಲ್ಲನ್ನೂ ಪರಿವರ್ತಿಸಬೇಕು. ಇಲ್ಲವಾದಲ್ಲಿ ಅವಳು ವಿನಿಮಯಕ್ಕೆ ಸಿದ್ಧವಾದ ಮಾರಾಟದ ಸರಕಿನಂತಾಗುತ್ತಾಳೆ. ಆಗ ಈ ಅಪರಿಚಿತ ಒಗಟನ್ನು ಒಡೆಯುವುದು ಯಾರಿಗೂ ಸಾಧ್ಯವಾಗದು.

ರಂಗರಾಜ್ : ಬನ್ನಿ, ನಾವು ಹೋಗೋಣ.
(ದೇವಿಯೊಡನೆ ಹೊರಡಲು ಸಿದ್ಧವಾಗುವನು)

೧ನೇ ಮೇಳ : ಒಂದು ನಿಮಿಷ ತಡೆಯಿರಿ. ಇದೊಂದು ಯಕ್ಷಿಣಿ ಕಥೆಯಂತೆ ಭಾಸವಾಗುತ್ತಿದೆ. ಇವತ್ತಿನ ದಿವಸಗಳಲ್ಲಿ ನೀವು ಅಷ್ಟೊಂದು ಸಲೀಸಾಗಿ ಕೆಲಸ ಗಿಟ್ಟಿಸಲಾಗದು, ಹೆಂಗಸರ ವಿಚಾರವಿರಲಿ ಗಂಡಸರಿಗೂ ಅದು ಸಾಧ್ಯವಿಲ್ಲ.

೨ನೇ ಮೇಳ : ನನ್ನ ತಂಗಿಯ ಉದಾಹರಣೆಯನ್ನೇ ತೆಗೆದುಕೊಳ್ಳಬಹುದೀಗ. ಅವಳು ಶಾಲಾ ಶಿಕ್ಷಣವನ್ನೇನೋ ಪೂರೈಸಿದ್ದಾಳೆ. ಆದರೆ ಕಾಲೇಜಿಗೆ ಪ್ರವೇಶ ಪಡೆಯಲು ಸಾಧ್ಯವಾಗಲಿಲ್ಲ. ಅವಳದೊಂದು ಗೋಳು. ಅವಳ

ಭಾವೀಪತಿ ಮತ್ತವನ ತಂದೆತಾಯಿಯರು ಅವಳನ್ನೊಮ್ಮೆ ನೋಡುವ ಶಾಸ್ತ್ರ ಮಾಡಿದರು. ಅವರು ಭಾರೀ ಮೊತ್ತದ ವರದಕ್ಷಿಣೆಯನ್ನು ಅಪೇಕ್ಷಿಸಿದ್ದು ನನ್ನ ತಲೆಸುತ್ತುವಂತೆ ಮಾಡಿತು. ನಾನವಳಿಗೆ ಮದುವೆ ಮಾಡಿ ಕಳುಹಿಸಿಕೊಡಲಾಗದಿದ್ದರೂ ಜೀವನೋಪಾಯಕ್ಕಾಗಿ ನೌಕರಿಯೊಂದರಲ್ಲಿ ನೆಲೆಯಾಗುವಂತೆಯಾದರೂ ಮಾಡಬೇಕಲ್ಲ. ಆದರೆ ಅವಳೆಲ್ಲಿ ಸೌಕರಿ ಪಡೆಯುವುದು ಸಾಧ್ಯ?

ವಧು : ಹೌದು, ನೀನು ಹೇಳಿದ್ದು ಸರಿ. ಅಂಥ ಯಕ್ಷಿಣಿ ಕಥೆಯೊಂದಕ್ಕೆ ನೀನು ಮೂಕ ಪ್ರೇಕ್ಷಕನಷ್ಟೆ. ಇಂಥ ಪ್ರಕರಣಗಳ ಹಿಂದೆ ನಿಜವಾಗಿಯೂ ಏನು ನಡೆಯುತ್ತಿದೆಯೆಂದು ತಿಳಿಯುವ ಆಸಕ್ತಿ ನಿನಗಿದೆಯೆ? ಹಾಗಿದ್ದರೆ ಕೇಳು –

ರಂಗರಾಜ್ : ವಧುವಿನ ತಂದೆ ಅವಳನ್ನು ಮನೆಯಿಂದ ಹೊರಗೆ ಹಾಕಿದ. ಅದು ಸಂಶಯಾತೀತವಾದ ಸತ್ಯ . ಅವಳ ಪಾಪಕ್ಕೆ ಪ್ರಾಯಶ್ಚಿತ್ತವೆನಿಸುವ ಚುಚ್ಚುಮಾತುಗಳೊಂದಿಗೆ ಅವಳು ಗಂಡನ ಮನೆಗೆ ಹಿಂದಿರುಗಿ ಬಂದಳು.

ಕನ್ಯಾಪಿತೃ : ನಿಜವಾಗಿ ನಡೆದದ್ದು ಹಾಗೆಯೇ. ಹೌದು ಸ್ವಾಮಿ, ಈಗಲೂ ಪ್ರತಿನಿತ್ಯ ನಡೆಯುತ್ತಿರುವುದು ಅದೇನೇ. ನಮ್ಮ ವಂಶದ ಹೆಣ್ಣು ದೇವಿ ಚೌಧುರಾಣಿಯಂತಿರಲು ಸಾಧ್ಯವಿಲ್ಲ. ಅವಳೊಳಗಿನ ವಿವೇಕ ಹೊರಬರುವ ಸಮಯ ಬಂದೊಡನೆ ಅದನ್ನು ಸಹಿಸದ ಅವರು ಅವಳನ್ನು ಏಕಾಂಗಿಯಾಗಿಸುತ್ತಾರೆ. ಅದನ್ನವಳು ಅನ್ಯಥಾ ಭಾವಿಸಿದಲ್ಲಿ ಅವಳು ತೊಂದರೆಗೆ ಸಿಲುಕಿಕೊಳ್ಳುವುದು ಖಚಿತ..

ವರ : (ವಧುವನ್ನುದ್ದೇಶಿಸಿ) ನೀನು ತೊಂದರೆಗೆ ಸಿಲುಕಿಕೊಳ್ಳಲಾರೆಯೆಂಬ ಭರವಸೆಯನ್ನು ನಾನು ಕೊಡಬಲ್ಲೆ. ಬನ್ನಿ ಬನ್ನಿ. ದೊಡ್ಡದೊಡ್ಡ ಮಾತುಗಳನ್ನೆಲ್ಲ ಈಗ ಆಡುತ್ತ ಕೂರುವುದು ಬೇಡ. ನಾವು ಮನೆಗೆ ಹೋಗುತ್ತಿದ್ದೇವೆ.

ವಧು : ನಾನು ದೊಡ್ಡ ಮಾತುಗಳನ್ನಾಡಿದೆನೆ? ಕೊನೆಗೂ ನಾನು ಮನೆಗೆ ಹೋಗಬೇಕಾಗಿದೆಯೇ? ದಯಮಾಡಿ ನೀವೆಲ್ಲರೂ ಹೇಳಿ – ಅಲ್ಲಿಂದ ಪಾರಾಗುವ ಬೇರೆ ದಾರಿಯಿಲ್ಲವೇ?

ಮೇಳ : ಅಲ್ಲಿಂದ ಪಾರಾಗುವ ಬೇರೆ ದಾರಿಯಿಲ್ಲವೇ?

೩ನೇ ಮೇಳ : ಪಕ್ಕದ ಮನೆ ಹುಡುಗಿಯ ಸ್ಥಿತಿ ಗಮನಿಸಿ. ಆಕೆಯ ಸಹೋದರರು ಸಾವಿರಾರು ರೂಪಾಯಿಗಳನ್ನು ಅವಳ ಮದುವೆಗಾಗಿ ಖರ್ಚು ಮಾಡಿದರು. ಆದರೆ ಗಂಡನ ಮನೆಯಲ್ಲಿ ಅವಳನ್ನು ಎಷ್ಟು ಕೆಟ್ಟದಾಗಿ ನಡೆಸಿಕೊಳ್ಳಲಾಯಿತೆಂದರೆ, ಆರು ತಿಂಗಳು ತುಂಬುವ ಮೊದಲೇ ಅವಳು

ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವಂತಾಯಿತು. ಇಂಥ ಸಂಕಟಗಳನ್ನು ಮೌನವಾಗಿ ಸಹಿಸಿಕೊಳ್ಳುವುದಲ್ಲದೆ ಬೇರೆ ಉಪಾಯ ವಿದ್ದಂತಿಲ್ಲ.

ವಧು : ಹಾಗಾದರೆ ನಾನೂ ನೇಣು ಹಾಕಿಕೊಳ್ಳಲೆ?

ಮೇಳ : ಬೇಡ !

೧ನೇ ಮೇಳ : ನನ್ನ ಮಗಳು ಹದಿನಾಲ್ಕರ ಸುಕುಮಾರಿಯಾಗಿದ್ದಾಗಲೇ ಶ್ರೀಮಂತನೊಬ್ಬನ ಮಗನಿಗೆ ಮದುವೆ ಮಾಡಿಕೊಟ್ಟೆ. ನಾನವರಿಗೆ ಬೇಕಾದಷ್ಟು ಆಭರಣಗಳನ್ನೂ ಕಂತೆಗಟ್ಟಲೆ ಹಣವನ್ನೂ ಕೊಟ್ಟೆ. ಆದರೂ ನನ್ನ ಮಗಳು ಬದುಕುಳಿಯಲಿಲ್ಲ. ವರ್ಷ ಕಳೆದಂತೆಲ್ಲ ಇನ್ನೂ ಹೆಚ್ಚಿನ ಹಣಕ್ಕಾಗಿ ಅವರು ಅವಳನ್ನು ಕಾಡತೊಡಗಿದರು. ಅವಳು ಸಹನೆ ಕಳೆದುಕೊಂಡು ಒಂದು ದಿನ ಹಿಂದಿರುಗಿ ಉತ್ತರ ಕೊಟ್ಟಳು. ಆಗವರು ಅವಳ ತಲೆಯ ಮೇಲೆ ಬಡಿದು ಅವಳನ್ನು ಕೊಂದುಹಾಕಿದರು. ಲಕ್ಷಾಂತರ ರೂಪಾಯಿಗಳೂ ಅವಳನ್ನುಳಿಸಿಕೊಳ್ಳಲಾಗಲಿಲ್ಲ.

ವಧು : ಹಾಗಾದರೆ ನನ್ನನ್ನೂ ಉಳಿಸಿಕೊಳ್ಳಲಾಗದೆ? ನಾನೂ ಕೊಲ್ಲಲ್ಪಡುತ್ತೇನೆಯೇ?

ಮೇಳ : ಇಲ್ಲ !

ವಧು : ಹಾಗಾದರೆ ನಾನೇನು ಮಾಡಲಿ? ನಾನು ನಿಮಗೆ ಹೇಳಿದ್ದು ದೇವಿ ಚೌಧುರಾಣಿಯ ಯಕ್ಷಿಣಿ ಕಥೆಯನ್ನು. ಈ ಜೀವನಕ್ಕೆ ಅಂತ್ಯ ವೆಂಬುದಿಲ್ಲವಾದ್ದರಿಂದ ನೀವದನ್ನು ನಿಜಗೊಳಿಸಲಾರಿರಿ. ಶತಮಾನ ಗಳಿಂದಲೂ ನಾವು ಅಸಹ್ಯಕರ ಜೀವನವೊಂದಕ್ಕೆ ತಳ್ಳಲ್ಪಟ್ಟಿದ್ದೇವೆ. ನಮ್ಮ ಕುಟುಂಬಗಳು, ನಮ್ಮ ಮಕ್ಕಳು ಇದೇ ಬವಣೆಯನ್ನನುಭವಿಸುತ್ತ ಬಂದಿದ್ದಾರೆ. ನಾನು ಬದುಕು ನಡೆಸಲು ಮದುವೆಯೆನ್ನುವುದೊಂದೇ ಅನಿವಾರ್ಯ ಜಾಗವೇ? ಜೀವಮಾನದುದ್ದಕ್ಕೂ ಅವಮಾನಕ್ಕೊಳ ಗಾಗುವುದಕ್ಕಾಗಿಯೇ ನೀವು ನನಗೆ ಮದುವೆ ಮಾಡುತ್ತೀರಾ? ಮಾತಾಡಿ! ಮಾತಾಡಿ! ಓಹ್, ನೀವು ಮಾತಾಡಲೇಬೇಕು!

ಮೇಳ : ನನ್ನ ಮಗಳೇ ನನ್ನ ಜೀವದ ಬೆಳಕು. ಅವಳು ಅವಿವೇಕಿಯೊಬ್ಬನ ಮಡದಿಯಾಗುವುದು ಬೇಡ. ನಾನು ಅವಳನ್ನು ಅಂಥ ಕಡೆಗೆ ಕೊಡಲಾರೆ. ನಾನವಳಿಗೆ ಉಂಗುರವನ್ನೂ ಚಿನ್ನದಸರವನ್ನೂ ಕೊಟ್ಟೆ. ಅವಳ ಗಂಡನ ಮನೆಯವರು ಅವೆಲ್ಲವನ್ನೂ ಕಸಿದುಕೊಂಡು ಅವಳನ್ನು ಹಿಂದಕ್ಕೆ ಕಳುಹಿಸಿದರು.

ಓಹ್, ಅದೆಂಥ ಭಯಂಕರ ದಿನ - ಅವಳ ತುಂಬುನಗೆಯೆಲ್ಲ ಕಣ್ಣೀರಿನಲ್ಲಿ ಕೊನೆಯಾಯಿತು. ಹಗಲು ರಾತ್ರಿಗಳನ್ನು ಅವ್ಯಕ್ತ ಭಯದಲ್ಲಿ ಕಳೆಯತೊಡಗಿದಳು. ನನಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. ಈಗವಳು ಶಾಲೆಗೆ ಹೋಗುತ್ತಿದ್ದಾಳೆ. ಹಿಂದಿನ ಭೀತಿಯಿಂದ ಹೊರಬರುವುದು ಅವಳಿಗೆ ಸಾಧ್ಯವಾಗಿದೆ. ನಾನು ಸಹಾಯ ಮಾಡುವುದಾದರೆ ಅವಳು ತನ್ನ ಕಣ್ಣೀರಿನಿಂದ, ತನ್ನ ಸಂಕಟದಿಂದ ಖಂಡಿತ ಹೊರಬರಬಲ್ಲಳು. ಅವಳು ಇಷ್ಟಪಡುವವನೊಂದಿಗೆ ನಾನವಳನ್ನು ಮದುವೆ ಮಾಡಿಕೊಡುತ್ತೇನೆ. ಆ ಆತ್ಮೀಯ ವಾತಾವರಣದಲ್ಲಿ ಅಹಂಕಾರ ಪ್ರದರ್ಶನಕ್ಕೆ ಅವಕಾಶವಿರುವುದಿಲ್ಲ. ಈ ಬಾರಿ ವರದಕ್ಷಿಣೆಯಿಲ್ಲ, ಇಲ್ಲವೇ ಇಲ್ಲ - ಆ ರೀತಿ ಅವಳನ್ನು ಮದುವೆ ಮಾಡಿಕೊಡುವುದು ಸಾಧ್ಯವೇ ಇಲ್ಲ.

ಮಹಿಳಾ ಸಂಘಟನೆಯಲ್ಲಿ ಆಸಕ್ತರಾದ ತೆಲುಗು ಕವಯಿತ್ರಿ ವಿಮಲಾ

ವಿಮಲಾ ಅವರು ಹದಿನಾರು ವರ್ಷದವರಿರುವಾಗಲೇ ತಮ್ಮ ವಿದ್ಯಾಸಂಸ್ಥೆಯಲ್ಲಿ ಪ್ರಕಾಶನಗೊಳ್ಳುತ್ತಿರುವ ಪತ್ರಿಕೆಯಲ್ಲಿ ಲೇಖನಗಳನ್ನು ಬರೆಯಲು ಪ್ರಾರಂಭಿಸಿದರು. ಅದೇ ವೇಳೆಗೆ ಅವರು ವಿದ್ಯಾರ್ಥಿ ಚಳುವಳಿಯಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡು ೧೯೮೦ರಿಂದ ಪೂರ್ಣಾವಧಿ ರಾಜಕೀಯ ಕಾರ್ಯಕರ್ತೆಯಾದರು. ೧೯೮೩ರಲ್ಲಿ ಅವರು 'ವಿಮೋಚನಾ' ಎಂಬ ಪತ್ರಿಕೆಯ ಪ್ರಕಟಣಾ ಮಂಡಳಿಯನ್ನು ಸೇರಿ, ಆ ಪತ್ರಿಕೆಯ ಪ್ರಕಾಶಕರಾಗಿದ್ದಾರೆ. ೧೯೮೬ರಿಂದ ಅವರು 'ವಿರಾಸಮ್' ಎಂಬ ಆಂಧ್ರಪದೇಶದ ಕ್ರಾಂತಿಕಾರಿ ಬರಹಗಾರರ ಸಂಘಟನೆಯ ಹೈದರಾಬಾದ್ ನಗರದ ಸಂಚಾಲಕರಾಗಿ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಅನುವಾದಿಸಲ್ಪಟ್ಟ ಪದ್ಯಗಳು Adavi Uppogina Ratri (ಅರಣ್ಯವು ಸಿಡಿದೆದ್ದ ಆ ರಾತ್ರಿ) ಎಂಬ ಕವನ ಸಂಕಲನದಿಂದ ಆಯ್ದವುಗಳು. ಈ ಪದ್ಯಗಳು ೧೯೯೦ರಲ್ಲಿ ಪ್ರಕಾಶನಗೊಂಡವು.

೧೯೯೧ರ ಪ್ರಾರಂಭದಲ್ಲಿ ವಿಮಲಾ ಅವರು ಆಂಧ್ರ ಪ್ರದೇಶದಲ್ಲಿ ಸಾಕ್ಷೀಕರಿಸಲಾದ ಮದ್ಯಪಾನ ವಿರೋಧೀ ಆಂದೋಲನಕ್ಕೆ ಕರೀಮ್‌ನಗರ ಜಿಲ್ಲೆಯಲ್ಲಿ ಮಹಿಳಾ ಸಂಘಟನೆಯಲ್ಲಿ ತೊಡಗಿದ್ದರು.

ಅಡಿಗೆ ಮನೆ

ತೆಲುಗು : ವಿಮಲಾ
ಅನು : ಗೀತಾ ಕೆ. ಕೊಪ್ಪರ

ನಾನು ಅಡಿಗೆ ಮನೆಯಲ್ಲಿ ಹೊಂದಬಹುದಾದ
ಪರಿಮಳದ ಮೇಲಿನ ಪರಿಮಳವನ್ನು
ನೆನೆಯುತ್ತಿರುತ್ತೇನೆ.
ಅದು ಖಾರವಾದ ಮಸಾಲೆಯುಕ್ತ ಖಾದ್ಯಗಳಿಂದ ಕೂಡಿದ
ಬಾಯೂರಿಸುವ ನಿಧಿ
ಪಕ್ಕದ ಪ್ರಾರ್ಥನಾ ಕೊಠಡಿಯಿಂದ
ಸುಗಂಧಯುಕ್ತವಾದ ಧೂಪದ ಸುವಾಸನೆ
ಪ್ರತಿ ಬೆಳಗಿನಲ್ಲೂ ಅಡಿಗೆ ಮನೆ
ನಿದ್ರೆಯಿಂದ ಎಚ್ಚೆತ್ತುಕೊಳ್ಳುವದು.
ಬೆಣ್ಣೆ ಕಡೆಯುವದು, ಪಾತ್ರೆಗಳ ಸದ್ದು
ಮತ್ತು ಮಧ್ಯದಲ್ಲಿ
ಮಣ್ಣಿನಿಂದ ಸಾರಿಸಲ್ಪಟ್ಟ ಅಡಿಗೆ ಒಲೆ
ಅಡಿಗೆಗೆ ಸಿದ್ಧಗೊಳ್ಳುತ್ತಿದ್ದಂತೆಯೇ
ಬಣ್ಣದ ರಂಗೋಲಿಯಿಂದ ಅಲಂಕರಿಸಲ್ಪಟ್ಟಿದೆ.

ಮಸಾಲೆ ಡಬ್ಬಗಳಲ್ಲಿ ಅಲ್ಲಲ್ಲಿ
ದುಡ್ಡನ್ನು ಗೌಪ್ಯವಾಗಿ ತೆಗೆದಿಡಲಾಗಿದೆ.
ಸಿಹಿ ಖಾದ್ಯಗಳನ್ನು ಕೂಡ ಡಬ್ಬಗಳಲ್ಲಿ
ಅಡಗಿಸಿಡಲಾಗಿದೆ.
ಚೆನ್ನಂಗಿ ಬೀಜ ಹಾಗೂ ಬೆಲ್ಲಗಳನ್ನು
ಉಪಯೋಗಿಸುತ್ತಾ ಆಡುವ ಅಡಿಗೆ

ಆಟದಲ್ಲಿ ತಂದೆ-ತಾಯಿಯಾಗಿ
ಆ ಮಾಂತ್ರಿಕ ಪ್ರಪಂಚದಲ್ಲಿ
ನಟಿಸುತ್ತಾ ಬಾಲ್ಯ ಜೀವನದ
ಸ್ಮರಣೆಯ ಸುರುಳಿಯ ಪ್ರಭಾವಕ್ಕೊಳಗಾಗುತ್ತೇವೆ.

ಬೆಳೆದ ಹೆಣ್ಣುಹುಡುಗಿಗೆ ಅಡಿಗೆಮನೆ
ಆಟದ ಮೈದಾನವಲ್ಲ, ಅಡಿಗೆಯನ್ನು
ತಯಾರಿಸಲು ಪಡೆಯುವ ತರಬೇತಿ
ಕೇಂದ್ರವಿದ್ದಂತೆ
ತನ್ನ ತಾಯಿ, ಅಜ್ಜಿ ಮುತ್ತಜ್ಜಿಯರ
ಹಾಗೆ ಅವಳೂ ಒಬ್ಬ ಪರಿಣಿತ
ಹೆಂಗಸಾಗಿ ಬೆಳೆಯುತ್ತಾಳೆ
ನಮ್ಮ ಅಡಿಗೆಮನೆ ಒಂದು ಸ್ಮಶಾನವಿದ್ದಂತೆ,
ಅಲ್ಲಿ ಪಾತ್ರೆಗಳು, ಡಬ್ಬಗಳು ಹಾಗೂ ಗೋಣಿಚೀಲಗಳು
ಶವಗಳ ತರಹ ಹರಡಿರುತ್ತವೆ
ಆ ಶವಗಳು ತೇವಗೊಂಡ ಕಟ್ಟಿಗೆಯ ಹೊಗೆ
ಮೋಡಗಳ ಮಧ್ಯದಲ್ಲಿ ನೇತಾಡುತ್ತಿರುವಂತೆ ಕಾಣುತ್ತದೆ
ಈ ಅಡಿಗೆ-ಮನೆಯೆಂಬ ಸ್ಮಶಾನದಲ್ಲಿ
ತಾಯಿಯಾದವಳು ಭೂತದ ತರಹ ಯಾವತ್ತೂ
ಅವಿಶ್ರಾಂತಳಾಗಿರುತ್ತಾಳೆ.

ಅವಳ ಕಣ್ಣುಗಳು ಕಣ್ಣೀರಿನ ಕೊಳಗಳಾಗಿರುತ್ತವೆ.
ಅವಳ ಕೈಗಳು ಅಡಿಗೆ ಬಡಿಸುವ ಉಪಕರಣಗಳಾಗಿ
ಮಾರ್ಪಟ್ಟಿವೆ. ಅವಳ ತೋಳುಗಳು ಅಡಿಗೆಯ
ಸೌಟಿನಂತೆ ದೊಡ್ಡ ಪಾತ್ರೆಯಲ್ಲಿ ಆಡುತ್ತಿರುತ್ತವೆ.

ಕೆಲವೊಮ್ಮೆ ತಾಯಿಯು ಕಾಯ್ದ ಹೊಗೆ ನಳಿಗೆಯಂತೆ
ಜ್ವಲಿಸುತ್ತಿರುತ್ತಾಳೆ. ಅಡಿಗೆ ಮನೆಯಲ್ಲಿ
ಅತ್ತಿತ್ತ ಅಲೆಯುತ್ತಾ, ಬೋನಿನಲ್ಲಿಯ
ಹುಲಿಯಂತೆ ಅವಿಶ್ರಾಂತಳಾಗಿ ಗಡಿಗೆ,
ಪಾತ್ರೆಗಳ ಸದ್ದು ಮಾಡುತ್ತಿರುತ್ತಾಳೆ.

ಮನೆಯ ಉಳಿದ ಸದಸ್ಯರು ಹೇಳುತ್ತಾರೆ,
ಅಡಿಗೆ ಮಾಡುವದೆಂದರೆ ಕಷ್ಟವೇನಲ್ಲ, ಸಟ್ಟುಗ
ವನ್ನು ಅತಿತ್ತ ತಿರುಗಿಸಿದರೆ ಅಡಿಗೆಯಾಗಿ ಬಿಡುತ್ತದೆ.
ಅಡಿಗೆಯಾದ ನಂತರ ಅಡಿಗೆಮನೆಗೆ ಯಾರೂ ಬರಲಾರರು,
ಅವರು ಬರುವದು ಊಟಮಾಡುವದಕ್ಕೆ ಮಾತ್ರ.

ಲೇಖಕರು ಹೇಳುತ್ತಾರೆ, ಅವರ ತಾಯಿ ಅಡಿಗೆಮನೆಯ
ರಾಣಿಯಂತಿದ್ದರಂತೆ, ಆದರೆ ಅಲ್ಲಿಯ ಪಾತ್ರೆ
ಪಗಡಿಗಳ ಮೇಲೆ ಅವರ ತಂದೆಯ ಹೆಸರು ಕೆತ್ತಲ್ಪಟ್ಟಿದೆಯಂತೆ.
ಇಂದಿನ ಅಡಿಗೆಮನೆಗೂ, ಅಂದಿನ ಅಡಿಗೆಮನೆಗೂ
ಇರುವ ವ್ಯತ್ಯಾಸವೆಂದರೆ ಇಂದಿನ ಅಡಿಗೆಮನೆಗಳು
ಆಧುನಿಕ ಉಪಕರಣಗಳಾದ ಗ್ಯಾಸ್‌ಸ್ಟೌವ್, ರುಬ್ಬುವ ಯಂತ್ರ
ಕೈತೊಳೆಯುವ ಚಿಕ್ಕ ಬಟ್ಟಲು ಹಾಗೂ ಗೋಡೆ ನೆಲಗಳು
ಬಣ್ಣಬಣ್ಣದ ಕಲ್ಲುಗಳಿಂದ ಅಲಂಕೃತವಾಗಿರುತ್ತವೆ.

ಅವರು ಈ ಸಾಧನಗಳ ಸಹಾಯದಿಂದ ತರತರಹದ
ಆಧುನಿಕ ತಿಂಡಿಗಳಾದ ಕೇಕುಗಳು, ಸಿಹಿಖಾದ್ಯಗಳನ್ನು ತಯಾರಿಸುತ್ತಾರೆ.
ತಾಯಿಯು ಹಾಗೆ ಹಳೆಯ ತರಹದ ಖಾದ್ಯಗಳನ್ನು ತಯಾರಿಸುವದಿಲ್ಲಾ.
ಆದರೆ ಮನೆಯ ಪಾತ್ರೆಗಳ ಮೇಲೆ ಅವಳ ಗಂಡನ ಹೆಸರನ್ನು ಕೆತ್ತಲಾಗಿವೆ.

ಇಂದಿನ ಆಧುನಿಕ ಅಡಿಗೆ ಮನೆಗಳು ಕುಕ್ಕರಿನ ಸೀಟಿಯ
ಸದ್ದಿಗೆ, ವಿದ್ಯುತ್ ರುಬ್ಬುವಯಂತ್ರದ ಸದ್ದಿಗೆ ಎಚ್ಚರಗೊಳ್ಳುತ್ತವೆ.
ಅವಳು ಅಡಿಗೆಮನೆಯಲ್ಲಿ ಸುವ್ಯವಸ್ಥಿತವಾಗಿ ನಿಯಮಿಸಲ್ಪಟ್ಟ
ಕೆಲಸಗಾರಳಂತೆ, ಒಂದು ಯಾಂತ್ರಿಕ ಗೊಂಬೆಯಂತೆ ಸುತ್ತುತ್ತಾಳೆ.
ಅಡಿಗೆಮನೆ ಒಂದು ಕಾರ್ಯಾಗಾರವಿದ್ದಂತೆ, ಅಲ್ಲಿ ಸದ್ದಿನ ಮೇಲಿನ ಸದ್ದು
ಕಟುಕನ ಅಂಗಡಿಯಿದ್ದಂತೆ, ಅಲ್ಲಿ ಅವಳು ಬಡಿಸುವದು, ಸ್ವಚ್ಛಗೊಳಿ
ಸುವದು ಹಾಗೂ ಅಡಿಗೆ ಬೇಯಿಸುವದು ಅವಳ ಕೆಲಸ.
ಅವಳ ಕನಸಿನಲ್ಲೂ ಅಡಿಗೆ ಮನೆಯ ದೃಶ್ಯಗಳು ಕಾಡುತ್ತಿರುತ್ತವೆ.
ಅಲ್ಲಿ ಮಲ್ಲಿಗೆಹೂವಿನಲ್ಲಿ ಕೂಡ ಖಾದ್ಯಗಳ ವಾಸನೆ ಘಮಘಮಿಸುತ್ತದೆ.

ಎಲ್ಲ ಅಡಿಗೆಮನೆಗಳೂ ಹಾಳಾಗಿಹೋಗಲಿ
ಏಕೆಂದರೆ ಅವು ನಮ್ಮ ಕನಸುಗಳನ್ನು ಸದ್ದಿಲ್ಲದೆ ಕದ್ದು
ನಮ್ಮ ಶಕ್ತಿಯನ್ನು ಉಡುಗಿಸುತ್ತವೆ. ಭಯಾನಕವಾದ
ಹಣಹದ್ದಿನ ಹಾಗೆ ನಮ್ಮ ದಿನಗಳನ್ನು ನುಂಗುತ್ತವೆ
ಅಡಿಗೆಮನೆಯಲ್ಲಿಯ ಚಮಚಗಳನ್ನು ನಾಶಮಾಡೋಣ
ಕಾರಣ ಅವು ನಮ್ಮನ್ನು ಬಡಿಸುವ ಚಮಚಗಳಾಗಿ
ಪರಿವರ್ತಿಸಿವೆ.
ಪಾತ್ರೆ ಪಗಡೆಗಳ ಮೇಲೆ ಮನೆಯಜಮಾನನ ಹೆಸರನ್ನು
ಅಳಿಸಿ ಹಾಕೋಣ
ನಮ್ಮ ಮಕ್ಕಳು ಏಕಾಂಗಿಯಾಗಿ ಒಳಪ್ರವೇಶಿಸುವದರಲ್ಲಿ
ಅಲ್ಲಿಯ ಖಾಸಗಿ ಒಲೆಗಳನ್ನು ಕಿತ್ತುಹಾಕೋಣ ನಮ್ಮ ಮಕ್ಕಳಿಗೋಸ್ಕರ
ಈ ಏಕಾಂಗಿ ಅಡಿಗೆಮನೆಗಳನ್ನು ನಾಶಮಾಡೋಣ.

ಚಮತ್ಕಾರಿಕ ಕಾವ್ಯ ರಚನೆಯ ಬ್ರಹ್ಮೋತ್ರಿ ಮೊಹಂತಿ

ಚಮತ್ಕಾರಿಕವಾಗಿಯೂ ಚುರುಕಾಗಿಯೂ ರಚನೆಗೊಂಡ ಬಹ್ಮೋತ್ರಿ ಮೊಹಂತಿಯವರ ಕವಿತೆಗಳು ಭಾವನೆಗಳ ಅಂತರಾಳಕ್ಕೆ ಲಗ್ಗೆ ಹಾಕುವಂಥವು. ೧೯೫೦ರಲ್ಲಿ ಮೊದಲಬಾರಿಗೆ ಆಕೆಯ ಕವಿತೆ ಪ್ರಕಟವಾದಾಗಿನಿಂದ ಇಲ್ಲಿಯವರೆಗೆ ಅವರ ರಚನೆಗಳು ಒರಿಯಾದ ಪ್ರಮುಖ ನಿಯತ ಕಾಲಿಕೆಗಳಲ್ಲಿ ಬೆಳಕು ಕಂಡಿವೆ. ಅವರ ಮೊದಲ ಕವನಸಂಕಲನ 'ಅಬಂತರ' ೧೯೭೨ರಲ್ಲೂ, ಎರಡನೇ ಸಂಕಲನ 'ದೃಷ್ಟಿರ ದ್ಯುತಿ' ೧೯೮೫ರಲ್ಲೂ, ಮೂರನೆಯ ಸಂಕಲನ 'ಸ್ತಬಕ' ೧೯೮೮ರಲ್ಲೂ ಪ್ರಕಟಗೊಂಡವು. 'ಸ್ತಬಕ' ೧೩೧ ಬಿಗಿಯಾದ ಬಂಧದಿಂದ ಕೂಡಿದ ಪುಟ್ಟ ಭಾವಗೀತೆಗಳ ಸಂಕಲನ. ಇದಕ್ಕೆ ೧೯೮೮ರ ಒರಿಸ್ಸಾ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಾಪ್ತವಾಗಿದೆ. ಕವಿತಾರಚನೆಗಾಗಿ ನೀಡಲಾಗುವ ''ಬಿಸುವ ಮಿಲನ ಪ್ರಶಸ್ತಿ''ಯನ್ನು ಬ್ರಹ್ಮೋತ್ರಿ ಮೊಹಂತಿ ಮೂರು ಬಾರಿ ಪಡೆದುಕೊಂಡಿದ್ದಾರೆ. ತಮ್ಮ ಜೀವಿತಾವಧಿಯ ಬಹುಸಮಯವನ್ನು ಬ್ರಹ್ಮೋತ್ರಿ ಭುವನೇಶ್ವರದಲ್ಲಿ ಕಳೆದಿರುವರಾದರೂ ಈಗವರು ಪುರಿಯಲ್ಲಿ ತಮ್ಮ ಪತಿಯೊಂದಿಗೆ ನೆಲೆಸಿದ್ದಾರೆ. ಅವರ ಪತಿ ಕೂಡ ಒರಿಯಾದ ಕಥಾಲೇಖಕರಲ್ಲೊಬ್ಬರು.

ನಾನೊಮ್ಮೆ ಎಡವಿದ ನಂತರ

ಒರಿಯ : ಬ್ರಹ್ಮೋತ್ರಿ ಮೊಹಂತಿ
ಅನು : ಪ್ರೊ। ನಲ್ಲೂರು ಪ್ರಸಾದ್

ಚಕಿತನಾಗಿ ಸುತ್ತಲೂ ದೃಷ್ಟಿಸಿದೆ
ಯಾರಾದರೂ ನೋಡಿದರೆ?
ಬಹುಶಃ ನೋಡಿರಬಹುದು,
ಅವರು ನೋಡಿದ್ದನ್ನು ನಾನು ನೋಡದಿರಬಹುದು

ಚಡಪಡಿಕೆ ಎದೆಯೊಳಗೆ
ಗಡಿಮೀರಿದ ಗುಮಾನಿ ಮನದೊಳಗೆ.
ಈಗ ಯಾರೂ ನೋಡದಿದ್ದರೂ
ನೋಡಲು ಖಂಡಿತಾ ಅವರು ಬಂದೇ ಬರುತ್ತಾರೆ
ಮತ್ತೆ ನಾನೆಂತು ಉತ್ತರಿಸಲಿ?

ಹೇಳಬಹುದು ಒಂದಷ್ಟು ಸುಳ್ಳುಗಳು
ಆದರದು ಮತ್ತಷ್ಟು ವಿಚಾರಣೆಗೆ
ನನ್ನನ್ನೂ ಸಿಲುಕಿಸುತ್ತದೆ...
ಇದು ಅಸಾಧ್ಯವೇನಲ್ಲ
ದಾರಿ ಯಾವುದು ನನಗೆ
ನನ್ನ ಸಂರಕ್ಷಣೆಗೆ?

ಹಣೆಯಲ್ಲಿ ಬೆವರ ಹನಿ, ಮುಖವೆಲ್ಲ ಕೆಂಪು
ಕಿವಿಯಲ್ಲಿ ಗುಂಗಾಡಿ ಕೊರೆತಗಾನ.

ಇಲ್ಲ ಖಂಡಿತ ಇಲ್ಲ ಬೇಕೆಂದೇ ಬೀಳಲಿಲ್ಲ
ಬಿದ್ದದ್ದು ಉದ್ದೇಶಪೂರ್ವಕವಲ್ಲ
ಹಾಗಿದ್ದರೆ ಮತ್ತೇಕೆ ನಾಚಿಕೆ?
ಈ ತರ್ಕ ತರಬಲ್ಲುದೆ ಸಮಾಧಾನ ಮನಕೆ?

ನಾ ಎಡವಿದ್ದಕ್ಕೊಂದು ಕಾರಣ ಕೊಡಲು
ಮನವೆಲ್ಲಾ ಜಾಲಾಡಿದೆ.
ಬಟ್ಟೆ ಹರಿದಿತ್ತು. ಪಾದ ಗೆಬರಿತ್ತು, ಏನೋ ಮುರಿದಿದ್ದು ತಗುಲಿತ್ತು
ಆದರೂ ನಾನು ಬೀಳಲಿಲ್ಲ.
ಹಸಿಸುಳ್ಳು!

ಹಾಗಾದರೆ ನಾನು ಬಿದ್ದದ್ದು ಯಾವಾಗ?
ನಡೆ ಕಲಿಯಲು ಹೆಜ್ಜೆ ಇಡುವಾಗ

~ ~ ~

ಅಗ್ರಶ್ರೇಣಿಯ ಬಂಗಾಳಿ ಲೇಖಕಿ ಮಹಾಶ್ವೇತಾ ದೇವಿ

ಮಹಾಶ್ವೇತಾದೇವಿ (೧೯೨೬) ಭಾರತದ ಅಗ್ರಶ್ರೇಣಿಯ ಬರಹಗಾರರಲ್ಲಿ ಒಬ್ಬರಾಗಿ ಹೆಸರು ಗಳಿಸಿರುವ ಬಂಗಾಳಿ ಲೇಖಕಿ, ರಾಜಕೀಯ ಲಿಂಗ ಹಾಗೂ ವರ್ಗದಂತಹ ಸಮಕಾಲೀನ ಪ್ರಶ್ನೆಗಳನ್ನು ಕೇಳುವ ಸಾಮಾಜಿಕ ಹೊಣೆಯನ್ನು ಬಿಂಬಿಸುವ ಬರಹ ಇವರದು. ಹರಿತವಾದ ವ್ಯಂಗ್ಯ ಇವರ ಬರವಣಿಗೆಯಲ್ಲಿ ಎತ್ತಿಕಾಣುತ್ತದೆ. ೧೯೭೯ರಲ್ಲಿ ಅಕಾಡೆಮಿ ಪ್ರಶಸ್ತಿ ಹಾಗೂ ೧೯೯೬ರಲ್ಲಿ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿಯೇ ಅಲ್ಲದೆ ಇತರ ಅನೇಕ ಸಾಹಿತ್ಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. ೧೯೮೦ರಲ್ಲಿ ಶೋಷಣೆಗೊಳಗಾಗಿರುವ ಆದಿವಾಸಿ ಸಮುದಾಯಕ್ಕಾಗಿ ಇವರು ನಡೆಸಿರುವ ಹೋರಾಟವನ್ನು ಗುರುತಿಸಿ ಪದ್ಮಶ್ರೀ ಬಿರುದನ್ನು ನೀಡಲಾಯಿತು.

ಬಿಟ್ಟರಾ ಸಾಯಿಲ್ ಪಾಲಮೌನ ಹಿನ್ನೆಲೆಯಲ್ಲಿ ಬರೆದ ಆಕೆಯೇ ಹೇಳುವಂತೆ ಕೆಲವು ಮುಖ್ಯವಾದ ಕಥೆಗಳನ್ನೊಳಗೊಂಡ ಸಂಕಲನ. ಆಕೆ ಹತ್ತಿರದಿಂದ ಕಂಡ ಶೋಷಣೆಗೆ ಈ ಕತೆಗಳು ಕನ್ನಡಿ ಹಿಡಿಯುತ್ತವೆ.

~ ~ ~

ಪುಟ್ಟವರು

ಬಂಗಾಳಿ : ಮಹಾಶ್ವೇತಾದೇವಿ
ಅನು : ಎಂ.ಎಸ್. ಕೃಷ್ಣಾಕುಮಾರಿ

ಜಾಗದ ಹೆಸರು ಲೋಹ್ರಿ. ಅದು ಇರುವುದು ಮೂರು ಜಿಲ್ಲೆಗಳು - ರಾಂಚಿ, ಸರ್ಗ್ಜುದ ಮತ್ತು ಪಾಲಮೌಗಳ ಸರಹದ್ದುಗಳು ಸೇರುವಲ್ಲಿ. ಹೆಸರಿಗೆ ರಾಂಚಿಗೆ ಸೇರಿದೆ. ಆದರೆ ಇಡೀ ಪ್ರದೇಶ ಒಂದು ಸುಟ್ಟ ಬೆಂಗಾಡು. ಇಲ್ಲಿ ಭೂಮಿ ಯಾವುದೋ ತಾಳಲಾರದ ಬೆಂಕಿ ಧಗೆ ಹೊಟ್ಟೆಯಲ್ಲಿ ಹೊತ್ತಂತಿದೆ. ಆದ್ದರಿಂದ ಮರಗಳು ಕುಬ್ಜವಾಗಿವೆ.

ನದಿಯ ತಡಿ ಒಣಗಿದ ಸ್ಮಶಾನವಾಗಿದೆ. ಹಳ್ಳಿಗಳು ಧೂಳಿನ ಪರದೆಯ ಹಿಂದೆ ಮಾಸಿ ಮರೆಯಾಗುತ್ತವೆ. ಇಲ್ಲಿನ ಮಣ್ಣಿಗೆ ಕೂಡ ವಿಚಿತ್ರ ಬಣ್ಣ. ಕೆಮ್ಮಣ್ಣಿನ ಪ್ರದೇಶದಲ್ಲೂ ಇಂತಹ ಗಾಢ ಕಂದು-ಕೆಂಪು ಕಾಣುವುದು ಅಪರೂಪ. ಹೌದು, ಹಸಿರಕ್ತ ಒಣಗಿ ಹೆಪ್ಪುಗಟ್ಟುವಾಗ ಸರಿಯಾಗಿ ಇದೇ ಗಾಢ ನಿರ್ಜೀವ ಕೆಂಪಿಗೆ ತಿರುಗುತ್ತದೆ.

ಪರಿಹಾರ ಕಾರ್ಯದ ಅಧಿಕಾರಿ ಇಲ್ಲಿಗೆ ಬರುವುದಕ್ಕೆ ಮುಂಚೆಯೇ ಅವನಿಗೆ ಸ್ವಲ್ಪ ವಿಷಯ ತಿಳಿಸಲಾಗಿತ್ತು. ಅಧಿಕಾರಿ ಪ್ರಾಮಾಣಿಕ, ಅನುಕಂಪವಿರುವ ಮನುಷ್ಯ. ಎಷ್ಟೋ ಜನರನ್ನು ಬಿಟ್ಟು, ಇವನನ್ನು ಆಯ್ಕೆ ಮಾಡಲಾಗಿತ್ತು. ಇದು ಹಾಳಾದ ಭಯಂಕರ ಜಾಗ ಎಂದು ಇವನಿಗೆ ತಿಳಿಸಲಾಗಿತ್ತು. ಇಲ್ಲಿರುವವರು ಪ್ರಾಮಾಣಿಕ ರೀತಿಯಲ್ಲಿ ಬದುಕುವವರಲ್ಲ.

- ಏಕೆ ?

- ಅವರು ಬೆಳೆಗಾರರಲ್ಲ.

- ಏಕೆ? ಅವರಿಗೆ ಭೂಮಿ ಇದೆಯೇನು?

ಪರಿಹಾರಾಧಿಕಾರಿ ಮತ್ತು ಬಿಡಿ *ಓ ಬಂಗಲೆಯೊಳಗೆ ಈ ಮಾತಿನಲ್ಲಿ ಮುಳುಗಿದ್ದರು. ಹೊರಗಿನ್ನೂ ತಂಪಾಗಿಲ್ಲ. ರಾತ್ರಿ ಚೌಕಿದಾರ ಬಂಗಲೆಯ ಕಾಂಪೌಂಡಿನಲ್ಲಿ ನುಲಿಕೆ ಮಂಚ ಹಾಕುತ್ತಾನೆ. ಇಲ್ಲಿ ಯಾರೂ ಬೇಸಿಗೆಯಲ್ಲಿ ರಾತ್ರಿ ಒಳಗೆ ಮಲಗುವುದಿಲ್ಲ. ಪರಿಹಾರಾಧಿಕಾರಿಯನ್ನು ಈ ಕೆಲಸ ಮಾಡುವುದಕ್ಕೆ ಕೇವಲ ಮೂರು ತಿಂಗಳಿಗಾಗಿ ಆಹಾರ ಖಾತೆಯಿಂದ ಎರವಲಾಗಿ ಕರೆದುಕೊಂಡು ಬಂದಿದ್ದಾರೆ. ಇಡೀ ಜೀವನದಲ್ಲಿ ಇಂತಹ ಒಣಗಿದ, ಬದುಕಲಾಗದ ಜಾಗ ಕಂಡವನಲ್ಲ. ಪರಿಹಾರಕ್ಕಾಗಿ ಬಂದ ಅರೆಬೆತ್ತಲ,

---

* ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್

ಸುರುಟಿಹೋಗಿ, ಹುಳುಹಿಡಿದು, ಊದಿದ ಹೊಟ್ಟೆ ಹೊತ್ತ ಆದಿವಾಸಿ ಗಂಡಸರು ಹೆಂಗಸರನ್ನು ಕಂಡು ಅಸಹ್ಯವಾಗುತ್ತದೆ. ಅವನಿಗೆ ಆದಿವಾಸಿ ಗಂಡಸರು ಕೊಳಲೂದುತ್ತಾರೆ ಮತ್ತು ಆದಿವಾಸಿ ಹೆಂಗಸರು ಹೂ ಮುಡಿದು ಹಾಡುತ್ತಾ, ಕುಣಿಯುತ್ತಾ ಗುಡ್ಡದಿಂದ ಗುಡ್ಡಕ್ಕೆ ಜಿಗಿದಾಡುತ್ತಿರುತ್ತಾರೆ ಎಂದೆಲ್ಲಾ ಭಾವನೆಗಳಿದ್ದವು. ಹಿಂದಿ ಸಿನೆಮಾಗಳನ್ನು ನೋಡಿ ನೋಡಿ ಆದಿವಾಸಿ ಬದುಕಿನ ಬಗ್ಗೆ ಬೆಳಸಿಕೊಂಡಿದ್ದ ಭಾವನೆಗಳವು.

ಚಿಕ್ಕ ಗುಡ್ಡದ ಕೆಳಗೆ ಜೀಪ್ ನಿಲ್ಲಿಸಿ ಅದರ ಸಣ್ಣ ಇಳಿಜಾರನ್ನೇರುವಾಗ ಅವನಿಗೆ ಅರ್ಥವಾಗುತ್ತದೆ. ಗುಡ್ಡಗಳ ಮೇಲೆ ಓಡಲಾಗುವುದಿಲ್ಲ. ಉಸಿರು ಹಿಡಿಯುತ್ತದೆ. ಆದಿವಾಸಿ ಬದುಕಿನಲ್ಲಿ ಹಾಡು ಬಹು ಮುಖ್ಯ ಎಂದುಕೊಂಡಿದ್ದ. ಈಗ ಅವರ ಹಾಡುಗಳನ್ನು ತಾನೇ ಕೇಳುತ್ತಿದ್ದಾನೆ. ನಿರಂತರ ಮುದಿ ಮಾಟಗಾತಿಯ ಒಂಟಿರೋದನದಂತೆ ವ್ಯಾಕುಲವುಂಟು ಮಾಡುತ್ತವೆ. ಮನಸ್ಸು ಅಸ್ಥಿರವಾಗಿಸುತ್ತವೆ! ಅಸ್ಥಿರವಾಗಿಸುತ್ತವೆ.

- ಅವರೇಕೆ ಹಾಡುತ್ತಿದ್ದಾರೆ?

- ಅವರು ಜಂಗ್ಲಿಗಳು. ಏನಾದರೂ ಅದು ಕೆಟ್ಟ ಶಕ್ತಿಗಳ ಕೆಲಸ. ಬರಗಾಲ, ಕ್ಷಾಮ ಎಲ್ಲಾ ಇವುಗಳ ಶಾಪ ಎನ್ನುತ್ತಾರೆ. ದೆವ್ವಗಳನ್ನು ಓಡಿಸುವುದಕ್ಕೆ ಹಾಡುತ್ತಾರೆ. ಇದು ಶಾಪಗ್ರಸ್ತ ನೆಲ. ಈ ಹಾಳು ಜನರಿಗೆ ಭೂಮಿ ಕೊಟ್ಟರೂ ಅವರು ಅದನ್ನು 'ಮಹಾಜನ*'ನಿಗೆ ಮಾರಿಬಿಡುತ್ತಾರೆ. ಕೇಳಿದರೆ, ಕಣ್ಣರಳಿಸಿ, ನೀರೆಲ್ಲಿದೆ? ಬೀಜಗಳು? ನೇಗಿಲು? ಎತ್ತುಗಳು?.... ಎಲ್ಲಾ ಕೊಟ್ಟರೂ ಸುಗ್ಗಿಯ ತನಕ ತಿನ್ನುವುದೇನು? ಎನ್ನುತ್ತಾ ಮಹಾಜನನಿಗೆ ಮಾರುತ್ತಾರೆ. ಹೌದು, ಸಾಲ ಹಿಂತಿರುಗಿಸಲು ಭೂಮಿ ಮಾರಿದೆವು ಎನ್ನುತ್ತಾರೆ.

- ನಾನು ಲೋಹ್ರಿಯಲ್ಲಿರಬೇಕೆ?

- ಹೌದು ಕ್ಯಾಂಪ್ ಹಾಕಬೇಕು. ಜನ ಕಳಿಸುತ್ತೇನೆ. ಡೋಂಟ್ ವರಿ. ಹೆದರಬೇಡಿ.

- ಹೆದರಿಕೆ ಯಾವುದರ ಬಗ್ಗೆ?

- ಕಳ್ಳರು. ಪ್ರತಿಸಲ ಪರಿಹಾರ ಕಳಿಸಿದಾಗಲೂ ಪುಟ್ಟ ಹುಡುಗ, ಹುಡುಗಿಯರು ಬಂದು ಒಂದೋ, ಎರಡೋ ಚೀಲ ಅಕ್ಕಿ ಕದಿಯುತ್ತಾರೆ. ಅಕ್ಕಿ, ಜೋಳಜೊಂಡು ಕಾಕಂಬಿ ಯಾವುದಾದರೂ ಸರಿ, ಕೈಗೆ ಸಿಕ್ಕಿದ್ದು.

- ಪುಟ್ಟ ಹುಡುಗ ಹುಡುಗಿಯರೆ?

- ಹೌದು. ಅವರನ್ನು ಯಾರೂ ಹಿಡಿಯಲಾಗುವುದಿಲ್ಲ. ಅವರನ್ನು ನೋಡಿರುವ ಜನ ಕಡಿಮೆ. ನಾನೇ ನೋಡಿದ್ದೇನೆ. ಒಮ್ಮೆ ನನ್ನ ಹತ್ತಿರ ಗನ್ ಇತ್ತು.

- ನೀವು ಗನ್ ಹಿಡಿದು ಓಡಾಡುತ್ತೀರಾ?

- ಲೈಸನ್ಸ್ ಇದೆ. ಲೋಹ್ರಿ ಕೆಟ್ಟ ಜಾಗ. ಹತ್ತು ವರ್ಷದ ಹಿಂದೆ... ಅಲ್ಲ.... ಹನ್ನೆರಡಿರಬೇಕು. .... ಒಂದು ದಂಗೆಯಾಗಿತ್ತು.... ಬೆಂಕಿ.... ಎಲ್ಲಾ ಸುಟ್ಟುಹೋಯಿತು.

---

* ಬಡ್ಡಿ ವ್ಯಾಪಾರಿ

ನಿಮಗೆ ಈ ಜಾಗದ ಕಥೆ ಗೊತ್ತೆ? ಹಿಂದೆ ಲೋಹ್ರಿಯಲ್ಲಿ ಕಬ್ಬಿಣದ ಗಣಿ ಕೆಲಸದವರಿದ್ದರು. ಆಗರಿಯಾ ಇವರ ಹೆಸರು. ಪುರಾಣ ಪ್ರಕಾರ ಆಗರಿಯಾ ಜನ ದೈತ್ಯ ಅಸುರ ವಂಶದವರು. ಅವರ ವೃತ್ತಿ ಗಣಿ ಕೆಲಸ. ಲೋಹಕಾರರು. ಜ್ವಾಲೆಗಳನ್ನು ತಿನ್ನುತ್ತಿದ್ದರಂತೆ. ಬೆಂಕಿ ನದಿಯಲ್ಲಿ ಮೀಯುತ್ತಿದ್ದರು. ಅವರ ರಾಜ ಲೋಗುಂಡ್ಡಿ ಅಧೋಲೋಕದ ಅಸುರ ಆಗರಿಯಾಗಳನ್ನು ಮಾತ್ರ ಕಬ್ಬಿಣ ತರಲು ಕೆಳಗೆ ಬಿಡುತ್ತಿದ್ದ. ಹೀಗಿರುವಾಗ ಲೋಗುಂಡ್ಡಿ ಮತ್ತು ಅವನ ತಮ್ಮಂದಿರು ಎಲ್ಲಾ ಸೇರಿ ಹನ್ನೆರಡು ಜನವಿದ್ದರು. ಹನ್ನೆರಡು ಅಣ್ಣತಮ್ಮಂದಿರಿಗೆ ಒಬ್ಬಳೇ ಹೆಂಡತಿ.

– ದ್ರೌಪದಿಯೇ ವಾಸಿ.

– ರಾಜ ಲೋಗುಂಡ್ಡಿ ಬರುಬರುತ್ತಾ ಮದಾಂಧನಾಗಿ ತಾನು ಸೂರ್ಯ ದೇವನಿಗಿಂತಲೂ ಶಕ್ತಿಶಾಲಿ ಎಂದುಕೊಂಡ. ಸೂರ್ಯದೇವ ಲೋಹ್ರಿಗೆ ಬಂದ. ಇಡೀ ಲೋಹ್ರಿ ಜನ ಸುಟ್ಟು ಬೂದಿಯಾದರು. ಅವರ ಹೆಂಡತಿ ಮತ್ತೊಂದು ಹಳ್ಳಿಯಲ್ಲಿದ್ದಳು. ಉಳಿದು ಕೊಂಡಳು. ಸೂರ್ಯದೇವನ ಜ್ವಾಲೆಗಳ ಬಿಸಿಯಲ್ಲಿ ಬೆಂದು, ನೊಂದು ಓಡಿ ಗೋಂಡ*ನೊಬ್ಬನ ಮನೆ ಸೇರಿದಳು. ಅಲ್ಲಿ ಮೊಸರುಗಡಿಗೆಯಲ್ಲಿ ಮುಳುಗಿ ತಂಪಾದಳು. ಅಲ್ಲೇ ಚ್ಛಿಂದಿ ಮರದಡಿ ಮಗನನ್ನು ಹಡೆದಳು. ಅವನ ಹೆಸರು ಜ್ವಾಲಾಮುಖಿ- ಉರಿವ ಬಾಯವನು.

– ಭಾಪ್ರೆ !

– ಜ್ವಾಲಾಮುಖಿ ಯುವಕನಾದಾಗ, ಸೂರ್ಯದೇವನೊಡನೆ ಯುದ್ಧಕ್ಕೆ ನಡೆದ. ಲೋಹ್ರಿಯಲ್ಲಿ ಯುದ್ಧ ನಡೆಯಿತು. ಕಾದಾಟದ ಬೆಂಕಿ ಭೂಮಿ ಸುಟ್ಟಿತು. ಜ್ವಾಲಾಮುಖಿ ಸೂರ್ಯದೇವನಿಗೆ ಶಾಪ ಹಾಕಿದ-ತುಂಬು ಚಂದ್ರನೊಡನೆ ಮಾತ್ರ ನೀನು ಕೂಡಬಲ್ಲೆ. ಸೂರ್ಯದೇವ ಹೇಳಿದ – ಮತ್ತೆ, ನೀವು ಆಗರಿಯಾ ಜನ ಕಬ್ಬಿಣದಿಂದ ಗಳಿಸಿದ ಹಣವೆಲ್ಲಾ ಬೂದಿಯಾಗುವುದು. ಆಗಿನಿಂದ ಈಗಿನವರೆಗೂ ಆಗರಿಯಾ ಜನ ಬಡಜನ.

– ಜಂಗ್ಲೀ ಕಥೆ.

– ಹೌದು ಮತ್ತೆ, ಆಗರಿಯಾ ಜನ ಈಗ ಬಹಳ ಕಷ್ಟದಲ್ಲಿದ್ದಾರೆ. ಅವರ ವಂಶಪಾರಂಪರ್ಯ ಕಸುಬು ಲೋಹಕಾರರದು. ಈಗವರ ಪಾಲಿಗದಿಲ್ಲ. ಅವರನ್ನು ಉಳುಮೆಗೆ ಹಚ್ಚುವುದು ಕಷ್ಟ. ತಾವು ಅಪವಿತ್ರ ಎನ್ನುತ್ತಾರೆ. ಇರಲಿ, ಒಂದು ದಿನ ಅವರಿಗೂ ಕಾಲ ಬರುತ್ತದೆ.

– ದಂಗೆಯ ಬಗ್ಗೆ ಹೇಳಿ.

ಹನ್ನೆರಡೋ ಹದಿನಾಲ್ಕೋ ವರ್ಷದ ಹಿಂದೆ ಭಾರತ ಸರ್ಕಾರ ಲೋಹ್ರಿಯಲ್ಲಿ

---

* ಆದಿವಾಸಿ

ಕಬ್ಬಿಣ ಹುಡುಕಲು ಜನ ಕಳಿಸಿತ್ತು. ಕುಭಾದ ಹಳ್ಳಿಜನ ತೊಂದರೆಕೊಡುವ ಆಗರಿಯಾಗಳು. ಅವರು ಹೇಳಿದರು - ನಮ್ಮ ಮೂವರು ಅಸುರದೇವತೆಗಳು ಆ ಗುಡ್ಡದಲ್ಲಿರುತ್ತಾರೆ. ಅವನ್ನು ಅಗೆಯಬೇಡಿ. ಇಬ್ಬರು ಪಂಜಾಬಿ ಅಧಿಕಾರಿಗಳು .... ಒಬ್ಬ ಮದ್ರಾಸಿ ಭೂಗರ್ಭ ವಿಜ್ಞಾನಿ. ಈ ಅಸುರದೇವತೆಗಳ ಕಾಡಿನ ಕಥೆಗಳನ್ನು ಅವರೇಕೆ ನಂಬಬೇಕು? ಗುಡ್ಡವನ್ನು ಸಿಡಿಸಿ ನೆಲಸಮ ಮಾಡಿದರು.

- ಮುಂದೆ?

- ಕುಭಾದ ಆಗರಿಯಾ ಇವರೆಲ್ಲರ ಮೇಲೆ ಬಿದ್ದು ಕಡಿದುಹಾಕಿದರು. ಕಾಡಿನಲ್ಲಿ ಮಾಯವಾದರು. ನೆನಪಿಟ್ಟುಕೊಳ್ಳಿ ಮಿಸ್ಟರ್ ಸಿಂಗ್, ಅವರು ಆ ಕಾಡನ್ನು ಅದೇ ಮೊದಲು, ಅದೇ ಕಡೆಯ ಸಾರಿ ಪ್ರವೇಶಿಸಿದರು. ಅಷ್ಟೇ ! ಅವರನ್ನೂ ಯಾರೂ ಮತ್ತೆ ನೋಡಲೇ ಇಲ್ಲ. ನೂರೋ, ನೂರೈವತ್ತೋ ಜನ.

- ಗೋರ್ಮೆಂಟ್ ಹುಡುಕಿಸಲು ಪ್ರಯತ್ನಿಸಲಿಲ್ಲವೆ?

- ಬ್ರಾಹ್ಮಣ ವಿಧವೆ ಅಕ್ಕಿಯಲ್ಲಿ ಹುಳ ಶೋಧಿಸುವಂತೆ ಕಾಡನ್ನೆಲ್ಲಾ ಜಾಲಾಡಿದರು. ಸಿಗಲಿಲ್ಲ.

ಒಂದು ತಿಂಗಳು ಹುಡುಕಾಟ ನಡೆಯಿತು. ಪೋಲಿಸರು ನಂತರ ಕುಭಾ ಹಳ್ಳಿಯನ್ನು ಸುಟ್ಟು ಬೂದಿಮಾಡಿದರು. ಬೇರೆ ಎಲ್ಲಾ ಆಗರಿಯಾ ಹಳ್ಳಿಗಳ ಮೇಲೂ ದಂಡತೆರಿಗೆ ಹಾಕಿದರು. ಸಾಕಷ್ಟು ದಬ್ಬಾಳಿಕೆ ನಡೆಯಿತು.

ಈಗ ಯಾವಾಗ ಪರಿಹಾರ ಕಳಿಸಿದರೂ ಕಳ್ಳತನವಾಗುತ್ತದೆ. ಹಿಂದೆ ನಾಲ್ಕೋ, ಐದೋ ಚೀಲ ಹೋಗುತ್ತಿತ್ತು. ಈಗ ಎರಡೋ ಮೂರೋ ಹೋಗುತ್ತದೆ. ಭಯಂಕರ ಜಾಗ. ಈ ನೆಲದಲ್ಲಿ ಏನೂ ಬೆಳೆಯುವುದಿಲ್ಲ. ನೇಗಿಲು ನೆಲ ತಾಕಿದರೆ ಕೆಳಗೆ ಕಬ್ಬಿಣ ತಾಕಿದಂತೆನ್ನಿಸುತ್ತದೆ. ಶಾಪಗ್ರಸ್ತ ಜಾಗ.

- ಕದಿಯುವುದು ಮುಂದುವರೆದಿದೆಯೇ?

- ಪರಿಹಾರ ಹಂಚುವವರೆ ಕದ್ದು ಮಕ್ಕಳ ಬಗ್ಗೆ ಕಥೆ ಕಟ್ಟುತ್ತಿದ್ದಾರೆಂದುಕೊಂಡಿದ್ದೆ. ಒಂದು ಸಲ ನಾನೇ ಲೋಹ್ರಿಗೆ ಹೋದೆ. ಇಪ್ಪತ್ತು ಸಾವಿರಕ್ಕೆ ಸಾಮಗ್ರಿ, ಕೆಲವು ಸಿಪಾಯಿಗಳ ಜೊತೆ. ರಾತ್ರಿ ಕಗ್ಗತ್ತಲು. ಶಖೆ. ಹೊರಗೆ ಮಲಗಿದ್ದೆ. ಇದ್ದಕ್ಕಿದ್ದಂತೆ ವಿಚಿತ್ರ ಶಬ್ದ ! ಎದ್ದು ನೋಡಿದೆ- ಪುಟ್ಟ ಆಕೃತಿಗಳು... ಮಕ್ಕಳಿರಬೇಕು-ಚೀಲಗಳನ್ನು ತೆಗೆದುಕೊಂಡು ಓಡಿಹೋಗುತ್ತಿದ್ದರು. ಗಾಳಿಯಲ್ಲಿ ಗುಂಡುಹೊಡೆದೆ. ಏನು ಮಾಡಲು ಸಾಧ್ಯ. ಚಿಕ್ಕಮಕ್ಕಳನ್ನು ಶೂಟ್ ಮಾಡಲೆ? ಎಷ್ಟೋ ಕಳುವಾಗುತ್ತದೆ. ಮಕ್ಕಳೂ ತೆಗೆದುಕೊಳ್ಳಲಿ ಬಿಡಿ.

ಬಿಡಿಓ ಹುಬ್ಬುಗಂಟಿಕ್ಕಿ ಕತ್ತಲಲ್ಲಿ ದೃಷ್ಟಿನೆಟ್ಟು ಹೇಳಿದ- ಜನ ಈ ಜಾಗಕ್ಕೆ 'ಅಸುರ ಬೊಂಗಾ* ದೆವ್ವಗಳು ಹಿಡಿದಿದೆ ಎನ್ನುತ್ತಾರೆ. ಚೀಲ ಕದ್ದು ಓಡುತ್ತಿದ್ದ ಪುಟ್ಟವರು

---

* ಆದಿವಾಸಿಕ್ಷುದ್ರದೇವತೆಗಳು

ಮನುಷ್ಯ ಮಕ್ಕಳಂತಿರಲಿಲ್ಲ. ಎಷ್ಟುದ್ದ ಕೂದಲು! ಗಾಳಿಯಲ್ಲೇ ಮಾಯವಾಗುತ್ತಾ ನಗುತ್ತಿದ್ದರು! ಹೆದರಬೇಡಿ, ಮಹಾಬೀರಜೀ ಪ್ರಸಾದ ತಂದಿದ್ದೇನೆ. ಜೇಬಿನಲ್ಲಿಟ್ಟುಕೊಳ್ಳಿ. ಬನ್ನಿ ಊಟ ಮಾಡೋಣ.

ರಾತ್ರಿ ಹಾಸಿಗೆಗಳು ಹೊರಗೆ. ಆದರೆ ನಿದ್ದೆ ಹೇಗೆ ಬರುತ್ತದೆ? ಸೂರ್ಯ, ಚಿಕ್ಕ ಹುಡುಗ ಕಾದಾಡುತ್ತಿದ್ದಾರೆ. ಗುಡ್ನ, ಕತ್ತಲಲ್ಲಿ ದಂಗೆಯ ಸ್ಫೋಟ. ಶವಗಳು. ವಿಧವೆ ಅಕ್ಕಿಯಲ್ಲಿ ಹುಳ ಆರಿಸುವಂತೆ ಪೋಲಿಸರು ಕಾಡನ್ನು ಶೋಧಿಸುತ್ತಾರೆ. ಪರಿಹಾರ. ಕತ್ತಲಲ್ಲಿ ಅಮಾನುಷ ಮಕ್ಕಳು ಅಕ್ಕಿ ಕದಿಯುತ್ತಾರೆ. ಮುಖದ ಮೇಲೆ ಬಿಸಿಲು ಬಿದ್ದಾಗ ತಾನು ಆಳವಾಗಿ ನಿದ್ದೆ ಮಾಡಿದ್ದು ತಿಳಿಯಿತು ಪರಿಹಾರಾಧಿಕಾರಿಗೆ.

ಬೆಳಗ್ಗೆ ಹೊರಟ ರಸ್ತೆ ಸ್ವಲ್ಪ ದೂರದ ಮೇಲೆ ಕೆಟ್ಟದಾಗಿತ್ತು. ಅಲ್ಲಲ್ಲಿ ಕ್ರಿಸ್ಟಿಯನ್ ಮಿಷನರಿ ಕೇಂದ್ರಗಳು. ಗುಂಪು ಗುಂಪಾಗಿ ಜನ. ಕಪ್ಪು ಜೀರ್ಣವಾದ ದೇಹಗಳು. ಜೀಪಿನಲ್ಲಿ ಡ್ರೈವರ್ ಹೇಳುತ್ತಾ ನಡೆದ - ಅವರ ಹಾಡು ಕೇಳಿ, ಯಾವನಾದರೂ ನಾಗರಿಕ ಮನುಷ್ಯ ಈ ಹೊತ್ತಿನಲ್ಲಿ ಹೀಗೆ ಹಾಡುತ್ತಾನೇನು?

ಅವರೇಕೆ ಹಾಡುತ್ತಿದ್ದಾರೆ.?

- ಅವರು ಹಾಗೆ! ನಡೆಯಬಲ್ಲವರು ಬಂದು ಪರಿಹಾರ ತೆಗೆದುಕೊಳ್ಳುತ್ತಾರೆ. ಆಗದವರು, ತೀರಾ ಮುದುಕರು ವೃತ್ತಾಕಾರದಲ್ಲಿ ಕುಳಿತು ಹಾಡುತ್ತಾರೆ, ಸಾಯುವ ವರೆಗೂ. ಒಂದು ಹಳ್ಳಿಯಲ್ಲಿ ಶುರುವಾದ ತಕ್ಷಣ ಹಾಡಿನ ಸಂದೇಶ ಬೇರೆ ಹಳ್ಳಿಗಳಲ್ಲೂ ಹಬ್ಬುತ್ತದೆ. ಯುವಕರನ್ನು ಪರಿಹಾರ ತರಲು ಕಳಿಸಿ, ಮುದುಕರು ಗೋಳಿಡುತ್ತಾ ಕೂತುಕೊಳ್ಳುತ್ತಾರೆ.

-ತುಂಬಾ ಜನ ಸಾಯುತ್ತಾರೇನು?

- ಮೇಲೆ ಹದ್ದುಗಳ ಹಾರಾಟ ಕಾಣುವುದಿಲ್ಲವೆ. ಜೀವವಿರುವ ದೇಹಗಳನ್ನೂ ತಿನ್ನುತ್ತವೆ; ಒಂದು ವಿಷಯ ಹುಜೂರ್, ರಾತ್ರಿ ಸ್ವಲ್ಪ ಹೆಂಡ-ಗಿಂಡ ಕುಡಿಯಬೇಕು. ಇಲ್ಲದಿದ್ದರೆ ಭಯವಾಗುತ್ತದೆ. ಆ ಬಹಾದುರ್ ಹುಚ್ಚಾಗಿಬಿಟ್ಟನಲ್ಲ!

- ಯಾವ ಬಹಾದುರ್?

- ಡ್ರೈವರ್. ಆಫೀಸರ್ ಸಾಹೇಬ ಹೇಳಲಿಲ್ಲವೆ? ರಾತ್ರಿ ಎಲ್ಲಾ ಮಲಗಿದ್ದರು. ಬಹಾದುರ್ ಕಳ್ಳ, ಕಳ್ಳ ಎಂದು ಕೂಗುತ್ತಾ ಕತ್ತಲಲ್ಲಿ ಮಾಯವಾದ. ಹುಡುಕಲು ಹೊರಟವರು ಕತ್ತಲಲ್ಲಿ ನಗು ಕೇಳಿ ಹೆದರಿ ಹಿಂತಿರುಗಿದರು. ಮಾರನೆ ಬೆಳಗ್ಗೆ ಪ್ರಜ್ಞೆತಪ್ಪಿ ಬಿದ್ದಿದ್ದ ಬಹಾದುರ್‌ನನ್ನು ಕಂಡರು. ಅವನೀಗ ರಾಂಚಿಯಲ್ಲಿದ್ದಾನೆ. ಹುಚ್ಚನಾಗಿದ್ದಾನೆ. ಲೋಹ್ರಿ ಬಂತು.

ಕ್ಯಾಂಪಿಗೆ ಜಾಗ ಮಾಡಿದ್ದರು. ತಹಸೀಲ್ದಾರ ಚಿಕ್ಕ ಗುಡಿಸಿಲಿಂದ ಹೊರಬಂದ ಟೀ ಹುಜೂರ್? ನೀರು ರೆಡಿಯಾಗಿದೆ. ಸ್ನಾನ ಮಾಡಬಹುದು. ಅರ್ಧ ಮೈಲು ದೂರದಿಂದ ತಂದಿದ್ದೇವೆ.''

•

ಡ್ರೈವರ್ ಕೇಳಿದ - ಅದೇ ಹೊಂಡ?

ಪರಿಹಾರಾಧಿಕಾರಿಗೆ ಹೇಳಿದ - ಕುಭಾ ದಂಗೆಯ ನಂತರ ಗುಡ್ಡ ಸಿಡಿದು ನೆಲಸಮವಾಗಿ ಹೊಂಡ ಬಿದ್ದಿತ್ತು. ಮಳೆಗಾಲ ನೀರು ತುಂಬಿಕೊಂಡು ವರ್ಷವಿಡೀ ಇರುತ್ತದೆ. ನಾನು ಪ್ರತಿವರ್ಷ ಮಾಡುವ ಕೆಲಸ, ಈ ಪರಿಹಾರದ ಕೆಲಸ. ನೀವೇನೂ ಕಾಳಜಿ ಮಾಡಬೇಡಿ.

- ಎಷ್ಟು ಜನ ಬರುತ್ತಾರೆ?

- ಒಂದು ಸಾವಿರ, ಎರಡು ಸಾವಿರ ಹೀಗೇ ಎಂದು ಹೇಳಲಾಗದು.

- ಒಂದು ವೈದ್ಯಕೀಯ ಯೂನಿಟ್ ಬರುತ್ತದೆ. ಟೆಂಟ್‌ಗಳು ಬೇಕು. ಸರದೋಹ ಮಿಷನ್ನವರು ಒಬ್ಬ ಡಾಕ್ಟರ್ ಮತ್ತು ನರ್ಸ್ ಬರುತ್ತಾರೆ. ಕ್ಯಾಂಪಿಗೆ ನೀರು ತರಲು, ಖಿಚಡಿ ಮಾಡಿದ ಪಾತ್ರ ತೊಳೆಯಲು ಜನ ಬೇಕು. ಹತ್ತು ಹಳ್ಳಿ ಹುಡುಗರನ್ನು ಕರೆಯಿರಿ. ಕೆಲಸ, ಊಟ ಮತ್ತು ದಿನಾಲೂ ಒಂದು ರೂಪಾಯಿ ಅವರಿಗೆ.

- ಕ್ಯಾಂಪ್ ಎಷ್ಟು ದಿನ?

- ಒಂದು ತಿಂಗಳು. ಪ್ರತಿ 20 ಮೈಲಿಗೊಂದು ಕ್ಯಾಂಪ್. ಪರಿಹಾರ ಸಾಮಗ್ರಿಯಿರುವ ಟೆಂಟ್‌ನಲ್ಲಿ ನಾನಿರುತ್ತೇನೆ. ವಾಲೆಂಟಿಯರರಾಗಿ ಕಾಲೇಜು ಹುಡುಗರೂ ಬರುತ್ತಿದ್ದಾರೆ. ಹಳ್ಳಿಯಿಂದ ಹಳ್ಳಿಗೆ ಪರಿಹಾರ ತೆಗೆದುಕೊಂಡು ಹೋಗಿ ಕೊಡುತ್ತಾರೆ. ಮುದುಕರ ಹಾಡಿನ ಸಂದೇಶ ಕಳಿಸುವ ಅವಶ್ಯಕತೆ ಇಲ್ಲ ಈ ಬಾರಿ.

ತಹಸೀಲ್ದಾರ ಮಹದಾಶ್ಚರ್ಯದಿಂದ ಮನೆಗೆ ಹೋಗುತ್ತಾನೆ. ಸಾಮಾನ್ಯವಾಗಿ ಅವನು ಪ್ರತಿವರ್ಷ ಪರಿಹಾರದ ಮಾಲು ಕದ್ದು ಜೀವನೋಪಾಯ ಮಾಡಿಕೊಳ್ಳುತ್ತಾನೆ. ಕಳ್ಳ ಆದರೆ ದಕ್ಷ. ಎಲ್ಲಾ ವ್ಯವಸ್ಥೆ ನೋಡಿಕೊಳ್ಳುತ್ತಾನೆ.

ಪರಿಹಾರಾಧಿಕಾರಿಗೆ ನಿರಾಳ. ಎಲ್ಲಾ ಶಿಸ್ತಾಗಿ ನಡೆಯುತ್ತಿದೆ. ದೂರದೂರದಿಂದ ಜನ ರಾತ್ರಿ ಪಂಜು ಹಿಡಿದು ಬರುತ್ತಿದ್ದಾರೆ. ಆ ಜಾಗದ ಸುಟ್ಟ ಮಣ್ಣು, ಕುಳ್ಳ ಮರ, ಹಸಿರಿಲ್ಲದ ಕಾಡು, ಕೆಂಪು ಕ್ರೂರ ಬೆಟ್ಟಗಳು ಎಲ್ಲಾ ತಮ್ಮ ಕಾಠಿಣ್ಯ ಕಳೆದುಕೊಂಡಂತಿವೆ. ಅಧಿಕಾರಿ ರೂಲ್ಸನ್ನೂ ಮೀರಿ ಆ್ಯಂಟಿಬಯೋಟಿಕ್ಸ್, ಗಾಯಗಳಿಗೆ ಮದ್ದು, ಮಕ್ಕಳ ಆಹಾರ ಎಲ್ಲಾ ರಾಂಚಿಯಿಂದ ತರಿಸಿದ್ದಾನೆ.

ರಾತ್ರಿ ಸ್ಟೋರ್ ಟೆಂಟಿನಲ್ಲಿ ಮಲಗಿ ಯೋಚಿಸುತ್ತಾನೆ. ನಮ್ಮವರೇ ಪರಿಹಾರ ಕದ್ದು, ಕಳ್ಳದೆವ್ವಗಳ ಕಟ್ಟುಕಥೆ ಹಬ್ಬಿಸಿರಬೇಕು. ಇವರನ್ನು ಕೃಷಿಗೆ ಹಚ್ಚಬೇಕು. ರಾಂಚಿಗೆ ಹೋದ ಕ್ಷಣ ಮೇಲಧಿಕಾರಿಗಳ ಗಮನಕ್ಕೆ ತರುತ್ತೇನೆ- ಈ ಯೋಚನೆಯಲ್ಲೆ ನಿದ್ದೆ ಮಾಡುತ್ತಾನೆ. ಆಗರಿಯಾ ಹುಡುಗರು ಟೆಂಟ್ ಸುತ್ತ ಮಲಗಿದ್ದಾರೆ. ಯಾರನ್ನೂ ನಂಬದವರು ಈಗ ಅಧಿಕಾರಿಯನ್ನು ದೇವತೆ ಎಂದು ಕರೆಯುತ್ತಿದ್ದಾರೆ. ಇದೊಂದು ದೊಡ್ಡ ವಿಜಯ ತಾನೆ?

ಹುಡುಗರು ನಿದ್ದೆ ಮಾಡುವುದಿಲ್ಲ. ಒಂದು ರಾತ್ರಿ ಹೆಜ್ಜೆಗಳ ಸದ್ದು ಕೇಳುತ್ತದೆ. ಎಚ್ಚರಿಕೆಯಿಂದ ಮುಂದುವರೆಯುತ್ತವೆ. ಸದ್ದಿಲ್ಲದ ಶಿಳ್ಳೆಗಳು. ಮತ್ತೊಂದು ಶಿಳ್ಳೆಯ ಉತ್ತರ. ಯಾರೋ ಟೆಂಟ್ ಹಗ್ಗ ಬಿಚ್ಚುತ್ತಾರೆ. ವೇಗವಾದ ನಿಶ್ಶಬ್ದ ಕೆಲಸ. ಇರುಳ ಆಳದಲ್ಲಿ ಕ್ಷೀಣಿಸುವ ಚಂದ್ರ. ಅಕ್ಕಿ ಮೂಟೆ ತೆಗೆವ ಪುಟ್ಟ ಕೈಗಳು.

ಕ್ಷಣದಲ್ಲಿ ಪರಿಹಾರಾಧಿಕಾರಿಗೆ ಪೂರ್ತಿ ಎಚ್ಚರವಾಗುತ್ತದೆ. ಹುಡುಗರು ಟೆಂಟ್ ಹಗ್ಗ ಕಟ್ಟುತ್ತಿದ್ದಾರೆ. ತೆಗೆದಿದ್ದೇಕೆ? ವಿಶ್ವಾಸಘಾತದ ಅರಿವಾಗುತ್ತದೆ. ಅದೇ ಹುಡುಗರು. ಆದರೆ ಅವರ ಮುಖ ಬದಲಾಗಿದೆ. ವಿಜಯದ ಕ್ರೂರ ನಗೆ ಕಾಣುತ್ತದೆ. ಕಣ್ಣು ಮುಚ್ಚಿ ತೆಗೆಯುವುದರೊಳಗೆ ಕತ್ತಲಲ್ಲಿ ಮಾಯವಾಗುತ್ತಾರೆ. ಟೆಂಟ್‌ನಲ್ಲಿ ಎರಡು ಚೀಲ ಹೋಗಿದೆ. ಹೊರಗೆ ಬಂದು ನೋಡುತ್ತಾನೆ. ಕಾಡಿನಲ್ಲಿ ಚೀಲಗಳು ವೇಗವಾಗಿ ಓಡುತ್ತಿವೆ. ದೆವ್ವಗಳಲ್ಲ, ಮನುಷ್ಯರು ಇಷ್ಟು ಪುಟ್ಟದ್ದಾಗಿದ್ದಾರೆಂದರೆ ಮಕ್ಕಳೇ ಇರಬೇಕು. ಅವರಿಗೆ ಒಳ್ಳೆಯದು ಮಾಡಬೇಕೆಂದಿದ್ದ. ಹುಡುಗರು ಅವನು ದೇವತೆ ಎನ್ನುತ್ತಿದ್ದರೆ, ಎಲ್ಲಾ ಮೋಸವೇ? ಯಾರೋ ತನ್ನನ್ನೇ ದರೋಡೆ ಮಾಡಿದಂತೆನಿಸಿತು. ಅವರನ್ನು ಹಿಡಿಯಲೇಬೇಕು ಎಂದು ನಿರ್ಧರಿಸಿದ.

ಹಠದಿಂದ ಓಡುತ್ತಾನೆ. ಅವರೂ ಓಡುತ್ತಾರೆ. ಮರಗಳ ಸಾಂದ್ರತೆ ಕಡಿಮೆಯಾಗುತ್ತದೆ. ಒಣ ಹುಲ್ಲಿನ ಕಾಡು. ಜ್ವಾಲಾಮುಖಿ ಸೂರ್ಯ ಕಾದಾಡಿದ್ದು ಇಲ್ಲೇ. ಅಲ್ಲಿ ಹುಡುಗರು ಮೂಟೆಗಳನ್ನು ಕೆಳಗೆ ಹಾಕುತ್ತಾರೆ. ಸುಸ್ತಾಗಿರಬೇಕು. ಅಧಿಕಾರಿ ಹತ್ತಿರ ಹೋಗುತ್ತಾನೆ. ಎರಗಲು ಸಿದ್ಧವಾದ ಕ್ರೂರಜಂತುಗಳಂತೆ ಚೀಲಗಳನ್ನು ಸುತ್ತುವರೆದು ನಿಂತಿದ್ದಾರೆ. ನಿಶ್ಚಲ, ನಿಶ್ಶಬ್ದ ಆಕೃತಿಗಳು ಅವನನ್ನೇ ಗಮನಿಸುತ್ತಿವೆ. ಇದ್ದಕ್ಕಿದ್ದಂತೆ ಅವನನ್ನು ಸಮೀಪಿಸುತ್ತಾರೆ. ಗಂಡುಗಳಷ್ಟೆ ಅಲ್ಲ ಹೆಣ್ಣುಗಳೂ ಕೂಡ. ಎದೆಯಲ್ಲಿ ಭಯ. ನಿಧಾನವಾಗಿ ಅವನನ್ನು ಸುತ್ತುವರೆಯುತ್ತಿದ್ದಾರೆ.

ಅಲ್ಲೇ ನಿಂತರೇಕೆ? ನೋಡುತ್ತಾರೆ. ಅವನೂ ನೋಡುತ್ತಾನೆ. ಹತ್ತಿರವಾಗುತ್ತಾರೆ. ಮತ್ತೆ ನಿಲ್ಲುತ್ತಾರೆ. ಅವನ ಸುತ್ತ ಅವರು. ಪಾರಾಗುವುದು ಅಸಂಭವ. ಏಕೆ ಓಡಬೇಕು? ಇವರು ಮನುಷ್ಯ ಮಕ್ಕಳು. ದೆವ್ವಗಳಲ್ಲ. ದೆವ್ವಗಳು ಅಕ್ಕಿ ಮೂಟೆ ಕದಿಯುವುದಿಲ್ಲ. ''ಶಾಪಗ್ರಸ್ತ ಜಾಗ'' – ಹಾಗೆಂದವರಾರು? – ''ನಾವು ಚೂರು ಹೆಂಡ-ಗಿಂಡ ಕುಡಿಯುಬೇಕು'' ಯಾರು ಹಾಗೆ ಹೇಳಿದ್ದು? ಅಧಿಕಾರಿ ತನ್ನ ಎದೆಬಡಿತ ನಿಯಂತ್ರಿಸಲು ಯತ್ನಿಸುತ್ತಾನೆ.

ಹೆದರಿಕೆ – ಭಯಂಕರ ಹೆದರಿಕೆ. ಸದ್ದಿಲ್ಲದೆ ಮುಂದುವರೆಯುವುದೇಕೆ? ಅವರ ದೇಹಗಳು ಸ್ಪಷ್ಟವಾಗಿ ಕಾಣುತ್ತವೆ. ಏನಿದು? ಬೆತ್ತಲಾಗಿದ್ದಾರಲ್ಲ? ಅವರ ಕೂದಲು ಇಷ್ಟು ಉದ್ದವಾಗಿರುವುದೇಕೆ? ಮಕ್ಕಳಾದರೆ ಕೂದಲೇಕೆ ಬೆಳ್ಳಗಾಗಿದೆ? ಪುಟ್ಟ ಹುಡುಗಿಯರಿಗೆ ಹೀಗೆ ಜೋತು ಬಿದ್ದ ಮೊಲೆಗಳೇಕಿವೆ? ಅವನೇಕೆ ಹತ್ತಿರ ಬರುತ್ತಾನೆ? ಆ ನೆರೆಗೂದಲವನು? ನನ್ನ ಹತ್ತಿರ ಬರಬೇಡ – ಹೆದರಿದ ಕೂಗು ಗಂಟಲಲೇ ಸ್ಥಗಿತ. ಹತ್ತಿರ ಬರಬೇಡ – ಅವನು ತೋರಿಸುತ್ತಿರುವುದೇನು ? ವಿಕೃತ ದೃಶ್ಯ. ತನ್ನ ಒಣಗಿ ಸುರುಟಿಹೋದ ಶಿಶ್ನವನ್ನು ಎತ್ತಿಹಿಡಿದಿದ್ದಾನೆ.

ಮಕ್ಕಳಲ್ಲ, ದೊಡ್ಡವರು ! ಅಧಿಕಾರಿಯ ಬಾಯಿಂದ ಯಾವುದೇ ಶಬ್ದ ಹೊರಡುವುದಿಲ್ಲ. ಈ ಅರಿವು ಹಿರೋಷಿಮ– ನಾಗಸಾಕಿ ಬಾಂಬಿನಂತೆ ಅವನ ಮನಸ್ಸಿನಲ್ಲಿ ಸ್ಫೋಟವಾಗುತ್ತದೆ.

ಅವನಿಗೆ ಅರಿವಾದದ್ದು ಮುದುಕನಿಗೆ ಗೊತ್ತಾಗಿದೆ. ಕಿಕ್, ಕಿಕ್, ಕಿಕ್.......... ನಗುತ್ತಾನೆ. ವಿಕಾರ ನಗು. ನಗು ಹರಡುತ್ತದೆ. ಎಲ್ಲರೂ ನಗುತ್ತಾರೆ. ಹಾರುತ್ತಾರೆ. ಕುಸಿದು ಕುಳಿತುಕೊಳ್ಳುತ್ತಾರೆ.

- ನಾವು ಮಕ್ಕಳಲ್ಲ ಕುಭಾದ ಆಗರಿಯಾಗಳು. 'ಕುಭಾ' ಹೆಸರು ಕೇಳಿದ್ದೀಯಾ?

- ಇಲ್ಲ, ಇಲ್ಲ, ಇಲ್ಲ. ಅಧಿಕಾರಿ ಮುಖ ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಾನೆ. ಕೈಗಳು ಮೇಲೇಳುವುದಿಲ್ಲ. ''ಮಹಾಬೀರ್‌ಜೀಯ ಪ್ರಸಾದ .....''. ಯಾರು ಹೇಳಿದ್ದು?

ನಿಮ್ಮನ್ನು ಕಡಿದು ನಮ್ಮ ಗುಡ್ಡದ ಪಾವಿತ್ರ್ಯ, ಗೌರವ ಕಾಪಾಡಿಕೊಂಡೆವು. ಆಗಿನಿಂದ ನಾವು ಅರಣ್ಯವಾಸಿಗಳು. ಯಾರೂ ನಮ್ಮನ್ನು ಹಿಡಿಯಲಾಗಲಿಲ್ಲ. ಒಬ್ಬ ಪೋಲಿಸು, ಒಬ್ಬ ಸಿಪಾಯಿಗೂ ಆಗಲಿಲ್ಲ! ಮುದುಕ ನಗುತ್ತಾನೆ. ಎಲ್ಲರೂ ನಗುತ್ತಾರೆ. ಕಿಕ್, ಕಿಕ್, ಕಿಕ್........ ಅಮಾನುಷ ನಗು ಹಬ್ಬುತ್ತದೆ.

- ಇಲ್ಲ ! ಇಲ್ಲ ! ಇಲ್ಲ !

- ಇತರ ಆಗರಿಯಾ ನಮ್ಮನ್ನು ಬದುಕಿಸಿಟ್ಟಿದ್ದಾರೆ. ಯಾವಾಗಲೂ ಓಡುತ್ತಾ, ಆಹಾರವಿಲ್ಲದೆ ನಮ್ಮಲ್ಲಿ ಎಷ್ಟೋ ಜನ ಸತ್ತಿದ್ದಾರೆ.

ವೃತ್ತ ಕಿರಿದಾಗುತ್ತದೆ. ಅವರೂ ಇನ್ನೂ ಹತ್ತಿರ ಬಂದರು - ಹತ್ತಿರ ಬರಬೇಡಿ.

- ಏಕೆ? ಬರೀ ಎರಡು ಚೀಲಗಳಿಗಾಗಿ ಇಷ್ಟು ದೂರ ಬಂದೆಯಲ್ಲ. ಈಗ ಸರಿಯಾಗಿ ನೋಡು. ಹೇ, ತೋರಿಸಿ, ಎಲ್ಲ ತೋರಿಸಿ.

ಗಂಡಸರು ತಮ್ಮ ಶಿಶ್ನಗಳನ್ನು ಹೆಂಗಸರು ಮೊಲೆಗಳನ್ನು ಎತ್ತಿ ಹಿಡಿಯುತ್ತಾರೆ.

ಮುದುಕ ತೀರಾ ಹತ್ತಿರ ಬಂದಿದ್ದಾನೆ. ಅವನ ಶಿಶ್ನ ಅಧಿಕಾರಿಯ ಮೈಗೆ ತಾಕುತ್ತದೆ. ಹಾವಿನ ಪೊರೆ ಹರಿದಂತೆ. ನವೆ, ಕೊಳಕು.

- ಈಗ ಕೇವಲ ಹದಿನಾಲ್ಕು ಮಂದಿ ಉಳಿದಿದ್ದೇವೆ. ದೇಹ ಆಹಾರವಿಲ್ಲದೆ ಮುರುಟಿ ಹೋಗಿದೆ. ಗಂಡಸರು ಉಚ್ಚೆ ಮಾಡಬಲ್ಲರು ಅಷ್ಟೇ. ಅದು ಮೇಲೇಳುವುದಿಲ್ಲ. ಹೆಂಗಸರಿಗೆ ಮಕ್ಕಳಾಗದು. ನಾವು ಪರಿಹಾರ ಕದಿಯುತ್ತೇವೆ. ನಾವು ಮತ್ತೆ ತಿಂದು ಬೆಳೆಯಬೇಕು ಅಲ್ಲವೆ?

- ಇಲ್ಲ ! ಇಲ್ಲ ! ಇಲ್ಲ !

- ಆಗರಿಯಾ ನಮಗೆ ಸಹಾಯ ಮಾಡುತ್ತಾರೆ. ನಾವು ದಂಗೆಯಿಂದ ಈ ಸ್ಥಿತಿಗೆ ಬಂದಿದ್ದೇವೆ.

- ಇಲ್ಲ ! ಇಲ್ಲ. ಇದು ಅಸಾಧ್ಯ - ಇದು ನಿಜವಾದರೆ ಎಲ್ಲಾ ಸುಳ್ಳು ಕೋಪರ್ನಿಕಸ್ ಪ್ರಕಾರ ವಿಶ್ವ, ವಿಜ್ಞಾನ, ಈ ಶತಮಾನ, ಈ ಸ್ವಾತಂತ್ರ್ಯ, ಯೋಜನೆಯಿಂದ ಯೋಜನೆ. ಆದ್ದರಿಂದ ಅಧಿಕಾರಿ ಮತ್ತೆ ಮತ್ತೆ ಹೇಳುತ್ತಾನೆ - ಇಲ್ಲ ! ಇಲ್ಲ ! ಇಲ್ಲ !

- ಇಲ್ಲ ಎಂದರೆ ಏನೂ ಬದಲಾಗದು. ಮತ್ತೆ ಇವೆಲ್ಲಿಂದ ಬಂದವು? ನಾವು ಮಕ್ಕಳಲ್ಲ ಎಂದು ಗೊತ್ತಾಗುವುದಿಲ್ಲವೆ?

ಪೈಶಾಚಿಕ ಸೇಡಿನ ಸಂಭ್ರಮದಲ್ಲಿ ನಗುತ್ತಾರೆ. ಅವನನ್ನು ನಗುತ್ತಾ ಸುತ್ತುವರೆಯುತ್ತಾರೆ. ಅವರ ಶಿಶ್ನಗಳು ಅವನ ದೇಹಕ್ಕೆ ಉಜ್ಜುತ್ತಿವೆ. ಇವರು ಗಂಡಸರು, ಪ್ರೌಢ ಭಾರತೀಯ ಗಂಡುಗಳು ಎಂದು ನೆನಪಿಸುತ್ತವೆ.

ಮೇಲೆ ಚಂದ್ರ. ಚಂದ್ರ ಎಷ್ಟು ನಿರಾಶನಾಗಿ ಕಾಣುತ್ತಾನೆ. ಚಂದ್ರನ ಬೆಳಕು ಎಷ್ಟು ನಿರ್ಬಲವಾಗಿದೆ. ಸೂರ್ಯನೊಡನೆ ಜ್ವಾಲಾಮುಖಿಯ ಸೆಣಸಾಟದಲ್ಲಿ ಸುಟ್ಟುಹೋದ ಬಂಜರು ನೆಲದಲ್ಲಿ ಕೆಲವು ಬೆಳೆದ ಮಕ್ಕಳ ಭಯಂಕರ ಸಂಭ್ರಮ. ಸೇಡು ತೀರಿಸಿಕೊಂಡ ಸಂಭ್ರಮ. ದಂಗೆಯಲ್ಲಿ ಶತ್ರುವಿನ ತಲೆಕಡಿದ ಸಂಭ್ರಮ.

ಕ್ರೌರ್ಯಕ್ಕೆ ಪ್ರತಿ ಕ್ರೌರ್ಯ-ಸೇಡು....ಯಾವುದರ ಬಗ್ಗೆ?

ಕುಣಿವ ನೆರಳುಗಳನ್ನು ದಾಟಿ ಅವನ ನೆರಳು ಯಾವುದಕ್ಕೆ ಎದುರಾಗಿ ನಿಲ್ಲುತ್ತವೆ? ಈ ಐದಿಂಚು-ಒಂಭತ್ತರ ಆಕೃತಿಯ ಎದುರು.

ಅಧಿಕಾರಿಯ ಮನಸ್ಸಿನಲ್ಲಿ ತಾರ್ಕಿಕವಾದಗಳ ಮೋಟಾರು ಓಡಿದೆ. ಅವನಿಗೆ ಕೇಳಬೇಕೆನ್ನಿಸುವುದು, ಈ ಸೇಡು ಏಕೆ? ನಾನೊಬ್ಬ ಸಾಧಾರಣ ಭಾರತೀಯ. ರಷಿಯನ್-ಕೆನಡಿಯನ್-ಅಮೆರಿಕನ್ನರ ಹಾಗೆ ಸರಿಯಾದ ಬೆಳವಣಿಗೆ ಅಥವಾ ಎತ್ತರ ಇರುವವನನಲ್ಲ. ಶಕ್ತಿಶಾಲಿ ದೇಹದ ಬೆಳವಣಿಗೆಗೆ ವರ್ಲ್ಡ್ ಹೆಲ್ತ್ ಆರ್ಗನೈಸೇಷನ್ ಪ್ರಕಾರ ಬೇಕಾದ ಪುಷ್ಟ ಆಹಾರ ತಿಂದವನಲ್ಲ.

ಅವನು ಒಂದು ಮಾತೂ ಹೇಳಲಾರ. ಚಂದ್ರನ ಕೆಳಗೆ ನಿಂತು, ಅವರನ್ನು ನೋಡುತ್ತಾ, ಅವರ ನಗು ಕೇಳುತ್ತಾ, ಮೈಮೇಲೆ ಅವರ ಶಿಶ್ನಸ್ಪರ್ಷವಾದಂತೆ ಈ ಸಾಧಾರಣ ಭಾರತೀಯನ ಬೆಳವಣಿಗೆಯಿಲ್ಲದ ದೇಹ, ಹಾಸ್ಯಾಸ್ಪದ ಎತ್ತರ, ನಾಗರಿಕತೆಗೆ ಅವಮಾನವೆನ್ನುವಂತೆ ಕಾಣುತ್ತದೆ. ಈ ಸುರುಟಿ ಹೋದ ಆಕೃತಿಗಳಿಗಾಗಿ ತನ್ನ ಮರಣದಂಡನೆ ತಾನೇ ವಿಧಿಸಿಕೊಳ್ಳುತ್ತಾ ಬಾಯಗಲಿಸಿ ಚಂದ್ರನತ್ತ ಮುಖ ಮಾಡಿ ನಿಲ್ಲುತ್ತಾನೆ. ಅವರು ಕುಣಿಯುತ್ತಾರೆ, ನಗುತ್ತಾರೆ. ಪೊರೆಬಂದ ಶಿಶ್ನಗಳು ಉಜ್ಜುತ್ತವೆ. ಅವನಿಗೆ ಮುಕ್ತ ಹುಚ್ಚು ಹಿಡಿದಾಗ. ಆ ರಾತ್ರಿಯನ್ನು ಸೀಳುವಂತೆ ಹುಚ್ಚುನಾಯ ಹಾಗೆ ಊಳಿಟ್ಟಾಗ. ಆದರೆ ಮಿದುಳು ಈ ಗಂಟಲು ಹರಿಯುವ ಕೂಗಿಗೆ ಆಜ್ಞೆ ಕೊಡುತ್ತಿಲ್ಲವೇಕೆ?

ಅವನ ಕಣ್ಣಿಂದ ನೀರು ಹರಿಯುತ್ತದೆ.

'ಲಿಟ್‌ಲ್ ಒನ್ಸ್' - ''ಬಟ್ಟರ್ ಸಾಯಿಲ್'' ಕಥಾ ಸಂಕಲನದಿಂದ

(ಇಂಗ್ಲಿಷ್ ಅನುವಾದ- ಈಪ್ಸಿತ ಚಂದಾ)

~ ~ ~

ಪ್ರವಾಸಿನಿ ಮಹಾಕುದ್

ಒರಿಯಾ

ಪಶ್ಚಿಮ ಒರಿಸ್ಸಾದ ಕೊಕ್ಕಸಾರದಲ್ಲಿ ಹುಟ್ಟಿದ ಕವಯತ್ರಿ ಪ್ರವಾಸಿನಿ; ಆಕೆ ಆದಿವಾಸಿ ಬಾಲ್ಯವನ್ನು ಕಳೆದಾಕೆ. ಊರಿಂದ ಊರಿಗೆ ತಿರುಗುತ್ತಾ ತಂದೆ ಪೋಲೀಸ್ ಇನ್‌ಸ್ಪೆಕ್ಟರ್ ಜೊತೆ ಸುತ್ತುತ್ತಾ ಪಶ್ಚಿಮ ಒರಿಸ್ಸಾದ ಗುಡ್ಡಗಾಡುಗಳನ್ನು ಚೆನ್ನಾಗಿ ಕಂಡವಳು ಆಕೆ.

ಪಾರಂಪರಿಕ ಒಡೆಸ್ಸಿ ನೃತ್ಯ ಹಾಗೂ ಕವಿತೆ ಪ್ರವಾಸಿನಿಯ ನಿಜ ಒಲವು. ಎಂ.ಎ. ಮುಗಿಸಿದ ನಂತರ ಒರಿಸ್ಸಾದ ಕಾಲೇಜೊಂದರಲ್ಲಿ ಒರಿಯಾ ಸಾಹಿತ್ಯ ಪಾಠ ಹೇಳುತ್ತಿರುವ ಅಧ್ಯಾಪಕಿ. ಕವಿತೆ ಬರೆಯುವುದರಿಂದ ಮಾತ್ರ ತನ್ನ ಭಾವ ಪ್ರವಾಹದ ಬಿಡುಗಡೆ ಸಾಧ್ಯ ಎಂದು ನಂಬಿದವಳು ಈ ಕವಯಿತ್ರಿ.

~ ~ ~

ಒಂಟಿತನದ ಈ ಧ್ವನಿ

ಮೂಲ ಒರಿಯಾ : ಪ್ರವಾಸಿನಿ ಮಹಾಕುದ್
ಅನು : ಕೆ. ರಾಜೇಶ್ವರಿ

ಎಲ್ಲಿದೆ? ಅದು ಎಲ್ಲಿದೆ?
ನಾ ಕೇಳುತಿರುವ ಒಂಟಿತನದ -
ಈ ಧ್ವನಿ ಎಲ್ಲಿನದು?
ಅದು ಬಂದುದೆಲ್ಲಿಂದ?

ನನ್ನ ಒಡಲಾಳದ ಸಂಕಟದೊಳಗಿಂದಲೇ?
ಪ್ರೀತಿಯ ಸಾಧ್ಯತೆಯ ಹಿಂದೆಯೇ?
ಕಣ್ಣೀರ ಸರೋವರದ ಮೇಲಿಂದಲೇ?
ಅಥವಾ - ಸಾವಿನ ಭಯದಿಂದಲೇ?

ಎತ್ತಲೆತ್ತಲೂ ಇರುವ ಈ ವಿಶಾಲ ಕೋಟೆಯೊಳಗೆ -
ಜಾರುವ ಮೃದು ಹೆಜ್ಜೆಗಳು!
ಹೃದಯವೋ ಬೂದುಬಣ್ಣದ ಜೌಗುನೆಲ
ಅಲ್ಲಲ್ಲಿ ಪಾಳುಬಿದ್ದ ಕೂಡು
(ಮೌನವೊಂದೇ ಇಲ್ಲಿ ಜೀವಂತ!)

ಶೂನ್ಯಾಕಾಶದ ನೀರವಮೌನ ಇಲ್ಲಿ ಪ್ರಬಲ
ಸೂರ್ಯನ ಬೆಳಕಿನ ಸುತ್ತ
ಸುತ್ತುತ್ತಿದೆ ದೂರದಲ್ಲಿ ಹಕ್ಕಿ ಅತ್ತ ಇತ್ತ!
ರೆಕ್ಕೆಗಳಲಿ ನೀಲಿಶಾಯಿ ಮುದ್ರೆ
ರಾತ್ರಿಯಿಡೀ ನಿದ್ದೆಯಲ್ಲೂ
ಕರೆಯುತ್ತಿದ್ದಾನೆ ಚಂದ್ರ ಮಹಡಿಯಲ್ಲಿ.....

ಕಿವಿತುಂಬ ಮೊರೆದಿದೆ ಸಪ್ತಸ್ವರ ಸಂಗೀತ
ಓಗಿರಲು ನನ್ನ ಒಂಟಿದನಿ ಕೇಳುವುದು ಹೇಗೆ?
ಮಹು ಹೂವಿನ ಸುವಾಸನೆ
ಹೊತ್ತು ತರುತಿದೆ ತಂಗಾಳಿ
ಎಲ್ಲಿಂದಲೋ ಕೇಳಿಸುತಿದೆ ಕ್ಷೀಣ ಧ್ವನಿ ನನಗೆ

ಅರುಣರಾಗ ನಿದ್ರೆಯ ಭಗ್ನಗೊಳಿಸಲು
ಇನ್ನೆಲ್ಲಿ ಒಂಟಿತನದ ಸಖ್ಯ?
ಎಲ್ಲ ಎಲ್ಲವನ್ನು ನಿರಾಕರಿಸುತ್ತೇನೆ ನಾನು
ಆದರೂ, ಕಟ್ಟಿಹಾಕಿದೆ ಒಂಟಿತನ ನನ್ನ
ಕೇಳುವುದಿಲ್ಲ ನಾನು ಪ್ರಶ್ನೆ
ಆದರೂ ಒಂಟಿತನ ನಿರೀಕ್ಷಿಸುತ್ತದೆ ಸಹಜ ಉತ್ತರ!

ನಾನಾಗಿ ನಾನು ಕರೆಯುವುದಿಲ್ಲ -
ಒಂಟಿತನವನ್ನ !
ಆದರೂ ಅದು ಮಲಗಿದೆ ನನ್ನ ಬದಿ ಬದಿ
ಕಾಯುತ್ತ ನೋಯುತ್ತ
ಮಾತಾಡುವುದಿಲ್ಲ ನಾನು
ಗೊತ್ತಾಗಬೇಕಾಗಿದೆ ನನಗೆ ನನ್ನ ಮೊದಲ ಹಾಗೂ ಕೊನೆಯ!
ಯಾಕೆ ನನ್ನ ಆಳುತ್ತಿದೆ ಭಯ?
ಯಾಕೆ ಇಣುಕುತ್ತಿದೆ ನನ್ನ ನೆನಪಿನ ಗವಿಯ?
ಇದು ಅಪ್ತವಾಗುವುದಾದರೂ ಎಂದು?
ಎಂದು ? ಎಂದು?

~ ~ ~

ದಂತಕಥೆಯಾದ ಅಭಿನೇತ್ರಿ ಮೀನಾಕುಮಾರಿ 'ನಾಜ್'

೧೯೩೨ರಲ್ಲಿ ಹುಟ್ಟಿ ೧೯೭೨ರಲ್ಲಿ ಅಸ್ತಂಗತಳಾದರೂ ಅಭಿನೇತ್ರಿಯಾಗಿ ಭಾರತದಲ್ಲಿ ದಂತಕಥೆಯಾದವಳು ಮೀನಾಕುಮಾರಿ. ಕಲಾವಿದೆಯಾಗಿ ಆಕೆಯ ಔನ್ನತ್ಯದ ದಿನಗಳಲ್ಲಿ ಹಿಂದೀ ಚಿತ್ರರಂಗದಲ್ಲಿ ಬೇರೊಂದು ಪರ್ಯಾಯವಿರಲಿಲ್ಲವೇನೋ ಎಂಬಷ್ಟು ಪ್ರಖ್ಯಾತಿ ಆಕೆಯದು. ತನ್ನ ಅಭಿನಯದ ಮೂಲಕ ಸಾವಿರಾರು ಅಭಿಮಾನಿಗಳ ಪಾಲಿಗೆ ಸಂತೋಷ ನೀಡಿದ ಆಕೆ ದುರಂತದಲ್ಲಿ ಪರ್ಯಾವಸಾನವಾದದ್ದು ವಿಷಾದನೀಯ.

ಸೌಂದರ್ಯದ ಭಾಗ್ಯ ಪಡೆದ ಆಕೆ ಹುಟ್ಟು ಪ್ರತಿಭಾವಂತೆ ಕೂಡ. ಯಾವತ್ತೂ ಶ್ವೇತ ವಸ್ತ್ರವೇ ಆಕೆಯ ಉಡುಗೆ ತೊಡುಗೆ. ಕಲ್ಪಕತೆ ಮತ್ತು ದಾರುಣ ದುಃಖ - ಆಕೆಯ ಜೀವನದ ಎರಡು ಸಮಾನಾಂತರ ಮುಖ. ಹುಟ್ಟಿದ್ದು ಮುಂಬಯಿಯಲ್ಲಿ; ತಂದೆ ಅಲಿಭಕ್ಷ, ತಾಯಿ ಇಕ್ಬಾಲ್ ಬೇಗಂ. ಆಕೆ ಹುಟ್ಟಿದ ಅತ್ಯಲ್ಪ ಕಾಲದಲ್ಲಿ ತಂದೆ ತೀರಿಹೋದದ್ದರಿಂದ ತಾಯಿ ಜೊತೆ ಆಕೆ ಸಂಸಾರ ನಿರ್ವಹಣೆಗಾಗಿ ಅನೇಕ ಬವಣೆಗಳನ್ನು ಅನುಭವಿಸಬೇಕಾಯಿತು.

ಕೇವಲ ನಾಲ್ಕು ವರ್ಷದ ಪುಟ್ಟ ಹುಡುಗಿಯಾಗಿರುವಾಗಲೇ ''ಬೇಬಿ ಮೀನ''ಳಾಗಿ ಚಲನ ಚಿತ್ರದಲ್ಲಿ ಅಭಿನಯಿಸಿ ಅನುಭವ ಪಡೆದ ಧೀರೆ. ''ಬೈಜು ಬಾವ್ರ'', ''ಪರಿಣೆತ'', ''ಸಾಹೀಬ್ ಬೀಬಿ ಔರ್ ಗುಲಾಂ'' ಮುಂತಾದ ಹಿಂದೀ ಚಿತ್ರಗಳಲ್ಲಿ ಅರ್ಥಪೂರ್ಣವಾಗಿ ಅಭಿನಯಿಸಿದ ಮೀನಾಕುಮಾರಿಯ ''ಪಾಕೀಜಾ'' ಚಿತ್ರದ ಕಲಾತ್ಮಕ ಅಭಿನಯಕ್ಕಾಗಿ ''ಅತ್ಯುತ್ತಮ ಅಭಿನೇತ್ರಿ'' ಪ್ರಶಸ್ತಿ ಪಡೆದದ್ದು ಗಮನಾರ್ಹ.

ಸಾಹಿತ್ಯದಲ್ಲಿ ಅಪಾರ ಆಸಕ್ತಿ ಅದರಲ್ಲೂ ಕವಿತೆಯ ಅಧ್ಯಯನದಲ್ಲಿ ನಿರಂತರ ಶ್ರದ್ಧೆ. ದಿನಚರಿ ಬರೆವಲ್ಲಿ ತಾಳ್ಮೆ ಆಕೆಯ ಹವ್ಯಾಸಗಳು. ಗಾಯಕಿಯೂ ಆಗಿದ್ದ ಮೀನಾಕುಮಾರಿ 'ನಾಜ್' ಎಂಬ ಕಾವ್ಯನಾಮದಿಂದ ಕವಿತೆಗಳ ಬರೆದು ಪ್ರಸಿದ್ಧಿ ಪಡೆದಳು. ಪ್ರತಿಮಾ ವಿಧಾನ ಮತ್ತು ಆತ್ಮೀಯತೆ ಆಕೆಯ ಕವಿತೆಗಳನ್ನು ಆಂತರ್ಯ. ಅತ್ಯಂತ ಸೂಕ್ಷ್ಮವಾಗಿ ಜೀವನ ಗಮನಿಸಿದ ಈ ಕವಯತ್ರಿ ಅಪೂರ್ವ ಆಧ್ಯಾತ್ಮಿಕ ದೃಷ್ಟಿಕೋನವನ್ನು ಬೆಳೆಸಿಕೊಂಡದ್ದು ಉಲ್ಲೇಖನಾರ್ಹ. 'ಪ್ರೇಮ' ಭಾವವೇ ಆಕೆಯ ಬಾಳಿನಜೀವ ಜೀವಾಳ. 'ತನಹಚಾಂದ್' ಆಕೆಯ ಅನನ್ಯ ಉರ್ದು ಕವನ ಸಂಕಲನವಾಗಿದೆ. ಅಲ್ಲಿನ ಒಂದು ಪದ್ಯದ ಭಾವಾನುವಾದವನ್ನು ಇಲ್ಲಿ ಕೊಡಲಾಗಿದೆ.

~ ~ ~

ತುಣುಕು ತುಣುಕು ಚೆಲ್ಲಿದ ದಿನ

ಉರ್ದು ಮೂಲ : ಮೀನಾಕುಮಾರಿ 'ನಾಜ್'
ಅನು : ದೊಡ್ಡರಂಗೇಗೌಡ

ತುಣುಕು ತುಣುಕು ಚೆಲ್ಲಿದ ಹಗಲು
ಮುಗಿಯಿತು,
ಇರುಳು ಮೊದಲಾಯಿತು;
ನಾವು ಹೊರಬಹುದಾದನ್ನು ಮಾತ್ರ -
ಹೊರುತ್ತೇವೆ....
ಬೀಳುತ್ತಿವೆ ಮಳೆ ಹನಿಗಳು ಹಾಡುತ್ತಾ
ಅಮರತ್ವದ ಜೊತೆ ಜೊತೆ -
ವಿಷವನೂ ಕೈಯಲಿ ಹಿಡಿದು !
ನಗುತ್ತವೆ ನನ್ನ ಕಣ್ಣುಗಳು
ಅಳುತ್ತಿದೆ ನನ್ನ ಹೃದಯ -
ಸುರಿಸುತ್ತಿದೆ ಕಣ್ಣೀರ ಮಳೆಯ !
ನನ್ನ ಪಾಲಿನ ಮುಂಗಾರು ಇಂಥದು...;

ನನ್ನ ನಾ ಅರಿಯಹೋದಷ್ಟೂ -
ಕೇಳಿಸಿದೆ ಅಂತರ್ವಾಣಿ,
ಯಾರೋ ನನ್ನೊಳಗೆ ಮಾತಾಡಿದಂತೆ
ನೀನು ಮತ್ತೆ ಸೋಲುತ್ತೀ ಎಂದು ಹೇಳಿದಂತೆ
ಸೋಲೆಂದರೇನು? ಕಾಯುವುದೇ?
ನಿರಂತರ ಪಯಣವೇ ನನ್ನ ಭಾಗ್ಯವಾದಾಗ
ನನ್ನ ಹೃದಯವನೇ ಬಳುವಳಿಯಾಗಿತ್ತ ಮೇಲೆ
ಅಂಥ ಹೃದಯವೇ ಸಂಗಾತಿಯಾದ ಮೇಲೆ...
ತಪ್ಪತೆ ನನ್ನ ಬದಿ ನಡೆಯಿತು !

~ ~ ~

ಅನಿಕೇತನ

ಭಾರತದ ವಿವಿಧ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯದ ಸವಿಯನ್ನು ಕನ್ನಡದ ಓದುಗರಿಗೆ ಉಣಿಸಬೇಕೆಂಬ ಪ್ರೀತಿಯಿಂದ ಈ ಸಂಚಿಕೆ ರೂಪಿತವಾಗಿದೆ. ವೈಚಾರಿಕ ಜಾಗೃತಿಯಿಂದ ದೀಪ್ತವಾಗಿರುವ, ವೈಜ್ಞಾನಿಕ ಸಾಧನೆಗಳ ಪ್ರಭಾವವನ್ನು ದಕ್ಕಿಸಿಕೊಂಡಿರುವ, ಮಹಿಳಾಭಿವ್ಯಕ್ತಿಯ ಹೊಸಚಹನ್ನೂ ಕೂಡಿಸಿಕೊಂಡಿರುವ ಭಾರತೀಯ ಸಾಹಿತ್ಯದ ವಿಶಿಷ್ಟ ಮಾದರಿಯೊಂದನ್ನು ಗ್ರಹಿಸಿಕೊಳ್ಳಲು ನೆರವಾಗುವ ಆಯ್ಕೆಗಳು ಈ ಸಂಚಿಕೆಯಲ್ಲಿವೆ. ತಮ್ಮ ಅನುಭವಗಳನ್ನು, ವಿಚಾರಗಳನ್ನು ನಿಸ್ಸಂಕೋಚವಾಗಿಯೂ ಅನನ್ಯವಾಗಿಯೂ ಅನಾವರಣಗೊಳಿಸಿರುವ ಸಾಹಿತಿಗಳ ಅಪೂರ್ವ ಕಾಳಜಿಗಳು ಇಲ್ಲಿ ಮೌಲಿಕ ಫಲಶ್ರುತಿಗಳನ್ನು ನೀಡಿವೆ. ಬೇರೆಬೇರೆ ಭಾಷೆಗಳಿಂದ ನೇರವಾಗಿ ಅಥವಾ ಇಂಗ್ಲಿಷ್ ಮೂಲಕ ಕನ್ನಡಕ್ಕಿಳಿದಿರುವ ಇಲ್ಲಿನ ರಚನೆಗಳ ಆಶಯ ಮತ್ತು ಅಭಿವ್ಯಕ್ತಿಯಲ್ಲಿ ನೂತನ ಅಂಶಗಳು ಪಲ್ಲವಿಸಿರುವುದನ್ನು ಸಹೃದಯರು ಗುರುತಿಸಬಹುದಾಗಿದೆ.